ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಫ್ಯಾಷನ್ ಷೋ

ಮುಂಬೈನಲ್ಲಿ ಹಮ್ಮಿಕೊಂಡಿದ್ದ ಫ್ಯಾಷನ್ ಷೋದಲ್ಲಿ ಬಾಲಿವುಡ್ ತಾರೆಯರಾದ ರಣವೀರ್ ಸಿಂಗ್ ಮತ್ತು ದೀಪಿಕಾ ಪಡುಕೋಣೆ ಪಾಲ್ಗೊಂಡಿದ್ದರು



ಆರ್ಡರ್ ಮಾಡುವುದು ಹೇಗೆ

ಹಂತ 1
ಬಿಗ್‌ಬಾಸ್ಕೆಟ್ ಆ್ಯಪ್ ಡೌನ್‌ಲೋಡ್ ಮಾಡಿ



ಹಂತ 2
ನಿಮ್ಮ ಡೆಲಿವರಿ ಸ್ಥಳ ಆಯ್ಕೆ ಮಾಡಿ

ಹಂತ 3
bbnow ಆಯ್ಕೆ ಮಾಡಿ

3,000ಕ್ಕೂ ಹೆಚ್ಚು ದಿನಸಿಗಳನ್ನು ತ್ವರಿತವಾಗಿ ಡೆಲಿವರಿ ಪಡೆಯಿರಿ.

ಎಲ್ಲ ಆರ್ಡರ್‌ಗಳ ಮೇಲೆ ಪಡೆಯಿರಿ ಉಚಿತ ಡೆಲಿವರಿ*

ಯಾವುದೇ ಕನಿಷ್ಠ ಆರ್ಡರ್ ಮೌಲ್ಯವಿಲ್ಲ

Paytm CASHBACK

Up to ₹100 cashback

Minimum order ₹349. Assured ₹20. Valid thrice on Paytm Wallet or Postpaid transaction. Valid till July 31, 2022

*Applicable for all customers enrolled with TATA NeuPass. Images are for illustration purpose only. For more detailed terms & conditions, visit the bigbasket app or log on to bigbasket.com

India's largest online supermarket

PENTAGON 9884

ನಿವೃತ್ತ ಸಾರಿಗೆ ಅಧಿಕಾರಿಗೆ ಜೈಲು ಶಿಕ್ಷೆ

ಬೆಂಗಳೂರು: ಹಣ ಅಕ್ರಮ ವರ್ಗಾವಣೆ ಆರೋಪದಡಿ ನಿವೃತ್ತ ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿ ಜೆ.ವಿ.ರಾಮಯ್ಯ ಮತ್ತು ಅವರ ಪತ್ನಿ ಎಂ. ಲಲಿತಾ ಅವರಿಗೆ ಇಲ್ಲಿನ ವಿಶೇಷ ನ್ಯಾಯಾಲಯ ಮೂರು ವರ್ಷಗಳ ಕಠಿಣ ಜೈಲು ಶಿಕ್ಷೆ ಮತ್ತು ₹ 10 ಸಾವಿರ ದಂಡ ವಿಧಿಸಿ ಆದೇಶಿಸಿದೆ.

ಭ್ರಷ್ಟಾಚಾರ ನಿಗ್ರಹ ಕಾಯ್ದೆ ಅಡಿ ಕೋಲಾರ ಲೋಕಾಯುಕ್ತ ಪೊಲೀಸರು 2009ರಲ್ಲಿ ದಾಖಲಿಸಿದ್ದ ದೂರಿನ ಆಧಾರದಲ್ಲಿ ಜಾರಿ ನಿರ್ದೇಶನಾಲಯ ತನಿಖೆ ನಡೆಸಿತ್ತು. ಪ್ರಕರಣದ ವಿಚಾರಣೆ ನಡೆಸಿದ ನಗರದ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಎಚ್.ಎ. ಮೋಹನ್ ಶುಕ್ರವಾರ (ಜು.29) ಈ ಕುರಿತಂತೆ ಆದೇಶಿಸಿದ್ದಾರೆ.

'ರಾಮಯ್ಯ ಅವರು ಮಂಡ್ಯ ಜಿಲ್ಲೆಯ ನಾಗಮಂಗಲದಲ್ಲಿ ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಯಾಗಿ ಕಾರ್ಯ ನಿರ್ವಹಿಸುತ್ತಿದ್ದ ಸಮಯದಲ್ಲಿ ನಿಗದಿತ ಆದಾಯಕ್ಕಿಂತಲೂ ಶೇ 415.3 ರಷ್ಟು ಹೆಚ್ಚಿನ ಪ್ರಮಾಣದ ಅಂದರೆ, ₹ 1.24 ಕೋಟಿ ಮೊತ್ತದ ಆಸ್ತಿ ಹೊಂದಿದ್ದಾರೆ' ಎಂಬ ಕಾರಣಕ್ಕೆ ಈ ದೂರು ದಾಖಲಾಗಿತ್ತು. ತನಿಖೆ ವೇಳೆ ಜಾರಿ ನಿರ್ದೇಶನಾಲಯ ₹ 70 ಲಕ್ಷಕ್ಕೂ ಹೆಚ್ಚಿನ ಮೊತ್ತದ ಸ್ವತ್ತನ್ನು ಪತ್ತೆಹಚ್ಚಿ 2018ರಲ್ಲಿ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿತ್ತು.

ಬನ್ನೇರುಘಟ್ಟದಲ್ಲಿ ಸಿಂಹಿಣಿ 'ಸನಾ' ಸಾವು

ಆನೇಕಲ್: ಬನ್ನೇರುಘಟ್ಟ ಜೈವಿಕ ಉದ್ಯಾನದ 12 ವರ್ಷದ ಸಿಂಹಿಣಿ ಸನಾ ಹೃದಯ ಸಂಬಂಧಿ ಕಾಯಿಲೆಯಿಂದ ಶನಿವಾರ ಸಾವಿಗೀಡಾಗಿದೆ.

ಜೂನ್ 12ರಿಂದ ಅನಾರೋಗ್ಯದಿಂದ ಬಳಲುತ್ತಿದ್ದ ಸಿಂಹಿಣಿಗೆ ತಜ್ಞ ವೈದ್ಯರ ತಂಡ ಚಿಕಿತ್ಸೆ ನೀಡುತ್ತಿತ್ತು. ಆದರೆ, ಚಿಕಿತ್ಸೆಗೆ ಸ್ಪಂದಿಸದೆ ಸಿಂಹಿಣಿ ಮೃತಪಟ್ಟಿದೆ ಎಂದು ಬನ್ನೇರುಘಟ್ಟ ಜೈವಿಕ ಉದ್ಯಾನದ ಕಾರ್ಯನಿರ್ವಹಣಾಧಿಕಾರಿ ತಿಳಿಸಿದ್ದಾರೆ.

ಬಹು ಅಂಗಾಂಗಳ ವೈಫಲ್ಯದಿಂದ ಶನಿವಾರ ವನ್ಯ ಎಂಬ ಆರು ವರ್ಷದ ಹುಲಿ ಮೃತಪಟ್ಟ ಬೆನ್ನಲ್ಲೇ ಸನಾ ಸಾವು ಸಂಭವಿಸಿದೆ. ಸನಾ ಸಾವಿನೊಂದಿಗೆ ಉದ್ಯಾನದಲ್ಲಿಯ ಸಿಂಹಗಳ ಸಂಖ್ಯೆ 20ಕ್ಕೆ ಕುಸಿದಿದೆ.

ಬನ್ನೇರುಘಟ್ಟ ಜೈವಿಕ ಉದ್ಯಾನದ ಗಣೇಶ ಮತ್ತು ಹೇಮಾ ಜೋಡಿಗೆ 2010ರ ಏಪ್ರಿಲ್ 5ರಂದು ಸನಾ ಜನಿಸಿತ್ತು. ಸನಾ ಒಟ್ಟು 10 ಮರಿಗಳಿಗೆ ಜನ್ಮ ನೀಡುವ ಮೂಲಕ ಉದ್ಯಾನದಲ್ಲಿ ಸಿಂಹಗಳ ಸಂಖ್ಯೆ ಹೆಚ್ಚಳಕ್ಕೆ ಕಾರಣವಾಗಿತ್ತು. ಆ ಪೈಕಿ ಐದು ಸಿಂಹಗಳು ಬನ್ನೇರುಘಟ್ಟ ಸಿಂಹಗಳ ಸಫಾರಿಯಲ್ಲಿವೆ.

ಸಿಂಹಿಣಿ ಸನಾ (ಸಂಗ್ರಹ ಚಿತ್ರ)

ಜಾರ್ಖಂಡ್‌ನ ಮೂವರು ಶಾಸಕರಲ್ಲಿ ಭಾರಿ ನಗದು ಪತ್ತೆ

ಹೌರಾ (ಪಿಟಿಐ): ಜಾರ್ಖಂಡ್‌ನ ಮೂವರು ಕಾಂಗ್ರೆಸ್ ಶಾಸಕರನ್ನು ಪಶ್ಚಿಮ ಬಂಗಾಳದ ಹೌರಾ ಜಿಲ್ಲೆಯಲ್ಲಿ ಪೊಲೀಸರು ಶನಿವಾರ ರಾತ್ರಿ ತಡೆದು ನಿಲ್ಲಿಸಿದ್ದಾರೆ. ಅವರು ಸಂಚರಿಸುತ್ತಿದ್ದ ವಾಹನದಲ್ಲಿ ಭಾರಿ ಮೊತ್ತದ ಹಣ ಸಿಕ್ಕ ಕಾರಣಕ್ಕೆ ಅವರನ್ನು ತಡೆಯಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಶಾಸಕರಾದ ಇರ್ಫಾನ್ ಅನ್ಸಾರಿ, ರಾಜೇಶ್ ಕಚ್ಚಪ್ ಮತ್ತು ನಮನ್ ಬಿಕ್ಸಲ್ ಕೊಂಗರಿ ಅವರು ಸಂಚರಿಸುತ್ತಿದ್ದ ವಾಹನದಲ್ಲಿ ಭಾರಿ ಮೊತ್ತದ ಹಣ ಇದೆ ಎಂಬ ಮಾಹಿತಿ ಪೊಲೀಸರಿಗೆ ಸಿಕ್ಕಿತ್ತು. ಹಾಗಾಗಿ, ರಾಷ್ಟ್ರೀಯ ಹೆದ್ದಾರಿ 16ರ ರಾಣಿಹತಿ ಬಳಿ ತಡೆಯಲಾಗಿದೆ. ಎಣಿಕೆ ಯಂತ್ರಗಳನ್ನು ತಂದು ನೋಟುಗಳನ್ನು ಎಣಿಸಲಾಗುವುದು. ಹಣದ ಮೂಲದ ಬಗ್ಗೆ ಶಾಸಕರನ್ನು ತನಿಖೆಗೆ ಒಳಪಡಿಸಲಾಗಿದೆ ಎಂದು ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

REAL ESTATE SELLING

Sites

Anjanapura

ANJANAPURA BDA Corner 3rd Block 1400 Sqft 7th 2900 Sqft SE 6th 40x60 EF 8th 2670 Sqft NE 9th NW 1900 Sqft 11th 2000 Sqft SW 4th 1070 Sqft East: 9980357439

ANJANAPURA 8TH Block, BDA Site Sale,40x60, W/F, Near 60'Road, Central Park,1.20Cr, Negotiable : 9880668789, 9513004587

SALE BDA 30x40 N/F Anjanapura 6th Block also 8th Block 40x60 W/f Near proposed BDA complex. 9945373839, 9620041313

ANJANAPURA 11TH Block 40x60 BDA Site for Sale Ready for Construction Brokers Excuse. Contact: 98450-90471

Banashankari

BDA
AVAILABLE
BDA SITES
RESIDENTIAL / COMMERCIAL
at
BANASHANKARI 5TH & 6TH STAGE
ANJANAPURA
UTTARAHALLI
VISHESHWARAIAH LAYOUT
KANAKAPURA ROAD
VERY LOWEST PRICE
Rs.3950 SFT...
URGENT SALE
99165 92400
99803 03502

BDA SITE FOR SALE,BANASHANKARI 6TH STAGE, 10TH BLOCK, 40x60,WEST FACING, 40' ROAD, CONTACT: 9945835569

BANASHANKARI 6TH Stage 10th Block, 100 Feet Road, COMMERCIAL 50x80. RESIDENTIAL 30x40 W/F, 9148814809, 9886763146.

"BANASHANKARI 1ST,2ND,3RD & 6th-Stage 30x40,40x60, 50x80 Sites & Houses for sale,Genuine buyers_Call "Sri.Ganesh Estates"- 9845286505"

SALE BDA 30x40 Banasankari 6th Stage 10th Block North 70 Lakh also 7th Block 30x40 86 lakh good location. 9620041313, 9900999969

'SHREE RENUKAMBA ENTERPRISES' Banashankari 6th Stage, BDA Sites,Buying/Selling, 20x30, 30x40, 40x60, 50x80, Contact: 9880770498

"AVAILABLE" BDA Sites,Banashankari 6th stage, 1st Block,30x40, East, Genuine Buyers: 9663393533/9845051646

BANASHANKARI 6TH Stage 6th Block 30x40 East 7th 30x40 west 4th Block 40x60 South: 9980357439

Bannerghatta Road

VIJAYA BANK colony BDA 30x55- 24000000/- Hulimavu 39x74 'A' katha 3 unit house- 2,10,00,000/- -9980761200

BANNERGHATTA ROAD GOTTIGERE Sites Sale 'A' khatha. W/F 1) 38'x38' 2) 37'x38' 3) 33x130. 9341890909.

BANNERGHATTA ROAD Classic Orchid gated community 88x121- 120000000/ 55x68- 44800000/ Arekere Mico Layout 60x100`East &.West two side road-72000000/ T.Ramaiah Garden 60x84`corner: 45300000/ :9980761200

Chandra Layout

40X60 B.C.C. Layout 2nd Stage, (Near Chandra Layout, Vijayanagar) Genuine Buyers. 14,000/- Negotiable. 9880128931, 9742696899.

Double Road

SHANTINAGAR PRIME Residential Site 40x65 N/F For Sale Rs. 24,000/ Sft. Excellent Location. 'GOLDLINE'- 98450-33756

HSR Layout

HSR LAYOUT Site for Sale 60x40 East Facing 30x40 East Facing Sector 2 Prime Location Price 21.000 Per.sft. Contact: 9845779531

Intl Airport Road

BSNL LAYOUT
Premium Residential / Commercial Plots
Near B'lore Intl Airport Next to Mini Vidhana Soudha on 6 lane NH 207
@ 1100/Sft
OPEN FOR GENERAL PUBLIC
Call: 9071534000

Jayanagar

PRIME PROPERTY For Sale 120x80 Corner in Jayanagar Suitable for Nursing Home/ Partyhall/ Commercial Complex. 32,000/ Sft. 'GOLDLINE'- 98450-33756

SALE JAYANAGAR Residential Site 40x60 North J.P.Nagar 1st Phase 40x75 West 8th-Phase Commercial Site 50x84 (Agents Excuse) 9845232711

PRIME COMMERCIAL Corner Site 80x120 for Sale in Jayanagar Near 4th Block Shopping Complex. Rs. 48000/ Sft. 'GOLDLINE'- 98450-33756

PRIME COMMERCIAL Tenanted Building in JAYANAGAR 4th Block for Sale Rs. 3 Crores. Rental Income 1.50 Lacs. 'GOLDLINE'- 98450-33756

J P Nagar

LAVISH BUNGALOW Fully Furnished 3 BHK Duplex on 50x60 E/F in J.P.Nagar 3rd Phase for Sale. 'GOLDLINE'- 98450-33756

PREMIUM SITES For Sale in J.P.Nagar Residential/ Commercial 30x40, 30x50, 40x50, 40x60, 50x80, 60x90, 80x100, 80x120. 'GOLDLINE'- 98450-33756

30X50 SITE for Sale @ South and 30×50 West, 10 years old House, RBI Layout, J.P. Nagar, 7th Phase. 9880289488

Koramangala

"KORAMANGALA BDA Complex 4th 'C' Block 40x60 East facing 40 feet Road BDA Site. 9448432633"

Kanakapura Road

KANAKAPURA ROAD Sites 20 Lacs Onwards, Commercial, Rental Income, BDA, Panchayat, Houses. 6360702897 R.M.S. PROPERTIES

Kempegowda Layout

NADAPRABHU KEMPEGOWDA Layout 50x80 Sites, No. 3281 and 3282, 7th Block, F Sector west Facing , Site No.5264, 50x80 7th Block, J Sector South Facing, Contact: 7899933036

"SALE 30X40-SOUTH BDA Approved attached Sulekere, Kempegowda Layout 8th-Block 3200/- Negotiable, Brokers Excuse. 9742888879/ 9632201217"

Malleshwaram

MALLESHWARAM 40X60 site for sale west facing 1st Main Road Maruthi Extension Near Srirampura Metro Station Call 8660065216

Multiple Locations

SANJAYNAGAR 40X60, 30X40, 50X80 Arakavathi Layout 50x80, Vidyaranyapura 55x100 Malleshwaram 100x100, 40x40 R.T.Nagar 40x60. New BEL Road. 40x60. 9538111239.

Mysore Road

VILLA PLOT For Sale:- Mysore Emerald Enclave Behind Infosys 80x120 W/F. 1800/- PSq.ft Call:- 9886293430 Brokers Excuse

Mysore

MYSORE 2000 Sft Muda Approved Corner Site In Paradise Enclave Sanchiya For Sale 63 Lakhs Contact 9341950024

Nagarabhavi

BDA APPROVED Ullala Railway Layout, 1st Stage 40x40 (Can Divided to 40x20x2) North East Corner Site No.442, 10000/- psft. 9845488488

"NAGARABHAVI BDA Complex 30x40 East, 30x40 South BDA Site 40 feet Road, 100% Vastu. 9448432633"

Out-Station

MANDYA:PREMIUM RESIDENTIAL site100x60ft in 3rd cross, Bandigowda Layout, Mandya for sale. Price 7650/sft.Call8861131536

Padmanabha Nagar

30X40 EAST Facing Gowdanapalya Kadirenahalli Devegowda Petrol Bunk Road 6,000/- Psqft, A katha Owner: 9448673482

RMV

SALE: NO. 354 2nd cross, 60 ft Road, RMV 2nd stage 2nd block, Bangalore-94, Total Area 4277 sqft South facing. Contact No. 9886094496.

Sarjapur Road

SALE 10,115 Sft Plot, East Facing, at Sarjapura Road, Kodathi Gate Close to Wipro. Contact: 9341253949, 9845005855

Sanjaynagar

SITE SALE Yelhanka Judicial 80x120 40x60 Wanted 2 BedRoom Lease Flat/ House 20L Sanjaynagar 7090777677

Uttarahalli

"POORNAPRAJNA LAYOUT, Site For sale, 50x85 commercial site, opp Anagha Hotel, 60 Feet Road. 8618934679"

Vijayanagar

SALE: NO. 38 Old No. 1489, 7th Main Road, RPC Layout, Vijayanagar 2nd stage, Bangalore-40, 30x50 North facing with old House. Contact No. 9886094496.

Vishweshwariah Layout

SIR M. Vishweshwaraiah Layout 2nd Block 30x40 West Face 40ft Road Good Location Near 100ft Road: 9980433004/ 9448268353

AVAILABLE BDA 40X60 60ft Road 2nd Block, 30X40 EF 1st Block Vishweshwaraiah Layout Contact: 9481703468

MUDDINAPALYA SMV Layout 8th Block, Near Karnataka Bank, 30x40 E/F, A Khatha, 2 Sites Sale. 9980409820, 9164089633.

"COMMERCIAL BDA 40x60 site sale Vishwashwaraih 2nd Block near Satellite Club circle,Genuine Buyers Only. 8050705145"

"VISVESHWARAIAH LAYOUT 6th Block 40 feet Road 30x40 West facing 6800/- P.Sft Negotiable. 6364646603/ 8553908699"

BDA SITE 40x60 South facing @ Visveswaraiah Layout 8th Block. Price 9100/ sqft negotiable. Contact: 9972917388

SITE FOR SALE VISVESWARAYA 5TH BLOCK 40x60 E/F NEAR KLE LAW COLLEGE.BROKER EXCUSE : 9449543900.

VISHVESHWARAIAH LAYOUT Double Road near KLE Law-college A-khata 80X180 Commercial Site Sale, 6500per-sqft. Contact:9945079777

30X40 VISHWESHWARAIAH Layout 5th Block East Site Sale, 40X60 Site Sale 4th Block West 5750 Sqft: 8310003509

Vidyaranyapura

FOR IMMEDIATE sale. BDA approved site 61x40 feet east facing with prime location at 7th block Vidyaranyapura. Agents excused. Please call Prasad- 9900385644.

JOB OPPORTUNITIES

Teachers/ Professors

VIDYA SOUDHA GROUP OF INSTITUTIONS
Plot No. 563/A & B, KIADB Growth Centre, H.N. Pura Road, Hassan – 573 201
Call: 89715 66659 www.vidyasoudha.edu.in

REQUIRES FACULTY FOR

Senior Co-ordinators (CBSE)
Qual: Post Graduation with B.Ed
Exp: Min 3 yrs as Coordinator

Teacher High/Primay School (CBSE)
Subject: English, Physical Education (Female)
Qual: Master/Bachelor degree with B.Ed/B.PEd
Exp: Min 2 years

Pre-Primary School Teachers
Qual: Degree with NTT/MTT

Non-Teaching
1. Position: Warden for Ladies Hostel at Hassan (Female). Qual: Any Degree with Min. 3 years Experience
2. Position: Stores officer at Bangalore Qual: B.Com Degree with 5 years experience

Salaries & Benefits will be on par with industry standards
Interested candidates can email their CV to: hr@vidyasoudha.edu.in
Apply on or before 8th August 2022

St. Benedict's Academy School (State & CBSE), PU & Degree College Asirvanam, Anchepalya, Mysore Road, Bangalore-74
Requires Trained & Experienced
LECTURERS
Computer Science (MCA/MSc) Finance/ Accountancy/ Taxation (MCom)
NURSING TUTORS
MSc Nursing OBO, Community Health
TEACHERS
CBSE Primary School
KG, Science, English, PT
State Primary & High School
Hindi, EVS, Maths, Biology
OFFICE STAFF
Call: 9740245828
Mail your resume to: jeromeosb@gmail.com

CAMBRIDGE PUBLIC SCHOOL, Yelahanka NewTown, Bangalore-64 needs trained, experienced LADY GRADUATES to handle English, Social, Maths, Computer Applications and LADY OFFICE ASSISTANT. Contact for immediate appointment. 9632047616/ khannigar@rocketmail.com

REQUIRED TEACHERS
We are looking for enthusiastic, innovative & qualified teachers to handle the subjects for
High school-Social Science
Middle school-General Science
The Principal, RASHTRIYA NAVODAYA VIDYA KENDRA
52/3A, Veerabadrappa Layout, Thigalarapalya Main Road, Peenya 2nd Stage, Bangalore - 560058.
Call us at 6364648950. For candidates in and around Peenya, Hegganahalli, Rajgopalnagara, Kamakshi Palya or Laggere

SONA VALLIAPPA PUBLIC SCHOOL (ICSE) Hejjala, Bidadi requires Science/ Maths/ English/ Computer Science Highschool Teachers 9880439138/ 7259322368

VASAVI GROUP OF EDUCATIONAL INSTITUTION, Vijayanagar, Bangalore-560040. Required Fresher/ Experienced Lecturers for COMPUTER SCIENCE and ENGLISH for PU & Degree. Drop your resume vasavijnanapeeta01@gmail.com/ vasaviintpu@gmail.com. For further details contact 080-23203342/ 23300532.

UNIVERSAL ENGLISH SCHOOL, Requires Teachers for English Primary. Contact : H.M., 5th Main, Rahamathnagar -R T Nagar, Bangalore. Ph-080 23634344/9845133636

WANTED TEACHERS with BA/MA (Eng, Hindi and SS) with BEd, BCA/MCA. Salary 14000 to 25000. Contact Sidhartha International School, Peenya, Dasarahalli. Contact No. 9620100046, 9964670328.

515 ABW HIGH SCHOOL
Halasuru, Bangalore - 560 008.
REQUIRES
Teaching & Non-Teaching Staff on Contract Basis
Kindly visit: http://515armyschool.co.in/recruitment
For detailed advertisement or contact: 080-2530 7559

REQUIRED EXPERIENCE Lady TEACHER for Computer & English for High School @ Hebbal Contact: 9008981637

Accounts & Finance

WANTED LADIES For Accounts (Married) B.com with Tally Knowledge in&Around Jayanagar And JP-Nagar Contact: 9980921763/ 9632201671

WANTED FEMALE Accountant 5 Years Experience, Mr. Interiors: 9886102678, Email: mr22interior@gmail.com

Engg/ Production Technical

WANTED ENGINEERS for PRODUCTION, B.E/ Diploma (Mechanical). minimum 5 years experience. 'VINUMAC' 205A, Peenya 3rd phase, Bangalore-58 Phone: 080-28391959, 28394512 admin@vinumac.com

WANTED EXPERIENCED TURNER and LASER CUTTING MACHINE OPERATOR. Factory at Peenya. Contact: 7259936823

General

WANTED GRAPHIC DESIGNER, Computer Typist Male & Female & Supervisor Jayanagar 9th Block Call: 9845934508

ENGINEERING MAINTENANCE COMPANY THIPPASANDRA Need OPERATION EXECUTIVE DEE, TALLY ACCOUNT, OFFICE SECRETARY, MANAGER OPERATION -DEE/BE, ELECTRICIAN. Watsapp: 9845163857 9980991973 Email: suku_nair@yahoo.com

WANTED COUNTER SALES PERSONS on shift basis with guarantor. Contact: Gokul Dairy Farm, 20/3, 4th main (Near Syndicate Bank) Gandhinagar, Bangalore-560009. Timings: 9 am to 10 am.

Multiple Vacancy

OPPORTUNITY FOR Retired Officials, Bankers,NRI, Teachers, Professionals, Homemakers, CAs. Earn salary + Incentives. CALL: 8095301555

Part-Time Jobs

REPUTED MNC COMPANY will Provide WORK FROM HOME, Earn 35000 to 40000 Malleshwaram: 7019215243/ 9886641282

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

Receptionist/ Secretary

"WANTED FEMALE Receptionist and Office Assistant" for Builders office in HSR Layout. Contact: 9886294610

Wanted

WANTED TELECALLERS, Male and Female WARDENS, PROS, COMPUTER OPERATOR to Work in Reputed Educational Organisation. 8867860196/ 9945811356.

MATRIMONIAL

Brides Wanted

Brahmin

BRAHMIN, HANDSOME, 29 years, 5'10" M.Tech, PHd, Newzealand well-settled. Contact USHODHAYA: 9611919477/ 9886884291

Hindu

BANGALORE BASED Vegetarian 39 post graduate Engineer Manager MNC seeks Vegetarian Bride. CAST NO BAR. 9448732793. srininag82@gmail.com

Muslim

SUNNI MUSLIM Parents from Bangalore seeks for an Educated alliance for their son,40years/5'9' MS Engineering Father-Retired Engineer, Mother-Retired from Western Railways.Marital Status No Bar(080-69103008)

SUNNI MUSLIM Family invites good looking well educated girl who is willing to migrate with their UAE Settled Son (080-69074922)

Second Marriage

BRAHMIN DIVORCEE 38 years, 6 ft, BE MBA, CEO, Salary Rs. 25 Lacs PA, Bangalore. Only son. USHODHAYA: 9611919477/ 9886884291

BRAHMIN DIVORCEE 34 years, 5'10" M.Tech MNC Bangalore, well- settled. Contact USHODHAYA: 9611919477/ 9886884291

Grooms Wanted

Brahmin

BRAHMIN GIRL, AGE 27, PUC/ AGE 32, PUC SEEK SUITABLE GROOMS WANTED. MARRIAGE BUREAU, MANGALORE:9035730677

Hindu

GIRL 26 years old, 5.1 Slim Fair, B.Com, MBA(H), Bangalorean, Father Govt Retired Doctor, Intercaste parents expect decent marriage. Contact: 9341950841.

Muslim

GROOM REQUIRED for Bangalore based MBBS,MD girl .Age 27 ,tall and fair .Boy must be MBBS/MD/MS well settled Sayed Sunni family .Contact on 6363989661/8197878099

RENOWNED BANGALORE Based Sunni Muslim Businessman is looking for a well established moderately liberal family for his well educated daughter(080-69074922)

Marwari

ALLIANCE INVITED for second marriage of our beautiful, 31 year old daughter, Working in a prominent designation in an MNC, Bangalore.Father Renowned Businessman(080-69103008)

Matrimonial Bureaus

Gathbandhan Matrimony
(A Personalized Matrimonial Service)
71 – 72, 1st Floor, Koramangala Industrial layout, Jyoti Nivas College Road, Bangalore 560095
FIX YOUR APPOINTMENT
(We will keep Ourselves free exclusively for you)
90380-00029

USHODHAYA MATRIMONIAL (Estd: 1998)
FOR HIGH CLASS FIRST/ SECOND MARRIAGES
All Age Groups INDIA/ ABROAD,
Contact:
9611919477
9886884291

ASHIRWAD MATRIMONIALS service for all religion 1st/ 2nd marriages all ages India/ Abroad. Contact Prabhavathi - 9632163953

ASWATH MATRIMONIAL for only Hindus highly qualified, all ages 1st and 2nd marriages India/ Abroad. Aswath - 9739855599

PUBLIC NOTICE

PUBLIC NOTICE

My client is proposing to purchase the land detailed in the Schedule hereunder from **Smt. SHARADA V PATIL** wife of Late V.B. Patil and **Sri SOMASHEKAR V PATIL,** S/o. Late Sri V.B. Patil, any other person other than the said persons is having any right title interest shall submit their objection to the address detailed hereunder forthwith, failing which it shall be treated as no objection for my client to purchase the same.

SCHEDULE

The agricultural land bearing survey No, 59/14 measuring 0-31 Guntas situated at Dasarahalli Village, Kasaba Hobli, Devanahalli Taluk, Bengaluru Rural District, bounded on the and bounded on the East by: Road (pathway), West by: Land belong to Pujari Smt Venkatashamappa, North by: Land belong to Anju Ahuja and South by: Land belonging to R. Manjunatha.

Mohan. S, B.Com, LL.B, Advocate
#38/1, 2nd Floor, N.S. Iyengar Street, Seshadripuram, Bengaluru - 560 020.
Mobile: 98451 87034

Date: 29-07-2022 Bengaluru.

AUTOMOTIVE

Four Wheelers Selling

Multiple

2011 MARUTHI Astar VXI, Automatic, 80500 Kms, Rs.295000. Hyundai i10 ASTA 2011, 57000 Kms, Rs.395000. Please Contact: 9341273990.

Mahindra

SCORPIO 2004, 1,50,000 km, throughout Bangalore, FC 2024, insurance 12/22. Second owner 9844023733

BUSINESS

Business to Business

Business

VAMSHADHARA PROJECT SERVICES; Finance, Takeovers, JDs, Properties, Resorts, Educational, Softskills, Solutions, Training. Dr. SwamyNaidu- 9342247637

Business Offers

Distributors

START!! YOUR own catering Business by Affiliating with ZIRCON RASOI with an Investment of 1500/- to 5000/- only Contact:+91 9148087831/ +91 8660074756.

Finance

FINANCE AGAINST Land & Building Properties Industries Schools Hospitals Projects & NRI Funds.7358729820

EDUCATIONAL

Training

FELLOWSHIP IN aesthetic dermatology RGUHS apply by 12th August 2022 training.venkatcharmalaya@gmail.com. 080-23392416

OTHERS

Dance/ Music Classes

'MUSIC LESSONS, Personal/ Online. Piano, Guitar, Western and Carnatic Vocals in Indiranagar. Contact 9901968421 for more details.'

For Sale

OWNER LEAVING LEATHER SOFA TEAK DINING COT MATTRESS AUTOMATIC GAS STOVE DIWAN. CALL: 9845414482/ 7019263843

PERSONAL

Change of Name

CHANGE OF NAME
I, SANDEEP KUMAR alias SANDEEP KUMAR CHANDRASEKAR, residing at Tranquil Nest Apt., Flat No. 006, Balaji Enclave, 11th Main, Anantapur Main Road, Yelahanka, Bangalore - 560 064 have changed my name to SANDEEP KUMAR SALDAPUR vide affidavit dated: 30.07.2022 before notary H. Sridhar Rao, Bangalore. Henceforth, I shall be called as Sandeep Kumar Saldapur only.

I, DINESH Kumar MuljiBhai Pir, (82 years) S/O MuljiBhai Gangajar Pir, R/at B-603, Luxuria, 8th Main, Malleswaram, Bangalore 560055 have changed my name to Dinesh Mulji Pir Vide affidavit dated 29.07.2022 before Notary Chandrakala, Bangaluru 560010

I, REKHA SHARMA (Passport K5476238) R/o. Kaggadasapura, CV Raman Nagar, Bengaluru- 560093 Have Changed My Name to REKHA JITENDRA SHARMA vide Affidavit Dated 29-07-2022 Before Notary Sreedharan Nair PN, Bangalore.

Lost

LOST
I, **Fathima Tara Marian** R/a # 84/2, 1st Main Road, 4th Cross, Chamarajpet, Bangalore. Have Lost My Property Documents of Survey No. 41-31-37/10. Lost on 22-04-2022 at Chamarajpet, Bangalore. If anybody Found please Contact: **7259973474** OR Nearby Police Station.

MORE Classifieds IN SUPPLEMENT

WEEKEND CORNER

ಕ್ಲಾಸಿಫೈಡ್ಸ್

FOR SALE
2009 Maruti Gypsy King 1.3 litre engine, Ex army, run now 11000 kms, BF Goodrich AT tyres, New Clutch plate, New steering column, New original leaf springs, New Shocks, New Soft top from Armoro, New Automech Free Flow Exhaust, front differential hub/ lock, Engine in good condition.
Expecting Rs 4.20 lakhs.
Contact: 9845017592

IAS/KAS 2023 & PSI/PC
FREE Coaching batch Starts On August 16
Dr Kalam IAS Academy Bangalore
9535215127 / 28
Dr Kalam is a Private Institute

ADMISSIONS OPEN 2022-2023
Govt. Recognised Diploma Courses
LABORATORY / RADIOLOGY
OPHTHALMIC / OPERATION THEATER
DIALYSIS TECHNICIAN COURSES
Eligibility & Duration: 3 years for SSLC & 2 years for PUC (Science)
SRI SAI INSTITUTE OF PARAMEDICAL SCIENCES
(Recognised by Ministry of Medical Education, Govt of Karnataka)
375.1st Main Road. Vidhanasowdha Layout, Laggere, Bengaluru-560058
Contact: 9844068838 / 9036181812
SAI-22301

PASS PRIVATELY
COMPLETE SSLC / PUC IN FEW MONTHS
ಕೆಲವೇ ತಿಂಗಳಲ್ಲೇ SSLC / PUC ಪೂರ್ಣಗೊಳಿಸಿರಿ
ASSURANCE OF GOOD RESULT
BA/ B.Com/ BBA/ BCA
MA/ M.Com / MBA/ MCA
7829881005 - 9148192387

ಭಾನುವಾರ, ಜುಲೈ 31, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 211 | ಪುಟ 30
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭಾನುವಾರದ ಪುರವಣಿ
ಜನಸಂಖ್ಯೆಯ ಶಕ್ತಿ ಹಾಗೂ ಭಾರ ಎರಡನ್ನೂ ಹೊತ್ತುಕೊಂಡ ಭಾರತ ಅಭಿವೃದ್ಧಿಯತ್ತ ಸಾಗುವ ಹಾದಿ ಯಾವುದು?

ಪ್ರವೀಣ್ ಹತ್ಯೆ ಆರೋಪಿಗಳು ಪೊಲೀಸ್ ಕಸ್ಟಡಿಗೆ 8

ಅಖಿಲ ಭಾರತ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರಗಳ ಸಮಾವೇಶದಲ್ಲಿ ಮೋದಿ

ಪರಿಷತ್ ಚುನಾವಣೆ: ಚಿಂಚನಸೂರು ಬಿಜೆಪಿ ಅಭ್ಯರ್ಥಿ 7

ವಿಚಾರಣಾಧೀನ ಕೈದಿಗಳ ತ್ವರಿತ ಬಿಡುಗಡೆಗೆ ಕ್ರಮ 10

ಗೃಹ ಸಚಿವರ ಮನೆಗೆ ನುಗ್ಗಿ ಗಲಭೆ

ಎಬಿವಿಪಿ ಕಾರ್ಯಕರ್ತರ ಮೇಲೆ ಪೊಲೀಸರಿಂದ ಲಘು ಲಾಠಿ ಪ್ರಹಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ (ಎಬಿವಿಪಿ) ಕಾರ್ಯಕರ್ತರು ಗೃಹ ಸಚಿವ ಆರಗ ಜ್ಞಾನೇಂದ್ರ ಅವರ ಅಧಿಕೃತ ನಿವಾಸಕ್ಕೆ ಅಕ್ರಮವಾಗಿ ನುಗ್ಗಿ ಗಲಭೆ ಸೃಷ್ಟಿಸಿದ್ದಾರೆ ಎಂದು ಆರೋಪಿಸಿರುವ ಪೊಲೀಸರು, 30 ಮಂದಿಯ ವಿರುದ್ಧ ಎಫ್‌ಐಆರ್ ದಾಖಲಿಸಿದ್ದಾರೆ.

ಜಯಮಹಲ್‌ನಲ್ಲಿರುವ ಸಚಿವರ ಮನೆಗೆ ಶನಿವಾರ ಬೆಳಿಗ್ಗೆ 9.30ರ ಸುಮಾರಿಗೆ ಬಂದಿದ್ದ ಎಬಿವಿಪಿ ಕಾರ್ಯಕರ್ತರು, 'ರಾಜ್ಯದಲ್ಲಿ ಎಸ್‌ಡಿಪಿಐ ಹಾಗೂ ಪಿಎಫ್‌ಐ ನಿಷೇಧಿಸಬೇಕು. ಗೃಹ ಸಚಿವ ರಾಜೀನಾಮೆ ನೀಡಬೇಕು' ಎಂದು ಒತ್ತಾಯಿಸಿದರು.

ಮನೆಯ ಭದ್ರತೆ ಕರ್ತವ್ಯದಲ್ಲಿದ್ದ ನಗರ ಸಶಸ್ತ್ರ ಪಡೆಯ ಪೊಲೀಸರು, 'ಪ್ರತಿಭಟನೆಗೆ ಅವಕಾಶವಿಲ್ಲ. ದಯವಿಟ್ಟು ವಾಪಸು ಹೋಗಿ' ಎಂದರೂ ಕಾರ್ಯಕರ್ತರು, ಮಾತಿನ ಚಕಮಕಿ ನಡೆಸಿದರು.

ಗೇಟ್ ತಳ್ಳಿ ಒಳನುಗ್ಗಿದ ಕಾರ್ಯಕರ್ತರು, ಮನೆ ಬಾಗಿಲು ಬಳಿ ಕುಳಿತು ಪ್ರತಿಭಟನೆ ಮುಂದುವರಿಸಿದರು. ತಡೆಯಲು ಬಂದ ಪೊಲೀಸರನ್ನು ತಳ್ಳಾಡಿದರು. ಸ್ಥಳಕ್ಕೆ ಬಂದ ಹೆಚ್ಚುವರಿ ಸಿಬ್ಬಂದಿ, ಕಾರ್ಯಕರ್ತರ ಮೇಲೆ ಲಘು ಲಾಠಿ ಪ್ರಹಾರ ನಡೆಸಿ ಸ್ಥಳದಿಂದ ಚದುರಿಸಿದರು.

8ನೇ ಪುಟ ನೋಡಿ

ಚಿನಕುರಳಿ

ಪ್ರಕಾಶ್ ಶೆಟ್ಟಿ

ಸಿಇಟಿ ರ್‍ಯಾಂಕ್: ಬೆಂಗಳೂರೇ ಅಗ್ರ

ಪ್ರಜಾವಾಣಿ ವಾರ್ತೆ

ಅಪೂರ್ವ್ | ಹೃಷಿಕೇಶ್ | ಅರ್ಜುನ್ | ಆರ್.ಕೆ.ಶಿಶಿರ್

ಬೆಂಗಳೂರು: ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) 2022– 23ನೇ ಶೈಕ್ಷಣಿಕ ಸಾಲಿನ ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕೆ ಜೂನ್ 16 ಮತ್ತು 17ರಂದು ನಡೆಸಿದ್ದ ಸಾಮಾನ್ಯ ಪ್ರವೇಶ ಪರೀಕ್ಷೆಯಲ್ಲಿ (ಸಿಇಟಿ) ಎಂಜಿನಿಯರಿಂಗ್ ಸೇರಿದಂತೆ ಎಲ್ಲ ಐದೂ ವಿಭಾಗಗಳಲ್ಲಿ ಬೆಂಗಳೂರಿನ ವಿದ್ಯಾರ್ಥಿಗಳೇ ಮೊದಲ ರ್‍ಯಾಂಕ್ ಪಡೆದಿದ್ದಾರೆ.

ಎಂಜಿನಿಯರಿಂಗ್ ವಿಭಾಗದಲ್ಲಿ ಯಲಹಂಕ ನ್ಯಾಷನಲ್ ಪಬ್ಲಿಕ್ ಶಾಲೆಯ ಅಪೂರ್ವ್ ಟಂಡನ್, ಪಶುವೈದ್ಯ ಹಾಗೂ ನ್ಯಾಚುರೋಪಥಿ, ಯೋಗ ವಿಜ್ಞಾನ ಕೋರ್ಸ್‌ಗಳಲ್ಲಿ ನ್ಯಾಷನಲ್ ಸೆಂಟರ್ ಫಾರ್ ಎಕ್ಸಲೆನ್ಸ್ ಕಾಲೇಜಿನ ಹೃಷಿಕೇಶ್ ನಾಗಭೂಷಣ್ ಗಂಗೂಲಿ, ಬಿ.ಎಸ್ಸಿ (ಕೃಷಿ)ಯಲ್ಲಿ ಎಚ್‌ಎಎಲ್ ಪಬ್ಲಿಕ್ ಸ್ಕೂಲ್‌ನ ಅರ್ಜುನ್ ರವಿಶಂಕರ್, ಬಿ-ಫಾರ್ಮಾದಲ್ಲಿ ನಾರಾಯಣ ಇ- ಟೆಕ್ನೋ ಸ್ಕೂಲ್‌ನ ಆರ್.ಕೆ.ಶಿಶಿರ್ ಪ್ರಥಮ ರ್‍ಯಾಂಕ್ ಪಡೆದಿದ್ದಾರೆ.

ಐದೂ ವಿಭಾಗಗಳಲ್ಲಿ ಮೊದಲ 10 ರ್‍ಯಾಂಕ್‌ಗಳ ಸಿಂಹಪಾಲು ಬೆಂಗಳೂರಿನ ವಿದ್ಯಾರ್ಥಿಗಳು ಪಡೆದರೆ, ನಂತರ ಸ್ಥಾನ ಉಡುಪಿ, ದಕ್ಷಿಣ ಕನ್ನಡ ಜಿಲ್ಲೆಯ ಪಾಲಾಗಿವೆ.

ಒಂದು ಸ್ಥಾನ ತುಮಕೂರು ಪಡೆದರೆ ಇತರ ಯಾವುದೇ ಜಿಲ್ಲೆಗಳು 10ರ ಒಳಗೆ ಸ್ಥಾನ ಪಡೆದಿಲ್ಲ.

9ನೇ ಪುಟ ನೋಡಿ

ಗಡಿ ಕನ್ನಡಿಗರ ಸ್ಥಿತಿಗತಿ ಸುಧಾರಿಸಲು ಸಂಪೂರ್ಣ ನಿರ್ಲಕ್ಷ್ಯ: ಆರೋಪ

ಗಡಿ ಗ್ರಾಮ: ಸಿಗದ ಪರಿಹಾರ

• ಚಂದ್ರಕಾಂತ ಮಸಾನಿ

ಬೀದರ್: ಐದು ರಾಜ್ಯಗಳ ಗಡಿಗೆ ಹೊಂದಿಕೊಂಡಿರುವ ಕರ್ನಾಟಕದ ಗಡಿ ಗ್ರಾಮಗಳು ಸಮಸ್ಯೆಗಳ ಸುಳಿಯಲ್ಲಿ ಸಿಲುಕಿವೆ. ಕುಡಿಯುವ ನೀರಿಗಾಗಿ ಹೈಕೋರ್ಟ್ ಮೊರೆ ಹೋಗುವ ಮತ್ತು ಸಾರಿಗೆ ಸಂಪರ್ಕಕ್ಕೆ ಕತ್ತೆ ಬಳಸಬೇಕಾದ ಪರಿಸ್ಥಿತಿ ಇದೆ. ಉದ್ಯೋಗಕ್ಕಾಗಿ ನೆರೆ ರಾಜ್ಯಗಳ ಮಹಾನಗರಕ್ಕೆ ವಲಸೆ ಹೋಗುವುದು ಮುಂದುವರಿದಿದೆ.

ಬಲವಾಗಿ ಬೇರೂರಿದ ಭ್ರಷ್ಟಾಚಾರ, ಕಳಪೆ ಕಾಮಗಾರಿ, ಅಭಿವೃದ್ಧಿಗೆ ಇಚ್ಛಾಶಕ್ತಿಯ ಕೊರತೆ ಸೇರಿ ಎಲ್ಲವೂ ಸಮಸ್ಯೆಗಳನ್ನು ಇನ್ನಷ್ಟು ಜಟಿಲಗೊಳಿಸಿವೆ. ನೀರಾವರಿ ಯೋಜನೆ, ಸಾರಿಗೆ ಅವ್ಯವಸ್ಥೆ, ಕುಡಿಯುವ ನೀರು ಮತ್ತು ನಿರುದ್ಯೋಗ ಸಮಸ್ಯೆ ಜನರ ನೆಮ್ಮದಿ ಕಸಿದಿವೆ.

ಬೀದರ್ ಜಿಲ್ಲೆಯಲ್ಲಿ ಕಾರಂಜಾ ನೀರಾವರಿ ಯೋಜನೆಯ ಕಾಲುವೆ ಆಧುನೀಕರಣ ಕಾಮಗಾರಿ ಮತ್ತು ಅತಿವಾಳ ಏತ ನೀರಾವರಿ ಯೋಜನೆ ಕಾಮಗಾರಿ ಪೂರ್ಣವಾಗಿಲ್ಲ. ರೈತರ ಆಕ್ಷೇಪಣೆಗಳಿಂದ ಕಾಮಗಾರಿ ಅಲ್ಲಲ್ಲಿ ಬಾಕಿ ಉಳಿದಿವೆ. ಚಂದಾಪುರ ಬ್ಯಾರೇಜ್‌ನಿಂದ ಬೀದರ್ ತಾಲ್ಲೂಕಿನ 33 ಕೆರೆಗಳಿಗೆ ನೀರು ತುಂಬಿಸುವ ಯೋಜನೆ ಕಡತಗಳಲ್ಲೇ ಉಳಿದಿದೆ.

ರಾಯಚೂರು ತಾಲ್ಲೂಕಿನ ಉತ್ತರ ಭಾಗದಲ್ಲಿರುವ ಕೃಷ್ಣಾನದಿ ಆಚೆ ತೆಲಂಗಾಣ ಗಡಿ ಮತ್ತು ದಕ್ಷಿಣ ಭಾಗದಲ್ಲಿರುವ ತುಂಗಭದ್ರಾ ನದಿ ಆಚೆ ಆಂಧ್ರಪ್ರದೇಶ ಗಡಿ ಇದೆ.

6ನೇ ಪುಟ ನೋಡಿ

ಒಳನೋಟ
ಸಮಸ್ಯೆಗಳ ಸುಳಿಯಲ್ಲಿ...
ಪ್ರತಿಕ್ರಿಯಿಸಿ: 9606038256
feedback@prajavani.co.in

> ಗಡಿ ಗ್ರಾಮಗಳನ್ನು ಕರ್ನಾಟಕ ರಾಜ್ಯದ ಭಾಗವೆಂದು ಪರಿಗಣಿಸಿದ್ದಾರೋ ಇಲ್ಲವೋ? ಜನಪ್ರತಿನಿಧಿ, ಅಧಿಕಾರಿಗಳೆಲ್ಲರಿಗೂ ನಮ್ಮ ಭಾಗವೆಂದರೆ ತಾತ್ಸಾರವೇಕೆ?
> **ರಾಮಾಚಾರಿ ವಿಶ್ವಕರ್ಮ**
> ಚಲ್ಹೇರಿ ಗ್ರಾಮದ ಮುಖಂಡ, ಯಾದಗಿರಿ ಜಿಲ್ಲೆ

ಬೀದರ್ ಜಿಲ್ಲೆಯ ಔರಾದ್ ತಾಲ್ಲೂಕಿನಲ್ಲಿ ರಸ್ತೆ ಸಾರಿಗೆ ಸಂಸ್ಥೆ ಬಸ್‌ಗಳು ಇರದ ಕಾರಣ ಜನರು ಕ್ರೂಸರ್ ಮೇಲೆ ಪ್ರಯಾಣಿಸುತ್ತಾರೆ.
ಪ್ರಜಾವಾಣಿ ಚಿತ್ರ: ಮನ್ಮಥ ಸ್ವಾಮಿ

ರಸ್ತೆ, ನೀರಿಗಾಗಿ ಪಿಐಎಲ್

'ಕುಡಿಯುವ ನೀರು ಪೂರೈಸಲು ಮತ್ತು ರಸ್ತೆ ನಿರ್ಮಿಸಲು ಸರ್ಕಾರಕ್ಕೆ ನಿರ್ದೇಶನ ನೀಡುವಂತೆ ಈವರೆಗೆ ಹೈಕೋರ್ಟ್‌ನಲ್ಲಿ 101 ಪಿಐಎಲ್ ದಾಖಲಿಸಿರುವೆ. ರಾಜ್ಯದ ಬೀದರ್ ಗಡಿಯಲ್ಲಿರುವ ಮದನೂರು ಗ್ರಾಮಕ್ಕೆ ನೀರು ಪೂರೈಸುವಂತೆ 2017ರಲ್ಲಿ ಹೈಕೋರ್ಟ್ ಮೊರೆ ಹೋಗಿದ್ದೆ. ಅದೇ ವರ್ಷ ಕೋರ್ಟ್ ಸರ್ಕಾರಕ್ಕೆ ನಿರ್ದೇಶನವನ್ನೂ ನೀಡಿತು. ಆದರೆ, ಅಲ್ಲಿನ ಪರಿಸ್ಥಿತಿ ಮಾತ್ರ ಬದಲಾಗಿಲ್ಲ' ಎಂದು ಸಾಮಾಜಿಕ ಕಾರ್ಯಕರ್ತ ಗುರುನಾಥ ವಡ್ಡೆ ಹೇಳುತ್ತಾರೆ.

ಔರಾದ್ ತಾಲ್ಲೂಕಿನ 5 ತಾಂಡಾಗಳಿಗೆ ಇಂದಿಗೂ ರಸ್ತೆ ಇರದ ಕಾರಣ ಅಲ್ಲಿನ ನಿವಾಸಿಗಳು ಸರಕು ಸಾಗಣೆಗೆ ಕತ್ತೆಗಳನ್ನು ಅವಲಂಬಿಸಿದ್ದಾರೆ. ರಸ್ತೆಗಳು ಇರದ ಕಾರಣ ವಾಹನಗಳು ಇತ್ತ ಬರುವುದಿಲ್ಲ.

6ನೇ ಪುಟ ನೋಡಿ

ರಾಜ್ಯದಲ್ಲಿ ಮೊದಲ ಮಂಕಿಪಾಕ್ಸ್ ಲಕ್ಷಣ ಪತ್ತೆ

ಚಿಕ್ಕಬಳ್ಳಾಪುರ: ರಾಜ್ಯದಲ್ಲಿರುವ ಆಫ್ರಿಕಾ ಮೂಲದ ವ್ಯಕ್ತಿಯೊಬ್ಬರಲ್ಲಿ ಮಂಕಿಪಾಕ್ಸ್ ವೈರಸ್ ಸೋಂಕಿನ ಲಕ್ಷಣ ಕಾಣಿಸಿಕೊಂಡಿದ್ದು ಮಾದರಿಯನ್ನು ಪರೀಕ್ಷೆಗೆ ಕಳುಹಿಸಲಾಗಿದೆ ಎಂದು ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ.ಸುಧಾಕರ್ ತಿಳಿಸಿದರು. 5

ಮಂಗಳೂರು: ಶಾಂತಿಸಭೆಗೆ ಮುಸ್ಲಿಮರಿಂದ ಬಹಿಷ್ಕಾರ

ಮಂಗಳೂರು: ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಾನೂನು ಸುವ್ಯವಸ್ಥೆ ಕಾಪಾಡುವ ಉದ್ದೇಶದಿಂದ ಜಿಲ್ಲಾಡಳಿತ ಶನಿವಾರ ಶಾಂತಿ ಸಭೆ ನಡೆಸಿತು. ಆದರೆ, ಒಂದು ಸಮುದಾಯದ ಮುಖಂಡರು ಸಭೆ ಬಹಿಷ್ಕರಿಸಿದರು. 8

ವಿವಾದ ಸೃಷ್ಟಿಸಿದ ಮಹಾರಾಷ್ಟ್ರ ರಾಜ್ಯಪಾಲ

ಮುಂಬೈ: 'ಗುಜರಾತ್ ಹಾಗೂ ರಾಜಸ್ಥಾನದವರು ಒಂದು ವೇಳೆ ಮುಂಬೈ ಹಾಗೂ ಠಾಣೆ ನಗರಗಳಿಂದ ಹೊರನಡೆದರೆ, ಈ ನಗರಗಳಲ್ಲಿ ದುಡ್ಡೇ ಇರುವುದಿಲ್ಲ' ಎಂದು ಮಹಾರಾಷ್ಟ್ರ ರಾಜ್ಯಪಾಲ ಭಗತ್ ಸಿಂಗ್ ಕೋಶಿಯಾರಿ ಅವರು ನೀಡಿರುವ ಹೇಳಿಕೆಗೆ ತೀವ್ರ ವಿರೋಧ ವ್ಯಕ್ತವಾಗಿದೆ. 10

ಇಪಿಎಫ್‌ಒ: ಇಟಿಎಫ್ ಹೂಡಿಕೆ ಮಿತಿ ಹೆಚ್ಚಳ ಇಲ್ಲ

ನವದೆಹಲಿ: 'ಷೇರುಪೇಟೆಗಳಲ್ಲಿ ವಹಿವಾಟು ನಡೆಸುವ ವಿನಿಯಮ ವಹಿವಾಟು ನಿಧಿಗಳಲ್ಲಿ (ಇಟಿಎಫ್) ಭವಿಷ್ಯ ನಿಧಿಯ ಹೂಡಿಕೆ ಪ್ರಮಾಣವನ್ನು ಶೇ 20ಕ್ಕೆ ಹೆಚ್ಚಿಸುವ ಪ್ರಸ್ತಾವವನ್ನು ಕೈಬಿಡಲಾಗಿದೆ' ಎಂದು ಇಪಿಎಫ್‌ಒ ಟ್ರಸ್ಟಿ ಹರ್ಭಜನ್ ಸಿಂಗ್ ಸಿದ್ದು ತಿಳಿಸಿದ್ದಾರೆ. 16

ನಗರದ ಬ್ರಿಗೇಡ್ ರಸ್ತೆಯಲ್ಲಿ ಶನಿವಾರ ರಾತ್ರಿ ಸುರಿದ ಮಳೆಯಲ್ಲೇ ಜನರು ಕೊಡೆ ಹಿಡಿದು ಸಾಗಿದರು
–ಪ್ರಜಾವಾಣಿ ಚಿತ್ರ

ಧಾರಾಕಾರ ಮಳೆ: ತಗ್ಗು ಪ್ರದೇಶಗಳಿಗೆ ನೀರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಶನಿವಾರ ರಾತ್ರಿ ದಿಢೀರ್ ಸುರಿದ ಧಾರಾಕಾರ ಮಳೆಯಿಂದಾಗಿ ತಗ್ಗು ಪ್ರದೇಶಗಳಿಗೆ ನೀರು ನುಗ್ಗಿ ಸಮಸ್ಯೆ ಉಂಟಾಯಿತು. ರಾತ್ರಿ 9 ಗಂಟೆ ವೇಳೆಗೆ ಗುಡುಗು ಸಹಿತ ಆರಂಭವಾದ ಮಳೆಯು 11 ಗಂಟೆಯವರೆಗೂ ಸುರಿಯಿತು.

ನಗರದ ಶ್ರೀರಾಂಪುರ, ರಾಜಾಜಿನಗರ, ಮಹಾಲಕ್ಷ್ಮಿ ಲೇಔಟ್, ಯಶವಂತಪುರ, ಗೊರಗುಂಟೆಪಾಳ್ಯ, ಪೀಣ್ಯ, ಯಲಹಂಕ, ಮಾಗಡಿ ರಸ್ತೆ, ಜಯನಗರ, ಬನಶಂಕರಿ, ಮೆಜೆಸ್ಟಿಕ್, ಶಿವಾಜಿನಗರ, ಕೆಂಗೇರಿ, ಜೆ.ಸಿ.ನಗರ, ಹೆಬ್ಬಾಳ ಸೇರಿ ವಿವಿಧ ಬಡಾವಣೆಯಲ್ಲಿ ಧಾರಾಕಾರ ಮಳೆಯಾಗಿದೆ.

ತಗ್ಗು ಪ್ರದೇಶಗಳಲ್ಲಿರುವ ವಿವಿಧ ಕೆಳ ಸೇತುವೆಗಳಲ್ಲಿ ನೀರು ನಿಂತಿದ್ದು, ವಾಹನ ಸವಾರರು ಪರದಾಡಿದರು. ಸಂಚಾರ ವ್ಯವಸ್ಥೆಯು ಅಸ್ತವ್ಯಸ್ತಗೊಂಡಿತು. ವಾರಾಂತ್ಯದಲ್ಲಿ ಖರೀದಿಗೆ ಬಂದಿದ್ದವರು ಮಳೆಯಲ್ಲಿ ಸಿಲುಕಿಕೊಂಡು ಪರದಾಡಿದರು.

ಮೈಸೂರು ರಸ್ತೆಯ ಆಂಜನೇಯ ದೇವಸ್ಥಾನ ಬಳಿ ನೀರು ನಿಂತು ಸಮಸ್ಯೆಯಾಯಿತು.

4ನೇ ಪುಟ ನೋಡಿ

ಸ್ಪರ್ಶ್ ಆಸ್ಪತ್ರೆಯಲ್ಲಿ 'ಭವಿಷ್ಯದ ಆರೋಗ್ಯ ಸೇವೆ'

ಬೆಂಗಳೂರು: ಕೀಲು ಮರುಜೋಡಣೆಗೆ ಮ್ಯಾಕೋ ರೊಬೊಟಿಕ್ ಆರ್ಮ್ ಶಸ್ತ್ರಚಿಕಿತ್ಸೆ ಹಾಗೂ ಡಿಜಿಟಲ್ ಪರಿವರ್ತನಾ ಚಿಕಿತ್ಸೆಗೆ ಸ್ಪರ್ಶ್ ಆಸ್ಪತ್ರೆ 'ಭವಿಷ್ಯದ ಆರೋಗ್ಯ ಸೇವೆ'ಯನ್ನು ಆರಂಭಿಸಿದೆ.

3ಡಿ ಪ್ರಿಂಟಿಂಗ್ ತಂತ್ರಜ್ಞಾನ, ಮೆದುಳಿನ ಶಸ್ತ್ರಚಿಕಿತ್ಸೆ ಬಳಸುವ ಅತ್ಯಧಿಕ ನಿಖರತೆಯ ಓ–ಆರ್ಮ್ ಮತ್ತು ಸ್ಟೆಲ್ತ್ ಸ್ಟೇಷನ್ 8 ವ್ಯವಸ್ಥೆಯನ್ನು ಆರಂಭಿಸಿದೆ. ಜೊತೆಗೆ ಸ್ಪರ್ಶ್ ಪೇಷೆಂಟ್ ಪೋರ್ಟಲ್ ಆ್ಯಪ್ ಅನ್ನೂ ಹೊರತಂದಿದೆ ಎಂದು ಆಸ್ಪತ್ರೆಯ ಮುಖ್ಯಸ್ಥ ಡಾ. ಶರಣ್ ಶಿವರಾಜ್ ಪಾಟೀಲ್ ತಿಳಿಸಿದ್ದಾರೆ. ಉನ್ನತ ಶಿಕ್ಷಣ ಸಚಿವ ಡಾ. ಅಶ್ವತ್ಥ ನಾರಾಯಣ ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸಿದ್ದರು.

ವಿಆರ್‌ಡಿಎಲ್‌ನಲ್ಲಿ ಮಂಕಿಪಾಕ್ಸ್ ಮಾದರಿಗಳ ಪರೀಕ್ಷೆ

ಬೆಂಗಳೂರು: ವಿಕ್ಟೋರಿಯಾ ಆಸ್ಪತ್ರೆಯ ವೈರಾಣು ಸಂಶೋಧನೆ ಮತ್ತು ಡಯಗ್ನಾಸ್ಟಿಕ್ ಪ್ರಯೋಗಾಲಯವನ್ನು (ವಿಆರ್‌ಡಿಎಲ್) ಮಂಕಿಪಾಕ್ಸ್ ಮಾದರಿಗಳ ಪರೀಕ್ಷೆ ನಡೆಸಲು ಆಯ್ಕೆ ಮಾಡಿಕೊಳ್ಳಲಾಗಿದೆ.

ಭಾರತೀಯ ವೈದ್ಯಕೀಯ ಸಂಶೋಧನಾ ಮಂಡಳಿಯು ಈ ಆಯ್ಕೆ ಮಾಡಿದೆ. ಕರ್ನಾಟಕದಲ್ಲಿ ಮಂಕಿಪಾಕ್ಸ್‌ಗೆ ಸಂಬಂಧಿಸಿದ ಮಾದರಿಗಳ ಪರೀಕ್ಷೆಯನ್ನು ಇಲ್ಲಿ ನಡೆಸಲಾಗುತ್ತಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.



'ಬಿಬಿಎಂಪಿ ಚುನಾವಣೆ ಪ್ರಕ್ರಿಯೆ ಆರಂಭಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಏಳು ದಿನಗಳ ಒಳಗಾಗಿ ಬಿಬಿಎಂಪಿ ವಾರ್ಡ್ ಮೀಸಲಾತಿ ಪಟ್ಟಿ ಪ್ರಕಟಿಸಿ ಚುನಾವಣಾ ಪ್ರಕ್ರಿಯೆ ಆರಂಭಿಸುವಂತೆ ಸುಪ್ರೀಂ ಕೋರ್ಟ್ ಸೂಚಿಸಿದರೂ, ರಾಜ್ಯ ಸರ್ಕಾರ ಚುನಾವಣೆ ಮುಂದೂಡಲು ಯತ್ನಿಸುತ್ತಿದೆ' ಎಂದು ಪಾಲಿಕೆಯ ಮಾಜಿ ಸದಸ್ಯರಾದ ಕಾಂಗ್ರೆಸ್ಸಿನ ಅಬ್ದುಲ್ ವಾಜಿದ್ ಮತ್ತು ಎಂ.ಶಿವರಾಜ್ ಆರೋಪಿಸಿದರು.

ಸುದ್ದಿಗೋಷ್ಠಿಯಲ್ಲಿ ಶನಿವಾರ ಮಾತನಾಡಿದ ಅವರು, 'ಬಿಬಿಎಂಪಿಗೆ ಜನಪ್ರತಿನಿಧಿಗಳ ಅಗತ್ಯವಿದೆ. ಅಧಿಕಾರ ವಿಕೇಂದ್ರೀಕರಣ ಆಗಬೇಕೆಂಬ ಕಾಂಗ್ರೆಸ್ಸಿನ ಆಶಯಕ್ಕೆ ಸುಪ್ರೀಂ ಕೋರ್ಟ್ ತೀರ್ಪು ಪೂರಕವಾಗಿದೆ. ಆದರೆ, ಸ್ಥಳೀಯ ಸಂಸ್ಥೆಗಳನ್ನು ಉತ್ತೇಜಿಸಿ ಅವುಗಳನ್ನು ಬಲಪಡಿಸುವ ಯೋಚನೆ ಸರ್ಕಾರಕ್ಕಿಲ್ಲ' ಎಂದು ದೂರಿದರು.

'ಮನಸೋಇಚ್ಛೆ ಬಿಬಿಎಂಪಿ ವಾರ್ಡ್ ಮರುವಿಂಗಡಣೆ ಮಾಡಲಾಗಿದೆ. ಇನ್ನು ಶಾಸಕರು ಹೇಳಿದಂತೆ ಮೀಸಲಾತಿ ಆಗಬಾರದು. ಮಾರ್ಗಸೂಚಿಗೆ ಅನುಗುಣವಾಗಿ ಮೀಸಲಾತಿ ನಿಗದಿ ಆಗಬೇಕು' ಎಂದು ಅಬ್ದುಲ್ ವಾಜಿದ್ ಹೇಳಿದರು.

'ಬಿಬಿಎಂಪಿ ಚುನಾವಣೆಗೆ ಕಾಂಗ್ರೆಸ್ 2020ರಿಂದಲೇ ಸಿದ್ಧವಾಗಿದೆ. ಆದರೆ, ಭ್ರಷ್ಟ ಬಿಜೆಪಿ ಸರ್ಕಾರಕ್ಕೆ ಚುನಾವಣೆ ಬೇಕಿಲ್ಲ. ಅವರ ಅವ್ಯವಹಾರ, ಅಕ್ರಮ ಜನರಿಗೆ ಕಾಣುತ್ತಿದೆ. ಬೆಂಗಳೂರಿನ 130 ಲಕ್ಷ ಜನರಿಗೆ ಈ ಚುನಾವಣೆ ಅಗತ್ಯವಿದ್ದು, ನೋಡಲ್ ಅಧಿಕಾರಿ ಯಾರೂ ಕೈಗೆ ಸಿಗುತ್ತಿಲ್ಲ. ಏಳು ಸಚಿವರು ಇದ್ದರೂ ಜನರಿಗೆ ಅನ್ಯಾಯ ಆಗುತ್ತಿದೆ' ಎಂದರು.

'ಜನಪ್ರತಿನಿಧಿಗಳು ಇಲ್ಲದೇ ಬಿಬಿಎಂಪಿಯಲ್ಲಿ ಅಭಿವೃದ್ಧಿ ಯೋಜನೆಗಳು ಕುಂಠಿತವಾಗಿವೆ. ಒಂಟಿ ಮನೆ ಯೋಜನೆ ಜಾರಿ ಮಾಡಲು ಹಣ ಮೀಸಲಿಟ್ಟಿಲ್ಲ. ನಿರ್ಮಾಣವಾಗಿರುವ ಮನೆಗಳ ಬಿಲ್ ಕೂಡ ಪಾವತಿ ಆಗಿಲ್ಲ' ಎಂದು ಶಿವರಾಜ್ ಹೇಳಿದರು.

'ಸರ್ಕಾರ ಮತ್ತೆ ಚುನಾವಣೆ ಮುಂದೂಡಲು ತೀರ್ಮಾನಿಸಿದರೆ ನ್ಯಾಯಾಲಯ ಛೀಮಾರಿ ಹಾಕಲಿದೆ. ಸರ್ಕಾರ ನ್ಯಾಯಾಲಯದ ಆದೇಶಕ್ಕೆ ತಲೆಬಾಗಿ ಚುನಾವಣೆ ಪ್ರಕ್ರಿಯೆ ಆರಂಭಿಸಬೇಕು' ಎಂದೂ ಅವರು ಒತ್ತಾಯಿಸಿದರು.

MYSORE RACE CLUB LIMITED
P.B.No.11, Race Course Road, Mysore-570 010
Tel:0821-2521675; Email:secretary@mysoreraceclub.com

ANNUAL GENERAL MEETING

Notice is hereby given that the **FIFTY-FOURTH ANNUAL GENERAL MEETING** of the Members of the Mysore Race Club Limited, Mysuru, will be held at the Registered Office of the Club, Mysuru-570 010, on **Monday, 22nd August 2022 at 11.00 a.m.**

By authority of the Committee
Y. B. Ganesh, Chairman
Mysore Race Club Limited

ವಿದ್ಯುತ್ ವ್ಯತ್ಯಯ ಇಂದು

ಬೆಂಗಳೂರು: ನಿರ್ವಹಣೆ ಕಾರ್ಯ ಕೈಗೊಂಡಿರುವುದರಿಂದ ಇದೇ 31ರಂದು ಬೆಳಿಗ್ಗೆ 11ರಿಂದ ಸಂಜೆ 4ರ ವರೆಗೆ ನಗರದ ವಿವಿಧೆಡೆ ವಿದ್ಯುತ್ ವ್ಯತ್ಯಯವಾಗಲಿದೆ.

ಸ್ಥಳಗಳು: ಶಾಸಕರ ಭವನ, ಎಂ.ಎಸ್. ಬಿಲ್ಡಿಂಗ್, ಕೆಪಿಎಸ್‌ಸಿ, ಸಿಒಡಿ, ಮಿಲ್ಲರ್ಸ್ ರಸ್ತೆ, ವಸಂತ ನಗರ, ಚಿಕ್ಕಬಜಾರ್ ರಸ್ತೆ, ಚಾಂದನಿ ಚೌಕ ರಸ್ತೆ, ತಿಮ್ಮಯ್ಯ ರಸ್ತೆ ಸುತ್ತಮುತ್ತಲಿನ ಪ್ರದೇಶಗಳು.

ಪಾಲಿಕೆ ಸಿಬ್ಬಂದಿಯಿಂದ ಕರಾಳ ದಿನಾಚರಣೆ ಆ.16ರಂದು

ಬೆಂಗಳೂರು: ರಾಜ್ಯದ ಮಹಾನಗರ ಪಾಲಿಕೆಗಳ ವೃಂದ ಮತ್ತು ನೇಮಕಾತಿ ನಿಯಮಾವಳಿಗಳನ್ನು ಅಂತಿಮಗೊಳಿಸಲು ಒತ್ತಾಯಿಸಿ ರಾಜ್ಯ ಮಹಾನಗರ ಪಾಲಿಕೆ ನೌಕರರ ಸಂಘದವರು ಆ.16ರಂದು ಕಪ್ಪುಪಟ್ಟಿ ಧರಿಸಿ ಕರಾಳ ದಿನ ಆಚರಿಸಲಿದ್ದಾರೆ.

‘ಆ.15ರೊಳಗೆ ಬೇಡಿಕೆಗಳನ್ನು ಈಡೇರಿಸದಿದ್ದರೆ ದಾವಣಗೆರೆ, ಹುಬ್ಬಳ್ಳಿ- ಧಾರವಾಡ, ಕಲಬುರಗಿ, ಮಂಗಳೂರು, ಬೆಳಗಾವಿ, ಮೈಸೂರು, ಬಳ್ಳಾರಿ, ಶಿವಮೊಗ್ಗ, ತುಮಕೂರು, ವಿಜಯಪುರ ಮಹಾನಗರ ಪಾಲಿಕೆ ಸಿಬ್ಬಂದಿ ಕರಾಳ ದಿನ ಆಚರಿಸಲಿದ್ದಾರೆ. ನಂತರದ ದಿನಗಳಲ್ಲಿ ಮುಷ್ಕರ ನಡೆಸುತ್ತೇವೆ’ ಎಂದು ರಾಜ್ಯ ಮಹಾನಗರ ಪಾಲಿಕೆ ನೌಕರರ ಸಂಘದ ರಾಜ್ಯ ಘಟಕದ ಅಧ್ಯಕ್ಷ ಎ. ಅಮೃತರಾಜ್ ತಿಳಿಸಿದ್ದಾರೆ. ‘ಪಾಲಿಕೆಗಳಲ್ಲಿ ನೌಕರರಿಗೆ ಆರೋಗ್ಯ ಸೌಲಭ್ಯದ ಜ್ಯೋತಿ ಸಂಜೀವಿನಿ, ಕೆ.ಜಿ.ಐ.ಡಿ, ಜಿ.ಪಿ.ಎಫ್ ಸೇರಿದಂತೆ ಹಲವು ಬೇಡಿಕೆಗಳನ್ನು ಈಡೇರಿಸಲು ಮನವಿ ಪತ್ರ ಸಲ್ಲಿಸಲಾಗಿದೆ. ಕ್ರಮ ಕೈಗೊಂಡಿಲ್ಲ. ಹೀಗಾಗಿ ಕರಾಳ ದಿನಾಚರಣೆ, ಮುಷ್ಕರ ನಡೆಸುವ ಬಗ್ಗೆ ಮುಖ್ಯಕಾರ್ಯದರ್ಶಿ, ನಗರಾಭಿವೃದ್ಧಿಸಚಿವರು, ಪೌರಾಡಳಿತ ಇಲಾಖೆ ನಿರ್ದೇಶಕರಿಗೂ ಪತ್ರ ಬರೆದು ತಿಳಿಸಲಾಗಿದೆ’ ಎಂದರು.



• 10 am to 8 pm • Open All Days • Master/Visa Card Accepted

INNERWEAR | LEISUREWEAR | ACTIVEWEAR | KIDSWEAR | SOCKS

Venues in Bangalore

- **Malleswaram:** The Canara Union, No.42, 8th Main, Canara Union Road - 560 003
- **Banashankari:** Sri Panchamukhi Kalyana Mantapa, 30th Main, 5th Cross, Devegowda Petrol Bunk, Opp. KIMs College, 3rd Stage - 560 085
- **Vijay Nagar:** Five O Gallery, No.50, 17th Cross, M.C. Road, Near Vijay Nagar Bus Stop - 560 040
- **Rajajinagar:** Raja Rajeshwari Kalyana Mantapa, 2nd Block, Dr. Rajkumar Road - 560 010
- **Jayanagar:** Premchandra Kalyana Mahal, T.Mariyappa Road, 2nd Block, (Near Ashoka Pillar) - 560 011
- **Rajarajeswari Nagar:** Vasavi Mahal Kalyana Mantapa, No.606, Next To Reliance Digital, Ideal Homes I Phase - 560 098
- **Bannerghatta Road:** Santhome Parish Church Hall, Hulimavu, Near Meenakshi Mall - 560 076
- **Kundalahalli Gate:** S K R Convention Hall, #68, Thubarahalli, Varthur Main Road - 560 066
- **Koramangala:** Apoorva International, #35A, Raheja Arcade, Opp Star Box - 560 095
- **Basavanagudi:** Amolak Apparels, #104, Bull Temple Road, Near Ramakrishna Ashram - 560 019

Org. by: Surya Agency Pvt. Ltd.

ಸುಬ್ಬರಾಯನಪಾಳ್ಯ ಘಟಕದಲ್ಲಿ ರುದ್ರಾಕ್ಷ ಸಂಸ್ಥೆಯಿಂದ ತಂತ್ರಜ್ಞಾನ ಬಳಸಿ ತಯಾರಿಕೆ

ತ್ಯಾಜ್ಯದಿಂದ ವಾಸನೆ, ಕೊಳಕು ರಹಿತ ಗೊಬ್ಬರ

• ಆರ್. ಮಂಜುನಾಥ್

ಪ್ರಜಾವಾಣಿ ವಿಶೇಷ

ಬೆಂಗಳೂರು: ಹೊಸ ತಂತ್ರಜ್ಞಾನದ ಮೊರೆಹೋಗಿರುವ ಬಿಬಿಎಂಪಿಯು ದುರ್ವಾಸನೆ, ಕೊಳಕು ನೀರು, ನೊಣ-ಸೊಳ್ಳೆ ಇವೆಲ್ಲವನ್ನೂ ಇಲ್ಲವಾಗಿಸಿ, ಕಸವನ್ನು ಗೊಬ್ಬರವಾಗಿಸುವ ಕಾರ್ಯಕ್ಕೆ ಕೈಹಾಕಿದೆ.

ನಗರದ ಹೊರವಲಯದ ಸುಬ್ಬರಾಯನಪಾಳ್ಯ ಘನತ್ಯಾಜ್ಯ ಸಂಸ್ಕರಣೆ ಘಟಕದಲ್ಲಿ ಕಸಕ್ಕೆ, ಅದರಿಂದಾಗಿರುವ ಗೊಬ್ಬರಕ್ಕೆ ಬೆಂಕಿ ಬಿದ್ದಿರುವ ಪ್ರಕರಣಗಳು ನಡೆದವು. ಸ್ಥಳೀಯರ ಆಕ್ರೋಶದಿಂದಾಗಿ ಈ ಘಟಕ ಸ್ಥಗಿತಗೊಳಿಸಲಾಗಿತ್ತು. ಹೈಕೋರ್ಟ್ ಎಲ್ಲ ಸಂಸ್ಕರಣ ಘಟಕಗಳನ್ನು ಆರಂಭಿಸಬೇಕು ಎಂದು ಸೂಚಿಸಿದ ಮೇಲೆ, ರುದ್ರಾಕ್ಷ ವೇಸ್ಟ್ ಯುಟಿಲಿಟೀಸ್ ಆರ್ ಆ್ಯಂಡ್ ಡಿ ಸಂಸ್ಥೆಯ ವಿಜ್ಞಾನಿಗಳಿಗೆ, ಅವರ ತಂತ್ರಜ್ಞಾನವನ್ನು ಸಾಬೀತುಪಡಿಸಲು ಬಿಬಿಎಂಪಿ ಅವಕಾಶ ಮಾಡಿಕೊಟ್ಟಿದೆ.

‘15 ದಿನಗಳಿಂದ ಪ್ರತಿ ನಿತ್ಯ 5 ಕಂಪ್ಯಾಕ್ಟರ್‌ಗಳ ಹಸಿ ತ್ಯಾಜ್ಯವನ್ನು ಇಲ್ಲಿ ಹಾಕಲಾಗುತ್ತಿದೆ. ‘ಏರೋಬಿಕ್ ಸ್ಪಾಂಜ್ ಬೆಡ್ ಆರ್ಗ್ಯಾನಿಕ್ ಮೆಥಡ್’ನಲ್ಲಿ ಹಸಿ ಕಸವನ್ನು ಗೊಬ್ಬರ ಮಾಡಲಾಗುತ್ತದೆ. ಕೃಷಿ, ಕೈಗಾರಿಕೆ ತ್ಯಾಜ್ಯದಿಂದ ತಯಾರಿಸಲಾಗಿರುವ ಮಿಶ್ರಣವನ್ನು ಬಳಸುತ್ತಿದ್ದೇವೆ. ಏರೋಬಿಕ್ ಸ್ಪಾಂಜ್ ಬೆಡ್ ಮೇಲೆ ಹಸಿ ಕಸವನ್ನು ಸುಮಾರು 2 ಮೀಟರ್‌ನಷ್ಟು ಸುರಿಯಲಾಗುತ್ತದೆ. ನಂತರ ಮಿಶ್ರಣವನ್ನು ಹಾಕುತ್ತೇವೆ. ಇದರಿಂದ 5 ನಿಮಿಷದಲ್ಲಿ ವಾಸನೆ ಹೋಗುತ್ತದೆ. ನೊಣವೂ ಇರುವುದಿಲ್ಲ. 10 ನಿಮಿಷದ ನಂತರ ಕಸವನ್ನು ಪ್ಲಾಸ್ಟಿಕ್ ಹಾಳೆಯಿಂದ ಮುಚ್ಚಲಾಗುತ್ತದೆ’ ಎಂದು ರುದ್ರಾಕ್ಷ ಸಂಸ್ಥೆಯ ಡಾ. ಸುನೀತಾ ತಿಳಿಸಿದರು.

‘ಹಸಿ ಕಸದಿಂದ ಬರುವ ಕೊಳಕು ನೀರನ್ನು ‘ಸ್ಪಾಂಜ್ ಬೆಡ್’ ಹೊರಗೆ ಹರಿಯದಂತೆ ತಡೆಯುತ್ತದೆ. ಪೇಟೆಂಟ್ ಹೊಂದಿರುವ ನಮ್ಮ ಮಿಶ್ರಣವನ್ನು ಆಗಾಗ ಹಾಕುತ್ತೇವೆ. 45 ದಿನಗಳಿಂದಲೇ ಸತ್ವಯುತ ಗೊಬ್ಬರ ಪಡೆಯಬಹುದು. ಈ ಗೊಬ್ಬರವನ್ನು ಐಸಿಎಆರ್-ಭಾರತೀಯ ತೋಟಗಾರಿಕಾ ಸಂಶೋಧನಾ ಸಂಸ್ಥೆಯು ಪ್ರಮಾಣೀಕರಿಸಿದೆ’ ಎಂದರು. ‘ಈ ಗೊಬ್ಬರದಲ್ಲಿ ಶೇ 30ರಿಂದ 40ರಷ್ಟು ತೇವಾಂಶ ಇರುತ್ತದೆ. ರೈತರು ತಮ್ಮ ಹೊಲಗಳಿಗೆ ವರ್ಷಕ್ಕೆ ಒಂದು ಬಾರಿ ಹಾಕಿದರೆ ಮಣ್ಣಿನ ಫಲವತ್ತತೆ ಹೆಚ್ಚಾಗುತ್ತದೆ. ಸಾವಯವ ಕೃಷಿಗೂ ಇದು ಸಹಕಾರಿ’ ಎಂದರು.

ಸುಬ್ಬರಾಯನಪಾಳ್ಯ ತ್ಯಾಜ್ಯ ಸಂಸ್ಕರಣೆ ಘಟಕದಲ್ಲಿ ಹಸಿ ಕಸ ಸುರಿಯುತ್ತಿರುವಾಗಲೇ ಮಿಶ್ರಣ ಹಾಕುತ್ತಿರುವುದು

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

> ತ್ಯಾಜ್ಯವನ್ನು ಮೂಲ ಸಾಮಗ್ರಿಯನ್ನಾಗಿ ನೋಡಬೇಕು. ವಿಜ್ಞಾನಿಗಳು 20 ವರ್ಷದ ಅಧ್ಯಯನದಿಂದ ತಂತ್ರಜ್ಞಾನ ಕಂಡುಹಿಡಿದು ಪೇಟೆಂಟ್ ಪಡೆದಿದ್ದಾರೆ
>
> **ಪಿ.ಆರ್. ರಮೇಶ್,** ವಿಧಾನಪರಿಷತ್ ಸದಸ್ಯ

‘ಇನ್ನೂ ಪ್ರಾಯೋಗಿಕ ಹಂತದಲ್ಲಿ’

‘ಇದು ಗೊಬ್ಬರ ತಯಾರಿಸುವ ಹೊಸ ತಂತ್ರಜ್ಞಾನ. ವಾಸನೆ, ಕೊಳಕು ನೀರು, ನೊಣ ಬರುವುದಿಲ್ಲ, ಜೊತೆಗೆ ಹಸಿ ಕಸವೆಲ್ಲವೂ ಗೊಬ್ಬರವಾಗುತ್ತದೆ ಎಂದು ರುದ್ರಾಕ್ಷ ಸಂಸ್ಥೆಯವರು ಹೇಳಿದ್ದಾರೆ. ಅದನ್ನು ಮಾಡಿ ತೋರಿಸಲು ಅವಕಾಶ ಮಾಡಿಕೊಡಲಾಗಿದೆ. ಇನ್ನು 15 ದಿನಗಳಾಗಿವೆಯಷ್ಟೆ. 60 ದಿನಗಳ ನಂತರ ಇದರ ವಾಸ್ತವ ಅರಿವಾಗುತ್ತದೆ’ ಎಂದು ಬಿಬಿಎಂಪಿ ಘನತ್ಯಾಜ್ಯ ವಿಭಾಗದ ವಿಶೇಷ ಆಯುಕ್ತ ಡಾ. ಹರೀಶ್‌ಕುಮಾರ್ ತಿಳಿಸಿದರು.

‘ಇಲ್ಲಿ ಸುರಿಯುವುದೇ ಬೇಡ’

‘ಬಿಬಿಎಂಪಿ ಅಧಿಕಾರಿಗಳು ಹಿಂದೆಯೂ ಸಾಕಷ್ಟು ಬಾರಿ ‘ಕಸದಿಂದ ಗೊಬ್ಬರ ಮಾಡುತ್ತೇವೆ, ವಾಸನೆ ಬರೊಲ್ಲ’ ಎಂದು ಹೇಳಿದ್ದರು. ಆನಂತರ ಮನೆಯಲ್ಲಿ ಕುಳಿತುಕೊಳ್ಳಲಾಗದಂತಹ ವಾಸನೆ. ನೊಣ, ಸೊಳ್ಳೆ.. ಆಗ ನಾವು ಈ ಘಟಕವನ್ನು ಬಂದ್ ಮಾಡಿಸಿದ್ದೆವು’ ಎಂದು ಸುಬ್ಬರಾಯನಪಾಳ್ಯದ ನಾಗರಿಕರು ಪ್ರತಿಕ್ರಿಯಿಸಿದರು.

‘ಇದೀಗ ಹೊಸದಾಗಿ ಮಾಡುತ್ತೇವೆ ಎಂದು ಬಂದಿದ್ದಾರೆ. ದಿನಕ್ಕೆ 5 ಲೋಡ್ ಬರುತ್ತಿದೆ, ಕಸ ಎಲ್ಲಿದೆ ಗೊತ್ತಾಗುತ್ತಿಲ್ಲ. ಇದನ್ನು ಅವರು ಹೀಗೆಯೇ ಮುಂದುವರಿಸಿದರೆ ಪರವಾಗಿಲ್ಲ. ಕೆಲವು ತಿಂಗಳ ನಂತರ ಮತ್ತೆ ರಾಶಿ ಹಾಕಿದರೆ ನಾವು ವಾಸಿಸಲು ಸಾಧ್ಯವಾಗುವುದಿಲ್ಲ’ ಎಂದು ಸ್ಥಳೀಯರಾದ ದೇವರಾಜ್ ಹಾಗೂ ಗೋಪಾಲಕೃಷ್ಣ ಹೇಳಿದರು.

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಪರಸ್ಪರ ಅಂತರ ಕಾಯ್ದುಕೊಳ್ಳಿ

ಅರಮನೆ ಮೈದಾನದ ಗಾಯಿತ್ರಿ ವಿಹಾರ ಸಭಾಂಗಣದಲ್ಲಿ ನಡೆಯುತ್ತಿರುವ ಏಷ್ಯಾ ಜ್ಯುವೆಲ್ಸ್ ಶೋ ನಟಿ ಹರ್ಷಿಕಾ ಪೂಣಚ್ಚ ಹಾಗೂ ರೂಪದರ್ಶಿಯರು ಆಭರಣಗಳನ್ನು ಪ್ರದರ್ಶಿಸಿದರು

ಏಷ್ಯಾ ಜ್ಯುವೆಲ್ಸ್ ಷೋಗೆ ನಟಿ ಹರ್ಷಿಕಾ ಪೂಣಚ್ಚ ಚಾಲನೆ

ಬೆಂಗಳೂರು: ಚಿನ್ನದ ಅಭರಣಗಳು ಮಹಿಳೆಯರ ಸೌಂದರ್ಯವನ್ನು ವೃದ್ಧಿಸುತ್ತವೆ ಎಂದು ನಟಿ ಹರ್ಷಿಕಾ ಪೂಣಚ್ಚ ಹೇಳಿದರು.

ವರಮಹಾಲಕ್ಷ್ಮೀ ಹಬ್ಬದ ಪ್ರಯುಕ್ತ ಏಷ್ಯಾ ಜ್ಯುವೆಲ್ಸ್ ವತಿಯಿಂದ ಅರಮನೆ ಮೈದಾನದ ಗಾಯಿತ್ರಿ ವಿಹಾರ ಸಭಾಂಗಣದಲ್ಲಿನಡೆಯುತ್ತಿರುವ‘ಏಷ್ಯಾಜ್ಯುವೆಲ್ಸ್ ಷೋ’ಗೆ ಚಾಲನೆ ನೀಡಿ ಮಾತನಾಡಿದರು. ‘ಗುಜರಾತ್, ರಾಜಸ್ಥಾನ ಮತ್ತು ಪಶ್ಚಿಮ ಬಂಗಾಳ ರಾಜ್ಯಗಳ ಭಾರತೀಯ ಪಾರಂಪರಿಕ ಶೈಲಿಯ ಹಾಗೂ ನವೀನ ವಿನ್ಯಾಸಗಳ ಚಿನ್ನದ ಅಭರಣಗಳು, ವಜ್ರ, ಪ್ಲಾಟಿನಂ ಮತ್ತು ಬೆಳ್ಳಿ ವಸ್ತುಗಳ ಮಾರಾಟ ಮಾಡಲಾಗುತ್ತಿದೆ’ ಎಂದರು.

‘ಭಾರತದ ಪ್ರತಿಷ್ಠಿತ 100ಕ್ಕೂ ಹೆಚ್ಚು ಅಭರಣ ತಯಾರಕರು, ಮಾರಾಟಗಾರರು ಮೇಳದಲ್ಲಿ ಪಾಲ್ಗೊಂಡಿದ್ದಾರೆ’ ಎಂದು ಹೇಳಿದರು.

‘ಜುಲೈ 31ರ ವರೆಗೆ ಈ ಪ್ರದರ್ಶನ ಮತ್ತು ಮಾರಾಟ ಮೇಳ ನಡೆಯಲಿದೆ’ ಎಂದು ತಿಳಿಸಿದರು.

ಧಾರಾಕಾರ ಮಳೆ: ತಗ್ಗು ಪ್ರದೇಶಗಳಿಗೆ ನೀರು

ಒಂದನೇ ಪುಟದಿಂದ

ವಿಠಲ್ ಮಲ್ಯ ಆಸ್ಪತ್ರೆಯ ಎದುರು ಎರಡು ಅಡಿಯಷ್ಟು ನೀರು ಬಂದಿತ್ತು. ಕೆ.ಆರ್.ಮಾರುಕಟ್ಟೆಯ ಬಳಿಕ ಮೇಲ್ಸೇತುವೆಯಲ್ಲಿಯೂ ವಾಹನವೊಂದು ಕೆಟ್ಟು ನಿಂತಿದ್ದು, ವಾಹನ ಸಂಚಾರಕ್ಕೆ ಅಡಚಣೆಯಾಯಿತು.

ಹೊರವಲಯದ ಕನಕಲೇಔಟ್‌ನಲ್ಲಿ ಹಲವು ಮನೆಗಳಿಗೆ ನೀರು ನುಗ್ಗಿದ್ದು, ನಿವಾಸಿಗಳು ಪರದಾಡಿದರು. ಹಲವು ಪ್ರದೇಶಗಳಲ್ಲಿ ರಸ್ತೆಗಳಲ್ಲಿ ನೀರು ನಿಂತು ವಾಹನ ಸಂಚಾರಕ್ಕೆ ಅಡ್ಡಿಯಾಗಿರುವ ವರದಿ ಇದೆ. ಜಂಕ್ಷನ್‌ಗಳು ಹಾಗೂ ಕೂಡುರಸ್ತೆಗಳಲ್ಲಿ ಸಂಚಾರ ದಟ್ಟಣೆ ಉಂಟಾಗಿತ್ತು. ರಾಜಧಾನಿಯಲ್ಲಿ ಇನ್ನೂ ಎರಡು ದಿನ ಕಾಲ ಮಳೆ ಸುರಿಯಲಿದೆ ಎಂದು ಹವಾಮಾನ ಇಲಾಖೆಯು ಮುನ್ಸೂಚನೆ ನೀಡಿದೆ.

ಬೆಂಗಳೂರು ನಗರದ ಎಂ.ಜಿ. ರಸ್ತೆಯಲ್ಲಿ ಶನಿವಾರ ರಾತ್ರಿ ಸುರಿದ ಮಳೆಯಲ್ಲೇ ವಾಹನಗಳು ಸಾಗಿದ್ದು ಕಂಡುಬಂತು. ಪ್ರಜಾವಾಣಿ ಚಿತ್ರ/ ಪ್ರಶಾಂತ್ ಎಚ್‌.ಜಿ.

ದಿ ಜನತಾ ಕೋ-ಆಪರೇಟಿವ್ ಬ್ಯಾಂಕ್ ಲಿ.,

ನಂ. 156, 8ನೇ ಮುಖ್ಯರಸ್ತೆ, 17ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560055.
ಫೋ: 080- 23341972/ 2344 2648 E mail: gm@jcbank.in / recovery@jcbank.in

ಸ್ಥಿರಾಸ್ತಿ ಬಹಿರಂಗ-ಹರಾಜು ಮಾರಾಟ ಪ್ರಕಟಣೆ

ಬ್ಯಾಂಕಿನ ಅಧಿಕೃತ ಅಧಿಕಾರಿಯು **ಸೆಕ್ಯೂರಿಟೈಜೇಶನ್ ಅಂಡ್ ರಿಕನ್ಸ್ಟ್ರಕ್ಷನ್ ಆಫ್ ಫೈನಾನ್ಸಿಯಲ್ ಅಸೆಟ್ಸ್ ಮತ್ತು ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟರೆಸ್ಟ್ ಆಕ್ಟ್ 2002 ಅಧಿಕಾರದನ್ವಯ ಅಧಿನಿಯಮದ ಪ್ರಕರಣ 13(2)** ರನ್ವಯ ಕೆಳಗಿನ ಸಾಲಗಾರರಿಗೆ ಡಿಮ್ಯಾಂಡ್ ನೋಟಿಸ್ ನೀಡಿದ್ದು, ಸಾಲಗಾರರು ಸಾಲದ ಹಣ ಮತ್ತು ಬಡ್ಡಿಯನ್ನು ಮರುಪಾವತಿ ಮಾಡಲು ವಿಫಲರಾದುದ್ದರಿಂದ ಬ್ಯಾಂಕಿಗೆ ಅಡಮಾನ ಮಾಡಿದ್ದ ಸ್ವತ್ತನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ ಮತ್ತು ಕೆಳ ಸಹಿದಾರರು ಅಧಿಕೃತ ಅಧಿಕಾರಿಯು ನಿಯಮ 13 (4) ಹಾಗೂ ರೂಲ್ 8(6) ರ ಅನ್ವಯ ಸಾಮರ್ಥ್ಯ ಹೊಂದಿರುವುದರಿಂದ ಸಾಲಕ್ಕೆ ಆಧಾರ ಮಾಡಿರುವ ಕೆಳಕಂಡ ಸ್ವತ್ತನ್ನು ರೂಲ್ 8(5)ರಲ್ಲಿರುವ ಯಾವುದಾದರೂ ಒಂದು ರೀತಿಯಲ್ಲಿ ’ಎಲ್ಲಿದೆಯೋ ಹೇಗಿದೆಯೋ ಮತ್ತು ಏನಿದೆಯೊ ಹಾಗೆಯೇ ಅದನ್ನು ಬಹಿರಂಗ– ಹರಾಜು ನಡೆಸಲಾಗುವುದು ಆಸಕ್ತಿ ಹೊಂದಿರುವ ಖರೀದಿದಾರರು ಈ ಕೆಳಕಂಡ ಸ್ವತ್ತಿನ ಖರೀದಿಗಾಗಿ ಹರಾಜಿನಲ್ಲಿ ಭಾಗವಹಿಸಲು ಆಹ್ವಾನಿಸಲಾಗಿದೆ.

ಸಾಲಗಾರರು ಮತ್ತು ಜಾಮೀನುದಾರರ ಹೆಸರು ಮತ್ತು ವಿಳಾಸ	ಶ್ರೀಮತಿ ರಾಜರಾಜೇಶ್ವರಿ.ಎಮ್.ಎಸ್ ಶ್ರೀ ಶಾಂತರಾಜು ಇವರ ಧರ್ಮಪತ್ನಿ #384, 8ನೇ ಮೈನ್ ರಸ್ತೆ, 2ನೇ ಹಂತ 'ಎ' ಬ್ಲಾಕ್, ಮಲ್ಲೇಶ್ವರಂ ಪಶ್ಚಿಮ, ಬೆಂಗಳೂರು–5560055.
ಮಾರಾಟದ ದಿನಾಂಕ, ಸಮಯ ಮತ್ತು ಸ್ಥಳ	ದಿನಾಂಕ: 02.09.2022 ಮಧ್ಯಾಹ್ನ 12.00 ಘಂಟೆಗೆ ದಿ ಜನತಾ ಕೋ–ಆಪರೇಟಿವ್ ಬ್ಯಾಂಕ್ ಲಿ., # 156, 8ನೇ ಮುಖ್ಯರಸ್ತೆ, 17ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560055.
ಮುಂಗಡ ಠೇವಣಿ	ರೂ.43,00,000/– (ನಲವತ್ತು ಮೂರು ಲಕ್ಷ ರೂಪಾಯಿಗಳು ಮಾತ್ರ)
ಮೀಸಲು ಬೆಲೆ	ರೂ.4,30,00,000/– ((ನಾಲ್ಕು ಕೋಟಿ ಮೂವತ್ತು ಲಕ್ಷ ರೂಪಾಯಿಗಳು ಮಾತ್ರ)
ಬಿಡ್‌ನ ಏರಿಕೆ ಗುಣಕ	ರೂ.1,00,000/– (ಒಂದು ಲಕ್ಷ ರೂಪಾಯಿಗಳು ಮಾತ್ರ)
ಬಾಕಿ ಬರಬೇಕಾದ ಮೊತ್ತ ದಿ:05.06.2022ರ ವರೆಗಿನ ಬಡ್ಡಿ ಸೇರಿ) ದಿ:06–06–2022 ರಿಂದ ಮುಂದುವರೆದ ಬಡ್ಡಿ ಹಾಗೂ ಇತರೆ ಖರ್ಚು ಅನ್ವಯಿಸುತ್ತದೆ.	ರೂ.4,15,67,274/– (ನಾಲ್ಕು ಕೋಟಿ ಹದಿನೈದು ಲಕ್ಷ ಅರವತ್ತೇಳು ಸಾವಿರದ ಇನ್ನೂರ ಎಪ್ಪತ್ತನಾಲ್ಕು ರೂಪಾಯಿಗಳು ಮಾತ್ರ)
ಮಾರಾಟಕ್ಕಿಟ್ಟ ಸ್ವತ್ತಿನ ಪರಿವೀಕ್ಷಣೆಯ ದಿನಾಂಕ & ಸಮಯ	ದಿ:01.09.2022 ರ ವರೆಗೆ ಎಲ್ಲಾ ವ್ಯವಹಾರದ ದಿನಗಳಲ್ಲಿ ಬೆಳಿಗ್ಗೆ 10.00 ರಿಂದ ಸಂಜೆ 6.00 ಘಂಟೆಯವರೆಗೆ

ಮಾರಾಟಕ್ಕಿಟ್ಟ ಸ್ಥಿರಾಸ್ತಿಯ ವಿವರ:

'ಬಿ' ಷೆಡ್ಯೂಲ್

ಬಿ.ಬಿ.ಎಮ್.ಪಿ ವಾರ್ಡ್ ನಂ.129, (ಮಲ್ಲತಹಳ್ಳಿ, ಜ್ಞಾನಭಾರತಿ) (ಹೊಸ ಪಿಐಡಿ ನಂ.129–W0005–23, ಮಲ್ಲತಹಳ್ಳಿ ವಿಲೇಜ್, ಯಶವಂತಪುರ ಹೋಬಳಿ, ಬೆಂಗಳೂರು ಉತ್ತರ ತಾಲ್ಲೂಕು, ನಿವೇಶನ ಕನ್ವರ್ಟೆಡ್ ಸರ್ವೆ ನಂ. 59/5 ಸೈಟ್‌ನಲ್ಲಿರುವ ನಂ. 146, ರಾಜರಾಜೇಶ್ವರಿ ಸಿಟಿ ಮುನಿಸಿಪಲ್ ಖಾತಾ ನಂ.579, ಹೊಸ ಮುನಿಸಿಪಲ್ ಖಾತಾ ನಂ.583/579/146/58/1/3/5 ಪೂರ್ವದಿಂದ ಪಶ್ಚಿಮಕ್ಕೆ: 59 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ– 40 ಅಡಿ ಮತ್ತು ಚೆಕ್ಕುಬಂದಿ: ಪೂರ್ವಕ್ಕೆ: ಸೈಟ್ ನಂ.120 ಪಶ್ಚಿಮಕ್ಕೆ: ರಸ್ತೆ,, ಉತ್ತರಕ್ಕೆ: ಸೈಟ್ ನಂ.145, ದಕ್ಷಿಣಕ್ಕೆ: ಸೈಟ್ ನಂ.147

'ಬಿ1' ಷೆಡ್ಯೂಲ್

ಕನ್ವರ್ಟೆಡ್ ಸರ್ವೆ ನಂ. 59/5 ರಲ್ಲಿ ಬಿ.ಬಿ.ಎಮ್.ಪಿ ವಾರ್ಡ್ ನಂ.129 (ಮಲ್ಲತಹಳ್ಳಿ, ಜ್ಞಾನಭಾರತಿ) ಹೊಸ ಪಿ.ಐ.ಡಿ. ನಂ.129–W1183–2)ನಲ್ಲಿರುವ ಸ್ಪೆಷಲ್ ಡೆಪ್ಯೂಟಿ ಕಮಿಷನರ್, ಬೆಂಗಳೂರು ಜಿಲ್ಲೆ ಇವರಿಂದ ದಿನಾಂಕ 05–02–2003ರಂದು ಕೊಡಲ್ಪಟ್ಟ ಕನ್ವರ್ಷನ್ ಆರ್ಡರ್ ಓ.ಎಮ್ ನಂ.ಬಿ.ಡಿಸ್.ಎ.ಎಲ್‌ಎನ್.ಎಸ್.ಆರ್(ಎನ್) 62/02–03 ಪ್ರಕಾರ ಸೈಟ್ ನಂ.121, ರಾಜರಾಜೇಶ್ವರಿ ಸಿಟಿ ಮುನಿಸಿಪಲ್ ಖಾತಾ ನಂ.570/566/121/56/4/59/3/5 ನಲ್ಲಿರುವ ಸೈಟ್ ಪೂರ್ವದಿಂದ ಪಶ್ಚಿಮಕ್ಕೆ 59 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ 40ಅಡಿ ಮತ್ತು ಚೆಕ್ಕುಬಂದಿ: ಪೂರ್ವಕ್ಕೆ: ರಸ್ತೆ ಪಶ್ಚಿಮಕ್ಕೆ: ಸೈಟ್ ನಂ.145 ಉತ್ತರಕ್ಕೆ: ಸೈಟ್ ನಂ.122. ದಕ್ಷಿಣಕ್ಕೆ: ಸೈಟ್ ನಂ.120

ಸಾಲಗಾರರು ಮತ್ತು ಜಾಮೀನುದಾರರ ಹೆಸರು ಮತ್ತು ವಿಳಾಸ	 ಶ್ರೀ ಶಾಂತರಾಜು ಶ್ರೀ ಅಂಕೇಗೌಡ ರವರ ಪುತ್ರ #384, 8ನೇ ಮೈನ್ ರಸ್ತೆ, 2ನೇ ಹಂತ 'ಎ' ಬ್ಲಾಕ್, ಮಲ್ಲೇಶ್ವರಂ ಪಶ್ಚಿಮ, ಬೆಂಗಳೂರು–5560055.
ಮಾರಾಟದ ದಿನಾಂಕ, ಸಮಯ ಮತ್ತು ಸ್ಥಳ	ದಿನಾಂಕ:02.09.2022 ಮಧ್ಯಾಹ್ನ 12.00 ಘಂಟೆಗೆ ದಿ ಜನತಾ ಕೋ–ಆಪರೇಟಿವ್ ಬ್ಯಾಂಕ್ ಲಿ., # 156, 8ನೇ ಮುಖ್ಯರಸ್ತೆ, 17ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560055.
ಮುಂಗಡ ಠೇವಣಿ	ರೂ.30,00,000/– (ಮೂವತ್ತು ಲಕ್ಷ ರೂಪಾಯಿಗಳು ಮಾತ್ರ)
ಮೀಸಲು ಬೆಲೆ	ರೂ.3,00,00,000/– (ಮೂರು ಕೋಟಿ ರೂಪಾಯಿಗಳು ಮಾತ್ರ)
ಬಿಡ್‌ನ ಏರಿಕೆ ಗುಣಕ	ರೂ.1,00,000/– (ಒಂದು ಲಕ್ಷ ರೂಪಾಯಿಗಳು ಮಾತ್ರ)
ಬಾಕಿ ಬರಬೇಕಾದ ಮೊತ್ತ ದಿ:05.06.2022ರ ವರೆಗಿನ ಬಡ್ಡಿ ಸೇರಿ) ದಿ:06–06–2022 ರಿಂದ ಮುಂದುವರೆದ ಬಡ್ಡಿ ಹಾಗೂ ಇತರೆ ಖರ್ಚು ಅನ್ವಯಿಸುತ್ತದೆ.	ರೂ.2,87,86,135/– (ಎರಡು ಕೋಟಿ ಎಂಬತ್ತೇಳು ಲಕ್ಷ ಎಂಬತ್ತಾರು ಸಾವಿರದ ಒಂದುನೂರ ಮೂವತ್ತೈದು ರೂಪಾಯಿಗಳು ಮಾತ್ರ)
ಮಾರಾಟಕ್ಕಿಟ್ಟ ಸ್ವತ್ತಿನ ಪರಿವೀಕ್ಷಣೆಯ ದಿನಾಂಕ & ಸಮಯ	ದಿ:01.09.2022ರ ವರೆಗೆ ಎಲ್ಲಾ ವ್ಯವಹಾರದ ದಿನಗಳಲ್ಲಿ ಬೆಳಿಗ್ಗೆ 10.00 ರಿಂದ ಸಂಜೆ 6.00 ಘಂಟೆಯವರೆಗೆ

ಮಾರಾಟಕ್ಕಿಟ್ಟ ಸ್ಥಿರಾಸ್ತಿಯ ವಿವರ:

ಷೆಡ್ಯೂಲ್

ಮಲ್ಲತಹಳ್ಳಿ ವಿಲೇಜ್‌ನ ಕನ್ವರ್ಟೆಡ್ ಸರ್ವೆ ನಂ. 59/5, ಮಲ್ಲತಹಳ್ಳಿ ವಿಲೇಜ್, ಯಶವಂತಪುರ ಹೋಬಳಿ, ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರು ಬಿಬಿಎಂಪಿ ವಾರ್ಡ್ 129 (ಮಲ್ಲತಹಳ್ಳಿ, ಜ್ಞಾನಭಾರತಿ) ಇದರಲ್ಲಿನ ನಂ.145, ರಾಜರಾಜೇಶ್ವರಿ ಸಿಟಿ ಮುನಿಸಿಪಲ್ ಹಳೆಯ ಖಾತಾ ನಂ.585, ಹೊಸ ಮುನಿಸಿಪಲ್ ಖಾತಾ ನಂ.583/579/145/146/58/1/3/5 (ಹೊಸ ಪಿ.ಐ.ಡಿ. ನಂ.129–W0005–23) ಪೂರ್ವದಿಂದ ಪಶ್ಚಿಮಕ್ಕೆ–59 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ–40 ಅಡಿ ಚೆಕ್ಕುಬಂದಿ: ಪೂರ್ವಕ್ಕೆ: ಸೈಟ್ ನಂ.121, ಪಶ್ಚಿಮಕ್ಕೆ: ರಸ್ತೆ, ಉತ್ತರಕ್ಕೆ: ಸೈಟ್ ನಂ.144, ದಕ್ಷಿಣಕ್ಕೆ: ಸೈಟ್ ನಂ.146.

ಇತರೆ ನಿಯಮ ಮತ್ತು ನಿಬಂಧನೆಗಳು

1. ಆಸಕ ಬಿಡ್ಡುದಾರರು ಮೀಸಲು ಬೆಲೆಯ ಶೇ10% ರಷ್ಟು ಇಎಂಡಿ ಗಳನ್ನು ದಿ ಜನತಾ ಕೋ–ಆಪರೇಟಿವ್ ಬ್ಯಾಂಕ್ ಲಿ., ಹೆಸರಿಗೆ ಡಿಡಿ/ನಗದು ಅಥವಾ ಅಕೌಂಟ್ ನಂ. 20012004, ದಿ ಜನತಾ ಕೋ–ಆಪರೇಟಿವ್ ಬ್ಯಾಂಕ್ ಲಿ., ಮಲ್ಲೇಶ್ವರಂ, ಬೆಂಗಳೂರು–560055 ಇವರ ಐ.ಎಫ್.ಎಸ್.ಸಿ ಕೋಡ್ HDFCOCJCBKL ಆನ್‌ಲೈನ್ (ಆರ್.ಟಿ.ಜಿ.ಎಸ್/ ಎನ್.ಇ.ಎಫ್.ಟಿ ವರ್ಗಾವಣೆ) ಅಥವಾ ನಗದು ಮೂಲಕ ಅವರ ಖಾತೆಗೆ ದಿನಾಂಕ: 02–09–2022 ಬೆಳಿಗ್ಗೆ 11.00 ಘಂಟೆಯೊಳಗೆ ಜಮೆಯಾಗುವಂತೆ ಪಾವತಿ ಮಾಡಬೇಕು. ಆಸಕ ಬಿಡ್ಡುದಾರರು ಅವರ ಗುರುತಿನ ಪುರಾವೆ ಮತ್ತು ಪ್ಯಾನ್‌ಕಾರ್ಡ್‌ನ್ನು ಅಧಿಕೃತ ಅಧಿಕಾರಿ **ದಿ ಜನತಾ ಕೋ–ಆಪರೇಟಿವ್ ಬ್ಯಾಂಕ್ ಲಿ.**, ಮಲ್ಲೇಶ್ವರಂ, ಬೆಂಗಳೂರು–560055 ಇವರಿಗೆ ತಲುಪಿಸಬೇಕು. ಇಎಂಡಿಗೆ ಯಾವುದೇ ಬಡ್ಡಿ ಅನ್ವಯಿಸುವುದಿಲ್ಲ
2. ಸ್ಥಿರಾಸ್ತಿಯನ್ನು ಮೀಸಲು ಬೆಲೆಗಿಂತ ಕಡಿಮೆ ಬೆಲೆಗೆ ಮಾರಾಟ ಮಾಡಲಾಗುವುದಿಲ್ಲ.
3. ಯಶಸ್ವಿಯಾದ ಬಿಡ್ಡುದಾರರು/ಆತನ/ಆಕೆಯ ಪರವಾಗಿ ಬಿಡ್ಡು ತೀರ್ಮಾನವಾದ ಕೂಡಲೇ ಮಾರಾಟ ಬೆಲೆಯ 25 % ಮೊತ್ತವನ್ನು (ಈಗಾಗಲೇ ಪಾವತಿ ಮಾಡಿರುವ ಇಎಂಡಿ ಸೇರಿದಂತೆ) ಪಾವತಿ ಮಾಡಬೇಕು ಬಾಕಿ 75 % ಹಣವನ್ನು ಮಾರಾಟ ದೃಢೀಕರಣವಾದ ದಿನಾಂಕದಿಂದ 15 ದಿನಗಳ ಒಳಗೆ **ದಿ ಜನತಾ ಕೋ–ಆಪರೇಟಿವ್** ಬ್ಯಾಂಕ್ ಲಿ., ಮಲ್ಲೇಶ್ವರಂ, ಬೆಂಗಳೂರು–560055. ಇವರ ಹೆಸರಿಗೆ ಪಡೆದ ಡಿಡಿ ಅಥವಾ **ಅಕೌಂಟ್ ನಂ.20012004 ದಿ ಜನತಾ ಕೋ–ಆಪರೇಟಿವ್ ಬ್ಯಾಂಕ್ ಲಿ., ಮಲ್ಲೇಶ್ವರಂ, ಬೆಂಗಳೂರು–560055. ಐಎಫ್‌ಎಸ್‌ಸಿ ಕೋಡ್ HDFCOCJCBKL ಆನ್‌ಲೈನ್ (ಆರ್.ಟಿ.ಜಿ.ಎಸ್/ಎನ್.ಇ.ಎಫ್.ಟಿ/ ವರ್ಗಾವಣೆ)** ಮೂಲಕ ಜಮೆಯಾಗುವಂತೆ ಪಾವತಿ ಮಾಡಬೇಕು.
4. ಯಶಸ್ವಿಯಾದ ಬಿಡ್ಡುದಾರರು ಮೇಲೆ ತಿಳಿಸಿರುವಂತೆ ಮಾರಾಟ ಬೆಲೆ ಪಾವತಿಸಲು ವಿಫಲವಾದರೆ ಅವರು ಪಾವತಿ ಮಾಡಿರುವ ಮುಂಗಡ ಹಣ ಮುಟ್ಟುಗೋಲು ಹಾಕಿಕೊಳ್ಳಲಾಗುವುದು,
5. ಮಾರಾಟಕ್ಕಿಟ್ಟಿರುವ ಸ್ಥಿರಾಸ್ತಿಯನ್ನು ಎಲ್ಲಿದೆಯೋ ಹೇಗಿದೆಯೋ ಹಾಗೆಯೇ ಮತ್ತು ಎಲ್ಲಿ ಏನಿದೆಯೋ ಹಾಗೆಯೇ ಆಧಾರದ ಮೇಲೆ ಮಾರಾಟ ಮಾಡಲಾಗುವುದು ಆಸ್ತಿಯ ಒಡೆತನ, ಶಾಸನಬದ್ಧ ಮಾನ್ಯತೆಗಳು, ಋಣಭಾರ, ಕ್ಲೈಮ್/ಹಕ್ಕು/ಬಾಕಿ ಇತ್ಯಾದಿಗಳ ಕುರಿತು ಬಿಡ್ಡು ಸಲ್ಲಿಸುವ ಮೊದಲೇ ಬಿಡ್ಡುದಾರರೇ ವಿಚಾರಣೆ ಮಾಡತಕ್ಕದ್ದು, ನಂತರದ ಯಾವುದೇ ತಕರಾರುಗಳಿಗೆ ಬ್ಯಾಂಕು ಜವಾಬ್ದಾರರಾಗುವುದಿಲ್ಲ ಸ್ವತ್ತಿಗೆ ಸಂಬಂಧಪಟ್ಟಂತೆ ಹಾಲಿಯಿರುವ ಮತ್ತು ಮುಂದೆ ಉಂಟಾಗುವುದು ಸೇರಿದಂತೆ ಸರ್ಕಾರಕ್ಕೆ / ಯಾವುದೇ ಪ್ರಾಧಿಕಾರಕ್ಕೆ ಇತ್ಯಾದಿಯವರಿಗೆ ಪಾವತಿಸಬೇಕಾದ ಮುದ್ರಾಂಕ ಶುಲ್ಕ, ಮಾರಾಟ ಸರ್ಟಿಫಿಕೇಟ್ ನೋಂದಣಿ ಶುಲ್ಕ ಎಲ್ಲಾ ತೆರಿಗೆಗಳು/ದರಗಳು, ಶಾಸನಬದ್ಧ ಬಾಕಿಗಳನ್ನು ಇತ್ಯಾದಿ, ಎಲ್ಲಾ ಇತರ ಖರ್ಚುಗಳನ್ನು ಖರೀದಿದಾರರೇ ಪಾವತಿಸಬೇಕು.
6. ಹರಾಜಿನಲ್ಲಿ ಭಾಗವಹಿಸಲು ಬಿಡ್ಡುದಾರುಗಳಿಗೆ ಮಾತ್ರ ಅವಕಾಶ ಬಿಡ್ಡುದಾರರ ಪರವಾಗಿ ಜಿಪಿಎ ಹೊಂದಿರುವವರು/ಏಜಂಟರುಗಳು/ಬೇರೆ ಯಾರಿಗೂ ಅವಕಾಶ ಇರುವುದಿಲ್ಲ.
7. ದಿನಾಂಕಕ್ಕೆ ಮೊದಲು ಮೇಲ್ಕಂಡ ಸಾಲವನ್ನು ಚುಕ್ತಾ ಮಾಡದಿದ್ದಲ್ಲಿ ಮೇಲೆ ತಿಳಿಸಿದ ದಿನಾಂಕದಂದು ನಡೆಯಲಿರುವ ಬಹಿರಂಗ ಹರಾಜಿನ ಬಗ್ಗೆ ಸಾಲಗಾರರಿಗೆ ಇದು ಸೂಚನಾ ಪತ್ರ ಕೂಡ ಆಗಿರುತ್ತದೆ.
8. ಮುಂಚಿತವಾಗಿ ತಿಳಿಸದೆ ಮತ್ತು ಯಾವುದೇ ಕಾರಣ ನೀಡದೇ, ಯಾವುದೇ ಬಿಡ್ಡನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಅಥವಾ ಮಾರಾಟ ಮುಂದೂಡುವ/ ರದ್ದು ಪಡಿಸುವ ಹಕ್ಕನ್ನು ಅಧಿಕೃತ ಅಧಿಕಾರಿಯವರು ಹೊಂದಿರುತಾರೆ.
9. ಅಧಿಕೃತ ಅಧಿಕಾರಿಯವರಿಗೆ ತಿಳಿದಿರುವಂತೆ ಅಡಮಾನ ಮಾಡಿರುವ ಸ್ವತ್ತಿನ ಬಗ್ಗೆ ಮಾಹಿತಿ ಇರುತ್ತದೆ ಹಾಗೂ ಏನಾದರೂ ತಪ್ಪು ಮಾಹಿತಿ ಇದ್ದಲ್ಲಿ ಇದಕ್ಕೆ ಅಧಿಕೃತ ಅಧಿಕಾರಿಯವರು ಜವಾಬ್ದಾರರಲ್ಲ.

Note: The intending bidders may contact Smt.Vinoda Shivaramaiah, Chief Executive Officer, The Janatha Co-operative Bank Ltd., Malleswaram, Bangalore-560055. Mobile No.9900856389 or Sri.Dharanendrakumar. B Recovery Officer, Mobile No.9844048485 for ascertaining the details of property and Contact Phone No.080-23449450, 23469560, 23442648 for inspection of Property.

ದಿನಾಂಕ:29.07.2022
ಸ್ಥಳ: ಬೆಂಗಳೂರು

ದಿ ಜನತಾ ಕೋ–ಆಪರೇಟಿವ್ ಬ್ಯಾಂಕ್ ಲಿ.,
ಸಹಿ/–ಅಧಿಕೃತ ಅಧಿಕಾರಿಗಳು

ನಗರದಲ್ಲಿ ಇಂದು

ಮನೆ-ಮನಗಳಲ್ಲಿ ಶಿವಪೂಜೆ ಶಿವಾನುಭ ಹಾಗೂ ಸಿದ್ಧಾಂತ ಶಿಖಾಮಣಿ-ವಚನ ಪ್ರವಚನ ಕಾರ್ಯಕ್ರಮ: ಬೆಳಿಗ್ಗೆ: ಕವಿತಾ ಸಾಲಿಮಠ, ಜಗದೀಶ ಸಾಲಿಮಠ, ನಂ.303, ಮನರಿ ರಾಯಲ್ ಅಪಾರ್ಟ್‌ಮೆಂಟ್, ಎನ್‌ಜಿಇಎಫ್ ಲೇಔಟ್, ಮಲ್ಲತ್ತಹಳ್ಳಿ. ಸಂಜೆ: ಲತಾ ಮತ್ತು ಹರಿಪ್ರಸಾದ, ನಂ.137-138, 2ನೇ ಮುಖ್ಯರಸ್ತೆ, ಮೀನಾಕ್ಷಿ ಲೇಔಟ್, ಬನ್ನೇರುಘಟ್ಟ,

42ನೇ ಸಂಘ ದಿನಾಚರಣೆ: ಅತಿಥಿಗಳು: ತೇಜಸ್ವಿ ಸೂರ್ಯ, ಉದಯ್.ಬಿ. ಗುರುಡಾಚಾರ್, ರವಿ ಸುಬ್ರಹ್ಮಣ್ಯ, ಅಶೋಕ್ ಹಾರನಹಳ್ಳಿ, ಅಧ್ಯಕ್ಷತೆ: ಎಚ್. ಬಿ. ಚಂದ್ರಶೇಖರಯ್ಯ, ಆಯೋಜನೆ: ಹೊಯ್ಸಳ ಕರ್ನಾಟಕ ಸಂಘ, ಸ್ಥಳ: ಹೊಯ್ಸಳ ಟ್ರಸ್ಟ್ ಸಭಾಂಗಣ, ಬನಶಂಕರಿ, ಬೆಳಿಗ್ಗೆ 9.30

ಶತಾವಧಾನಿ ಆರ್. ಗಣೇಶ ಅವರ ‘ಮಣ್ಣಿನ ಕನಸು’ ಕಾದಂಬರಿ ವಿಚಾರಗೋಷ್ಠಿ: ಅಧ್ಯಕ್ಷತೆ: ಎಸ್. ಎಲ್.ಭೈರಪ್ಪ, ಎಸ್. ಆರ್.ರಾಮಸ್ವಾಮಿ, ಆಯೋಜನೆ: ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆ, ಸಾಹಿತ್ಯ ಪ್ರಕಾಶನ ಹುಬ್ಬಳ್ಳಿ, ಸ್ಥಳ: ಡಿವಿಜಿ ಸಭಾಂಗಣ, ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆ, ಬಸವನಗುಡಿ, ಬೆಳಿಗ್ಗೆ 10.30

ಭೈರಪ್ಪ

ಶೋಭಾ ರಾವ್ ಅವರ ‘ಹನಿ ಕಡಿಯದ ಮಳೆ’, ಸಾಯಿಗಣೇಶ. ಎನ್.ಪಿ. ಅವರ ‘ಸಾರಮತಿ’ ಮತ್ತು ಚೈತನ್ಯ ಮಜಲುಕೋಡಿ ಅವರ ‘ಕನ್ನಡ ಕಾದಂಬರಿಗಳಲ್ಲಿ ಸಂಗೀತ ಒಂದು ಅವಲೋಕನ’ ಪುಸ್ತಕ ಬಿಡುಗಡೆ ಸಮಾರಂಭ: ಅತಿಥಿಗಳು: ಎಸ್.ಎನ್. ಸೇತೂರಾಂ, ಶ್ರೀಕಾಂತಂ ನಾಗೇಂದ್ರಶಾಸ್ತ್ರಿ, ಎಸ್. ಸೂರ್ಯಪ್ರಕಾಶ ಪಂಡಿತ್, ಆಯೋಜನೆ: ಶ್ರಾವಣ ಪ್ರಕಾಶನ, ಸ್ಥಳ: ವಾಡಿಯಾ ಸಭಾಂಗಣ, ಬಸವನಗುಡಿ, ಬೆಳಿಗ್ಗೆ 10

ಮಮತಾ ಸಾಗರ ಅವರ 'ಅವತರಣಿಕೆ' ಪುಸ್ತಕ ಬಿಡುಗಡೆ: ಅತಿಥಿಗಳು: ಪಿಜಿಆರ್ ಸಿಂಧ್ಯಾ, ಅಶೋಕ್, ದೊಡ್ಡಣ್ಣ, ರಘುಚರಣ್, ಉಪಸ್ಥಿತಿ: ಮಮತಾ ಸಾಗರ, ಬಿ.ಎಸ್. ವಿದ್ಯಾರಣ್ಯ, ಆಯೋಜನೆ: ಚಾರುಮತಿ ಪ್ರಕಾಶನ, ಸ್ಥಳ: ಸಿ.ಅಶ್ವತ್ಥ ಕಲಾಭವನ, ನರಸಿಂಹರಾಜ ಕಾಲೊನಿ, ಬೆಳಿಗ್ಗೆ 10.30

ದೇವಿಪ್ರಸಾದ್ ಚಟ್ಟೋಪಾಧ್ಯಾಯ ಸ್ಮಾರಕ ಉಪನ್ಯಾಸ: ಭಾಷಣಕಾರರು: ವೆಂಕಟೇಶ್.ಬಿ. ಆತ್ರೇಯ, ಪ್ರಸ್ತಾವನೆ: ಜಿ.ರಾಮಕೃಷ್ಣ, ಅಧ್ಯಕ್ಷತೆ: ಕೆ.ಎಸ್. ಪಾರ್ಥಸಾರಥಿ, ಆಯೋಜನೆ: ಮಾ-ಲೆ ಪ್ರಕಾಶನ, ಸ್ಥಳ: ಬಿಎಂಶ್ರೀ ಪ್ರತಿಷ್ಠಾನ, ಎನ್.ಆರ್. ಕಾಲೊನಿ, ಬೆಳಿಗ್ಗೆ 10.45

ಹೆಮ್ಮಂಡಹಳ್ಳಿ ಜಿ.ಮುನಿಸ್ವಾಮಿ ಅವರ ಕವನ ಸಂಕಲನ ‘ಸಗಣಿ ಗಂಜಲದ ಪರಿಮಳ’ ಬಿಡುಗಡೆ: ಉದ್ಘಾಟನೆ: ಶರತ್ ಬಚ್ಚೇಗೌಡ, ಕೃತಿ ಬಿಡುಗಡೆ: ಎಲ್.ಎನ್. ಮುಕುಂದ್‌ರಾಜ್, ಎಚ್. ದುಂಡಿರಾಜ್, ಅಧ್ಯಕ್ಷತೆ: ಎಚ್.ದುಂಡಪ್ಪ, ಆಯೋಜನೆ: ತೊಳಸಿ ಪ್ರಕಾಶನ, ಸ್ಥಳ: ನಯನ ಸಭಾಂಗಣ, ಬೆಳಿಗ್ಗೆ 11

ಶೈಕ್ಷಣಿಕ ತರಗತಿಗಳ ಉದ್ಘಾಟನಾ ಸಮಾರಂಭ: ಅಧ್ಯಕ್ಷತೆ: ಎಂ.ಆರ್. ದೊರೆಸ್ವಾಮಿ, ಅತಿಥಿಗಳು: ವಿಶ್ವೇಶ್ವರ ಭಟ್, ಡಿ.ಜವಾಹರ್, ಆಯೋಜನೆ: ಪಿಇಎಸ್ ಯುನಿವರ್ಸಿಟಿ, ಆರ್.ಆರ್. ಕ್ಯಾಂಪಸ್, ಬನಶಂಕರಿ, ಬೆಳಿಗ್ಗೆ 11

ಮೊಹುವ ಚಿನ್ನಪ್ಪ ಬರೆದ ‘ನೌಟಂಕಿ ಸಾಲಾ’ ಪುಸ್ತಕ ಬಿಡುಗಡೆ: ಅತಿಥಿಗಳು: ಶತ್ರುಘ್ನ ಸಿನ್ಹಾ, ಭಾರತಿ ಪ್ರಧಾನ್, ಅನುರಾಗ್ ಚವ್ಹಾಣ್, ಆಯೋಜನೆ: ದಿ ಮೊಹುವ ಷೋ, ಸ್ಥಳ: ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರ, ದೊಮ್ಮಲೂರು, ಸಂಜೆ 5.30

ಶತ್ರುಘ್ನ ಸಿನ್ಹಾ

ಒಡಿಶಾ ಬುಡಕಟ್ಟು ಜನರ ಪೇಂಟಿಂಗ್ ಪ್ರದರ್ಶನ: ಅತಿಥಿಗಳು: ಅಶ್ವಿನಿ ಕುಮಾರ್ ಪತ್ರ, ಮಧುಸೂದನ್ ಪಾಧಿ, ಎನ್. ಮಂಜುಳಾ, ಸುದರ್ಶನ್ ಪಾಟ್ನಾಯಕ್, ಆಯೋಜನೆ: ಒಡಿಶಾ ಲಲಿತ ಕಲಾ ಅಕಾಡೆಮಿ, ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್, ಮಧ್ಯಾಹ್ನ 12.30

‘ನೃತ್ಯ ನೀರಾಜನ’ ಭರತನಾಟ್ಯ ಪ್ರದರ್ಶನ: ಪ್ರಸ್ತುತಿ: ದರ್ಶಿನಿ ಮಂಜುನಾಥ್, ಎ.ಲಿಜ ಶ್ರೀನಿಧಿ, ನಿಹಾರಿಕಾ.ಆರ್., ಪ್ರಣವಿ ಪ್ರಸನ್ನ, ಉಮಾ.ಜಿ., ಗಾಯನ: ಭಾರತಿ ವೇಣುಗೋಪಾಲ್, ಮೃದಂಗ: ಎಸ್.ವಿ. ಗಿರಿಧರ್, ಕೊಳಲು: ನರಸಿಂಹಮೂರ್ತಿ, ಪಿಟೀಲು: ಮಧುಸೂದನ್, ಆಯೋಜನೆ: ನೃತ್ಯ ದಿಶಾ ಟ್ರಸ್ಟ್, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಬೆಳಿಗ್ಗೆ 10.30

ಲಯನ್ಸ್ ಕ್ಲಬ್ ಇಂಟರ್‌ನ್ಯಾಷನಲ್ ಡಿಸ್ಟ್ರಿಕ್ಟ್-317 'ದುತಿ', ಪದಾಧಿಕಾರಿಗಳ ಪದಗ್ರಹಣ ಕಾರ್ಯಕ್ರಮ: ಉದ್ಘಾಟನೆ: ವಂಶಿಧರ್ ಬಾಬು, ವಿನೋದ್ ಕುಮಾರ್ ಲಾಡಿಯಾ, ವಿ.ವಿ. ಕೃಷ್ಣ ರೆಡ್ಡಿ, ಲಿಂಗೇಗೌಡ ಕೆ.ಬಿ., ಅಧ್ಯಕ್ಷತೆ: ಬಿ.ಎಸ್. ರಾಜಶೇಖರಯ್ಯ, ಆಯೋಜನೆ: ಲಯನ್ಸ್ ಕ್ಲಬ್, ಸ್ಥಳ:ನಿಮ್ಹಾನ್ಸ್ ಕನ್ವೆನ್ಷನ್ ಸೆಂಟರ್, ಸಂಜೆ 4

ಯಕ್ಷಗಾನ ಪ್ರದರ್ಶನ: ಮಧ್ಯಾಹ್ನ 2ಕ್ಕೆ ತಾಳಮದ್ದಳೆ: ಶರಸೇತು ಬಂಧನ, ಸಂಜೆ 4ಕ್ಕೆ: ಪ್ರಶಸ್ತಿ ಪ್ರದಾನ, ಅಶಕ್ತ ಕಲಾವಿದರಿಗೆ ಆರ್ಥಿಕ ನೆರವು ಹಾಗೂ ಮಾಸಾಶನ ಚೆಕ್ ವಿತರಣಾ ಸಮಾರಂಭ, ಸಂಜೆ 6ಕ್ಕೆ: ಕೀಚಕ ವಧೆ ಯಕ್ಷಗಾನ ಪ್ರದರ್ಶನ, ಆಯೋಜನೆ: ರಂಗಸ್ಥಳ, ಸ್ಥಳ: ರವೀಂದ್ರ ಕಲಾಕ್ಷೇತ್ರ,

ಭರತನಾಟ್ಯ ಪ್ರದರ್ಶನ: ಪ್ರಸ್ತುತಿ: ಶ್ರೇಯಾ ಶ್ರೀಧರ್, ಅತಿಥಿಗಳು: ಉಷಾ ದಾತಾರ್, ಕೆ.ಕುಮಾರ್, ವೈ.ಕೆ. ಸಂಧ್ಯಾ ಶರ್ಮಾ, ಆಯೋಜನೆ: ಸುಧೀಂದ್ರ ನೃತ್ಯ ಕಲಾಕೇಂದ್ರ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಸಂಜೆ 5.30



ಶ್ರೇಯಾ ಶ್ರೀಧರ್

ಸಂಗೀತ ಕಾರ್ಯಕ್ರಮಗಳು: ಕೊಳಲು: ಅಮಿತ್ ನಾಡಿಗ್, ಪಿಟೀಲು: ವೈಭವ್ ರಮಣಿ, ಮೃದಂಗ: ಬಿ.ಸಿ. ಮಂಜುನಾಥ, ಕಂಜೀರ: ಸನಾದ್ ಆನೂರ್, ಆಯೋಜನೆ: ವಿಜಯನಗರ ಸಂಗೀತ ಸಭಾ ಟ್ರಸ್ಟ್, ಸ್ಥಳ: ವಿಜಯನಗರ ಮಾರುತಿ ಮಂದಿರ ಸಭಾಂಗಣ, ಸಂಜೆ 5.45

ವಚನ ಶ್ರಾವಣ: ಅತಿಥಿಗಳು: ಶಕುಂತಲಾ ಬಾಗಲಕೋಟ್, ಗಾಯನ: ಈರಯ್ಯ ಚಿಕ್ಕಮಠ್, ಅಧ್ಯಕ್ಷತೆ: ಎಸ್. ಪಿನಾಕಪಾಣಿ, ಆಯೋಜನೆ: ವಚನ ಜ್ಯೋತಿ ಬಳಗ, ಸ್ಥಳ: ಸಬಿತಾ ಮೇಟಿ ಅವರ ಮನೆ, 304, 5ನೇ ಮುಖ್ಯರಸ್ತೆ, ಎನ್.ಜಿ.ಇ.ಎಫ್, ಲೇಔಟ್, ಮಲ್ಲತ್ತಹಳ್ಳಿ, ಸಂಜೆ 6

ಗುಲಾಬಿ ಗ್ಯಾಂಗು-2 ನಾಟಕ ಪ್ರದರ್ಶನ: ಅತಿಥಿಗಳು: ಅಕ್ಕಯ್ ಪದ್ಮಶಾಲಿ, ಗೌರಿ ದತ್ತು, ಜಿ.ವೈ. ಪದ್ಮಾ ನಾಗರಾಜ್, ಆಯೋಜನೆ: ರಂಗ ಪಯಣ, ಸ್ಥಳ: ನಯನ ಸಭಾಂಗಣ, ಸಂಜೆ 7

ಹೊರಗೆ ಹೋಗುವಾಗ ಮುಖಗವಸು ಧರಿಸಿ
ಕೆಮ್ಮುವಾಗ, ಸೀನುವಾಗ ಕರವಸ್ತ್ರದಿಂದ ಮುಚ್ಚಿಕೊಳ್ಳಿ

ರಾಜ್ಯದಲ್ಲಿ ಮೊದಲ ಮಂಕಿಪಾಕ್ಸ್ ಲಕ್ಷಣ ಪತ್ತೆ

ಚಿಕ್ಕಬಳ್ಳಾಪುರ: ರಾಜ್ಯದಲ್ಲಿರುವ ಆಫ್ರಿಕಾ ಮೂಲದ ವ್ಯಕ್ತಿಯೊಬ್ಬರಲ್ಲಿ ಮಂಕಿಪಾಕ್ಸ್ ವೈರಸ್ ಸೋಂಕಿನ ಲಕ್ಷಣ ಕಾಣಿಸಿಕೊಂಡಿದ್ದು ಮಾದರಿಯನ್ನು ಪರೀಕ್ಷೆಗೆ ಕಳುಹಿಸಲಾಗಿದೆ ಎಂದು ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ.ಸುಧಾಕರ್ ತಿಳಿಸಿದರು.

ನಗರದಲ್ಲಿ ಶನಿವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, 'ಪರೀಕ್ಷೆಯ ವರದಿಗಳನ್ನು ನೋಡಿದ ನಂತರ ಮಂಕಿಪಾಕ್ಸ್ ಇದೆಯೇ ಇಲ್ಲವೇ ಎನ್ನುವುದು ದೃಢವಾಗುತ್ತದೆ. ಆದರೆ ಜನರು ಆತಂಕ ಪಡಬೇಕಾಗಿಲ್ಲ. ಮಂಕಿಪಾಕ್ಸ್ ಮಾರಣಾಂತಿಕವೇನೂ ಅಲ್ಲ. ಯಾರು ಮಂಕಿಪಾಕ್ಸ್ ಲಸಿಕೆ ಪಡೆದಿರುತ್ತಾರೋ ಅವರ ಮೇಲೆ ಪರಿಣಾಮ ಕಡಿಮೆ ಇರುತ್ತದೆ. ಮಂಕಿಪಾಕ್ಸ್ ಗುಣವಾಗುತ್ತದೆ' ಎಂದರು.



ಕಾಮನ್‌ವೆಲ್ತ್ ಗೇಮ್ಸ್‌ನಲ್ಲಿ ಪಾಲ್ಗೊಳ್ಳುತ್ತಿರುವ ನಮ್ಮ ಅಥ್ಲೀಟ್‌ಗಳು ಯಶಸ್ವಿಯಾಗಲೆಂದು ಶುಭಹಾರೈಸುತ್ತೇವೆ!

ಕಮ್ಮವಾರಿ ಸಂಘಂ (ರಿ) – 1952
ಕಮ್ಮವಾರಿ ಸಂಘಂ ಸಮೂಹ ಶಿಕ್ಷಣ ಸಂಸ್ಥೆಗಳು
K. S. GROUP OF INSTITUTIONS
Kanakapura Road, Bengaluru - 560109

ADMISSIONS OPEN

B.E
- ARTIFICIAL INTELLIGENCE & DATA SCIENCE
- ARTIFICIAL INTELLIGENCE & MACHINE LEARNING
- CIVIL ENGINEERING
- COMPUTER SCIENCE & BUSINESS SYSTEM
- COMPUTERS & COMMUNICATION ENGINEERING
- COMPUTER SCIENCE & DESIGN
- COMPUTER SCIENCE & ENGINEERING
- COMPUTER SCIENCE & ENGINEERING (IOT, Cyber Security & Block Chain)
- ELECTRONICS & COMMUNICATION ENGINEERING
- MECHANICAL ENGINEERING

3 Years DIPLOMA IN CSE, ECE, CIVIL MECH & AUTOMOBILE

PUC (SCIENCE & COMMERCE) PCMB, PCMCs, EBACs

B. Arch, MBA (HR, FINANCE, MARKETING) M.Tech

COLLEGE FEE WAIVER & SCHOLARSHIP / FREESHIP FOR NEEDY & MERITORIOUS STUDENTS

Campus - 1
K. S. INSTITUTE OF TECHNOLOGY

KSIT
CET Code : E91 COMED K Code : E068

Campus - 2
K. S. SCHOOL OF ENGG. & MGMT.

KSSEM
PG CET Code : B198
CET Code : E203 COMED K Code : E067

KSP KSPUC

Campus - 2
K. S. SCHOOL OF ARCHITECTURE

KSSA
CET Code : E250 COMED K Code : E179

For Admissions Visit : Web : www.ksgi.edu.in Call : 99007 10055

ಸಮಾಜ ಕಲ್ಯಾಣ ಇಲಾಖೆ


ಶ್ರೀ ಬಸವರಾಜ ಎಸ್. ಬೊಮ್ಮಾಯಿ
ಸನ್ಮಾನ್ಯ ಮುಖ್ಯಮಂತ್ರಿಗಳು

ಪರಿಶಿಷ್ಟ ಜಾತಿಯ ಚರ್ಮ ಕುಶಲಕರ್ಮಿಗಳಿಗೆ
ಅಭಿವೃದ್ಧಿಯ ಸದಾವಕಾಶ

ಕೆಳಕಂಡ ಯೋಜನೆಗಳಿಗೆ ಅರ್ಜಿ ಆಹ್ವಾನ

ತರಬೇತಿ
1) 60 ದಿನಗಳ ಕೌಶಲ್ಯಾಭಿವೃದ್ಧಿ ತರಬೇತಿ
2) ಕೌಶಲ್ಯ ಉನ್ನತೀಕರಣ ಯೋಜನೆ:–
(i) 3 ವರ್ಷಗಳ ಡಿಪ್ಲೊಮಾ ಇನ್ ಲೆದರ್ ಟೆಕ್ನಾಲಜಿ – KILT, ಬೆಂಗಳೂರು.
(ii) ಪಾದರಕ್ಷೆ ವಿನ್ಯಾಸ ಮತ್ತು ಉತ್ಪಾದನಾ ತಾಂತ್ರಿಕತೆಯಲ್ಲಿ 1 ವರ್ಷದ ಡಿಪ್ಲೊಮಾ – NIFT, ಚೆನ್ನೈ
(iii) ಪಾದರಕ್ಷೆ ತಯಾರಿಕೆ ಮತ್ತು ನಿರ್ವಹಣಾ ಅಧ್ಯಯನದಲ್ಲಿ ಒಂದೂವರೆ ವರ್ಷದ ಸ್ನಾತಕೋತ್ತರ ಡಿಪ್ಲೋಮಾ – CFTI, ಚೆನ್ನೈ

ಸ್ವಯಂ ಉದ್ಯೋಗ
1) ಸ್ವಾವಲಂಬಿ / ಸಂಚಾರಿ ಮಾರಾಟ ಮಳಿಗೆ
2) ನೇರ ಸಾಲ ಯೋಜನೆ
3) "ಚರ್ಮಶಿಲ್ಪ" ಯೋಜನೆ
4) ಮಹಿಳಾ ಕುಶಲಕರ್ಮಿಗಳಿಗೆ "ಕಾಯಕಸ್ಫೂರ್ತಿ" ಯೋಜನೆ
5) "ಪಾದುಕೆ ಕುಟೀರ" ಯೋಜನೆ
6) ಮಾರುಕಟ್ಟೆ ಸಹಾಯ ಯೋಜನೆ

ವಸತಿ ಕಾರ್ಯಾಗಾರ (Living cum Work Shed for Leather Artisans)
ಡಾ. ಬಾಬು ಜಗಜೀವನ ರಾಂ ವಸತಿ ಕಾರ್ಯಾಗಾರ ನಿರ್ಮಾಣ ಯೋಜನೆ
ಫಲಾಪೇಕ್ಷಿಗಳು ಅರ್ಜಿಗಳನ್ನು ಸುವಿಧಾ ಪೋರ್ಟಲ್ ಲಿಂಕ್ http://suvidha.karnataka.gov.in ಮೂಲಕ ಸಲ್ಲಿಸುವುದು.
ವಿಶೇಷ ಸೂಚನೆ:
(i) ಮಂಡಳಿ ವಿವೇಚನಾ ಕೋಟಾ ಅಥವಾ ಸರ್ಕಾರದ ಸಾಂಸ್ಥಿಕ ಕೋಟಾದಡಿ ಸ್ವೀಕರಿಸುವ ಅರ್ಜಿಗಳನ್ನು ಸಹ ಸುವಿಧಾ ಪೋರ್ಟಲ್ ಮೂಲಕವೇ ಸಲ್ಲಿಸುವುದು. (ii) ನಿಗದಿತ ದಿನಾಂಕದೊಳಗೆ ಅರ್ಜಿ ಸಲ್ಲಿಸುವುದು. ನಂತರ ಬಂದ ಅರ್ಜಿಗಳನ್ನು ಪರಿಗಣಿಸುವುದಿಲ್ಲ.

ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಸವರಾಜ ಎಸ್. ಬೊಮ್ಮಾಯಿ ಹಾಗೂ ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಸಚಿವರಾದ ಶ್ರೀ ಕೋಟ ಶ್ರೀನಿವಾಸ ಪೂಜಾರಿ ಮತ್ತು ಲಿಡ್‌ಕರ್ ಅಧ್ಯಕ್ಷರಾದ ಪ್ರೊ. ಎನ್. ಲಿಂಗಣ್ಣರವರು ಲಿಡ್‌ಕರ್ ಚರ್ಮೋತ್ಪನ್ನಗಳನ್ನು ವೀಕ್ಷಿಸುತ್ತಿರುವುದು.

ಹೆಚ್ಚಿನ ಮಾಹಿತಿಗಾಗಿ ನಿಗಮದ ಜಿಲ್ಲಾ ಸಂಯೋಜಕರುಗಳ ಕಛೇರಿ ಅಥವಾ ನಿಗಮದ ವೆಬ್‌ಸೈಟ್ http://lidkar.com ಅಥವಾ ಕಲ್ಯಾಣಮಿತ್ರ ಏಕೀಕೃತ ಎಸ್.ಸಿ/ಎಸ್.ಟಿ 24x7 ಸಹಾಯವಾಣಿ 9482300400 ಸಂಪರ್ಕಿಸುವುದು.

ಅರ್ಜಿ ಸಲ್ಲಿಸುವ ಅವಧಿಯನ್ನು
ದಿನಾಂಕ: 20-08-2022ರ ವರೆಗೆ ವಿಸ್ತರಿಸಲಾಗಿದೆ.
ಫಲಾಪೇಕ್ಷಿಗಳು ಈ ಸದಾವಕಾಶವನ್ನು ಸದುಪಯೋಗ ಪಡಿಸಿಕೊಳ್ಳುವುದು.

ಡಾ|| ಬಾಬು ಜಗಜೀವನ ರಾಂ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮ ನಿ.,
(ಕರ್ನಾಟಕ ಸರ್ಕಾರದ ಒಂದು ಉದ್ಯಮ)

ವ್ಯವಸ್ಥಾಪಕ ನಿರ್ದೇಶಕರು – ಬಿಜೆ–ಲಿಡ್‌ಕರ್
ಆಯುಕ್ತರು – ಸಮಾಜ ಕಲ್ಯಾಣ ಇಲಾಖೆ
ಸರ್ಕಾರದ ಕಾರ್ಯದರ್ಶಿಗಳು – ಸಮಾಜ ಕಲ್ಯಾಣ ಇಲಾಖೆ

"ನಮ್ಮ ವೈವಿಧ್ಯಮಯ ಸಂಸ್ಕೃತಿಯ ಶ್ರೇಷ್ಠ ಪರಂಪರೆಯನ್ನು ಗೌರವಿಸುವುದು ಮತ್ತು ರಕ್ಷಿಸುವುದು" – ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ

www.velnik.com
KAVERI®
EASY FAST
OIL ENRICHED CRÈME HAIR COLOR
EASY BHI, FAST BHI.
10 MINUTE MEIN
BLACK
COLORANT 15G & DEVELOPER 15ML

Love Rupali Ganguly

NATURAL LOOKING HAIR
NO AMMONIA
GREY COVERAGE AND LONG LASTING COLOR
MRP ₹ 20
BLACK SESAME OIL
ಇದೀಗ ಇಲ್ಲಿಯೂ ಕೂಡ ಲಭ್ಯವಿದೆ velnikstore.com
FOR TRADE ENQUIRY : Tel : 0731-6669000 I E-mail : info@velnik.com

ಸಂಚಾರ ಪೊಲೀಸ್ ವಿಭಾಗದ ಜಂಟಿ ಆಯುಕ್ತ ಬಿ.ಆರ್. ರವಿಕಾಂತೇಗೌಡ ವಿಷಾದ

‘ಗಾಂಧೀಜಿ ಕುಬ್ಜಗೊಳಿಸುವ ಪ್ರಯತ್ನ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಷ್ಟ್ರಪಿತ ಮಹಾತ್ಮ ಗಾಂಧಿ ಅವರನ್ನು ಕುಬ್ಜಗೊಳಿಸುವ ವ್ಯವಸ್ಥಿತ ಪ್ರಯತ್ನ ನಡೆಯುತ್ತಿದೆ ಎಂದು ಸಂಚಾರ ಪೊಲೀಸ್ ವಿಭಾಗದ ಜಂಟಿ ಆಯುಕ್ತ ಡಾ.ಬಿ.ಆರ್.ರವಿಕಾಂತೇಗೌಡ ವಿಷಾದಿಸಿದರು.

ಮಂಡ್ಯದ ಸಂಕಥನ ಹಾಗೂ ಶಿವಮೊಗ್ಗದ ಗೀತಾಂಜಲಿ ಪುಸ್ತಕದ ವತಿಯಿಂದ ನಗರದಲ್ಲಿ ಶನಿವಾರ ಆಯೋಜಿಸಿದ್ದ ದಿವಂಗತ ಡಾ. ರಾಜೇಗೌಡ ಹೊಸಹಳ್ಳಿ ಅವರ ’ಶ್ರೀರಾಮಯಣ ದರ್ಶನಂ: ಸಮಕಾಲೀನ ತತ್ವಾದರ್ಶ ದರ್ಶನ ಹಾಗೂ ’ಗಾಂಧಿ ಕಣ್ಣಿನ ನೋಟ‘ ಕೃತಿ ಬಿಡುಗಡೆ ಸಮಾರಂಭದಲ್ಲಿ ಅವರು ಮಾತನಾಡಿದರು.

‘ರಾಷ್ಟ್ರಕವಿ ಕುವೆಂಪು ಅವರಿಗೆ ಗಾಂಧೀಜಿಯ ಬಗ್ಗೆ ಅಪಾರ ಗೌರವ ಇತ್ತು. ಗಾಂಧೀಜಿ ಅವರನ್ನು ಕುವೆಂಪು ತಮ್ಮ ಕೃತಿಗಳಲ್ಲಿ ಅವಲೋಕಿಸಿರುವ ರೀತಿ ಗಮನಿಸಿದರೆ ತಿಳಿಯಲಿದೆ’ ಎಂದು ಹೇಳಿದರು.

ನಾಟಕೀಯವಾಗಿ ಬದುಕಬಾರದು ಎಂದು ರಾಜೇಗೌಡರು ಪ್ರತಿಪಾದಿಸಿದ್ದ-ರು. ಪ್ರಕೃತಿಯನ್ನು ವಿಕೃತಿಗೊಳಿಸುವವರ ವಿರುದ್ಧ ಅವರ ಸಿಟ್ಟಿತ್ತು. ಅವರ ಸಾಹಿತ್ಯ ಕೃತಿಗಳಲ್ಲೂ ಪಾಂಡಿತ್ಯ ಪ್ರಯೋಗಿಸದೆ ಸರಳವಾಗಿ ಬರೆದಿದ್ದಾರೆ ಎಂದು ವಿಶ್ಲೇಷಿಸಿದರು.

ಪತ್ರಕರ್ತ ಡಿ.ಉಮಾಪತಿ ಮಾತನಾಡಿ, ’ವ್ಯವಸ್ಥೆ ಆಧುನೀಕರ-ಣಗೊಂಡಂತೆ ಮಾನವರು ಸಂಕುಚಿತಗೊಳ್ಳುತ್ತಿದ್ದಾರೆ. ಸಮಾಜದಲ್ಲಿ ದ್ವೇಷ, ಅಸೂಯೆ ಹೆಚ್ಚಾಗಿದೆ. ದೇಶವು ಗಂಡಾಂತರ ಎದುರಿಸುತ್ತಿದೆ. ನಂಜು ತುಂಬಿಕೊಂಡವರ ಸಂಖ್ಯೆಯೇ ಹೆಚ್ಚುತ್ತಿದೆ‘ ಎಂದು ವಿಷಾದಿಸಿದರು.

ವಿಮರ್ಶಾ ಕ್ಷೇತ್ರವು ರಾಜೇಗೌಡರ ಕೃತಿಗಳನ್ನು ನಿರ್ಲಕ್ಷ್ಯ ಮಾಡಿದೆ. ಅವರ ಜನಪರ ಬರಹಕ್ಕೆ ನ್ಯಾಯ ಸಿಕ್ಕಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಗಾಂಧಿ ಸ್ಮಾರಕ ನಿಧಿಯ ಉಪಾಧ್ಯಕ್ಷ ಜಿ.ಬಿ.ಶಿವರಾಜು ಹಾಜರಿದ್ದರು.

ಕಾರ್ಯಕ್ರಮದಲ್ಲಿ ದಿವಂಗತ ಡಾ.ರಾಜೇಗೌಡ ಹೊಸಹಳ್ಳಿ ಅವರ ‘ಶ್ರೀರಾಮಾಯಣ ದರ್ಶನಂ: ಸಮಕಾಲೀನ ತತ್ವಾದರ್ಶ ದರ್ಶನ‘ ಹಾಗೂ ಹಾಗೂ ’ಗಾಂಧಿ ಕಣ್ಣಿನ ನೋಟ‘ ಪುಸ್ತಕಗಳನ್ನು ಸಂಚಾರ ಪೊಲೀಸ್ ವಿಭಾಗದ ಜಂಟಿ ಆಯುಕ್ತ ಡಾ.ಬಿ.ಆರ್.ರವಿಕಾಂತೇಗೌಡ (ಎಡದಿಂದ ಎರಡನೆಯವರು) ಮತ್ತು ಪತ್ರಕರ್ತ ಡಿ.ಉಮಾಪತಿ (ಎಡದಿಂದ ನಾಲ್ಕನೆಯವರು) ಬಿಡುಗಡೆಗೊಳಿಸಿದರು. ಎಚ್.ಆರ್.ಸುಜಾತಾ, ಗಾಂಧಿ ಸ್ಮಾರಕ ನಿಧಿಯ ಉಪಾಧ್ಯಕ್ಷ ಜಿ.ಬಿ.ಶಿವರಾಜು ಮತ್ತು ಎನ್.ಆರ್. ವಿಶುಕುಮಾರ್ ಇದ್ದಾರೆ ಪ್ರಜಾವಾಣಿ ಚಿತ್ರ

ಮುಖ್ಯಾಂಶಗಳು
- ಗಾಂಧೀಜಿ ಬಗ್ಗೆ ಕುವೆಂಪುಗೆ ಅಪಾರ ಗೌರವ
- ಸಮಾಜದಲ್ಲಿ ಹೆಚ್ಚುತ್ತಿರುವ ದ್ವೇಷ, ಅಸೂಯೆ
- ನಂಜು ತುಂಬಿಕೊಂಡವರ ಸಂಖ್ಯೆಯೇ ಹೆಚ್ಚು

ಮಹಡಿಯಿಂದ ಬಿದ್ದು ಬಾಲಕ ಸಾವು

ಬೆಂಗಳೂರು: ಕಾಳೇನ ಅಗ್ರಹಾರದ ಎಂಎಲ್ಎ ಬಡಾವಣೆಯಲ್ಲಿರುವ ಸಿವಿಕೆ ಅಪಾರ್ಟ್‌ಮೆಂಟ್ ಸಮುಚ್ಚಯದ ಎರಡನೇ ಮಹಡಿಯಿಂದ ಬಿದ್ದು 12 ವರ್ಷದ ಬಾಲಕ ಆದಿತ್ ಮೃತಪಟ್ಟಿದ್ದು, ಈ ಸಂಬಂಧ ಹುಳಿಮಾವು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘7ನೇ ತರಗತಿಯಲ್ಲಿ ಓದುತ್ತಿದ್ದ ಆದಿತ್, ಫ್ಲ್ಯಾಟ್‌ನಲ್ಲಿ ತಾಯಿ ಜೊತೆ ವಾಸವಿದ್ದ. ತಂದೆ, ದುಬೈನಲ್ಲಿ ಕೆಲಸ ಮಾಡುತ್ತಿದ್ದಾರೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಶಾಲೆ ಆಡಳಿತ ಮಂಡಳಿ ಶನಿವಾರ ಆನ್‌ಲೈನ್ ಮೂಲಕ ಪೋಷಕರ ಸಭೆ ನಡೆಸಿದ್ದರು. ಮನೆಯಲ್ಲೇ ಕುಳಿತು ತಾಯಿ ಜೊತೆ ಆದಿತ್ ಸಭೆಗೆ ಹಾಜರಾಗಿದ್ದ. ಮಧ್ಯಾಹ್ನ ಸಭೆ ಮುಗಿದಿತ್ತು. ಆಟವಾಡಲೆಂದು ಬಾಲಕ ಮನೆಯಿಂದ ಹೊರಗೆ ಬಂದಿದ್ದ.’

‘ಎರಡನೇ ಮಹಡಿಯಲ್ಲಿ ಆಟವಾ-ಡುತ್ತಿದ್ದಾಗ ಆಯತಪ್ಪಿ ಬಿದ್ದಿದ್ದು, ತೀವ್ರ ಗಾಯಗೊಂಡಿದ್ದ ಆದಿತ್‌ನನ್ನು ಆಸ್ಪತ್ರೆಗೆ ಕರೆದೊಯ್ಯಲಾಗಿತ್ತು. ಚಿಕಿತ್ಸೆಗೆ ಸ್ಪಂದಿಸದೇ ಬಾಲಕ ತೀರಿಕೊಂಡಿದ್ದಾನೆ. ಪ್ರತ್ಯಕ್ಷದರ್ಶಿಗಳಿಂದ ಹೇಳಿಕೆ ಪಡೆಯಲಾಗಿದೆ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಸುದ್ದಿ 2 ನಿಮಿಷ

ಚೋಳರ ಕಾಲದ ಶಾಸನ ಪತ್ತೆ

ಶಿಡ್ಲಘಟ್ಟ: ತಾಲ್ಲೂಕಿನ ಸುಗುಟೂರಿನಲ್ಲಿ ಕಮಲಮ್ಮ ಮತ್ತು ರಮೇಶ್ ದಂಪತಿಯ ತೋಟದಲ್ಲಿ ಚೋಳರ ಕಾಲದ ಹಳಗನ್ನಡದ-ರುವ ವೀರಗಲ್ಲಿನೊಂದಿಗಿನ ಶಾಸನ ಪತ್ತೆಯಾಗಿದೆ.

ಲಿಪಿ ಶಾಸನ ಹಿರಿಯ ಸಂಶೋಧಕ ಡಾ.ಪಿ.ವಿ.ಕೃಷ್ಣ-ಮೂರ್ತಿ, ಶಾಸನ ತಜ್ಞರಾದ ಪ್ರೊ. ಕೆ.ಆರ್.ನರಸಿಂಹನ್, ಶಶಿಧರ್ ಮತ್ತು ಡಿ.ಎನ್.ಸುದರ್ಶನ-ರೆಡ್ಡಿ ಶನಿವಾರ ಸುಗುಟೂರಿನ ರಮೇಶ್ ಅವರ ಹಿಪ್ಪುನೇರಳೆ ಸೊಪ್ಪಿನ ತೋಟದಲ್ಲಿ ಸಂರಕ್ಷಿಸಿದ್ದ ಶಾಸನದಲ್ಲಿನ ಪಠ್ಯವನ್ನು ಓದಿದರು.

ಡಾ.ಪಿ.ವಿ.ಕೃಷ್ಣಮೂರ್ತಿ ಅವರು, ‘ಇದು ಚೋಳರ ಕಾಲದ ಹಳಗನ್ನಡದ ಶಾಸನ. ಇದರ ಕಾಲ ಕ್ರಿ.ಶ.1030. ರಾಜೇಂದ್ರ ಚೋಳನ ಹೆಸರು ಇಲ್ಲಿ ಪ್ರಸ್ತಾಪಿಸಲಾಗಿದೆ. ಆಗಿನ ಸುಗುಟೂರಿನ ಶಾಸನಗಳಲ್ಲಿ ಈ ಪ್ರಾಂತ್ಯವನ್ನು ‘ಅರುಮೊಳಿದೇವ ಚತುರ್ವೇದಿ ಮಂಗಲ’ ಎಂಬ ಅಗ್ರಹಾರವಾಗಿದ್ದಿತೆಂಬುದು ಉಲ್ಲೇಖವಾಗಿದೆ.

ಶಾಸನ ತಜ್ಞ ಪ್ರೊ.ಕೆ.ಆರ್. ನರಸಿಂಹನ್, ‘ಇದುವರೆವಿಗೂ ನಮಗೆ ಸುಗುಟೂರಿನಲ್ಲಿ ತಮಿಳು ಶಾಸನಗಳು ಮಾತ್ರ ಗೋಚ-ರವಾಗಿದ್ದವು. ಆದರೆ ಇದೀಗ ಶಾಸನ ತಜ್ಞರಾದ ಶಶಿಧರ್ ಮತ್ತು ಡಿ.ಎನ್.ಸುದರ್ಶನರೆಡ್ಡಿ ಅವರು ಹಳಗನ್ನಡದ ವೀರಗಲ್ಲಿನೊಂದಿಗಿನ ಶಾಸನ ಪತ್ತೆಯಾಗಿದೆ ಎಂದರು.

ಜಾನಪದ ಪರಿಷತ್ ತಾಲ್ಲೂಕು ಅಧ್ಯಕ್ಷ ಎ.ಎಂ.ತ್ಯಾಗರಾಜ ಇದ್ದರು.

ಮನೆ ಮನೆಯಲ್ಲಿ ವಚನ ಶ್ರಾವಣ

ಬೆಂಗಳೂರು: ಅತ್ತಿಗುಪ್ಪೆಯ ಗಂಗಾಂಬಿಕೆ ಡಾ.ಮುನಿರಾಜಪ್ಪನವರ ನಿವಾಸ ‘ಹೊಂಬೆಳಕು’ನಲ್ಲಿ ವಚನಜ್ಯೋತಿ ಬಳಗದಿಂದ ‘ವಚನ ಶ್ರಾವಣ’ ಆಯೋ-ಜಿಸಲಾಗಿತ್ತು.

‘ಮನೆ-ಮನಗಳಲ್ಲಿ, ಶಾಲಾ ಕಾಲೇಜುಗಳಲ್ಲಿ ಶ್ರಾವಣ ಮಾಸದಲ್ಲಿ ವಚನಜ್ಯೋತಿ ಬಳಗ ನಡೆಸುತ್ತಿರುವ ವಚನ ಶ್ರಾವಣವು ನಿತ್ಯನೂತನ-ವಾಗಲಿ’ ಎಂದು ಬಿಬಿಎಂಪಿ ಮಾಜಿ ಸದಸ್ಯ ಡಾ.ಎಸ್.ರಾಜು ಹೇಳಿದರು. ‘ವಚನಾಮೃತಸವಿ’ ಪುಸ್ತಕ ಬಿಡುಗಡೆ ಮಾಡಿದರು.

ವಚನ ಬಳಗದ ಅಧ್ಯಕ್ಷ ಎಸ್.ಪಿನಾಕಪಾಣಿ ಮಾತನಾಡಿ, ‘ಪ್ರಸಕ್ತ ಸಾಲಿನಲ್ಲಿ ಕನಿಷ್ಠ ನೂರು ಶಾಲೆಗಳನ್ನು ವಚನ ಶ್ರಾವಣ ತಲುಪಲಿದೆ. ಡಿಸೆಂಬರ್ ಕೊನೆಯ ವಾರದಲ್ಲಿ ‘ಮಕ್ಕಳ ವಚನ ಮೇಳ’ ನಡೆಯಲಿದೆ. ವಚನ ಚಳವಳಿಯ ವಿವಿಧ ಪ್ರಕಾರಗಳ ಅಧ್ಯಯನಕ್ಕಾಗಿ ‘ವಚನ ಮಂದಿರ’ ನಿರ್ಮಿಸಲಾಗುತ್ತಿದೆ’ ಎಂದರು.

ಗಾಯಕರಾದ ಸಿದ್ದರಾಮ ಕೇಸಾಪುರ, ಮೀನಾಕ್ಷಿ ಮೇಟಿ, ಟಿ.ಎಂ. ಜಾನಕಿ, ವೀಣಾಮೂರ್ತಿ, ಪೂರ್ಣಿಕಾ ಆರಾಧ್ಯ, ಶ್ರಾವಣಿ ವಚನ ಗಾಯನ ಮಾಡಿಸಿದರು. ಪುಟಾಣಿಗಳಾದ ಅನೈರಾ ಪಟೇಲ್, ಆರುಷ್ ಪಟೇಲ್, ನೈಜ ಮತ್ತು ಸ್ಮಿರಾ ವಚನ ವಾಚನ ಮಾಡಿದರು.

ಬಳಗದ ಗೌರವಾಧ್ಯಕ್ಷ ಮಹೇಶ ಬೆಲ್ಲದ, ಸಾಹಿತಿ ಗುಂಡೀಗೆರೆ ವಿಶ್ವನಾಥ್, ಪ್ರಾಧ್ಯಾಪಕ ಡಾ.ಮುನಿರಾಜಪ್ಪ ಇದ್ದರು.

ಗ್ಯಾಸ್ ರಿಫಿಲ್ಲಿಂಗ್: ಸಿಸಿಬಿ ದಾಳಿ

ಬೆಂಗಳೂರು: ಎಚ್ಎಎಲ್ ಠಾಣೆ ವ್ಯಾಪ್ತಿಯಲ್ಲಿ ಅಕ್ರಮ ಗ್ಯಾಸ್ ರಿಫಿಲ್ಲಿಂಗ್ ವೇಳೆ ಸ್ಫೋಟ ಸಂಭವಿಸಿ ಕದೀರ್ (24) ಎಂಬುವರು ಮೃತಪಟ್ಟಿರುವ ಬೆನ್ನಲ್ಲೇ ಎಚ್ಚೆತ್ತುಕೊಂಡಿರುವ ಸಿಸಿಬಿ ಪೊಲೀಸರು, ರಿಫಿಲ್ಲಿಂಗ್ ತಡೆಗೆ ಕಾರ್ಯಾಚರಣೆ ಶುರು ಮಾಡಿದ್ದಾರೆ.

ಎಲೆಕ್ಟ್ರಾನಿಕ್ ಸಿಟಿಯ ಬೆಟ್ಟದಾಸಪುರ ಬಳಿಯ ಮಳಿಗೆ ಮೇಲೆ ದಾಳಿ ಮಾಡಿ ರಿಫಿಲ್ಲಿಂಗ್ ಮಾಡುತ್ತಿದ್ದ ಆರೋಪಿಯನ್ನು ವಶಕ್ಕೆ ಪಡೆದಿದ್ದಾರೆ. ₹ 1 ಲಕ್ಷ ಮೌಲ್ಯದ ಅಡುಗೆ ಅನಿಲ ಸಿಲಿಂಡರ್‌ಗಳು, ಇತರೆ ವಸ್ತುಗಳನ್ನು ಜಪ್ತಿ ಮಾಡಿದ್ದಾರೆ.

ಅಪರಾಧ ಸುದ್ದಿ

ಎಲೆಕ್ಟ್ರಿಷಿಯನ್ ಸಹಾಯಕನ ಕೊಲೆ

ಬೆಂಗಳೂರು: ಅಶೋಕನಗರ ಠಾಣೆ ವ್ಯಾಪ್ತಿಯಲ್ಲಿ ಇರ್ಫಾನ್ (28) ಎಂಬುವರನ್ನು ಕೊಲೆ ಮಾಡಲಾಗಿದ್ದು, ಕೃತ್ಯ ಎಸಗಿದ್ದ ಆರೋಪದಡಿ ಸ್ನೇಹಿತ ಖಾಸೀಂನನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.

‘ಸ್ಥಳೀಯ ನಿವಾಸಿ ಇರ್ಫಾನ್, ಎಲೆಕ್ಟ್ರಿಷಿಯನ್ ಬಳಿ ಸಹಾಯಕರಾಗಿ ಕೆಲಸ ಮಾಡುತ್ತಿದ್ದರು. ಹಳೇ ವೈಷಮ್ಯದಿಂದಾಗಿ ಸ್ನೇಹಿತ ಖಾಸೀಂ ಕೃತ್ಯ ಎಸಗಿರುವ ಮಾಹಿತಿ ಇದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ. ‘ಆನೇಪಾಳ್ಯದ ಬಳಿ ಶುಕ್ರವಾರ ಇರ್ಫಾನ್ ಜೊತೆ ಜಗಳ ತೆಗೆದಿದ್ದ ಆರೋಪಿ, ಚಾಕುವಿನಿಂದ ಇರಿದಿದ್ದ. ತೀವ್ರ ರಕ್ತ-ಸ್ರಾವವಾಗಿದ್ದ ಇರ್ಫಾನ್ ಅವರನ್ನು ಸ್ಥಳೀಯರೇ ಆಸ್ಪತ್ರೆಗೆ ಕರೆದೊಯ್ದಿದ್ದರು. ಚಿಕಿತ್ಸೆಗೆ ಸ್ಪಂದಿಸದೇ ಅವರು ಅಸುನೀಗಿದ್ದಾರೆ’ ಎಂದು ತಿಳಿಸಿವೆ.

ವ್ಯಾಪಾರಿ ಕೊಂದು ಪರಾರಿಯಾಗಲು ಯತ್ನ

ಬೆಂಗಳೂರು: ಸಿಟಿ ಮಾರ್ಕೆಟ್‌ನ ಹೂವಿನ ವ್ಯಾಪಾರಿ ಪ್ರಶಾಂತ್ (30) ಎಂಬುವರ ಕೊಲೆ ಪ್ರಕರಣ ಭೇದಿಸಿರುವ ಪೊಲೀಸರು, ಮೂವರು ಆರೋಪಿಗಳನ್ನು ತಮಿಳುನಾಡಿನಲ್ಲಿ ಬಂಧಿಸಿದ್ದಾರೆ.

‘ತಮಿಳುನಾಡಿನ ನಿವಾಸಿಗಳಾದ ವಸಂತ್‌ಕುಮಾರ್ (25), ಸರಣ್ ರಾಜ್ (26) ಹಾಗೂ ಮುಗುಂದನ್ (25) ಬಂಧಿತರು. ಜುಲೈ 27ರಂದು ರಾತ್ರಿ ಪ್ರಶಾಂತ್ ಅವರನ್ನು ಕೊಂದು ಆರೋಪಿಗಳು ಪರಾರಿಯಾಗಿದ್ದರು’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಆರೋಪಿಗಳು, ಕೆಲಸ ಹುಡುಕಿಕೊಂಡು ನಗರಕ್ಕೆ ಬಂದಿದ್ದರು. ಸಿಟಿ ಮಾರ್ಕೆಟ್‌ನ ಹೂವಿನ ಮಂಡಿಯಲ್ಲಿ ಕೆಲಸಕ್ಕೆ ಸೇರಿದ್ದರು. ಅದೇ ಮಾರ್ಕೆಟ್‌ನಲ್ಲಿ ಹೂವಿನ ವ್ಯಾಪಾರ ಮಾಡುತ್ತಿದ್ದ ಪ್ರಶಾಂತ್ ಪರಿಚಯವಾಗಿತ್ತು. ಎಲ್ಲರೂ ಸ್ನೇಹಿತರಾಗಿದ್ದರು.’

‘ಮದ್ಯದ ವಿಚಾರವಾಗಿ ಪ್ರಶಾಂತ್ ಜೊತೆ ಜಗಳ ತೆಗೆದಿದ್ದ ಆರೋಪಿಗಳು, ಅವರನ್ನು ಕೊಲೆ ಮಾಡಿ ನಗರದಿಂದ ಪರಾರಿಯಾಗಿದ್ದ-ರು. ತಮಿಳುನಾಡಿನ ತಂದ್ರಾಮ್‌ಪಟ್ಟು ಪಟ್ಟಣಕ್ಕೆ ಹೋಗಿದ್ದ ಆರೋಪಿಗಳು, ಅಲ್ಲಿಂದ ಕೇರಳಕ್ಕೆ ಹೋಗಲು ಬಸ್ಸಿಗಾಗಿ ಕಾಯುತ್ತಿದ್ದರು. ಅವರ ಬಗ್ಗೆ ಮಾಹಿತಿ ಕಲೆಹಾಕಿದ್ದ ವಿಶೇಷ ತಂಡ, ಆರೋಪಿಗಳನ್ನು ಬಂಧಿಸುವಲ್ಲಿ ಯಶಸ್ವಿಯಾಗಿದೆ’ ಎಂದೂ ಹೇಳಿವೆ.

78 ದ್ವಿಚಕ್ರ ವಾಹನ ಜಪ್ತಿ

ಬೆಂಗಳೂರು: ದ್ವಿಚಕ್ರ ವಾಹನ ಕಳವು ಪ್ರಕರಣ ಭೇದಿಸಲು ವಿಶೇಷ ಕಾರ್ಯಾಚರಣೆ ನಡೆಸಿರುವ ಪೂರ್ವ ವಿಭಾಗದ ಪೊಲೀಸರು, 17 ಆರೋಪಿಗಳನ್ನು ಬಂಧಿಸಿದ್ದಾರೆ. ಬಂಧಿತರಿಂದ ₹ 50 ಲಕ್ಷ ಮೌಲ್ಯದ 78 ದ್ವಿಚಕ್ರ ವಾಹನ ಜಪ್ತಿ ಮಾಡಲಾಗಿದೆ’ ಎಂದು ಹೇಳಿದರು.

‘ರಾಮಮೂರ್ತಿನಗರ, ಕಾಡುಗೊಂಡನಹಳ್ಳಿ (ಕೆ.ಜಿ.ಹಳ್ಳಿ), ಬಾಣಸವಾಡಿ, ಪುಲಿಕೇಶಿನಗರ, ಹೆಣ್ಣೂರು, ಭಾರತಿನಗರ ಹಾಗೂ ಶಿವಾಜಿನಗರ ಠಾಣೆ ವ್ಯಾಪ್ತಿಯಲ್ಲಿ ನಡೆದಿದ್ದ ವಾಹನ ಕಳವು ಪ್ರಕರಣಗಳಲ್ಲಿ ಆರೋಪಿಗಳನ್ನು ಬಂಧಿಸಲಾಗಿದೆ’ ಎಂದು ಪೂರ್ವ ವಿಭಾಗದ ಡಿಸಿಪಿ ಭೀಮಾಶಂಕರ್ ಗುಳೇದ ತಿಳಿಸಿದರು.

ಜೈಲಿಗೆ ‘ಕುಟ್ಟಿಪುಲ್ಲಿ’

ಬೆಂಗಳೂರು: ಗಾಂಜಾ ಸಾಗಣೆ ಹಾಗೂ ಮಾರಾಟ ಮಾಡುತ್ತಿದ್ದ ಸುನೀಲ್ ಅಲಿಯಾಸ್ ಕುಟ್ಟಿಪುಲ್ಲಿ ಎಂಬಾತನನ್ನು 'ಮಾದಕ ದ್ರವ್ಯ ಹಾಗೂ ನಿದ್ರಾಜನ್ಯ ವಸ್ತುಗಳ ಅಕ್ರಮ ಸಾಗಾಣಿಕೆ ತಡೆ (ಪಿಐಟಿ–ಎನ್‌ಡಿಪಿಎಸ್)’ ಕಾಯ್ದೆಯಡಿ ಬಂಧಿಸಿ ಜೈಲಿಗೆ ಕಳುಹಿಸಲಾಗಿದೆ.

‘ಶ್ರೀರಾಮಪುರ ಪೊಲೀಸ್ ಠಾಣೆಯ ರೌಡಿಪ-ಟ್ಟಿಯಲ್ಲಿ ಈತನ ಹೆಸರಿದೆ. ಅಪರಾಧ ಕೃತ್ಯಗಳಲ್ಲಿ ಭಾಗಿಯಾಗುತ್ತಿದ್ದ ಈತ, ಅಕ್ರಮವಾಗಿ ಹಣ ಸಂಪಾದಿಸಲು ಗಾಂಜಾ ಮಾರಾಟಕ್ಕೆ ಇಳಿದಿದ್ದ. ಎನ್‌ಡಿಪಿಎಸ್ ಕಾಯ್ದೆಯಡಿ ಈತನ ವಿರುದ್ಧ 8 ಪ್ರಕರಣಗಳು ದಾಖಲಾಗಿದ್ದವು’ ಎಂದು ಸಿಸಿಬಿ ಪೊಲೀಸರು ಹೇಳಿದರು.

1,470 ಕೆ.ಜಿ ಪ್ಲಾಸ್ಟಿಕ್ ವಶ

ಬೆಂಗಳೂರು: ದಾಸರಹಳ್ಳಿ ವ್ಯಾಪ್ತಿಯ ರಾಜಗೋಪಾಲನಗರ ವಾರ್ಡ್‌ನಲ್ಲಿ ಬಾಲಾಜಿ ಎಂಟರ್‌ಪ್ರೈಸಸ್ ಕಾರ್ಖಾನೆ ಮೇಲೆ ದಾಳಿ ನಡೆಸಿದ ಬಿಬಿಎಂಪಿ ಅಧಿಕಾರಿಗಳು, 1,470 ಕೆ.ಜಿ ಪ್ಲಾಸ್ಟಿಕ್ ಉತ್ಪನ್ನ ವಶಪಡಿಸಿಕೊಂಡು, ₹25 ಸಾವಿರ ದಂಡ ವಿಧಿಸಿದ್ದಾರೆ. ಘನತ್ಯಾಜ್ಯ ವಿಭಾಗದ 4 ಆಟೊ ಟಿಪ್ಪ-ರ್‌ಗಳಲ್ಲಿ ವಶಪಡಿಸಿಕೊಂಡಿರುವ ನಿಷೇಧಿತ ಪ್ಲಾಸ್ಟಿಕ್ ಅನ್ನು ಚೂರು ಚೂರು ಮಾಡಿ ದೊಡ್ಡಬಿದರಕ-ಲ್ಲು ಘನತ್ಯಾಜ್ಯ ಸಂಸ್ಕರಣಾ ಘಟಕಕ್ಕೆ ವಿಲೇವಾರಿ ಮಾಡಲು ವಲಯ ಜಂಟಿ ಆಯುಕ್ತರು ಸೂಚಿಸಿದರು.

ಜುಲೈ 1ರಿಂದ 29 ರವರೆಗೆ 4,414 ಕಡೆ 10,961.31 ಕೆ.ಜಿ ನಿಷೇಧಿತ ಪ್ಲಾಸ್ಟಿಕ್ ಜಪ್ತಿ ಮಾಡಿ, ₹21.48 ಲಕ್ಷ ದಂಡ ವಿಧಿಸಲಾಗಿದೆ ಎಂದು ಘನತ್ಯಾಜ್ಯವಿಭಾಗದ ಚೀಫ್‌ಮಾರ್ಷಲ್ ರಾಜ್‌ಬಿರ್ ಸಿಂಗ್ ಹೇಳಿದರು.

ಯಲಹಂಕದಲ್ಲಿ ಭಾರತ-ಆಸಿಯಾನ್ ಶೃಂಗಸಭೆ

ಪ್ರಜಾವಾಣಿ ವಾರ್ತೆ

ಯಲಹಂಕ: ಮ್ಯಾನ್ಮಾರ್‌ನಲ್ಲಿ ಹೂಡಿಕೆ ಮಾಡಿರುವ ವಿವಿಧ ದೇಶಗಳ ಪೈಕಿ ಭಾರತವು 11ನೇ ಅತಿದೊಡ್ಡ ಹೂಡಿಕೆದಾರ ದೇಶವಾಗಿದೆ ಎಂದು ಭಾರತದಲ್ಲಿರುವ ಮ್ಯಾನ್ಮಾರ್‌ನ ರಾಯಭಾರಿ ಯುತಮೋಕ್ಯಾವ್ ಆಂಗ್ ಹೇಳಿದರು.

ರೇವಾ ವಿಶ್ವವಿದ್ಯಾಲಯದಲ್ಲಿ ಆಯೋಜಿಸಿದ್ದ ಭಾರತ-ಆಸಿಯಾನ್ ಶೃಂಗಸಭೆಯಲ್ಲಿ ಮಾತನಾಡಿದ ಅವರು, 'ಮ್ಯಾನ್ಮಾರ್ ಸರ್ಕಾರ ಇತ್ತೀಚೆಗೆ 36 ಭಾರತೀಯ ಕಂಪನಿಗಳಿಗೆ ಹೂಡಿಕೆಗೆ ಅನುಮತಿ ನೀಡಿದೆ. ಜುಲೈ 2022ರ ಹೊತ್ತಿಗೆ ಭಾರತೀಯ ಕಂಪನಿಗಳು 71.7 ಕೋಟಿ ಅಮೆರಿಕನ್ ಡಾಲರ್ ಮೊತ್ತವನ್ನು ಮ್ಯಾನ್ಮಾರ್‌ನಲ್ಲಿ ಹೂಡಿಕೆ ಮಾಡಿದ್ದವು. 2020-21ರ ಆರ್ಥಿಕ ವರ್ಷದಲ್ಲಿ ದ್ವಿಪಕ್ಷೀಯ ವ್ಯಾಪಾರ ಹೂಡಿಕೆಯು 1.4 ಶತಕೋಟಿ ಡಾಲ-ರ್‌ಗಳಷ್ಟಿದೆ ಎಂದರು.

ಆಸಿಯಾನ್-ಭಾರತ ಸಂಬಂಧದ 30ನೇ ವರ್ಷಾಚರಣೆ ಹಿನ್ನೆಲೆಯಲ್ಲಿ ಈ ವರ್ಷ ಪ್ರಾಮುಖ್ಯ ಪಡೆದಿದೆ. ಈಶಾನ್ಯ ಏಷ್ಯಾದ ವಿವಿಧ ದೇಶಗಳ ಅಭಿವೃದ್ಧಿಯ ದಿಸೆಯಲ್ಲಿ ಭಾರತ ಸರ್ಕಾರಕ್ಕೆ ಆಸಿಯಾನ್ ಸಂಬಂಧ ಮುಖ್ಯವಾಗಿರು-ತ್ತದೆ ಎಂದು ಹೇಳಿದರು.

ಭಾರತದಲ್ಲಿರುವ ಲಾವೋಸ್‌ನ ರಾಯಭಾರಿ ಬೌನ್ನೆಮೆ ಚೌಂಘೋಮ್ ಮಾತನಾಡಿ, ’ಆಸಿಯಾನ್ ದೇಶಗಳ ಮೂಲಸೌಕರ್ಯ ಅಭಿವೃದ್ಧಿ ಮತ್ತು ದ್ವಿಪಕ್ಷೀಯ ಬಾಂಧವ್ಯ ಸುಧಾರಿಸುವ ನಿಟ್ಟಿನಲ್ಲಿ ಭಾರತ ಸರ್ಕಾರ ಮಹತ್ತರ ಪಾತ್ರ ವಹಿಸುತ್ತಿರುವುದು ಶ್ಲಾಘನೀಯ. ಭವಿಷ್ಯದಲ್ಲಿಯೂ ಈ ಸಹಕಾರ ಮುಂದುವರಿಯಬೇಕೆಂ-ದು ನಾವು ಬಯಸುತ್ತೇವೆ‘ ಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ ರೇವಾ ವಿಶ್ವವಿದ್ಯಾಲಯದ ಕುಲಾಧಿಪತಿ ಡಾ.ಪಿ.ಶ್ಯಾಮರಾಜು ಅವರಿಗೆ ಭಾರತದ ಆಸಿಯಾನ್ ಟ್ರೇಡ್ ಕೌನ್ಸಿಲ್‌ನ ’ಕರ್ನಾಟಕದ ಟ್ರೇಡ್ ಕಮಿಷನರ್‘ ಎಂಬ ಬಿರುದು ನೀಡಿ ಗೌರವಿಸಲಾಯಿತು.

ಭಾರತದಲ್ಲಿರುವ ಕಾಂಬೋಡಿಯಾದ ರಾಯಭಾರಿ ಉಂಗ್ಸೀನ್, ರೇವಾ ವಿಶ್ವವಿದ್ಯಾಲಯದ ಕುಲಪತಿ ಡಾ.ಎಂ.ಧನಂಜಯ ಮತ್ತಿತರರು ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ಉದ್ಯಮ್ ನೋಂದಣಿ ಪ್ರಮಾಣಪತ್ರವನ್ನು ಬಿಡುಗಡೆಗೊಳಿಸಲಾಯಿತು. ಯುತಮೋ ಕ್ಯಾವ್ ಆಂಗ್, ಬೌನ್ನೆಮೆ ಚೌಂಘೋಮ್, ಉಂಗ್ಸೀನ್, ರೇವಾ ವಿಶ್ವವಿದ್ಯಾಲಯದ ಕುಲಾಧಿಪತಿ ಡಾ.ಪಿ.ಶ್ಯಾಮರಾಜು ಮತ್ತಿತರರು ಇದ್ದರು

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಹೊಂಡ.. ನಗರದ ಬಿ.ವಿ.ಕೆ. ಅಯ್ಯಂಗಾರ್ ರಸ್ತೆಯಲ್ಲಿ ಹೊಂಡಗಳ ನಡುವೆ ವಾಹನ ಸವಾರರು ಪರದಾಡಿದರು –ಪ್ರಜಾವಾಣಿ ಚಿತ್ರ/ ಪ್ರಶಾಂತ್ ಎಚ್.ಜಿ.

ಇಬ್ಬರು ಸುಲಿಗೆಕೋರರ ಬಂಧನ

ಮಾಗಡಿ: ವಿಳಾಸ ಕೇಳುವ ನೆಪದಲ್ಲಿ ತಾಲ್ಲೂಕಿನ ಕುದೂರು ಗ್ರಾಮದಲ್ಲಿ ಮಹಿಳೆಯ ಚಿನ್ನದ ಸರ ದೋಚಿದ್ದ ಇಬ್ಬರನ್ನು ಪೊಲೀಸರು ಬಂಧಿಸಿದ್ದಾರೆ. ಜಾಲಹಳ್ಳಿಯ ಬಸವರಾಜು, ರಾಜಾನುಕುಂಟೆ ಹೊನ್ನೆನಹಳ್ಳಿಯ ಮಂಜುನಾಥ್ ಬಂಧಿತರು.

ಪಿ.ಎಂ. ಪೋಷಣ್ ಶಕ್ತಿ ನಿರ್ಮಾಣ್
ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯತ್, ಕೊಠಡಿ ಸಂಖ್ಯೆ 201, ಎರಡನೇ ಮಹಡಿ, ಜಿಲ್ಲಾ ಭವನ, ಬೀರಸಂದ್ರ ಗ್ರಾಮ, ದೇವನಹಳ್ಳಿ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ – 562110. ಇಮೇಲ್: eomdmbanrural21@gmail.com
ಸಂಖ್ಯೆ : ಜಿ.ಪಂ.ಬೆಂ.ಗ್ರಾ./ಅ.ದಾ./ಆ.ಧಾ.ಸಾ./ಟೆಂಡರ್/03/2022–23
ದಿನಾಂಕ : 29–07–2022

ಟೆಂಡರ್ ಪ್ರಕಟಣೆ

ಪಿ.ಎಂ. ಪೋಷಣ್ ಶಕ್ತಿ ನಿರ್ಮಾಣ್ ಯೋಜನೆಯಡಿ 2022–23 ಹಾಗೂ 2023–24 ನೇ ಸಾಲಿಗೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿ, ದೊಡ್ಡಬಳ್ಳಾಪುರ, ಹೊಸಕೋಟೆ ಮತ್ತು ನೆಲಮಂಗಲ ತಾಲ್ಲೂಕಿನ ಕೆ.ಎಫ್.ಸಿ.ಎಸ್.ಸಿ. ಗೋದಾಮಿನಿಂದ ತಾಲ್ಲೂಕುವಾರು ಶಾಲಾ ಅಡುಗೆ ಕೇಂದ್ರಗಳಿಗೆ ಆಹಾರ ಧಾನ್ಯಗಳನ್ನು ಸರಬರಾಜು ಮಾಡಲು ಎರಡು ವರ್ಷದ ಅವಧಿಗೆ ಅಲ್ಪಾವಧಿ ಇ–ಟೆಂಡರ್ ಕರೆಯಲಾಗಿದೆ. ಟೆಂಡರ್‌ನ ಅಂದಾಜು ಮೊತ್ತ ರೂ. 40 ಲಕ್ಷಗಳು. ಟೆಂಡರ್ ವಿವರಗಳನ್ನು ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ : http://eproc.karnataka.gov.in ನಲ್ಲಿ ಪಡೆಯಬಹುದು. ಇ–ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : 19–08–2022 ರ ಸಂಜೆ 4.00 ಗಂಟೆಗೆ. ಹೆಚ್ಚಿನ ವಿವರಗಳಿಗಾಗಿ 98802 61594 / 63616 93525 ನಲ್ಲಿ ಸಂಪರ್ಕಿಸಬಹುದು.

ಸಹಿ/– ಶಿಕ್ಷಣಾಧಿಕಾರಿಗಳು,
ಪಿ.ಎಂ. ಪೋಷಣ್ ಶಕ್ತಿ ನಿರ್ಮಾಣ್,
ಬೆಂಗಳೂರು ಗ್ರಾಮಾಂತರ ಜಿಲ್ಲೆ.

ವಾಸಾಸಂಇ/ಉನಿಕ/ಬೆಂಗ್ರಾಜಿ/ಮಣಿಪಾಲ್/1575/2021–22

ರಾಮನಗರ ಜಿಲ್ಲಾ ಪಂಚಾಯತ್
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ
ರಾಮನಗರ ವಿಭಾಗ, ರಾಮನಗರ.
ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ ಸಂಖ್ಯೆ : 17/ಕಾಅ/ಗ್ರಾ.ಕು.ನೀ.&ನೈ.ವಿ/ರಾ/ಟೆಂಡರ್/ಸ.ಇಂ.–1/946/2022–23 ದಿನಾಂಕ : 30–07–2022

ಟೆಂಡರ್ ಪ್ರಕಟಣೆ

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕರ್ನಾಟಕ ಪಾರದರ್ಶಕತೆ ಅಧಿನಿಯಮ 2000 ರ ಪ್ರಕಾರ ರಾಮನಗರ ಜಿಲ್ಲೆಯ ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿನ ಗ್ರಾಮೀಣ ಪ್ರದೇಶದಲ್ಲಿ ಜೆಜೆಎಂ ಯೋಜನೆಯಡಿಯಲ್ಲಿ ಅನುಮೋದನೆಗೊಂಡಿರುವ ರಾಮನಗರ ಜಿಲ್ಲೆಯ ಮಾಗಡಿ ತಾಲ್ಲೂಕಿನ ಕುಡಿಯುವ ನೀರು ಸರಬರಾಜು ಯೋಜನೆಯ ಕಾಮಗಾರಿಗಳನ್ನು ನಿರ್ವಹಿಸಲು ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್‌ಗಳನ್ನು ಅಧಿಕೃತ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ ಗುತ್ತಿಗೆದಾರರಿಂದ ಆಹ್ವಾನಿಸಲಾಗಿದೆ. ವಿವರಗಳು ಕಾಮಗಾರಿಗಳನ್ನು ನಿರ್ವಹಿಸಲು ಈ ಕೆಳಕಂಡಂತಿವೆ.

1) ಗರಿಷ್ಠ ಟೆಂಡರ್‌ಗಿಟ್ಟ ಮೊತ್ತ : ರೂ. 41.91 ಲಕ್ಷಗಳು. ಇ.ಎಂ.ಡಿ. ಮೊತ್ತ : ರೂ. 42,000.00/–. 2) ಕನಿಷ್ಠ ಟೆಂಡರ್‌ಗಿಟ್ಟ ಮೊತ್ತ : ರೂ. 16.18 ಲಕ್ಷಗಳು. ಇ.ಎಂ.ಡಿ. ಮೊತ್ತ : ರೂ. 20,500.00/–. 3) ಕಾಲಾವಧಿ : 03 ತಿಂಗಳು. 4) ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ದರಗಳನ್ನು ನಮೂದಿಸಿ ಸಲ್ಲಿಸಲು ಕೊನೆಯ ದಿನಾಂಕ : 16–08–2022 ರ ಸಂಜೆ 5.30 ಗಂಟೆಯವರೆಗೆ. 5) ಬಿಡ್ ತೆರೆಯುವ ದಿನಾಂಕ : 18–08–2022 ರ ಬೆಳಿಗ್ಗೆ 11.00 ಗಂಟೆಯ ನಂತರ.

ಮೇಲ್ಕಾಣಿಸಿದ ದಿನವೇನಾದರೂ ಸಾರ್ವತ್ರಿಕ ರಜಾ ದಿನವಾದಲ್ಲಿ ಮುಂದಿನ ದಿನವನ್ನು ಗಣನೆಗೆ ತೆಗೆದುಕೊಳ್ಳಲಾಗುವುದು. ಟೆಂಡರ್ ಕಾಮಗಾರಿಗಳ ವಿವರ ಹಾಗೂ ನಿಯಮಾವಳಿಗಳನ್ನು ಒಳಗೊಂಡಿರುವ ಮಾಹಿತಿಗೆ ಈ ಕಛೇರಿಯ ಇಲಾಖೆ ವೆಬ್‌ಸೈಟ್ : www.eproc.karnataka.gov.in ರಲ್ಲಿ ಪಡೆಯಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು,
ಗ್ರಾಮೀಣ ಕುಡಿಯುವ ನೀರು & ನೈರ್ಮಲ್ಯ ಇಲಾಖೆ,
ರಾಮನಗರ ವಿಭಾಗ, ರಾಮನಗರ.

ಡಿಐಪಿಆರ್/ರಾಮನಗರ/151/ಮಣಿಪಾಲ್/2022–23

‘ವಿದ್ಯುತ್ ಬಾಕಿ ಪಾವತಿಸಿ’

ನವದೆಹಲಿ: ರಾಜ್ಯ ಸರ್ಕಾರಗಳು ಉಳಿಸಿಕೊಂಡಿರುವ ವಿದ್ಯುತ್ ಬಾಕಿ ₹ 2.5 ಲಕ್ಷ ಕೋಟಿ ತಲುಪಿದ್ದು, ಇಂಧನ ಕ್ಷೇತ್ರವನ್ನು ಬಲಪಡಿಸಲು ಈ ಮೊತ್ತವನ್ನು ಶೀಘ್ರ ಪಾವತಿಸುವಂತೆ ರಾಜ್ಯಗಳಿಗೆ ಪ್ರಧಾನಿ ನರೇಂದ್ರ ಮೋದಿ ಮನವಿ ಮಾಡಿದ್ದಾರೆ.

'ಉಜ್ವಲ್ ಭಾರತ್ ಉಜ್ವಲ್ ಭವಿಷ್ಯ - ಪವರ್ @2047' ಕಾರ್ಯಕ್ರಮದ ಸಮಾರೋಪದಲ್ಲಿ ಮಾತನಾಡಿದ ಅವರು, ವಿದ್ಯುತ್ ಸರಬರಾಜಿಗಾಗಿ ವಿದ್ಯುತ್ ಉಪಯು-ಕ್ತತೆಗಾಗಿ ವಿವಿಧ ರಾಜ್ಯಗಳು 1 ಲಕ್ಷ ಕೋಟಿಗೂ ಹೆಚ್ಚು ಮೊತ್ತವನ್ನು ಉಳಿಸಿಕೊಂಡಿವೆ ಎಂದು ಹೇಳಿದರು.

ಸಂಕ್ಷಿಪ್ತ ಸುದ್ದಿ

ಪ್ರಸಾದ ತಿಂದ 200 ಮಂದಿ ಅಸ್ವಸ್ಥ

ಕನಕಪುರ: ತಾಲ್ಲೂಕಿನ ಮರಳವಾಡಿ ಹೋಬಳಿಯ ಪಡುವಣಗೆರೆಯಲ್ಲಿ ಭೀಮನ ಅಮಾವಾಸ್ಯೆ ಪ್ರಯುಕ್ತ ದೇವಾಲಯದಲ್ಲಿ ಮಾಡಿದ್ದ ಪ್ರಸಾದ ಸೇವಿಸಿದ 200ಕ್ಕೂ ಹೆಚ್ಚು ಜನರು ಅಸ್ವಸ್ಥಗೊಂಡಿದ್ದಾರೆ.

ಗ್ರಾಮದ ದೇಗುಲ ಮಠದ ಗದ್ದುಗೆ ದೇವಸ್ಥಾನದಲ್ಲಿ ಗುರುವಾರ ಸಿಹಿ ಅನ್ನ ಮತ್ತು ಪಲಾವ್ ಮಾಡಲಾಗಿತ್ತು. ಪ್ರಸಾದ ತಿಂದವರಿಗೆ ನಿಧಾನವಾಗಿ ಗುರುವಾರ ರಾತ್ರಿ ಮತ್ತು ಶುಕ್ರವಾರ ಬೆಳಿಗ್ಗೆ ಆರೋಗ್ಯದಲ್ಲಿ ವ್ಯತ್ಯಯ ಕಾಣಿಸಿಕೊಂಡಿದೆ. ವಾಂತಿ, ಬೇಧಿ, ಮೈಕೈ ನೋವು, ಚಳಿ, ಜ್ವರಕ್ಕೆ ತುತ್ತಾಗಿದ್ದಾರೆ.

‘ಮಾಹಿತಿ ಬಂದ ತಕ್ಷಣ ಗ್ರಾಮಕ್ಕೆ ಭೇಟಿ ನೀಡಿ ಪರಿಶೀಲಿಸಲಾಯಿತು. ಗ್ರಾಮದಲ್ಲಿ ಪೂರೈಕೆಯಾಗುವ ನೀರನ್ನು ಪರೀಕ್ಷೆ ಮಾಡಿಸಿದ್ದು ಅದರಲ್ಲಿ ಯಾವುದೇ ಸಮಸ್ಯೆ ಕಂಡಿಲ್ಲ’ ಎಂದು ಟಿ. ಹೊಸಳ್ಳಿ ಗ್ರಾಮ ಪಂಚಾಯಿತಿ ಪಿಡಿಒ ಸತೀಶ್ ತಿಳಿಸಿದರು.

ಸಿದ್ಧರಾಮೋತ್ಸವ: ಲಕ್ಷ ಕುರಿಗಾರರು

ಹರಪನಹಳ್ಳಿ (ವಿಜಯನಗರ ಜಿಲ್ಲೆ): ‘ದಾವಣಗೆರೆಯಲ್ಲಿ ಆ.3ರಂದು ನಡೆಯುತ್ತಿರುವ ಸಿದ್ದರಾಮೋತ್ಸವಕ್ಕೆ ಒಂದು ಲಕ್ಷ ಕುರಿಗಾರರು ಸೇರಲಿದ್ದಾರೆ’ ಎಂದು ಕುರಿ ಮತ್ತು ಮೇಕೆ ಮಹಾಮಂಡಳದ ರಾಜ್ಯ ನಿರ್ದೇಶಕ ಪಂಡಿತರಾವ್ ಚಿದ್ರಿ ಶನಿವಾರ ತಿಳಿಸಿದರು.

ಮೂರು ಗೋ ಶಾಲೆಗೆ ಚಾಲನೆ

ಪ್ರಜಾವಾಣಿ ವಾರ್ತೆ

ದಾಬಸ್ ಪೇಟೆ: ಪಶುಪಾಲನೆ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ ಸಹಯೋಗದಲ್ಲಿ ಕರ್ನಾಟಕ ಸರ್ಕಾರದ ಗೋರಕ್ಷಣೆ ಮತ್ತು ಪುಣ್ಯ ಕೋಟಿ ದತ್ತು ಯೋಜನೆಯಡಿ ಬೆಂಗಳೂರು ಗ್ರಾಮಾಂತರ ಜಿಲ್ಲೆ, ನೆಲಮಂಗಲ ತಾಲ್ಲೂಕಿನ ಮೂರು ಗೋ ಶಾಲೆಗಳಿಗೆ ಡಿಜಿಟಲ್ ಪೋರ್ಟ್ ಅಡಿ ಚಾಲನೆ ನೀಡಲಾಗಿದೆ.

ಸೋಂಪುರ ಹೋಬಳಿಯ ಕಂಬಾಳುವಿನ ಓಂಕಾರ ಗೋಶಾಲೆ, ಶಿವಗಂಗೆಯ ಸ್ವರ್ಣಾಂಬ ಗೋಶಾಲೆ ಹಾಗೂ ವನಕಲ್ಲು ಮಠದ ವನಕಲ್ಲು ಗೋಶಾಲೆಗಳನ್ನು ಪುಣ್ಯ ಕೋಟಿ ದತ್ತು ಯೋಜನೆಯಡಿ ನೋಂದಾಯಿಸಲಾಗಿದೆ. ಒಂದು ಗೋವಿಗೆ ವರ್ಷಕ್ಕೆ ₹11 ಸಾವಿರ ದೇಣಿಗೆ ನೀಡಿ ದತ್ತು ಪಡೆದು ಅದರ ಲಾಲನೆ-ಪಾಲನೆ ಮಾಡಬಹುದು. ಕನಿಷ್ಠ ಹತ್ತು ರೂಪಾಯಿಯಿಂದ ಹಿಡಿದು, ಜನರು ತಮ್ಮ ಶಕ್ತ್ಯಾನುಸಾರ ದೇಣಿಗೆ ನೀಡಲು ಅವಕಾಶವಿದೆ.

ದಾಬಸ್ ಪೇಟೆ ಪಟ್ಟಣದ ಎಸ್‌ಆರ್‌ಎಸ್ ಶಾಲೆಯ ಮಾಲೀಕರಾದ ರಿಷವಂತ್ ರಾಮ್ ಅವರು ಕಂಬಾಳುವಿನ ಓಂಕಾರ್ ಗೋಶಾಲೆಯಲ್ಲಿ ಮೇಲಣ ಗವಿಮಠದ ಮಲಯ ಶಾಂತವೀರ ಸ್ವಾಮೀಜಿ ನೇತೃತ್ವದಲ್ಲಿ ಹನ್ನೊಂದು ಸಾವಿರ ರೂಪಾಯಿ ದೇಣಿಗೆ ನೀಡುವ ಮೂಲಕ ರಾಸು ಒಂದನ್ನು ದತ್ತು ಪಡೆದುಕೊಂಡರು.

ಪಶುಪಾಲನೆ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ ಸಹಯೋಗದಲ್ಲಿ ಇಲಾಖೆಯ ಉಪನಿರ್ದೇಶಕ ಡಾ. ಜಿ.ಎಂ. ನಾಗರಾಜ್, ಸಹಾಯಕ ನಿರ್ದೇಶಕ ಡಾ. ಎಚ್.ಸಿದ್ದಪ್ಪ, ಪಶುವೈದ್ಯಾಧಿಕಾ-ರಿ ಡಾ. ಬಾಲಸುಬ್ರಹ್ಮಣ್ಯ, ಪಶುವೈದ್ಯ ಪರೀಕ್ಷಕ ಬಿ.ಎಸ್.ಬಸವರಾಜು ಇದ್ದರು.



ರಾಸು ದತ್ತು ಪಡೆದ ರಿಷವಂತ್ ರಾಮ್ ಮಲಯ ಶಾಂತವೀರ ಸ್ವಾಮೀಜಿ, ಪಶುಪಾಲನೆ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ ಉಪ ನಿರ್ದೇಶಕ ಡಾ. ಜಿ.ಎಂ.ನಾಗರಾಜ್, ಸಹಾಯಕ ನಿರ್ದೇಶಕ ಡಾ. ಎಚ್.ಸಿದ್ದಪ್ಪ, ಪಶುವೈದ್ಯಾಧಿಕಾರಿ ಡಾ. ಬಾಲಸುಬ್ರಹ್ಮಣ್ಯ, ಪಶುವೈದ್ಯ ಪರೀಕ್ಷಕ ಬಿ.ಎಸ್.ಬಸವರಾಜು ಇದ್ದರು

ಹೆಸರಘಟ್ಟ: ಪ್ರಸ್ತಾವ ಮರು ಪರಿಶೀಲಿಸಿ – ಹೈಕೋರ್ಟ್

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಪ್ರಸ್ತಾವ ಕೈಬಿಡಲು 2021, ಜನವರಿ 19ರ ಸಭೆಯಲ್ಲಿ ನಿರ್ಧಾರ
- ನ್ಯಾ. ಅಲೋಕ್ ಆರಾಧೆ ನೇತೃತ್ವದ ವಿಭಾಗೀಯ ನ್ಯಾಯಪೀಠದಿಂದ ಆದೇಶ
- ಕರ್ನಾಟಕ ರಾಜ್ಯ ವನ್ಯಜೀವಿ ಮಂಡಳಿಗೆ ನಿರ್ದೇಶನ

ಬೆಂಗಳೂರು: 'ಹೆಸರಘಟ್ಟ ಸುತ್ತಮುತ್ತಲಿನ ಸುಮಾರು 5 ಸಾವಿರ ಎಕರೆ ಪ್ರದೇಶವನ್ನು ಗ್ರೇಟರ್ ಹೆಸರುಘಟ್ಟ ಹುಲ್ಲುಗಾವಲು ಸಂರಕ್ಷಿತ ಪ್ರದೇಶ ಎಂದು ಘೋಷಿಸುವ ಪ್ರಸ್ತಾವವನ್ನು ಕೈಬಿಡುವ ನಿರ್ಧಾರವನ್ನು ಪುನರ್ ಪರಿಶೀಲಿಸಿ' ಎಂದು ಹೈಕೋರ್ಟ್, ಕರ್ನಾಟಕ ರಾಜ್ಯ ವನ್ಯಜೀವಿ ಮಂಡಳಿಗೆ (ಕೆಎಸ್‌ಬಿಡಬ್ಲ್ಯುಎಲ್) ನಿರ್ದೇಶಿಸಿದೆ.

ಕೈಬಿಡುವ ನಿರ್ಧಾರ ಪ್ರಶ್ನಿಸಿ ಬೆಂಗಳೂರಿನ ಜಯನಗರದ ವಿಜಯ್ ನಿಶಾಂತ್, ದೇವನಹಳ್ಳಿಯ ಎಂ.ಆರ್. ಸೀತಾರಾಂ ಸೇರಿ ನಾಲ್ವರು ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿ ವಿಚಾರಣೆ ನಡೆಸಿದ ಹಂಗಾಮಿ ಮುಖ್ಯ ನ್ಯಾಯಮೂರ್ತಿ ಅಲೋಕ್ ಆರಾಧೆ ನೇತೃತ್ವದ ವಿಭಾಗೀಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

'ಬೆಂಗಳೂರು ನಗರಕ್ಕೆ ಆತು ಕೊಂಡಿರುವ ಈ ಪ್ರದೇಶವು ಸಮೃದ್ಧ ಸಸ್ಯ ಸಂಪತ್ತು ಹೊಂದಿದೆ. ಇಲ್ಲಿ ಅನೇಕ ಪ್ರಭೇದಗಳ ಪ್ರಾಣಿ, ಪಕ್ಷಿ ಮತ್ತು ಕೀಟಗಳಿವೆ. ಚಳಿಗಾಲದಲ್ಲಿ ಹಿಮಾಲಯ, ಮಧ್ಯ ಏಷ್ಯಾದಿಂದ ಪಕ್ಷಿಗಳು ವಲಸೆ ಬರುತ್ತವೆ' ಎಂಬ ಅಂಶವನ್ನು ನ್ಯಾಯಪೀಠ ಆದೇಶದಲ್ಲಿ ಉಲ್ಲೇಖಿಸಿದೆ.

ಹೆಸರುಘಟ್ಟ ಸುತ್ತಮುತ್ತಲಿನ ಸುಮಾರು 5 ಸಾವಿರ ಎಕರೆ ಪ್ರದೇಶವನ್ನು ಗ್ರೇಟರ್ ಹೆಸರುಘಟ್ಟ ಹುಲ್ಲುಗಾವಲು ಸಂರಕ್ಷಿತ ಪ್ರದೇಶ ಎಂದು ಘೋಷಿಸುವ ಪ್ರಸ್ತಾವವನ್ನು ಕೈಬಿಡಲು ಕರ್ನಾಟಕ ರಾಜ್ಯ ವನ್ಯಜೀವಿ ಮಂಡಳಿ 2021ರ ಜನವರಿ 19ರಂದು ನಡೆಸಿದ ಸಭೆಯಲ್ಲಿ ತೀರ್ಮಾನಿಸಿತ್ತು. ಇದನ್ನು ಅರ್ಜಿದಾರರು ಪ್ರಶ್ನಿಸಿದ್ದರು.

'ಹೆಸರಘಟ್ಟ ಸುತ್ತಮುತ್ತಲಿನ ಸುಮಾರು 5 ಸಾವಿರ ಎಕರೆ ಪ್ರದೇಶವು ಗ್ರೇಟರ್ ಹೆಸರಘಟ್ಟ ಹುಲ್ಲುಗಾವಲು ಸಂರಕ್ಷಿತ ಪ್ರದೇಶವಾಗಿದೆ. ಈ ಘೋಷಿತ ಪ್ರಸ್ತಾವನೆಯಿಂದ ಹಿಂದೆ ಸರಿಯುವ ಸರ್ಕಾರದ ನಿರ್ಧಾರವು ವನ್ಯಜೀವಿ ಸಂರಕ್ಷಣಾ ಕಾಯ್ದೆ–1972ರ ಕಲಂ 36–ಎ ಗೆ ವಿರುದ್ಧವಾಗಿದೆ' ಎಂದು ಅರ್ಜಿದಾರರು ಆಕ್ಷೇಪಿಸಿದ್ದರು.

'ದಿ ಲೈಫ್ ಆ್ಯಂಡ್ ಟೈಮ್ಸ್ ಆಫ್ ಯು.ಆರ್‌.ರಾವ್' ಪುಸ್ತಕ ಬಿಡುಗಡೆ • ಡಾ.ಎಂ.ಅಣ್ಣಾ ದೊರೆ ಹೇಳಿಕೆ

ಚಂದ್ರನ ಅಂಗಳದಲ್ಲಿ ಬಾಹ್ಯಾಕಾಶ ನಿಲ್ದಾಣ

ಪ್ರಜಾವಾಣಿ ವಾರ್ತೆ



ನಗರದಲ್ಲಿ ಶನಿವಾರ ನಡೆದ ಸಮಾರಂಭದಲ್ಲಿ ಯು.ಆರ್‌.ರಾವ್ ಸ್ಯಾಟಲೈಟ್ ಸೆಂಟರ್‌ನ ಮಾಜಿ ನಿರ್ದೇಶಕ ಎಂ. ಅಣ್ಣಾ ದೊರೆ (ಎಡದಿಂದ ನಾಲ್ಕನೆಯವರು) ಪತ್ರಕರ್ತ ಪ್ರಶಾಂತ್‌ಜಿ.ಎನ್ (ಎಡದಿಂದ ಐದನೆಯವರು) ಅವರ 'ದಿ ಲೈಫ್ ಆ್ಯಂಡ್ ಟೈಮ್ಸ್ ಆಫ್ ಯು.ಆರ್‌.ರಾವ್' ಪುಸ್ತಕವನ್ನು ಲೋಕಾರ್ಪಣೆ ಮಾಡಿದರು. (ಎಡದಿಂದ) 'ನಾಕುತಂತಿ' ಪ್ರಕಾಶಕ ಬಿ.ಸುರೇಶ್, ಯು.ಆರ್‌.ರಾವ್ ಅವರ ಮಗ ಮದನ್ ರಾವ್, ತಮ್ಮ ಗೋವಿಂದ ರಾವ್ ಮತ್ತು ಮಗಳು ಮಾಲಾ ರಾವ್ ಇದ್ದರು – ಪ್ರಜಾವಾಣಿ ಚಿತ್ರ

ಬೆಂಗಳೂರು: 'ಹಲವು ರಾಷ್ಟ್ರಗಳೊಂದಿಗೆ ಒಗ್ಗೂಡಿ ಚಂದ್ರನ ಅಂಗಳದಲ್ಲಿ ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣ ಸ್ಥಾಪಿಸಲು ಯೋಜನೆ ರೂಪಿಸಲಾಗಿದೆ' ಎಂದು ಇಸ್ರೊ ಯು.ಆರ್.ರಾವ್ ಉಪಗ್ರಹ ಕೇಂದ್ರದ ಮಾಜಿ ನಿರ್ದೇಶಕ ಡಾ. ಎಂ.ಅಣ್ಣಾ ದೊರೆ ತಿಳಿಸಿದರು.

'ದಿ ಲೈಫ್ ಆ್ಯಂಡ್ ಟೈಮ್ಸ್ ಆಫ್ ಯು. ಆರ್. ರಾವ್' ಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು ಈ ಯೋಜನೆಯಲ್ಲಿ ಭಾರತ ಪ್ರಮುಖ ಪಾತ್ರ ವಹಿಸಲಿದೆ ಎಂದು ತಿಳಿಸಿದರು.

ಕನಿಷ್ಠ ಬಾಹ್ಯಾಕಾಶದಲ್ಲಿಯಾದರೂ ಯಾವುದೇ ರೀತಿಯ ಗಡಿಗಳು ಇರಬಾರದು ಎನ್ನುವ ಚಿಂತನೆಯೊಂದಿಗೆ ಈ ಯೋಜನೆಯನ್ನು ರೂಪಿಸಲಾಗಿದೆ. ವಿಜ್ಞಾನಿಗಳ ಸಮೂಹದ ಆಶಯಕ್ಕೆ ಪ್ರಮುಖ ರಾಷ್ಟ್ರಗಳು ಬೆಂಬಲ ನೀಡಿವೆ. ವಿಜ್ಞಾನಿಗಳು ಈ ಯೋಜನೆಯನ್ನು ಯಶಸ್ವಿಗೊಳಿಸಲು ಶ್ರಮಿಸುತ್ತಿದ್ದಾರೆ ಎಂದು ಅವರು ವಿವರಿಸಿದರು.

'ಯು.ಆರ್.ರಾವ್ ಅವರು ಬೆಂಗಳೂರಿನಲ್ಲಿ ಇಸ್ರೊ ಉಪಗ್ರಹ ಕೇಂದ್ರ ನಿರ್ಮಿಸುವಲ್ಲಿ ಮಹತ್ವದ ಪಾತ್ರವನ್ನು ವಹಿಸಿದ್ದರು' ಎಂದು ಅವರು ನೆನಪಿಸಿಕೊಂಡರು.

ಯು.ಆರ್. ರಾವ್ ಅವರ ತಮ್ಮ ಮತ್ತು ರಾಷ್ಟ್ರೀಯ ಸಾರ್ವಜನಿಕ ಹಣಕಾಸು ಮತ್ತು ನೀತಿಯ ಮಾಜಿ ನಿರ್ದೇಶಕ ಡಾ.ಎಂ.ಗೋವಿಂದರಾವ್ ಅವರು, ಯು.ಆರ್.ರಾವ್ ಅವರ ಬಾಲ್ಯ ಮತ್ತು ಜೀವನದಲ್ಲಿ ಎದುರಿಸಿದ ಕಷ್ಟ ಮತ್ತು ಸವಾಲುಗಳನ್ನು ಭಾವನಾತ್ಮಕವಾಗಿ ವಿವರಿಸಿದರು.

ಈ ಕೃತಿಯು ಇತರರಿಗೆ ಸ್ಫೂರ್ತಿಯಾಗಲಿದೆ. ಯು.ಆರ್.ರಾವ್ ಅವರು ಎಂದು ಅನುಕಂಪವನ್ನು ಬಯಸಲಿಲ್ಲ. ವಿಜ್ಞಾನಿಯ ಗೌರವ ಮಾತ್ರ ತಮಗೆ ಸಿಗಬೇಕು ಎಂದು ಬಯಸಿದ್ದರು ಎಂದು ಸ್ಮರಿಸಿದರು.

ನಾಲ್ಕು ತಂತಿ ಪ್ರಕಾಶನದ ಬಿ.ಸುರೇಶ್ ಅವರು, 'ಈ ಪುಸ್ತಕವನ್ನು ಪ್ರಕಟಿಸುವ ಮೂಲಕ ಯು.ಆರ್. ರಾವ್ ಅವರ ಋಣ ತೀರಿಸುವ ಪ್ರಯತ್ನ ಮಾಡಿದ್ದೇವೆ. ಒಬ್ಬ ಸಾಧಕನ ಕಥೆಯನ್ನು ಜನರಿಗೆ ತಲುಪಿಸಿದ ತೃಪ್ತಿ ಇದೆ. ಇಂದಿನ ಸನ್ನಿವೇಶದಲ್ಲಿ ವೈಚಾರಿಕ, ವೈಜ್ಞಾನಿಕ ಮನೋಭಾವ ಸೃಷ್ಟಿಸುವುದು ಅಗತ್ಯವಾಗಿದೆ' ಎಂದು ಪ್ರತಿಪಾದಿಸಿದರು.

ಕೃತಿ ಕುರಿತು

ಬಾಹ್ಯಾಕಾಶ ಸಂಶೋಧನಾ ಕ್ಷೇತ್ರದಲ್ಲಿ ಭಾರತದ ಛಾಪು ಮೂಡಿಸುವಲ್ಲಿ ಪ್ರೊ. ಯು.ಆರ್.ರಾವ್ ಅವರು ವಹಿಸಿದ ಮಹತ್ವದ ಪಾತ್ರ ಮತ್ತು ಕಾರ್ಯಗಳನ್ನು ಕೃತಿಯಲ್ಲಿ ಅನಾವರಣಗೊಳಿಸಲಾಗಿದೆ.

ಇಸ್ರೊದ ಹಲವು ಮಹತ್ವದ ಯೋಜನೆಗಳನ್ನು ರಾವ್ ಅವರು ಯಶಸ್ವಿಗೊಳಿಸಿದ್ದಾರೆ. ರಾವ್ ಅವರು ವೈಯಕ್ತಿಕ, ವೃತ್ತಿಪರ ಸಾಧನೆಗಳನ್ನು ಬಿಂಬಿಸಲಾಗಿದೆ. ಬಾಹ್ಯಾಕಾಶ ಸಂಶೋಧನೆಯಲ್ಲಿ ರಾವ್ ಭಾರತ ಮಹತ್ವದ ಸ್ಥಾನ ಪಡೆಯುವಲ್ಲಿ ಯಶಸ್ವಿಯಾಗಲು ಕಾರಣಗಳನ್ನು ವಿಶ್ಲೇಷಿಸಲಾಗಿದೆ.

ಬಾಹ್ಯಾಕಾಶ ನೀತಿಯನ್ನು ರೂಪಿಸುವಲ್ಲಿ ರಾವ್ ಅವರು ಪ್ರಮುಖ ಪಾತ್ರ ವಹಿಸಿದ್ದನ್ನು ಉಲ್ಲೇಖಿಸಲಾಗಿದೆ. ರಾವ್ ಅವರ ಸಹೋದರ ಮತ್ತು ರಾಷ್ಟ್ರೀಯ ಸಾರ್ವಜನಿಕ ಹಣಕಾಸು ಮತ್ತು ನೀತಿ ಸಂಸ್ಥೆಯ ಮಾಜಿ ನಿರ್ದೇಶಕ ಡಾ.ಎಂ. ಗೋವಿಂದರಾವ್ ಅವರು ಮುನ್ನುಡಿ ಬರೆದಿದ್ದಾರೆ.

ಪುಸ್ತಕ ಪರಿಚಯ

ಪುಸ್ತಕ: 'ದಿ ಲೈಫ್ ಆ್ಯಂಡ್ ಟೈಮ್ಸ್ ಆಫ್ ಯು. ಆರ್. ರಾವ್'
ಲೇಖಕರು: ಜಿ.ಎನ್. ಪ್ರಶಾಂತ್
ಪ್ರಕಾಶನ: ನಾಕುತಂತಿ
ಪುಟಗಳು: 222
ಬೆಲೆ: ₹ 250

ಕಿರಿಯ ಸಹಾಯಕ ಹುದ್ದೆಗಳ ನೇಮಕ: ಶುಲ್ಕ ಪಾವತಿಸದಿರುವುದು ಕಾರಣ

ಕೆಪಿಟಿಸಿಎಲ್: 1.22 ಲಕ್ಷ ಅರ್ಜಿ ತಿರಸ್ಕೃತ

• ಚಂದ್ರಹಾಸ ಹಿರೇಮಳಲಿ

ಬೆಂಗಳೂರು: ಶುಲ್ಕ ಪಾವತಿಸದ ಕಾರಣಕ್ಕಾಗಿ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮದ (ಕೆಪಿಟಿಸಿಎಲ್) ಕಿರಿಯ ಸಹಾಯಕ ಹುದ್ದೆಗಳ ನೇಮಕಾತಿಗಾಗಿ ಸಲ್ಲಿಕೆಯಾದ 1.22 ಲಕ್ಷ ಅರ್ಜಿಗಳು ತಿರಸ್ಕೃತವಾಗಿವೆ.

360 ಖಾಲಿ ಹುದ್ದೆಗಳ ನೇಮಕಾತಿಗೆ 4.12 ಲಕ್ಷ ಅರ್ಜಿಗಳು ಸಲ್ಲಿಕೆಯಾಗಿದ್ದವು. ಅವುಗಳಲ್ಲಿ 1,22,857 ಅರ್ಜಿಗಳು ತಿರಸ್ಕೃತವಾಗಿವೆ. ತಿರಸ್ಕೃತರಲ್ಲಿ ಶೇ 99 ಅಭ್ಯರ್ಥಿಗಳು ಅರ್ಜಿ ಜತೆಗೆ ನಿಗದಿಪಡಿಸಿದ್ದ ಕನಿಷ್ಠ ಶುಲ್ಕ ಪಾವತಿ ಸಿಲ್ಲ. ಪ್ರತಿ ಅರ್ಜಿಗೆ ಸಾಮಾನ್ಯ ಮತ್ತು ಹಿಂದುಳಿದ ವರ್ಗದ ಅಭ್ಯರ್ಥಿಗಳು ₹ 500, ಪರಿಶಿಷ್ಟ ಸಮುದಾಯ ಅಭ್ಯರ್ಥಿಗಳಿಗೆ ₹ 250 ಶುಲ್ಕ ನಿಗದಿ ಮಾಡಲಾಗಿತ್ತು. ಜಾತಿ ಪ್ರಮಾಣಪತ್ರ, ಹೈದರಾಬಾದ್-ಕರ್ನಾಟಕ ಪ್ರಮಾಣ ಪತ್ರ ಸಲ್ಲಿಸದಿರುವ ಕಾರಣಕ್ಕೆ ಕೆಲವು ಅರ್ಜಿಗಳು ತಿರಸ್ಕೃತವಾಗಿವೆ. ಪಟ್ಟಿ ಯನ್ನು ನೇಮಕಾತಿ ಪ್ರಾಧಿಕಾರವಾದ ಕರ್ನಾಟಕ ಪರೀಕ್ಷಾ ಪ್ರಾಧಿಕಾರಕ್ಕೆ (ಕೆಇಎ) ಕೆಪಿಟಿಸಿಎಲ್ ನೀಡಿದ್ದು, ಆ.7ರಂದು ರಾಜ್ಯದ 45 ಕೇಂದ್ರಗಳಲ್ಲಿ ಪರೀಕ್ಷೆಗಳು ನಡೆಯಲಿವೆ.

ಕೆಪಿಟಿಸಿಎಲ್ ಜೆಇ ಮತ್ತು ಎಇ ಹುದ್ದೆಗಳ ಆಯ್ಕೆಗಾಗಿ ಇದೇ ತಿಂಗಳು 23, 24ರಂದು ನಡೆದಿದ್ದ ನೇಮಕಾತಿ ಪರೀಕ್ಷಾ ಪ್ರಕ್ರಿಯೆಯಲ್ಲೂ 30,933 ಅರ್ಜಿಗಳು ತಿರಸ್ಕೃತಗೊಂಡಿದ್ದವು.

ಪರೀಕ್ಷೆಗೆ ಹಾಜರಾಗಲು ಅರ್ಹರಿರುವ 2.90 ಲಕ್ಷ ಅಭ್ಯರ್ಥಿಗಳ ಹಾಲ್ ಟಿಕೆಟ್ ಅನ್ನು ಕೆಇಎ ತನ್ನ ವೆಬ್‌ಸೈಟ್‌ನಲ್ಲಿ ಬಿಡುಗಡೆ ಮಾಡಿದೆ. ಹಾಲ್ ಟಿಕೆಟ್ ಡೌನ್ ಲೋಡ್ ಮಾಡಿಕೊಳ್ಳಲು ಅರ್ಜಿ ಸಂಖ್ಯೆಯ ಜತೆಗೆ ಅರ್ಜಿಯಲ್ಲಿ ನಮೂದಿಸಿದ ಜನ್ಮ ದಿನಾಂಕವನ್ನು ನಮೂದಿಸಲು ಸೂಚಿಸಲಾಗಿದೆ.

'ನಿಗದಿತ ಶುಲ್ಕ ಪಾವತಿಸಿ, ಎಲ್ಲ ಅಗತ್ಯ ದಾಖಲೆಗಳನ್ನು ಕ್ರಮಬದ್ಧವಾಗಿ ಅಪ್‌ಲೋಡ್ ಮಾಡಿದ್ದೇನೆ. ಹಾಲ್‌ಟಿಕೆಟ್ ಪಡೆಯಲು ಸಾಧ್ಯ ವಾಗಿಲ್ಲ. ಜುಲೈ 29ರಂದು ಕೆಇಎ ವೆಬ್‌ಸೈಟ್‌ನಲ್ಲಿ ಹಾಕಿರುವ ತಿರಸ್ಕೃತರ ಪಟ್ಟಿಯಲ್ಲಿ ಹೆಸರಿದೆ. ಕಾರಣ ತಿಳಿದಿಲ್ಲ. ಸೋಮವಾರ ಕೆಪಿಟಿಸಿಎಲ್ ಸಂಪರ್ಕಿಸುವೆ' ಎನ್ನುತ್ತಾರೆ ಅಭ್ಯರ್ಥಿಗಳು.

'ತಿದ್ದುಪಡಿಗಾಗಿ ಕೆಪಿಟಿಸಿಎಲ್ ಸಂಪರ್ಕಿಸಿ'

'ಕೆಪಿಟಿಸಿಎಲ್ ನೀಡಿದ ಅಭ್ಯರ್ಥಿಗಳ ಪಟ್ಟಿ ಆಧರಿಸಿ ಸ್ಪರ್ಧಾತ್ಮಕ ಪರೀಕ್ಷೆಯ ಹಾಲ್ ಟಿಕೆಟ್ ಬಿಡುಗಡೆ ಮಾಡಲಾಗಿದೆ. ತಿರಸ್ಕೃತ ಪಟ್ಟಿಯಲ್ಲಿ ಹೆಸರು ಇರದಿದ್ದರೂ ತಾಂತ್ರಿಕ ದೋಷಗಳಿದ್ದರೆ ತಿದ್ದುಪಡಿ ಮಾಡಲು, ಅನುಮತಿ ಪಡೆಯಲು ತಕ್ಷಣ ಕೆಪಿಟಿಸಿಲ್ ಸಂಪರ್ಕಿಸಬಹುದು ಅಥವಾ ಕೆಇಎ ಮೇಲ್ ಐಡಿ keaph0012@gmail.com ಸಂಪರ್ಕಿಸಬಹುದು' ಎನ್ನುತ್ತಾರೆ ಕೆಇಎ ಕಾರ್ಯನಿರ್ವಾಹಕ ನಿರ್ದೇಶಕಿ ಎಸ್.ರಮ್ಯಾ.

ಸಾಹಿತ್ಯಮುಖಿ, ಸಮಾಜಮುಖಿ ಸಂಪುಟ 2ಕ್ಕೆ ಬಿಡುಗಡೆ

ಬೆಂಗಳೂರು: ಡಿ.ಎಸ್.ವಿ. ಫೌಂಡೇಷನ್ ವತಿಯಿಂದ ಡಿ.ಎಸ್.ವೀರಯ್ಯ ಅವರ ಸಾಹಿತ್ಯಮುಖಿ ಮತ್ತು ಸಮಾಜಮುಖಿ ಸಂಪುಟಗಳನ್ನು ಆಗಸ್ಟ್ 2ರಂದು ರವೀಂದ್ರ ಕಲಾಕ್ಷೇತ್ರದಲ್ಲಿ ಬಿಡುಗಡೆಗೊಳಿಸಲಾಗುವುದು.

ಶಿವಮೂರ್ತಿ ಮುರುಘಾ ಶರಣರು ಕಾರ್ಯಕ್ರಮದ ಸಾನ್ನಿಧ್ಯ ವಹಿಸಲಿದ್ದು, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಉದ್ಘಾಟಿಸುವರು. ಸಾಹಿತ್ಯಮುಖಿ ಸಂಪುಟವನ್ನು ಸಾಹಿತಿ ಚಂದ್ರಶೇಖರ ಕಂಬಾರ, ಸಮಾಜಮುಖಿ ಸಂಪುಟವನ್ನು ಬಿ.ಎಲ್. ಸಂತೋಷ್ ಬಿಡುಗಡೆಗೊಳಿಸಲಿದ್ದಾರೆ. ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅಧ್ಯಕ್ಷತೆ ವಹಿಸಿಕೊಳ್ಳಲಿದ್ದಾರೆ ಎಂದು ಫೌಂಡೇಷನ್ ಅಧ್ಯಕ್ಷ ಡಿ.ಎಸ್.ವೀರಯ್ಯ ಶನಿವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಪ್ರಶಸ್ತಿ ಪ್ರದಾನ ತಮಿಳುನಾಡಿನ ವಿಡುದಲೈ ಚಿರುದೈಗಳ್ ಪಕ್ಷ ಚೆನ್ನೈನಲ್ಲಿ ಶನಿವಾರ ಆಯೋಜಿಸಿದ್ದ ಸಮಾರಂಭದಲ್ಲಿ ಪಕ್ಷದ ಮುಖ್ಯಸ್ಥ ಹಾಗೂ ಸಂಸದ ತಿರುಮಾವಲವನ್ ಅವರು ಸಿದ್ದರಾಮಯ್ಯ ಅವರಿಗೆ ಡಾ.ಬಿ.ಆರ್. ಅಂಬೇಡ್ಕರ್ ಪ್ರಶಸ್ತಿ ಪ್ರದಾನ ಮಾಡಿದರು

₹60 ಲಕ್ಷ ವೆಚ್ಚದ ಶಾಲಾ ಕೊಠಡಿ ಉದ್ಘಾಟನೆ

ಪೀಣ್ಯ ದಾಸರಹಳ್ಳಿ: ಸಮಾಜಕ್ಕೆ ಖಾಸಗಿ ಕಂಪನಿಗಳು ಕೊಡುಗೆ ನೀಡಿ, ಸರ್ಕಾರದ ಜೊತೆಗೆ ಕೈ ಜೋಡಿಸುವ ಮೂಲಕ ಸಮಾಜದ ಸದೃಢತೆಗೆ ಮುಂದಾಗಬೇಕು ಎಂದು ಕರ್ನಾಟಕ ಸರ್ಕಾರಿ ನೌಕರರ ಸಂಘದ ರಾಜ್ಯ ಅಧ್ಯಕ್ಷ ಸಿ.ಎಸ್.ಷಡಾಕ್ಷರಿ ತಿಳಿಸಿದರು.

ನೆಲಗದರನಹಳ್ಳಿ ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ ಬಿಜೆಪಿ ಮುಖಂಡ ನಿಸರ್ಗ ಕೆಂಪರಾಜು ಅವರ ಮನವಿ ಮೇರೆಗೆ ಪಾರಾಗಾನ್ ಕಂಪನಿ ₹60 ಲಕ್ಷ ವೆಚ್ಚದಲ್ಲಿ ನಿರ್ಮಿಸಿರುವ ಶೌಚಾಲಯ ಕಟ್ಟಡ, ನವೀಕರಿಸಿದ ಗ್ರಂಥಾಲಯ, ಗಣಕಯಂತ್ರ ಪ್ರಯೋಗಾಲಯ, ಶಾಲಾ ಕಚೇರಿ ಕೊಠಡಿಗಳನ್ನು ಉದ್ಘಾಟಿಸಿ ಮಾತನಾಡಿದರು.

'ಶಿಕ್ಷಣ ಕ್ಷೇತ್ರದಲ್ಲಿ ಖಾಸಗಿ ಶಾಲೆಗಳ ಪೈಪೋಟಿ ನಡುವೆ ಸರ್ಕಾರಿ ಶಾಲೆಗಳು ಗಮನಸೆಳೆಯುತ್ತವೆ ಎಂದರೆ ಗುಣಮಟ್ಟದ ಶಿಕ್ಷಣ ನೀಡುವಂತಹ ಶಿಕ್ಷಕರಿದ್ದಾರೆ ಎಂಬ ಹೆಮ್ಮೆ ನಮ್ಮದು. ಬಡ ವಿದ್ಯಾರ್ಥಿಗಳ ಶ್ರೇಯೋಭಿವೃದ್ಧಿಗೆ ಕೈ ಜೋಡಿಸಲು ಪಾರಾಗಾನ್‌ನಂತಹ ಕಂಪನಿಗಳು ಮುಂದಾಗಿರುವುದು ಶ್ಲಾಘನೀಯ' ಎಂದರು.

ಶಾಸಕ ಆರ್.ಮಂಜುನಾಥ್, ಪಾರಾಗಾನ್ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಜೋಸೆಫ್ ಜಕಾರಿಯಾ, ಉಪಾಧ್ಯಕ್ಷ ಥಾಮಸ್ ಮಣಿ, ನಿಸರ್ಗ ಶಾಲೆಯ ಸಂಸ್ಥಾಪಕ ಕೆಂಪರಾಜು, ಸರ್ಕಾರಿ ನೌಕರರ ಸಂಘದ ಹಿರಿಯ ಉಪಾಧ್ಯಕ್ಷ ರುದ್ರಪ್ಪ, ಶಿಕ್ಷಣ ಇಲಾಖೆ ಉಪ ನಿರ್ದೇಶಕ ಲೋಹಿತಾಶ್ವ ರೆಡ್ಡಿ, ಜೆಡಿಎಸ್ ಮುಖಂಡ ನರಸಿಂಹಮೂರ್ತಿ, ಬೆಂಗಳೂರು ಉತ್ತರ ವಲಯದ ಕ್ಷೇತ್ರ ಶಿಕ್ಷಣಾಧಿಕಾರಿ ವಿ. ರಮೇಶ್, ಮುಖ್ಯ ಶಿಕ್ಷಕ ದಯಾನಂದ್ ಹಾಜರಿದ್ದರು.

ಚಿತ್ರಾವಳಿ

ನಗರದ ಭಾರತೀಯ ವಿದ್ಯಾಭವನದಲ್ಲಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆಯ ಕಲೆ ಮತ್ತು ಸಾಂಸ್ಕೃತಿಕ ವೇದಿಕೆಯನ್ನು ಪ್ರವೀಣ್ ಗೋಡ್ಖಿಂಡಿ ಶನಿವಾರ ಉದ್ಘಾಟಿಸಿದರು. ಭಾರತೀಯ ವಿದ್ಯಾಭವನದ ಅಧ್ಯಕ್ಷ ಕೆ.ಜಿ.ರಾಘವನ್, ನಿರ್ದೇಶಕ ಎಚ್‌.ಎನ್‌.ಸುರೇಶ್, ಮಹಾಸಭಾದ ಅಧ್ಯಕ್ಷ ಅಶೋಕ್ ಹಾರನಹಳ್ಳಿ, ಸಾಂಸ್ಕೃತಿಕ ವಿಭಾಗದ ಸಂಚಾಲಕಿ ನಾಗಲಕ್ಷ್ಮಿ ಕೆ. ರಾವ್ ಉಪಸ್ಥಿತರಿದ್ದರು.

ರಾಜರಾಜೇಶ್ವರಿನಗರ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಪಕ್ಷ ಹಮ್ಮಿಕೊಂಡಿರುವ 210 ಕಿ.ಮೀ. 'ಸ್ವಾತಂತ್ರ್ಯೋತ್ಸವ ನಡಿಗೆ' ಕಾರ್ಯಕ್ರಮದಲ್ಲಿ ಕಾಂಗ್ರೆಸ್ ನಾಯಕಿ ಎಚ್‌.ಕುಸುಮಾ, ಮುಖಂಡರಾದ ಕೆ.ಆರ್‌.ಪಾರ್ಥಗೌಡ, ರಮೇಶ್ ಗೌಡ, ಜಿ. ರವಿಕುಮಾರ್ ಡೊಳ್ಳು ಬಾರಿಸಿ, ನೃತ್ಯ ಮಾಡಿದರು

ಬೆಂಗಳೂರು ವಿಶ್ವವಿದ್ಯಾಲಯದ ಜ್ಞಾನಭಾರತಿ ಆವರಣದಲ್ಲಿ ಶುಕ್ರವಾರ ನಡೆದ ಅಂಬೇಡ್ಕರ್ ಪರೀಕ್ಷಾ ಪೂರ್ವ ತರಬೇತಿ ಕಾರ್ಯಕ್ರಮವನ್ನು ಕುಲಪತಿ ಪ್ರೊ. ಜಯಕರ್ ಎಸ್‌.ಎಂ ಉದ್ಘಾಟಿಸಿದರು. ಕುಲಸಚಿವ ಎಂ.ಕೊಟ್ರೇಶಪ್ಪ, ಮೌಲ್ಯಮಾಪನ ಕುಲಸಚಿವ ಪ್ರೊ.ಜಿ.ಟಿ. ದೇವರಾಜು, ಸಿ.ಎಸ್‌. ಕರಿಗಾರ, ಸುಧಾರ, ಯುನಿವರ್ಸಲ್ ತರಬೇತಿ ಕೇಂದ್ರದ ಮುಖ್ಯಸ್ಥ ಆರ್‌.ಉಪೇಂದ್ರ ಶೆಟ್ಟಿ, ಎಂ. ನರಸಿಂಹಮೂರ್ತಿ, ಕೆ. ರಾಮಮೂರ್ತಿ ಇದ್ದಾರೆ

ಗರುಡಾ ಮಾಲ್: ವನ್ಯಜೀವಿ ಛಾಯಾಚಿತ್ರ ಪ್ರದರ್ಶನ

ನಗರದಲ್ಲಿ ಶುಕ್ರವಾರ 'ಅಂತರಾಷ್ಟ್ರೀಯ ಹುಲಿ ದಿನ'ದ ಅಂಗವಾಗಿ 'ಗರುಡಾ ಮಾಲ್' ಆವರಣದಲ್ಲಿ ಆಯೋಜಿಸಿದ್ದ ವನ್ಯಜೀವಿ ಛಾಯಾಚಿತ್ರ ಪ್ರದರ್ಶನವನ್ನು ಚಲನಚಿತ್ರ ನಿರ್ದೇಶಕ ನಿರೂಪ್ ಭಂಡಾರಿ ಮತ್ತು ನಟಿ ನೀತಾ ಅಶೋಕ್ ಉದ್ಘಾಟನೆ ಮಾಡಿ ವೀಕ್ಷಿಸಿದರು. ಈ ಪ್ರದರ್ಶನ ಜುಲೈ 31ರವರೆಗೆ ನಡೆಯಲಿದೆ. –ಪ್ರಜಾವಾಣಿ ಚಿತ್ರ

ಬೆಂಗಳೂರು: ಅಂತರಾಷ್ಟ್ರೀಯ ಹುಲಿ ದಿನದ ಅಂಗವಾಗಿ ಗರುಡಾ ಮಾಲ್ ಆವರಣದಲ್ಲಿ ಹೆಸರಾಂತ ಛಾಯಾಗ್ರಾಹಕರು ಸೆರೆಹಿಡಿದ ವನ್ಯಜೀವಿ ಛಾಯಾಚಿತ್ರಗಳ ಪ್ರದರ್ಶನವನ್ನು ಚಲನಚಿತ್ರ ನಿರ್ದೇಶಕ ನಿರೂಪ್ ಭಂಡಾರಿ, ನಟ ನೀತಾ ಅಶೋಕ್ ಉದ್ಘಾಟಿಸಿದರು.

ಕಾಡು ಮತ್ತು ನಾಡಿನ ನಡುವೆ ಸಂಘರ್ಷದಲ್ಲಿ ತಮ್ಮ ಜೀವ ರಕ್ಷಣೆಗಾಗಿ ಮನುಷ್ಯರ ಮೇಲೆ ಪ್ರಾಣಿಗಳು ದಾಳಿ ಮಾಡುತ್ತಿವೆ. ಅಭಿವೃದ್ಧಿ ಹೆಸರಿನಲ್ಲಿ ಕಾಡನ್ನು ನಾಶಪಡಿಸಿ, ಗಿಡ–ಮರಗಳನ್ನು ಕಡಿದು ಕಾಂಕ್ರೀಟ್ ನಾಡಾಗಿ ಪರಿವರ್ತಿಸಲಾಯಿತು. ಹಲವಾರು ವನ್ಯಜೀವಿಗಳು ಅಳಿವಿನ ಅಂಚಿನಲ್ಲಿವೆ. ಮೂಕಪ್ರಾಣಿಗಳ ನೋವನ್ನು ನಾವು ಅರ್ಥ ಮಾಡಿಕೊಳ್ಳಬೇಕು ಎಂದು ನಿರೂಪ್ ಭಂಡಾರಿ ಹೇಳಿದರು.

ಪ್ರತಿವರ್ಷ ಜುಲೈ 29ರಂದು ಅಂತರರಾಷ್ಟ್ರೀಯ ಹುಲಿ ದಿನ ಆಚರಿಸಲಾಗುತ್ತದೆ. ಇದರ ಅಂಗವಾಗಿ ಗರುಡಾ ಮಾಲ್ (ಮಾಗ್ರತ್ ರಸ್ತೆ) ವನ್ಯಜೀವಿ ಛಾಯಾಚಿತ್ರ ಪ್ರದರ್ಶನವನ್ನು 'ವನ್ಯಜೀವಿ ಕಥೆಗಳು' ಹೆಸರಿನಲ್ಲಿ ಏರ್ಪಡಿಸಿವೆ. ಜುಲೈ 31ರವರೆಗೆ ಪ್ರದರ್ಶನ ಇರಲಿದ್ದು, ಅಪರೂಪದ ವನ್ಯಜೀವಿಗಳಚಿತ್ರಗಳು ಪ್ರದರ್ಶನದಲ್ಲಿವೆ.

ಕಿರಣ್ ಸದಾನಂದ, ಮಹೇಶ್ ರೆಡ್ಡಿ, ಮಂಜು ಆಚಾರ್ಯ, ಪ್ರಮೋದ್ ಕುಮಾರ್ ಪಿ. ಲಕ್ಷ್ಮಿನ್, ಶ್ರೀಧರ್ ನಾಗರಾಜ್, ಸುರೇಶ್ ಬಸವರಾಜು, ವಿನಯ್ ಎಸ್. ಕುಮಾರ್ ಇಲ್ಲಿ ಪ್ರದರ್ಶಿತವಾಗುತ್ತಿರುವ ಛಾಯಾಚಿತ್ರಗಳನ್ನು ಸೆರೆಹಿಡಿದಿದ್ದಾರೆ.

ಭಾರತ, ಕೋಸ್ಟರಿಕಾ ಮತ್ತು ಆಫ್ರಿಕಾದ ದಟ್ಟಕಾಡುಗಳಲ್ಲಿ ತಮ್ಮ ಕ್ಯಾಮರಾ ಕಣ್ಣಿನಲ್ಲಿ ಮೂರು ದಶಕಗಳ ಕಾಲ ಸೆರೆಹಿಡಿದ ಛಾಯಾಗ್ರಾಹಕರ ಅಪರೂಪದ ಪಕ್ಷಿಗಳು, ಹುಲಿಗಳು, ಆನೆಗಳು ಹಾಗೂ ಚಿರತೆಗಳ ಛಾಯಾಚಿತ್ರಗಳನ್ನು ಮಾಲ್‌ನ ಎಲ್ಲ ಅಂತಸ್ತುಗಳಲ್ಲಿ ನೋಡಬಹುದಾಗಿದೆ.

ಯತಿರಾಜ ಶ್ರೀಗಳಿಗೆ ಗೌರವ ಡಾಕ್ಟರೇಟ್ ಪ್ರದಾನ

ಬೆಂಗಳೂರಿನ ಚೌಡಯ್ಯ ಭವನದಲ್ಲಿ ಶನಿವಾರ ತುಮಕೂರು ವಿಶ್ವವಿದ್ಯಾಲಯ ನೀಡಿದ ಗೌರವ ಡಾಕ್ಟರೇಟ್ ಅನ್ನು ಯದುಗಿರಿ ಯತಿರಾಜ ಮಠದ ನಾರಾಯಣ ಜೀಯರ್ ಸ್ವಾಮೀಜಿ ಅವರಿಗೆ ರಾಜ್ಯಪಾಲ ಥಾವರ್‌ಚಂದ್ ಗೆಹಲೋತ್ ಪ್ರದಾನ ಮಾಡಿದರು. ಉನ್ನತ ಶಿಕ್ಷಣ ಸಚಿವ ಸಿ.ಎನ್‌.ಅಶ್ವತ್ಥನಾರಾಯಣ ಇದ್ದಾರೆ

ಬೆಂಗಳೂರು: 'ಧರ್ಮ, ಸಮಾಜಕ್ಕಾಗಿ ಅರ್ಧ ಶತಮಾನ ಸೇವೆ ಸಲ್ಲಿಸಿರುವೆ. ಹಲವರಿಗೆ ಪ್ರಶಸ್ತಿ ನೀಡಿ ಗೌರವಿಸಿರುವೆ. ಇದೇ ಮೊದಲ ಬಾರಿ ಡಾಕ್ಟರೇಟ್ ಗೌರವ ಸ್ವೀಕರಿಸುತ್ತಿರುವುದು ರಾಮಾನುಜಾಚಾರ್ಯರ ಕೃಪೆ' ಎಂದು ಯದುಗಿರಿ ಯತಿರಾಜ ಮಠದ ನಾರಾಯಣ ಜೀಯರ್ ಸ್ವಾಮೀಜಿ ಹೇಳಿದರು.

ನಗರದ ಚೌಡಯ್ಯ ಭವನದಲ್ಲಿ ಶನಿವಾರ ತುಮಕೂರು ವಿಶ್ವವಿದ್ಯಾಲಯ ನೀಡಿದ ಗೌರವ ಡಾಕ್ಟರೇಟ್ ಸ್ವೀಕರಿಸಿ ಅವರು ಮಾತನಾಡಿದರು.

ಮನುಷ್ಯ ನಿಸ್ವಾರ್ಥವಾಗಿ ಸಲ್ಲಿಸುವ ಸೇವೆಗೆ ದೇವರು ಒಳ್ಳೆಯ ಪ್ರತಿಫಲ ನೀಡುವನು. ಸಾವಿರ ವರ್ಷಗಳ ಹಿಂದೆ ರಾಮಾನುಜಾಚಾರ್ಯರು ಮನುಕುಲದ ಒಳಿತಿಗೆ ಧರ್ಮ ಸಂದೇಶ ಸಾರಿದರು. ಅವರು ತೋರಿದ ಹಾದಿಯಲ್ಲಿ ಮಠವೂ ಸಾಗುತ್ತಿದೆ ಎಂದರು.

ಉನ್ನತ ಶಿಕ್ಷಣ ಸಚಿವ ಡಾ.ಸಿ ಎನ್. ಅಶ್ವತ್ಥನಾರಾಯಣ ಅವರು, ಯತಿರಾಜ ಮಠದ ಶ್ರೀಗಳು ರಾಮಾನುಜಾಚಾರ್ಯರ ತತ್ವ ಮತ್ತು ಸಿದ್ಧಾಂತದ ಅನುಯಾಯಿಗಳಾಗಿದ್ದಾರೆ. ಸನಾತನ ಧರ್ಮದ ಸಂರಕ್ಷಕರಾಗಿದ್ದಾರೆ ಎಂದು ಬಣ್ಣಿಸಿದರು.

ರಾಜ್ಯಪಾಲ ಥಾವರ್‌ಚಂದ್ ಗೆಹಲೋತ್ ಪ್ರಶಸ್ತಿ ಪ್ರದಾನ ಮಾಡಿದರು. ಕುಲಪತಿ ವೆಂಕಟೇಶ್ವರಲು, ಕುಲಸಚಿವ ನಿರ್ಮಲ್ ರಾಜು ಉಪಸ್ಥಿತರಿದ್ದರು.

3ಕ್ಕೆ ಬಸವಣ್ಣನವರ 827ನೇ ಸಂಸ್ಮರಣೆ

ಬೆಂಗಳೂರು: ವಿಶ್ವ ಕಲ್ಯಾಣ ಮಿಷನ್ ಚಾರಿಟೇಬಲ್ ಟ್ರಸ್ಟ್ ವತಿಯಿಂದ 'ವಿಶ್ವಗುರು ಬಸವಣ್ಣ ಹಾಗೂ ನೀಲಾಂಬಿಕಾ ಅವರ 827ನೇ ಲಿಂಗೈಕ್ಯ ಸಂಸ್ಮರಣೆ' ಕಾರ್ಯಕ್ರಮ ಆಗಸ್ಟ್ 3ರಂದು ರವೀಂದ್ರ ಕಲಾಕ್ಷೇತ್ರದಲ್ಲಿ ನಡೆಯಲಿದೆ ಎಂದು ಟ್ರಸ್ಟ್ ಅಧ್ಯಕ್ಷೆ ಮಾತೆ ಗಂಗಾದೇವಿ ತಿಳಿಸಿದರು.

ಆ ದಿನ ರಾಜ್ಯದಾದ್ಯಂತ ಬಸವಧರ್ಮ ಪೀಠ, ಬಸವದಳದಿಂದ ಅನಾಥಾಶ್ರಮದ ನಿವಾಸಿಗಳು, ಆಸ್ಪತ್ರೆಯ ರೋಗಿಗಳಿಗೆ ಮತ್ತು ಮಕ್ಕಳಿಗೆ ಹಾಲು ಹಣ್ಣು ವಿತರಿಸುವ ಕಾರ್ಯಕ್ರಮ ನಡೆಸಲಾಗುವುದು ಎಂದು ಶನಿವಾರ ಸುದ್ದಿಗೋಷ್ಠಿಯಲ್ಲಿ ಹೇಳಿದರು

ಕಾರ್ಯಕ್ರಮವನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಉದ್ಘಾಟಿಸುವರು. ಸಚಿವ ಗೋವಿಂದ ಕಾರಜೋಳ, ನಿರ್ಮಲಾ.ಸಿ. ಯಲಿಗಾರ, ಎಂ.ಪ್ರಕಾಶಮೂರ್ತಿ, ಸತೀಶಕುಮಾರ.ಎಸ್. ಹೊಸಮನಿ, ಸಾಲುಮರದ ತಿಮ್ಮಕ್ಕ, ವೈಜಿನಾಥ ಬಿರಾದರ ಭಾಗವಹಿಸಲಿದ್ದಾರೆ ಎಂದು ಮಾಹಿತಿ ನೀಡಿದರು.

ಸಂಸ್ಕೃತ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಪ್ರೊ.ಮಲ್ಲೇಪುರಂ ಜಿ. ವೆಂಕಟೇಶ್ ಪ್ರಶ್ನೆ

'ಡಿಜಿಟಲ್ ಮಾಧ್ಯಮದಲ್ಲಿ ಕೃತಿ: ಓದುವವರು ಯಾರು?'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕನ್ನಡ ಪುಸ್ತಕ ಲೋಕವು ಈಗ ಡಿಜಿಟಲ್ ಮಾಧ್ಯಮದ ರೂಪ ಪಡೆದಿದೆ. ಇ-ಬುಕ್ಸ್‌ನಲ್ಲಿ ಸಾಹಿತ್ಯ ಕೃತಿ ಓದುವವರು ಯಾರು ಎನ್ನುವ ಪ್ರಶ್ನೆ ನಮ್ಮ ಮುಂದಿದೆ' ಎಂದು ಕರ್ನಾಟಕ ಸಂಸ್ಕೃತ ವಿ.ವಿಯ ವಿಶ್ರಾಂತ ಕುಲಪತಿ ಪ್ರೊ.ಮಲ್ಲೇಪುರಂ ಜಿ. ವೆಂಕಟೇಶ್ ಹೇಳಿದರು.

ಕನ್ನಡ ಬರಹಗಾರರ ಮತ್ತು ಪ್ರಕಾಶಕರ ಸಂಘ, ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ಗಾಂಧಿ ಶಾಂತಿ ಪ್ರತಿಷ್ಠಾನದಿಂದ ಶನಿವಾರ ಆಯೋಜಿಸಿದ್ದ ಆರು ಕೃತಿಗಳ ಲೋಕಾರ್ಪಣೆ ಮತ್ತು ವಾರ್ಷಿಕ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಅವರು ಮಾತನಾಡಿದರು.

'ಸರ್ಕಾರ ಡಿಜಿಟಲ್ ಮಾಧ್ಯಮಕ್ಕೆ ಲಕ್ಷಾಂತರ ರೂಪಾಯಿ ವ್ಯಯಿಸುತ್ತಿದೆ. ಆದರೆ, ಮಲೆನಾಡಿನ ಜಿಲ್ಲೆಗಳು ಹಾಗೂ ಉತ್ತರ ಕನ್ನಡ ಜಿಲ್ಲೆಯ ಕುಗ್ರಾಮಗಳಲ್ಲಿ ಇಂಟರ್‌ನೆಟ್ ಸೌಲಭ್ಯವೇ ಇಲ್ಲ. ಓದುಗನಿಗೆ 'ಇ ಬುಕ್ಸ್' ತಲುಪುವುದಾದರೂ ಹೇಗೆ' ಎಂದು ಪ್ರಶ್ನಿಸಿದರು.

ನಗರದಲ್ಲಿ ಶನಿವಾರ ಆಯೋಜಿಸಿದ್ದ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ (ಕುಳಿತವರು ಎಡದಿಂದ) ಡಾ.ವಿಜಯಾ, ಡಾ.ಗಜಾನನ ಶರ್ಮ, ಶರಣು ಹುಲ್ಲೂರು, ಜಮೀಲ್ ಸಾವಣ್ಣ ಅವರಿಗೆ ವಾರ್ಷಿಕ ಪ್ರಶಸ್ತಿ ನೀಡಿ ಗೌರವಿಸಲಾಯಿತು. (ಎಡದಿಂದ) ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಪ್ರೊ.ಮಲ್ಲೇಪುರಂ ಜಿ. ವೆಂಕಟೇಶ್, 'ಗಾಂಧಿ ಶಾಂತಿ ಪ್ರತಿಷ್ಠಾನ'ದ ಅಧ್ಯಕ್ಷ ಜೀರಿಗೆ ಲೋಕೇಶ್, ಕರ್ನಾಟಕ ಕನ್ನಡ ಬರಹಗಾರ ಮತ್ತು ಪ್ರಕಾಶಕರ ಸಂಘದ ಅಧ್ಯಕ್ಷ ನಿಡಸಾಲೆ ಪುಟ್ಟಸ್ವಾಮಯ್ಯ, ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ವೂಡೇ ಪಿ. ಕೃಷ್ಣ, ಆರ್. ದೊಡ್ಡೇಗೌಡ ಮತ್ತು ಕಾರ್ಯಕಾರಿ ಸಮಿತಿ ಸದಸ್ಯೆ ಮಾಲತಿ ಶೆಟ್ಟಿ ಇದ್ದರು ಪ್ರಜಾವಾಣಿ ಚಿತ್ರ

ಪ್ರಶಸ್ತಿ ಪುರಸ್ಕೃತೆ ಡಾ.ವಿಜಯಾ ಅವರು, ಮುದ್ರಣ ಕ್ಷೇತ್ರ ಸಂಕಷ್ಟದಲ್ಲಿರುವುದರ ಕುರಿತು ಗಮನಸೆಳೆದರು. ಸಂಘದ ಅಧ್ಯಕ್ಷ ನಿಡಸಾಲೆ ಪುಟ್ಟಸ್ವಾಮಿ ಅವರೂ ಇದನ್ನು ಸಮರ್ಥಿಸಿದರು.

'ಪ್ರಜಾವಾಣಿ' ಕಾರ್ಯನಿರ್ವಾಹಕ ಸಂಪಾದಕ ರವೀಂದ್ರ ಭಟ್ಟ ಅವರು ಕೃತಿ ಬಿಡುಗಡೆಗೊಳಿಸಿ ಮಾತನಾಡಿದರು. ಗಾಂಧಿ ಶಾಂತಿ ಪ್ರತಿಷ್ಠಾನದ ಅಧ್ಯಕ್ಷ ಜೀರಿಗೆ ಲೋಕೇಶ್, ಸಂಘದ ಕಾರ್ಯದರ್ಶಿ ಆರ್.ದೊಡ್ಡೇಗೌಡ ಹಾಜರಿದ್ದರು. ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷ ವೂಡೇ ಪಿ. ಕೃಷ್ಣ ಮಾತನಾಡಿದರು.

ಪ್ರಶಸ್ತಿ ಪುರಸ್ಕೃತರು

ಇದೇ ವೇಳೆ ವಿವಿಧ ಸಾಧಕರಿಗೆ 2021ನೇ ಸಾಲಿನ ವಾರ್ಷಿಕ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಡಾ.ಗಜಾನನ ಶರ್ಮ ಅವರ 'ಚೆನ್ನಭೈರಾದೇವಿ' ಕೃತಿಗೆ 'ಸಾಹಿತ್ಯ ರತ್ನ' ಪ್ರಶಸ್ತಿ, ಡಾ.ಶರಣು ಹುಲ್ಲೂರು ಅವರ 'ಅನಂತವಾಗಿರು' ಕೃತಿಗೆ 'ಯುವ ಸಾಹಿತ್ಯ ರತ್ನ', ಜಮೀಲ್ ಸಾವಣ್ಣಗೆ (ಸಾವಣ್ಣ ಪ್ರಕಾಶನ) 'ಪುಸ್ತಕ ರತ್ನ' ಹಾಗೂ ಡಾ.ವಿಜಯಾ ಅವರಿಗೆ (ಇಳಾ ಮುದ್ರಣಾಲಯ) 'ಮುದ್ರಣ ರತ್ನ' ಪ್ರಶಸ್ತಿ ಪ್ರದಾನ ಮಾಡಲಾಯಿತು.

ಆರು ಕೃತಿಗಳ ಬಿಡುಗಡೆ
- ಡಿ.ಕೆ.ಮಂಜುಳಾ – ಮುಕ್ತೆ
- ಕುಂ.ವೀರಭದ್ರಪ್ಪ – ರಾಯಲ ಸೀಮಾ ಕಥೆಗಳು
- ಓಬಯ್ಯ ಬಿ. – ನಿರಂತರ
- ಮಲ್ಲೇಪುರಂ ಜಿ. ವೆಂಕಟೇಶ್ – ತೌಲನಿಕ ಸಾಹಿತ್ಯ ಮೀಮಾಂಸೆ
- ಕೇಶವರೆಡ್ಡಿ ಹಂದ್ರಾಳ – ಬೆರಕೆ ಸೊಪ್ಪು
- ಹೃದಯ ಶಿವ – ಕ್ಲ್ಯಾಪ್ ಬೋರ್ಡ್

ಬೆಂಗಳೂರು ರೇಸ್

ಫಾರೆಸ್ಟ್ ಫ್ಲೇಮ್ ಗೆಲ್ಲುವ ನಿರೀಕ್ಷೆ

ಕರ್ನಾಟಕ ಮೈಲ್ ಚಾಂಪಿಯನ್‌ಷಿಪ್ ಕಪ್ ಭಾನುವಾರದ ಬೆಂಗಳೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಫಾರೆಸ್ಟ್ ಫ್ಲೇಮ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2.30ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಡಾನ್‌ರೈಸಿಂಗ್ 2, ಟೈಗರ್ ರಿಟರ್ನ್ಸ್ 1, ಪರ್ಫೆಕ್ಟ್ ಹೆಲೋ 7
2ನೇ ರೇಸ್: ಸ್ಟಾರ್ ಅಡ್ಮಿರಲ್ 5, ಮೈ ಸಾಲಿಟೇರ್ 7, ಸೀಕ್ರೆಟ್ ಲೇಡಿ 8
3ನೇ ರೇಸ್: ಡಿವಿಲಿಯರ್ಸ್ 1, ಸ್ಟಾರ್ ಗ್ಲೋರಿ 6, ವಾಚ್‌ಮೈಸ್ಟಾರ್ಸ್ 4
4ನೇ ರೇಸ್: ಫಾರೆಸ್ಟ್ ಫ್ಲೇಮ್ 2, ಲಗಾರ್ಡೆ 1
5ನೇ ರೇಸ್: ಇಂಪೀರಿಯಲ್ ಬ್ಲೂ 2, ಸಿಲ್ವೇರಿಯಸ್ 1, ಸ್ಟ್ರಿಬ್ಲಿಂಗ್ ಹಾಪ್ಪರ್ 3
6ನೇ ರೇಸ್: ಶಾಬೆಲ್ 1, ಮಾಂಟೆಲಿನ 2, ಇನ್‌ಯುವಿಬಿಲೀವ್ 4
7ನೇ ರೇಸ್: ಏಬಲ್ ಒನ್ 1, ಜೆರ್ಸಿ ಲೆಜೆಂಡ್ 8, ಅಮೆಜೊನೈಟ್ 4

ಉತ್ತಮ ಬೆಟ್: ಸ್ಟಾರ್ ಅಡ್ಮಿರಲ್

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
3,4,5,6,7	2,3,4	5,6,7

ರಾಜ್ಯದ 16 ಜಿಲ್ಲೆಗಳ 63 ತಾಲ್ಲೂಕುಗಳ 'ಗಡಿ ಅಭಿವೃದ್ಧಿ'ಗೆ ಅನುದಾನ ಕೊರತೆ • ₹158 ಕೋಟಿ ಅನುದಾನದ ಬೇಡಿಕೆ

ಕನ್ನಡ ಅಸ್ಮಿತೆಗೆ ಆರ್ಥಿಕ ಇತಿಮಿತಿಯ ಬೇಲಿ

• ರಾಜೇಶ್ ರೈ ಚಟ್ಲ

ಬೆಂಗಳೂರು: ರಾಜ್ಯದ ಗಡಿಯಂಚಿನಲ್ಲಿ ಕನ್ನಡದ ಅಸ್ಮಿತೆ ಗಟ್ಟಿಯಾಗಿ ನೆಲೆಗೊಳ್ಳಬೇಕು ಎಂಬ ಆಶಯದಿಂದ ರೂಪುಗೊಂಡಿದ್ದು 'ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ'.

ಗಡಿಭಾಗದ ಕನ್ನಡಿಗರ ಮನೆ-ಮನಗಳಲ್ಲಿ ಕನ್ನಡ ಪ್ರಜ್ಞೆ ಅರಳಲಿ ಮತ್ತು ಅಭಿವೃದ್ದಿಯಾಗಲಿ ಎಂಬ ಗುರಿ- ಆಶಯ ಪ್ರಾಧಿಕಾರ ಹೊಂದಿದೆ. ಆದರೆ, ಅದರ 'ಬೆಟ್ಟ'ದಷ್ಟು ಯೋಜನೆಗಳ ಅನುಷ್ಠಾನಕ್ಕೆ ಅನುದಾನದ ಕೊರತೆ, ಆರ್ಥಿಕ 'ಇತಿಮಿತಿ' ದೊಡ್ಡ ಸವಾಲಾಗಿದೆ.

ಗಡಿಯಲ್ಲಿರುವ ಕನ್ನಡಿಗರ ಸಾಮಾಜಿಕ, ಸಾಂಸ್ಕೃತಿಕ, ಶೈಕ್ಷಣಿಕ ವಿಕಾಸದ ಉದ್ದೇಶದಿಂದ ಗಡಿ ಅಧ್ಯಯನ ಆಯೋಗದ ಶಿಫಾರಸಿನಂತೆ ರಾಜ್ಯ ಸರ್ಕಾರ 2010ರಲ್ಲಿ ಈ ಪ್ರಾಧಿಕಾರ ಸ್ಥಾಪಿಸಿತು. 19 ಜಿಲ್ಲೆಗಳ 63 ತಾಲ್ಲೂಕುಗಳಲ್ಲಿ ರಾಜ್ಯದ ಗಡಿ ವ್ಯಾಪಿಸಿದೆ.

ಈ ತಾಲ್ಲೂಕುಗಳಿಗೆ ಹೊಂದಿಕೊಂಡಿರುವ ಆರು ರಾಜ್ಯಗಳ (ಮಹಾರಾಷ್ಟ್ರ, ಗೋವಾ, ಕೇರಳ, ತಮಿಳುನಾಡು, ಆಂಧ್ರಪ್ರದೇಶ ಮತ್ತು ತೆಲಂಗಾಣ) ಗಡಿ ಭಾಗದಲ್ಲಿರುವ ಕನ್ನಡಿಗರಲ್ಲಿ ಭಾಷೆ- ಸಂಸ್ಕೃತಿಯ ಅಭಿಮಾನ ಮೂಡಿಸುವುದರ ಜೊತೆಗೆ ಕನ್ನಡಪರ ಸಂಘ-ಸಂಸ್ಥೆ, ಶಾಲೆಗಳಿಗೆ ಸಾಂಸ್ಕೃತಿಕ, ಶೈಕ್ಷಣಿಕವಾಗಿ ಮೂಲಸೌಲಭ್ಯ ಒದಗಿಸುವುದು ಪ್ರಾಧಿಕಾರದ ಕರ್ತವ್ಯ.

ವೀರೇಂದ್ರ ಪಾಟೀಲ ಸರ್ಕಾರದ ಅವಧಿಯಲ್ಲಿ ಗಡಿ ತಾಲ್ಲೂಕುಗಳ ಅಭಿವೃದ್ಧಿಗಾಗಿ ತಲಾ ₹25 ಲಕ್ಷ ನೀಡಲಾಗುತ್ತಿತ್ತು. ಈಗ ವಾರ್ಷಿಕ ₹2 ಲಕ್ಷ ಅಥವಾ ₹3 ಲಕ್ಷ ನೀಡಲಾಗುತ್ತಿದೆ. ಅನುದಾನದ ಕೊರತೆಯಿಂದ ಗಡಿ- ಗಡಿಯಾಚೆಗಿನ ಕನ್ನಡಿಗರನ್ನು ನಿರೀಕ್ಷೆಯಂತೆ 'ಪೋಷಿಸಲು' ಪ್ರಾಧಿಕಾರಕ್ಕೆ ಸಾಧ್ಯವಾಗಿಲ್ಲ. ಅಧ್ಯಕ್ಷ ಹೊಣೆ ವಹಿಸಿದವರು ಅಭಿವೃದ್ಧಿ ಭರವಸೆ ನೀಡಿದರೂ ಸರ್ಕಾರ ಅನುದಾನ ನೀಡದಿರುವುದು ತೊಡಕಾಗಿದೆ. ಬಂದ ಒಂದಷ್ಟು ಅನುದಾನವೂ ಕಳ್ಳ ಮಾರ್ಗಗಳಲ್ಲಿ ಹಂಚಿಕೆಯಾದ ಆರೋಪಗಳೂ ಇವೆ.

ಅನುದಾನ ಕೋರಿ ಪ್ರಾಧಿಕಾರಕ್ಕೆ ಸಲ್ಲಿಕೆಯಾದ ಅರ್ಜಿಗಳು, ವಿಲೇವಾರಿ ವೇಳೆ ಪಕ್ಷಪಾತ, ಸ್ವಜನಪಕ್ಷಪಾತ, ತವರು ಪ್ರೇಮಕ್ಕೆ ಬಲಿಯಾಗಿವೆ. ಸಂಘ-ಸಂಸ್ಥೆಗಳಿಗೆ ನೇರವಾಗಿ ಧನಸಹಾಯ ನೀಡಲಾಗಿದೆ ಎಂಬುದು ಮತ್ತೊಂದು ದೂರು. ಅರ್ಜಿ ಸಲ್ಲಿಸದ ಸಂಸ್ಥೆಗಳಿಗೂ ಅನುದಾನ ನೀಡಲಾಗಿದೆ ಎಂಬ ಆರೋಪ, ಪ್ರಾಧಿಕಾರದ ಹಿಂದಿನ ದಾಖಲೆಗಳು ಭ್ರಷ್ಟಾಚಾರದ ಅನುಮಾನ ಮೂಡಿಸುತ್ತವೆ.

ಬಾಬುರಾವ್ ಚಿಂಚನಸೂರ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರಾಗಿದ್ದ ಡಿ.ಕೆ. ಶಿವಕುಮಾರ್ ಅಧ್ಯಕ್ಷರಾಗಿದ್ದ ಅವಧಿಯಲ್ಲಿ ತಲಾ ₹80 ಕೋಟಿ ಹೊರತುಪಡಿಸಿದರೆ, ಇತರ ಅವಧಿಯಲ್ಲಿ ಪ್ರಾಧಿಕಾರಕ್ಕೆ ಅನುದಾನ ಕೊರತೆ ಎದುರಾಗಿದೆ. ಪ್ರಾಧಿಕಾರದ ಮೊದಲ ಅಧ್ಯಕ್ಷ ಚಂದ್ರಕಾಂತ ಬೆಲ್ಲದ ಅವಧಿಯಲ್ಲಿ ಅನುದಾನ ಖರ್ಚಾಗದೆ ಹಿಂದಕ್ಕೆ ಹೋಗಿದೆ ಎಂಬ ಆರೋಪವೂ ಕೇಳಿಬಂದಿತ್ತು.

'ಗಡಿ ಭಾಗದ ಜಿಲ್ಲೆಗಳ ಜಿಲ್ಲಾಧಿಕಾರಿಗಳ ಸಭೆಯಲ್ಲಿ ಚರ್ಚಿಸಿದ ಬಳಿಕ ಆಯಾ ಗಡಿ ಭಾಗದ ಸಮಸ್ಯೆಗಳ ಪಟ್ಟಿ ಮಾಡಲಾಗುತ್ತದೆ. ಪ್ರಾಧಿಕಾರಕ್ಕೆ ಹೆಚ್ಚಿನ ಅನುದಾನ ಒದಗಿಸುವಂತೆ ವಿಧಾನ ಮಂಡಲ ಅಧಿವೇಶನದಲ್ಲಿ ಗಡಿ ಭಾಗದ ಶಾಸಕರು ಧ್ವನಿ ಎತ್ತುತ್ತಲೇ ಇದ್ದಾರೆ. 2021-22ರಲ್ಲಿ ಅರ್ಜಿ ಆಹ್ವಾನಿಸಿದ ಮೇಲೆ ₹158 ಕೋಟಿ ಅನುದಾನ ಬೇಡಿಕೆ ಬಂದಿದೆ. ಆದರೆ, ಹಣ ಇಲ್ಲದ ಕಾರಣ ಅರ್ಜಿಗಳು ಯಥಾಸ್ಥಿತಿಯಲ್ಲಿವೆ' ಎನ್ನುತ್ತಾರೆ ಪ್ರಾಧಿಕಾರದ ಕಾರ್ಯದರ್ಶಿ ಪ್ರಕಾಶ್ ಮತ್ತೀಹಳ್ಳಿ.

2020-21ನೇ ಸಾಲಿನಲ್ಲಿ ಪರಿಶಿಷ್ಟರ ಉಪ ಯೋಜನೆಯ (ಎಸ್‌ಸಿಎಸ್‌ಪಿ, ಟಿಎಸ್‌ಪಿ) ಅನುದಾನ ₹26 ಕೋಟಿ, ಯೋಜನಾ ಇಲಾಖೆಯಿಂದ ಹಾಗೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ (ಆರ್‌ಡಿಪಿಆರ್) ಇಲಾಖೆಯಿಂದ ₹36 ಕೋಟಿ ಬಿಡುಗಡೆ ಆಗಿಲ್ಲ.

ಹೆಚ್ಚಿನ ಅನುದಾನ ಹಂಚಿಕೆ ಮಾಡಲು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಕಡತ ತರಿಸಿಕೊಂಡರೂ ಆರ್ಥಿಕ ಇಲಾಖೆಯ ಅಧಿಕಾರಿಗಳು ಪ್ರಾಧಿಕಾರದ ಆಶಯಗಳಿಗೆ ಮತ್ತು 2010ರ ಗಡಿ ಪ್ರಾಧಿಕಾರ ಕಾಯ್ದೆಯ ವಿರುದ್ಧ ಕಡತ ಮಂಡಿಸಿ ಅನುಮೋದನೆಗೆ ಅಡ್ಡಗಾಲು ಹಾಕಿದ ಆಪಾದನೆಯಿದೆ.

ಸದ್ಯ (2020ರ ಡಿ.2ರಿಂದ) ನಿವೃತ್ತ ಐಎಎಸ್ ಅಧಿಕಾರಿ ಸಿ. ಸೋಮಶೇಖರ ಅವರು ಪ್ರಾಧಿಕಾರದ ಅಧ್ಯಕ್ಷ. ಕೋವಿಡ್ ಮಧ್ಯೆಯೂ ಅವರು 12 ಗಡಿ ಜಿಲ್ಲೆಗಳಿಗೆ ತೆರಳಿ, ಜಿಲ್ಲಾಧಿಕಾರಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಮತ್ತು ಇತರ ಅಧಿಕಾರಿಗಳ ಜೊತೆ ಗಡಿ ಯೋಜನೆ, ಕಾಮಗಾರಿ, ಶೈಕ್ಷಣಿಕ ಸಮಸ್ಯೆಗಳ ಅಧ್ಯಯನ ನಡೆಸಿದ್ದಾರೆ.

ಯೋಜನೆಗಳ ಫಲಾನುಭವಿಗಳ ಆಯ್ಕೆಯಲ್ಲಿ ಪಾರದರ್ಶಕತೆ, ಅನುದಾನ ಬಳಕೆಯನ್ನು ಪರಿಶೀಲಿಸಿದ್ದಾರೆ. ಗಡಿಭಾಗದ ಗ್ರಾಮಗಳಲ್ಲಿ ಕನ್ನಡಿಗರ ಆರ್ಥಿಕ, ಸಾಮಾಜಿಕ ಮತ್ತು ಶೈಕ್ಷಣಿಕ ಸ್ಥಿತಿಗತಿಯನ್ನು ವಿಶ್ವವಿದ್ಯಾಲಯಗಳಿಂದ ಅಧ್ಯಯನ ಮಾಡಿಸಿ, ಸರ್ಕಾರಕ್ಕೆ ವೈಜ್ಞಾನಿಕ ಸಮೀಕ್ಷಾ ವರದಿ ಸಲ್ಲಿಸಲಿದ್ದಾರೆ.

'ಗಡಿ' ಅಭಿವೃದ್ಧಿಗೆ ಸರ್ಕಾರದಿಂದ ಅನುದಾನ

ವರ್ಷ	ಅಧ್ಯಕ್ಷರಾಗಿದ್ದವರು	ಅನುದಾನ (₹ ಕೋಟಿಗಳಲ್ಲಿ)
2017-18	ಬಾಬುರಾವ್ ಚಿಂಚನಸೂರ	50
2018-19	ಕನ್ನಡ ಮತ್ತು ಸಂಸ್ಕೃತಿ ಸಚಿವರಾಗಿದ್ದ ಜಯಮಾಲಾ	38.06
2019-20	ಕನ್ನಡ ಮತ್ತು ಸಂಸ್ಕೃತಿ ಸಚಿವರಾಗಿದ್ದ ಡಿ.ಕೆ. ಶಿವಕುಮಾರ್	79.70
2020-21	ಕಾರ್ಯದರ್ಶಿಗಳಾಗಿದ್ದ ಎನ್. ಮಂಜುಳಾ, ವಿ. ರಶ್ಮಿ ಮಹೇಶ್	25
2021-22	ಸಿ. ಸೋಮಶೇಖರ	15.14
2022-23	ಸಿ. ಸೋಮಶೇಖರ	15.14

'ಪ್ರಾಧಿಕಾರ'ದಿಂದ ವಿವಿಧ ಜಿಲ್ಲೆಗಳ ಗಡಿ ಅಭಿವೃದ್ಧಿಗೆ ಅನುದಾನ

ವರ್ಷ	ಬಿಡುಗಡೆಯಾದ ಮೊತ್ತ (₹ ಕೋಟಿಗಳಲ್ಲಿ)
2017-18	42.86
2018-19	7.89
2019-20	67.07
2020-21	14.27
2021-22	25.35

(* ಕಾಸರಗೋಡು, ಮಹಾರಾಷ್ಟ್ರಕ್ಕೆ ಬಿಡುಗಡೆಯಾದ ಅನುದಾನವೂ ಸೇರಿದೆ)

'₹75 ಕೋಟಿಗೆ ಪ್ರಸ್ತಾವ'

ಆರ್ಥಿಕ ಇಲಾಖೆ ಮೂಲಕ ಪ್ರಾಧಿಕಾರಕ್ಕೆ ಹೆಚ್ಚುವರಿಯಾಗಿ ₹ 75 ಕೋಟಿ ಅನುದಾನ ಕೋರಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಮುಖ್ಯಮಂತ್ರಿ ಸಹಮತ ವ್ಯಕ್ತಪಡಿಸಿದ್ದು, ಹಣ ಬಿಡುಗಡೆಯ ವಿಶ್ವಾಸವಿದೆ. ಗಡಿ ಭಾಗದ ಕನ್ನಡಿಗರಲ್ಲಿ ಆಸೆ, ಆಕಾಂಕ್ಷೆ ಬಹಳ ಇವೆ. ಈ ಅನುದಾನ ಸಿಕ್ಕಿದರೆ ಸ್ವಲ್ಪ ಪ್ರಮಾಣದಲ್ಲಿ ಅಭಿವೃದ್ಧಿ ಕೆಲಸ ಸಾಧ್ಯವಾಗಲಿದೆ. ಲಭ್ಯ ಅನುದಾನದ ಇತಿಮಿತಿಯಲ್ಲಿ ನಾವು ಎಲ್ಲವನ್ನೂ ಮಾಡುತ್ತಿದ್ದೇವೆ.

ಸಿ. ಸೋಮಶೇಖರ, ಅಧ್ಯಕ್ಷರು, ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ

ಅಲ್ಲಿದೆ ನಮ್ಮನೆ, ಇಲ್ಲಿದ್ದೇವೆ ಸುಮ್ಮನೆ!

• ಕೆ.ನರಸಿಂಹಮೂರ್ತಿ

ಮೈಸೂರು: ಆಂಧ್ರಪ್ರದೇಶದ ಸತ್ಯಸಾಯಿ ಜಿಲ್ಲೆಯ ಗುಡಿಬಂಡ ಮಂಡಲ್‌ಗೆ ಸೇರಿದ ಹಿರೇತುರ್ಪಿ ಗ್ರಾಮದ ಕನ್ನಡಿಗರು ಎರಡು ತಿಂಗಳ ಹಿಂದೆ ಆಂಜನೇಯ ಜಾತ್ರೆ ಪ್ರಯುಕ್ತ ಪೌರಾಣಿಕ ನಾಟಕ 'ಮೂರೂವರೆ ವಜ್ರಗಳು' ಮತ್ತು 'ಕುಡುಕ ಕಟ್ಟಿದ ತಾಳಿ' ನಾಟಕ ಪ್ರದರ್ಶನಕ್ಕೆ ಸಿದ್ಧತೆ ನಡೆಸಿದ್ದರು. ಅಲ್ಲಿನ ಅಧಿಕಾರಿಗಳು, 'ತೆಲುಗು ನಾಡಿನಲ್ಲಿ ಕನ್ನಡ ನಾಟಕ ಏಕೆ' ಎಂದು ಅನುಮತಿ ನಿರಾಕರಿಸಿದ್ದರು!

ಆದರೆ, ಸುಮ್ಮನಿರದ ಕನ್ನಡಿಗರು, 'ಕನ್ನಡದ ನಾಟಕಕ್ಕೆ ಏಕೆ ಅಡ್ಡಿ' ಎನ್ನುತ್ತ ರಂಗ ಪ್ರದರ್ಶನ ಮಾಡಿಯೇ ಬಿಟ್ಟರು.

ತೆಲುಗು ನಾಡಿನಲ್ಲಿದ್ದರೂ ಅಲ್ಲಿನ ಕನ್ನಡಿಗರು ಕನ್ನಡದ ಅಸ್ಮಿತೆಯಲ್ಲೇ ಬದುಕುತ್ತಿದ್ದಾರೆ. ಕರ್ನಾಟಕ ಏಕೀಕರಣದ ನಂತರ ಗಡಿನಾಡ ಕನ್ನಡಿಗರು ನಿತ್ಯವೂ ಇಂಥ ಸಾಂಸ್ಕೃತಿಕ, ಸಾಮಾಜಿಕ, ಶೈಕ್ಷಣಿಕ, ರಾಜಕೀಯ ವಾಗ್ವಾದಕ್ಕೆ ಮುಖಾಮುಖಿ ಆಗುತ್ತಲೇ ಇದ್ದಾರೆ. ಹಲವು ಸವಾಲು ಎದುರಾದರೂ ಅವರು ಧೃತಿಗೆಟ್ಟಿಲ್ಲ. ಕನ್ನಡದ ಮೇಲಿನ ಅಭಿಮಾನವೂ ಕಡಿಮೆಯಾಗಿಲ್ಲ.

2022ರ ಏಪ್ರಿಲ್ 4ರಲ್ಲಿ ಸತ್ಯಸಾಯಿ ಜಿಲ್ಲೆ ಅಸ್ತಿತ್ವಕ್ಕೆ ಬಂತು. ಅಲ್ಲಿಯವರೆಗೆ ಅನಂತಪುರ ಜಿಲ್ಲೆಗೆ ಸೇರಿದ್ದ, ಅದಕ್ಕೂ ಮುನ್ನ ಮೈಸೂರು ಸಂಸ್ಥಾನದ ಆಡಳಿತದಲ್ಲಿದ್ದ ಮಡಕಶಿರಾ ತಾಲ್ಲೂಕಿನ ಮಡಕಶಿರಾ, ಅಗಳಿ, ರೊಳ್ಳ, ಗುಡಿಬಂಡ, ಅಮರಾಪುರ ಮಂಡಲದ ಕನ್ನಡಿಗರು ಇಂದಿಗೂ ಅಲ್ಲಿ ಪರಕೀಯರೇ. ಹಿರೇತುರ್ಪಿ ಗ್ರಾಮವು ತುಮಕೂರು ಜಿಲ್ಲೆಯ ಶಿರಾ ತಾಲ್ಲೂಕಿನಿಂದ 8 ಕಿ.ಮೀ ಮತ್ತು ಪಾವಗಡ ಗಡಿ ಗ್ರಾಮದಿಂದ 2.5 ಕಿ.ಮೀ. ದೂರದಲ್ಲಿದೆ.

ಶಿಕ್ಷಣ, ಉದ್ಯೋಗ ಮತ್ತು ಕೌಟುಂಬಿಕ ಸಂಬಂಧಗಳಿಗಾಗಿ ಕರ್ನಾಟಕದ ಮೇಲೆ ತಪ್ಪದ ಅವಲಂಬನೆ ಮತ್ತು ಗಡಿಯ ಒಳಗೂ-ಹೊರಗೂ ಆವರಿಸುವ ಪರಕೀಯ ಪ್ರಜ್ಞೆ-ರಾಜ್ಯದ ವಿವಿಧ ಭಾಗದ ಗಡಿಕನ್ನಡಿಗರನ್ನು ಹೈರಾಣು ಮಾಡಿದೆ.

ಗಂಡು ಮಕ್ಕಳಿಗೆ ಪೋಷಕರು ಕರ್ನಾಟಕದಿಂದಲೇ ಹೆಣ್ಣು ತರುತ್ತಾರೆ. ಹೀಗಾಗಿ ತಾಯಿಯ ಆಧಾರ್ ಕಾರ್ಡ್‌ನಲ್ಲಿ ಕರ್ನಾಟಕದ ವಿಳಾಸ. ತಂದೆಯ ಆಧಾರ್ ಕಾರ್ಡ್‌ನಲ್ಲಿ ತೆಲುಗುನಾಡಿನ ವಿಳಾಸ. ನಂತರ, ಕಾರ್ಡ್‌ನಲ್ಲಿ ವಿಳಾಸವಷ್ಟೇ ಬದಲಾಗುತ್ತದೆ.

'ತಂದೆಯದ್ದು ತೆಲುಗು, ತಾಯಿಯದ್ದು ಕನ್ನಡ. ನನ್ನದು ಕಂದೆಲುಗು ಭಾಷೆ' ಎನ್ನುತ್ತಾರೆ ಸಂಶೋಧಕ ಸಿ.ಶಿವಣ್ಣ, ಅವರ ಮಾತೃಭಾಷೆ ಕನ್ನಡ. ಗುಡಿಬಂಡ ಮಂಡಲದ ಪ್ರೌಢಶಾಲೆಯಲ್ಲಿ ಅವರು ತೆಲುಗು ಮಾಧ್ಯಮದಲ್ಲಿ ಓದಿದ್ದಾರೆ. ಮಡಕಶಿರಾದಲ್ಲಿ ಪಿಯುಸಿ, ಪೆನುಕೊಂಡದಲ್ಲಿ ಪದವಿ, ಶ್ರೀಕೃಷ್ಣ ದೇವರಾಯ ವಿಶ್ವವಿದ್ಯಾಲಯದಲ್ಲಿ ಪಿಎಚ್.ಡಿ ಮಾಡಿದ್ದಾರೆ.

ಸಿ.ಶಿವಣ್ಣ ಕನ್ನಡ, ತೆಲುಗು ಎರಡರಲ್ಲೂ ಕೃತಿಗಳನ್ನು ರಚಿಸಿದ್ದಾರೆ. ಮಡಕಶಿರಾ ಮಂಡಲದ ಗೌಡನಹಳ್ಳಿಯ ಜಿಲ್ಲಾ ಪರಿಷತ್ ಉನ್ನತ ಪ್ರೌಢಶಾಲೆಯಲ್ಲಿ ಅವರು ತೆಲುಗು ಶಿಕ್ಷಕರು. ಆದರೂ ಅವರು ಅಲ್ಲಿ 'ಕನ್ನಡದ ಕವಿ' ಎಂದೇ ಪ್ರಸಿದ್ಧ!

'ಕರ್ನಾಟಕ ಸರ್ಕಾರ ನಮ್ಮ ಊರುಗಳಿಗೆ ಗಡಿಪ್ರದೇಶ ಎಂಬ ಮಾನ್ಯತೆ ನೀಡಬೇಕು. ಶಿಕ್ಷಣ, ಉದ್ಯೋಗದ ಅವಕಾಶ ಕಲ್ಪಿಸಬೇಕು. ಆದರೆ, ನಮ್ಮ ಸಮಸ್ಯೆಯನ್ನು ಸರ್ಕಾರ ಅರ್ಥ ಮಾಡಿಕೊಳ್ಳುತ್ತಲೇ ಇಲ್ಲ' ಎಂದು ಅವರು ಬೇಸರ ವ್ಯಕ್ತಪಡಿಸುತ್ತಾರೆ.

ಅನಂತಪುರ ಜಿಲ್ಲೆಯ ಮತ್ತೊಂದು ಮೂಲೆಯಲ್ಲಿರುವ, ಬಳ್ಳಾರಿ ಗಡಿಭಾಗದ ಡಿ.ಹಿರೇಹಾಳ್‌ಗೆ ಹೋಗಿ ನಿಂತರೂ ಇದೇ ಮಾತು ಮಾರ್ದನಿಸುತ್ತದೆ.

ಸೌಲಭ್ಯಗಳ ಕೊರತೆ; ಬೇಕಿದೆ ಕಾಳಜಿಯ ಒರತೆ

• ವಿಕ್ರಂ ಕಾಂತಿಕೆರೆ/ನಾಗರಾಜ ಚಿನಗುಂಡಿ/ಇಮಾಮಹುಸೇನ್ ಗೂಡುನವರ

ಮಂಗಳೂರು/ರಾಯಚೂರು/ಬೆಳಗಾವಿ: ಗಡಿಭಾಗದ ಕಾಸರಗೋಡು, ರಾಯಚೂರು ಮತ್ತು ಬೆಳಗಾವಿಯಲ್ಲಿ ಕನ್ನಡ ಶಾಲೆಗಳ ಸಮಸ್ಯೆಗಳು ಹಲವು ಬಗೆ. ಮಹಾರಾಷ್ಟ್ರ ಮತ್ತು ಗೋವಾ ರಾಜ್ಯಗಳೊಂದಿಗೆ ಗಡಿ ಹಂಚಿಕೊಂಡಿರುವ ಬೆಳಗಾವಿ ಜಿಲ್ಲೆಯಲ್ಲಿ ಕನ್ನಡ ಶಾಲೆಗಳು ದಯನೀಯ ಸ್ಥಿತಿಯಲ್ಲಿವೆ. ಕಾಸರಗೋಡಿನಲ್ಲಿ ಮೂಲಸೌಲಭ್ಯಗಳ ಕೊರತೆ ಇಲ್ಲದಿದ್ದರೂ ಭಾಷೆಯ ಹೆಸರಿನಲ್ಲಿ ನಡೆಯುತ್ತಿರುವ ತಾರತಮ್ಯದಿಂದಾಗಿ ಕನ್ನಡದ ಅಸ್ಮಿತೆಗೆ ಪೆಟ್ಟು ಬಿದ್ದಿದೆ. ತೆಲಂಗಾಣ ಮತ್ತು ಆಂಧ್ರಪ್ರದೇಶ ರಾಜ್ಯಗಳ ಗಡಿಯಲ್ಲಿ ಶಿಕ್ಷಕರ ಕೊರತೆಯೇ ದೊಡ್ಡ ಸಮಸ್ಯೆ.

ಕಾಸರಗೋಡಿನ ಕನ್ನಡ-ಮಲಯಾಳಂ ಮಾಧ್ಯಮ ಶಾಲೆಗಳಲ್ಲಿ ಸ್ಪರ್ಧೆಗಳು ಸೇರಿದಂತೆ ವಿವಿಧ ಯೋಜನೆಗಳಲ್ಲಿ ಈ ಹಿಂದೆ ಕನ್ನಡ ಮತ್ತು ಮಲಯಾಳಂಗೆ ಪ್ರತ್ಯೇಕ ವಿಭಾಗಗಳಿದ್ದವು. ಈಗ ಅವುಗಳೆಲ್ಲವೂ 'ಸಾಮಾನ್ಯ' ಆಗಿವೆ. ಇದರಿಂದ ಮಲಯಾಳಂ ಸ್ಪರ್ಧಿಗಳ ಆಧಿಪತ್ಯಕ್ಕೆ ಹಾದಿ ಸುಗಮವಾಗುತ್ತಿದೆ.

ಶಿಕ್ಷಕರನ್ನು ನೇಮಕ ಮಾಡುವಾಗ ಮಲಯಾಳಿಗಳಿಗೆ ಮಣೆ ಹಾಕುವ ಪ್ರಯತ್ನ ನಡೆಯುತ್ತಿದೆ ಎಂಬ ಆರೋಪವಿದೆ. ಅನುದಾನಿತ ಶಾಲೆಗಳಲ್ಲಿ ಕೂಡ ಈ ಚಾಳಿ ಇದೆ ಎಂಬ ದೂರುಗಳೂ ಇವೆ. ಮುಖ್ಯ ಶಿಕ್ಷಕರ ನೇಮಕಾತಿ ಪ್ರಕ್ರಿಯೆಗೆ ಗ್ರಹಣ ಹಿಡಿದಿದ್ದು 12 ಕನ್ನಡ ಶಾಲೆಗಳಲ್ಲಿ ಮುಖ್ಯ ಶಿಕ್ಷಕರ ಹುದ್ದೆ ಖಾಲಿ ಇದೆ. ಅಲ್ಲೆಲ್ಲ ಮಲಯಾಳಿ 'ಪ್ರಭಾರಿ'ಗಳದ್ದೇ ಆಧಿಪತ್ಯ.

ಬೆಳಗಾವಿ ಗಡಿ ಭಾಗದ ಸರ್ಕಾರಿ ಶಾಲೆಗಳು ಹಾಜರಾತಿ ಕೊರತೆಯ ಕಾರಣ ಮುಚ್ಚುವ ಹಂತಕ್ಕೆ ಬಂದಿವೆ. ಶಿಕ್ಷಕರ ಮತ್ತು ಸೌಕರ್ಯಗಳ ಕೊರತೆ ಇಲ್ಲಿ ತೀವ್ರವಾಗಿ ಕಾಡುತ್ತಿದೆ.

ಮಹಾರಾಷ್ಟ್ರ ಹಾಗೂ ಗೋವಾ ರಾಜ್ಯಗಳಲ್ಲಿ ವಾಸಿಸುತ್ತಿರುವ ಕನ್ನಡಿಗರ ಪೈಕಿ ಅನೇಕರು ಕನ್ನಡ ಕಲಿಕೆಯ ಆಸಕ್ತಿಯಿಂದಾಗಿ ಗಡಿಯ ಕನ್ನಡ ಮಾಧ್ಯಮ ಸರ್ಕಾರಿ ಶಾಲೆಗಳಲ್ಲಿ ತಮ್ಮ ಮಕ್ಕಳನ್ನು ಸೇರಿಸಿದ್ದಾರೆ. ಆದರೆ, ಗುಣಮಟ್ಟದ ಶಿಕ್ಷಣ ಸಿಗುತ್ತಿಲ್ಲ ಎಂಬ ಆತಂಕದಿಂದ ಇಂಗ್ಲಿಷ್ ಅಥವಾ ಮರಾಠಿ ಮಾಧ್ಯಮಗಳತ್ತ ಸಾಗುತ್ತಿರುವುದು ಈಚಿನ ಬೆಳವಣಿಗೆ.

ಕನ್ನಡ ಕಲಿಕೆಗೇ ಕುತ್ತು!: ಬೆಳಗಾವಿ ಗಡಿಭಾಗದಲ್ಲಿ ಕನ್ನಡ ಮಾಧ್ಯಮದ ಜೊತೆಗೆ ಮರಾಠಿ ಮಾಧ್ಯಮ ಶಾಲೆಗಳೂ ಇವೆ. ಹಳ್ಳಿಗಳಲ್ಲಿ ಮಕ್ಕಳಿಗೆ ಕನ್ನಡ ಕಲಿಸಲು ಮರಾಠಿ ಭಾಷಿಗರೂ ಆಸಕ್ತಿ ತೋರಿಸುತ್ತಿದ್ದಾರೆ. ಆದರೆ, ಜಿಲ್ಲೆಯ 564 ಸರ್ಕಾರಿ ಮರಾಠಿ ಪ್ರಾಥಮಿಕ ಶಾಲೆಗಳ ಪೈಕಿ 123 ಶಾಲೆಗಳಲ್ಲಿ ಕನ್ನಡ ಭಾಷಾ ಶಿಕ್ಷಕರೇ ಇಲ್ಲ. ಹಾಗಾಗಿ ತವರಿನಲ್ಲೇ ಕನ್ನಡ ಕಲಿಕೆಗೆ ಕುತ್ತು ಬಂದಿದೆ. ಜಿಲ್ಲೆಯಲ್ಲಿ 1,416 ತರಗತಿ ಕೊಠಡಿಗಳು ಶಿಥಿಲಾವಸ್ಥೆ ತಲುಪಿವೆ. 3,402 ಸರ್ಕಾರಿ ಶಾಲೆಗಳಿದ್ದು 5,263 ಶಿಕ್ಷಕರ ಹುದ್ದೆಗಳು ಹಲವು ವರ್ಷಗಳಿಂದ ಖಾಲಿ ಇವೆ. ಸರ್ಕಾರ 2,862 ಅತಿಥಿ ಶಿಕ್ಷಕರನ್ನಷ್ಟೇ ನೇಮಕ ಮಾಡಿದೆ.

ಗಡಿ ಪ್ರೌಢಶಾಲೆಗೆ ಏಕೈಕ ಮುಖ್ಯೋಪಾಧ್ಯಾಯ!

ರಾಯಚೂರು ತಾಲ್ಲೂಕಿನ 40ಕ್ಕೂ ಹೆಚ್ಚು ಗ್ರಾಮಗಳು ತೆಲಂಗಾಣ ಮತ್ತು ಆಂಧ್ರಪ್ರದೇಶ ರಾಜ್ಯಗಳ ಗಡಿಗೆ ಹೊಂದಿಕೊಂಡಿವೆ. ರಾಯಚೂರಿನಿಂದ 24 ಕಿಲೋಮೀಟರ್ ದೂರ, ತೆಲಂಗಾಣ ಗಡಿಭಾಗದಲ್ಲಿರುವ ಡಿ.ರಾಂಪೂರ ಗ್ರಾಮದ ಉನ್ನತೀಕರಿಸಿದ ಸರ್ಕಾರಿ ಪ್ರೌಢಶಾಲೆಯನ್ನು ಮುಖ್ಯೋಪಾಧ್ಯಾಯ ಶರಬಸಪ್ಪ ನೀಲಗಲ್‌ಕರ್ ಒಬ್ಬರೇ ಮುನ್ನಡೆಸುತ್ತಿದ್ದಾರೆ. 2018ರಲ್ಲಿ ಕೆಕೆಆರ್‌ಡಿಬಿ ಅನುದಾನದಲ್ಲಿ ಮೂರು ಕೊಠಡಿಗಳನ್ನು ನಿರ್ಮಿಸಿ ಪ್ರೌಢಶಾಲೆ ಆರಂಭಿಸಲಾಗಿದ್ದು 111 ವಿದ್ಯಾರ್ಥಿಗಳು ಇಲ್ಲಿ ಓದುತ್ತಿದ್ದಾರೆ.

ಭಾಷೆ ಕಲಿಕೆ ಕಡ್ಡಾಯ ನಿಯಮ; ಅಸ್ಮಿತೆಗೆ ಪೆಟ್ಟು

• ಶಶಿಕಾಂತ ಎಸ್. ಶೆಂಬೆಳ್ಳಿ

ಹೊಸಪೇಟೆ (ವಿಜಯನಗರ): ಆಯಾ ರಾಜ್ಯಗಳ ಆಡಳಿತ ಭಾಷೆಯನ್ನು ಕಡ್ಡಾಯವಾಗಿ ಕಲಿಯಲೇಬೇಕು ಎಂಬ ನಿಯಮ ಗಡಿ ರಾಜ್ಯದಲ್ಲಿ ವಾಸಿಸುತ್ತಿರುವ ಕನ್ನಡಿಗರ ಭವಿಷ್ಯವನ್ನೇ ಅತಂತ್ರಗೊಳಿಸಿದೆ.

ರಾಜ್ಯದ ಗಡಿಗೆ ಹೊಂದಿಕೊಂಡಿರುವ ಮಹಾರಾಷ್ಟ್ರ, ಕೇರಳ, ಆಂಧ್ರ ಪ್ರದೇಶ, ತಮಿಳುನಾಡಿನಲ್ಲಿ ಆ ರಾಜ್ಯದ ವಿವಿಧ ದರ್ಜೆಯ ಬಹುತೇಕ ನೌಕರಿಗಳಿಗೆ ಅರ್ಹತೆ ಇರುವ ಯಾರು ಬೇಕಾದರೂ ಅರ್ಜಿ ಸಲ್ಲಿಸಬಹುದು. ಸ್ಪರ್ಧಾತ್ಮಕ ಪರೀಕ್ಷೆ ಬರೆದು, ನೌಕರಿ ಗಿಟ್ಟಿಸಿಕೊಂಡರೂ 5 ರಿಂದ 10 ವರ್ಷಗಳ ಒಳಗೆ ಆ ರಾಜ್ಯದ ಭಾಷೆ ಕಲಿಕೆ ಕಡ್ಡಾಯ. ಅದಕ್ಕೆಂದೇ ಭಾಷಾ ಪರೀಕ್ಷೆ ನಡೆಸಲಾಗುತ್ತದೆ. ಅನುತ್ತೀರ್ಣರಾದರೆ ನೌಕರಿ ಕಳೆದುಕೊಳ್ಳಬೇಕಾಗುತ್ತದೆ.

ನೌಕರಿಗೂ ಮುನ್ನ ಭಿನ್ನವಾದ ಪಡಿಪಾಟಲು. ಆಂಧ್ರ ಪ್ರದೇಶದಲ್ಲಿ ಲಂಬಾಣಿ ಸಮುದಾಯದರು ಪರಿಶಿಷ್ಟ ಪಂಗಡಕ್ಕೆ (ಎಸ್‌ಟಿ) ಸೇರಿದರೆ, ಕರ್ನಾಟಕದಲ್ಲಿ ಪರಿಶಿಷ್ಟ ಜಾತಿಯ (ಎಸ್‌ಸಿ) ವ್ಯಾಪ್ತಿಗೆ ಬರುತ್ತಾರೆ. ಆಂಧ್ರ ಪ್ರದೇಶದ ಎಸ್‌ಟಿ ಪ್ರಮಾಣ ಪತ್ರವನ್ನು ಕರ್ನಾಟಕ ಮಾನ್ಯ ಮಾಡುವುದಿಲ್ಲ. ಎರಡೂ ಕಡೆ ಒಂದೇ ಪ್ರಮಾಣ ಪತ್ರ ಸಿಗುವುದಿಲ್ಲ. ಉನ್ನತ ಶಿಕ್ಷಣದ ಜೊತೆಗೆ ನೌಕರಿ ಪಡೆಯುವಾಗ ಇದು ದೊಡ್ಡ ತೊಡಕಾಗುತ್ತದೆ.

ಪದವಿ ಮುಗಿಸಿದರೂ ಸರ್ಕಾರಿ ನೌಕರಿಗಾಗಿ ಭಾಷಾ ಪರೀಕ್ಷೆ ಉತ್ತೀರ್ಣ ಆಗಬೇಕಾಗಿರುವುದು ಮಹಾರಾಷ್ಟ್ರ, ಕೇರಳ, ತಮಿಳುನಾಡು ಮತ್ತು ಆಂಧ್ರಪ್ರದೇಶದಲ್ಲಿ ಕಡ್ಡಾಯ. ನೌಕರಿಗಾಗಿ ಕನ್ನಡಿಗರು ಆಯಾ ರಾಜ್ಯದ ಸ್ಥಳೀಯ ಭಾಷೆಗಳಲ್ಲಿ ಶಿಕ್ಷಣ ಪಡೆದರೂ ಅವರನ್ನು ದ್ವಿತೀಯ ದರ್ಜೆ ಪ್ರಜೆಗಳನ್ನಾಗಿ ನೋಡಲಾಗುತ್ತದೆ. ಬಡ್ತಿ ಸೇರಿ ಇತರೆ ಸಂದರ್ಭಗಳಲ್ಲಿ ಕನ್ನಡಿಗರಿಗೆ ಸತತವಾಗಿ ಅನ್ಯಾಯವಾಗುತ್ತದೆ' ಎಂಬುದು ಗಡಿ ಕನ್ನಡಿಗರ ಅಳಲು.

ಆಡಳಿತ ಭಾಷೆ ಕಲಿಕೆ ಎರಡು ಅಲಗಿನ ಕತ್ತಿಯಂತೆ. ಕಲಿಯುವುದು ಅನಿವಾರ್ಯ. ಆದರೆ, ಕಲಿತ ನಂತರ ಅದೇ ರೂಢಿಯಾಗಿ ಕನ್ನಡ ಕರಗುತ್ತಿದೆ. ಗಡಿ ಕನ್ನಡಿಗರ ಪರಿಸ್ಥಿತಿಯೂ ಹೀಗೆ ಇದೆ

ನರೇಶ್ ಮುಳ್ಳೇರಿಯ, ಆಯುರ್ವೇದ ವೈದ್ಯ

ಮಹಾರಾಷ್ಟ್ರದಲ್ಲಿ ಎಲ್ಲ ಸರ್ಕಾರಿ ಗುರುತಿನ ಚೀಟಿ, ಆದೇಶ ಮರಾಠಿಯಲ್ಲೇ ಇರುತ್ತವೆ. ಸಹಜವಾಗಿ ಇದು ಅಲ್ಲಿಯ ಕನ್ನಡಿಗರ ಅಂತಃಸತ್ವವನ್ನೇ ಕುಗ್ಗಿಸುತ್ತಿದೆ

ಅಶೋಕ ಚಂದರಗಿ, ಅಧ್ಯಕ್ಷ, ಬೆಳಗಾವಿ ಜಿಲ್ಲಾ ಕನ್ನಡ ಸಂಘಟನೆಗಳ ಕ್ರಿಯಾ ಸಮಿತಿ

ಗಡಿ ಗ್ರಾಮ: ಸಿಗದ ಪರಿಹಾರ

ಒಂದನೇ ಪುಟದಿಂದ

ಎರಡೂ ಗಡಿಗಳಲ್ಲಿ ನದಿಗಳಿದ್ದರೂ ಗಡಿಗ್ರಾಮಗಳಿಗೆ ಇಂದಿಗೂ ನೀರಾವರಿ ಸೌಲಭ್ಯವಿಲ್ಲ.

ತೆಲಂಗಾಣದಲ್ಲಿ ಸಂಗಂಬಂಡಾ ಜಲಾಶಯ ನಿರ್ಮಾಣದ ಬಳಿಕ ಕರ್ನಾಟಕದ ಗಡಿ ಗ್ರಾಮ ಚಲ್ದೇರಿ ಸೇರಿ ಸುತ್ತಮುತ್ತಲಿನ ಕೆಲ ಗ್ರಾಮಗಳ ರೈತರ ಸ್ಥಿತಿ ಚಿಂತಾಜನಕವಾಗಿದೆ. ಸಂಗಂಬಂಡಾ ಹಿನ್ನೀರಿನಿಂದ ಇಲ್ಲಿನ ರೈತರಿಗೆ ಸೇರಿದ ಜಮೀನುಗಳಲ್ಲಿ ಬೆಳೆ ನಾಶವಾಗುತ್ತಿದೆ.

ಬೀದರ್ ಜಿಲ್ಲೆಯ ಗಡಿಯಲ್ಲಿ ಸಂಪರ್ಕ ರಸ್ತೆಗಳು ಸುಸ್ಥಿತಿಯಲ್ಲಿ ಇಲ್ಲ. ರಾಜ್ಯ ಹಾಗೂ ರಾಷ್ಟ್ರೀಯ ಹೆದ್ದಾರಿಗಳೂ ಹಾಳಾಗಿವೆ. ಔರಾದ್-ಬೀದರ್, ಬೀದರ್-ಹುಮನಾಬಾದ್ ಹೆದ್ದಾರಿ ಕಾಮಗಾರಿ ಪೂರ್ಣವಾಗಿಲ್ಲ. ಕಾಮಗಾರಿ ಆಮೆವೇಗದಲ್ಲಿ ಸಾಗಿದೆ.

ಉದ್ಯೋಗ ಸಮಸ್ಯೆ: ಬೀದರ್, ಕಲಬುರಗಿ ಜಿಲ್ಲೆಯವರು ಹೈದರಾಬಾದ್‌ಗೆ, ರಾಯಚೂರು, ವಿಜಯಪುರ ಹಾಗೂ ಬೆಳಗಾವಿ ಜಿಲ್ಲೆಯವರು ಮುಂಬೈ, ಗೋವಾಕ್ಕೆ ವಲಸೆ ಹೋಗುತ್ತಾರೆ. ಚಿಕ್ಕಬಳ್ಳಾಪುರ ಸೇರಿದಂತೆ ಕೆಲ ಜಿಲ್ಲೆಗಳ ಗ್ರಾಮಸ್ಥರು ನೆರೆ ರಾಜ್ಯದ ಗಡಿಯಲ್ಲಿರುವ ಕೈಗಾರಿಕೆಗಳಿಗೆ ದುಡಿಯಲು ಹೋಗುತ್ತಾರೆ. ಕೃಷಿ ಚಟುವಟಿಕೆಯಿಂದ ನಷ್ಟಕ್ಕೆ ಒಳಗಾಗಿರುವ ಅವರು ಉದ್ಯೋಗಕ್ಕೆ ಮೊರೆ ಹೋಗುವುದು ಅನಿವಾರ್ಯವಾಗಿದೆ.

ಗಡಿಯಲ್ಲಿ ಬಂಕ್‌ಗಳು ಇಲ್ಲ: ತೆಲಂಗಾಣ ಹಾಗೂಮಹಾರಾಷ್ಟ್ರಕ್ಕೆಹೊಂದಿಕೊಂಡಿರುವ ಗ್ರಾಮಗಳ ಬಳಿ ಪೆಟ್ರೋಲ್ ಬಂಕ್‌ಗಳಿಲ್ಲ. ಗಡಿಪ್ರದೇಶದಲ್ಲಿ ಕಿರಾಣಿ ಅಂಗಡಿಯವರು ಪೆಟ್ರೋಲ್ ತುಂಬಿರುವ ಪ್ಲಾಸ್ಟಿಕ್ ಬಾಟಲಿಗಳನ್ನು ತೂಗಿ ಹಾಕಿ, ಮಾರುತ್ತಾರೆ.

ದೂರದ ತಾಲ್ಲೂಕು ಕೇಂದ್ರಗಳಿಗೆ ಹೋಗಲು ಸಾಧ್ಯವಾಗದ ಬೈಕ್ ಸವಾರರು ಕಿರಾಣಿ ಅಂಗಡಿಗಳಲ್ಲೇ ಪೆಟ್ರೋಲ್ ಖರೀದಿಸುತ್ತಾರೆ. ಹೀಗೆ ಪೆಟ್ರೋಲ್ ಮಾರಾಟ ಕಾನೂನು ಬಾಹಿರ ಎನ್ನುವುದು ಗೊತ್ತಿದ್ದರೂ ಬಹಿರಂಗವಾಗಿಯೇ ನಡೆಯುತ್ತಿದೆ.

ಸರ್ಕಾರಿ ಕಚೇರಿಗಳಲ್ಲಿ ಪ್ರಮುಖ ಹುದ್ದೆಗಳು ಖಾಲಿ ಇವೆ. ದುಡಿಯುವ ಕೈಗಳಿಗೆ ಉದ್ಯೋಗ ನೀಡುವ ಕೈಗಾರಿಕೆಗಳಿಲ್ಲ. ಗಡಿ ಭಾಗದ ಜನರ ಗೋಳು ಕೇಳುವವರಿಲ್ಲ

ಮಹಾದೇವಪ್ಪ ಎಂಟಪಲ್ಲಿ, ಸಾಮಾಜಿಕ ಕಾರ್ಯಕರ್ತ

ಗಡಿ ಭಾಗದಲ್ಲೂ ಉದ್ಯಮಗಳ ಸ್ಥಾಪನೆಗೆ ಅನುಕೂಲಕರ ವಾತಾವರಣವಿದೆ. ಕೈಗಾರಿಕೆಗಳ ಸ್ಥಾಪನೆಗೆ ಮೂಲಸೌಕರ್ಯ ಒದಗಿಸಿ ಔದ್ಯೋಗಿಕ ಪ್ರಗತಿಗೆ ಸರ್ಕಾರ ಒತ್ತು ನೀಡಬೇಕು

ರಾಜು ಖಿಚಡೆ, ಗ್ರಾ.ಪಂ. ಅಧ್ಯಕ್ಷ, ಕಾರದಗಾ, ನಿಪ್ಪಾಣಿ ತಾಲ್ಲೂಕು

ಗಡಿನಾಡು ಕಾಸರಗೋಡಿನಲ್ಲಿ ಕನ್ನಡಿಗರ ಮತ್ತು ಕನ್ನಡದ ಅಭಿವೃದ್ಧಿ ಆಗಿಲ್ಲ ಎನ್ನುವುದಕ್ಕೆ ನಮ್ಮ ಒಗ್ಗಟ್ಟಿನ ಕೊರತೆಯೂ ಕಾರಣ

ಸ್ನೇಹಲತಾ ದಿವಾಕರ್, ಕುಂಬ್ಳೆ, ಕಾಸರಗೋಡು

ರಸ್ತೆ, ನೀರಿಗಾಗಿ ಪಿಐಎಲ್

ಒಂದನೇ ಪುಟದಿಂದ

ಗಡಿ ಜಿಲ್ಲೆಗಳಲ್ಲಿ ರಾಜಕಾರಣಿಗಳು, ಗುತ್ತಿಗೆದಾರರು ಮತ್ತು ಭ್ರಷ್ಟ ಅಧಿಕಾರಿಗಳು ಒಳಗೊಂಡ ದೊಡ್ಡ ಸರಪಳಿ ಇದೆ. ಎಲ್ಲರೂ ಬೇರೆ ಬೇರೆ ಕಾರಣಕ್ಕೆ ಗಡಿ ಸಮಸ್ಯೆಗಳನ್ನು ಜೀವಂತವಾಗಿ ಇಡಲು ಬಯಸುತ್ತಾರೆ.

ಕೋಲಾರ, ಚಿಕ್ಕಬಳ್ಳಾಪುರ ಜಿಲ್ಲೆಗಳ ಗಡಿ ಗ್ರಾಮಗಳಲ್ಲಿ ಕುಡಿಯುವ ನೀರಿನಲ್ಲಿ ಫ್ಲೋರೈಡ್ ಅಂಶ ಅಧಿಕ ಇದೆ. ಜಿಲ್ಲೆಗಳಲ್ಲಿ ದೊಡ್ಡ ನದಿಗಳು ಹರಿದಿಲ್ಲ. ಅಂತರ್ಜಲ ಮಟ್ಟ ಪಾತಾಳಕ್ಕೆ ಕುಸಿದಿದೆ. ಶುದ್ಧ ನೀರನ್ನು ಖರೀದಿಸಿಯೇ ಕುಡಿಯಬೇಕಾದ ಸ್ಥಿತಿಯಿದೆ.

ಗುಂಡಣ್ಣ

25 ವರ್ಷಗಳ ಹಿಂದೆ

ಗುರುವಾರ, 31-7-1997

• ಶರಣಾದ ಲಾಲೂ ನ್ಯಾಯಾಂಗ ವಶಕ್ಕೆ

ಪಾಟ್ನಾ, ಜುಲೈ 30 (ಪಿಟಿಐ, ಯುಎನ್ಐ)– ಬಿಹಾರದ ಮಾಜಿ ಮುಖ್ಯಮಂತ್ರಿ ಹಾಗೂ ರಾಷ್ಟ್ರೀಯ ಜನತಾ ದಳದ ಅಧ್ಯಕ್ಷ ಲಾಲೂ ಪ್ರಸಾದ್ ಯಾದವ್ ಅವರನ್ನು 950 ಕೋಟಿ ರೂಪಾಯಿಯ ಮೇವು ಹಗರಣದಲ್ಲಿ ಇಂದು ಆಗಸ್ಟ್ 13 ರವರೆಗೆ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಯಿತು.

ಸಿಬಿಐ ವಿಶೇಷ ನ್ಯಾಯಾಲಯದ ಶರಣಾದ ಲಾಲೂ ಯಾದವ್ ಅವರು ಸಲ್ಲಿಸಿದ್ದ ಜಾಮೀನು ಅರ್ಜಿಯನ್ನು ವಜಾ ಮಾಡಿದ ನ್ಯಾಯಾಧೀಶ ಎಸ್.ಕೆ. ಲಾಲ್ ಅವರು, ಲಾಲೂ ಅವರನ್ನು ಸೂಕ್ತ ರಕ್ಷಣೆಯಲ್ಲಿರಿಸು ವಂತೆ ಆದೇಶಿಸಿದರು.

50 ವರ್ಷಗಳ ಹಿಂದೆ

ಸೋಮವಾರ, 31-7-1972

• ಪ್ರಧಾನಿ ಕರೆದ ಸಭೆಗೆ ಆರು ವಿರೋಧ ಪಕ್ಷಗಳ ಬಹಿಷ್ಕಾರ

ನವದೆಹಲಿ, ಜುಲೈ 30– ಪ್ರಧಾನಮಂತ್ರಿ ಇಂದಿರಾಗಾಂಧಿ ಅವರು ಭಾನುವಾರ ಸಂಜೆ ವ್ಯವಸ್ಥೆಪಡಿಸಿದ್ದ ಸಂಸತ್ ವಿರೋಧಪಕ್ಷ ನಾಯಕರ ಸಭೆಯನ್ನು ಆರು ವಿರೋಧ ಪಕ್ಷಗಳು ಇಂದು ಬಹಿಷ್ಕರಿಸಿದವು.

ಮಾರ್ಕ್ಸಿಸ್ಟ್ ಸಂಸತ್ ಸದಸ್ಯ ಜ್ಯೋತಿರ್ಮಯಿ ಬಸು ಅವರ ನಿವಾಸದಲ್ಲಿ ಇಂದು ಬೆಳಿಗ್ಗೆ ಸಮಾವೇಶಗೊಂಡಿದ್ದ ವಿರೋಧ ಪಕ್ಷಗಳ ಸಭೆಯಲ್ಲಿ ಬಹಿಷ್ಕಾರದ ನಿರ್ಧಾರ ಕೈಗೊಳ್ಳಲಾಯಿತಲ್ಲದೆ, ಸಭೆಗೆ ಬರಲು ಸಾಧ್ಯವಾಗುವುದಿಲ್ಲ ಎಂದು ಪಾರ್ಲಿಮೆಂಟರಿ ವ್ಯವಹಾರ ಸಚಿವ ರಾಜ್ ಬಹಾದುರ್ ಅವರಿಗೆ ಅವರಿಗೆ ಪತ್ರ ಕೂಡ ಕಳುಹಿಸಿ ಕೊಡಲಾಯಿತು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಭಾನುವಾರ ಜುಲೈ 31, 2022

ಶ್ರೀ ಶುಭಕೃತ್ ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಶ್ರಾವಣ ಶುದ್ಧ ತೃತೀಯ ಗಂ. 28-19 ನಕ್ಷತ್ರ: ಮಘಾ ಗಂ. 14-20 ಯೋಗ: ವರಿಯಾನ್ ಗಂ. 19-11, ಕರಣ: ತೈತಿಲ ಗಂ. 15-42, ಕರ್ಕಾಟಕ ಮಾಸದ 14 ನೇ ದಿನ. ರಾಹುಕಾಲ : ಸಾಯಂಕಾಲ 04:30 – 06:00 ಸೂರ್ಯೋದಯ : 06-19 ಸೂರ್ಯಾಸ್ತ : 06-55
ಮುಸ್ಲಿಂ ದಿನಾಂಕ : 01 ಮೊಹರಮ್ ದಿನ ವಿಶೇಷ : ಮಧುಶ್ರಾವ ತೃತೀಯ (ತೀಜ್), ಆಡಿ ಪೂರಮ್ (ದ.ಭಾರತ), ಇಸ್ಲಾಮಿಕ್ ಹೊಸ ವರ್ಷ ದಿನ (ಹಿಜಿರ 1444 ಆರಂಭ)
ಅದೃಷ್ಟ ಸಂಖ್ಯೆ : 4, 11

ಮೇಷ: ಹಿರಿಯರು ಹೇಳಿದಂತೆ ದೂರ ದೃಷ್ಟಿ ಇಟ್ಟುಕೊಂಡು ಕಾರ್ಯ ಪ್ರವೃತ್ತರಾಗುವುದನ್ನು ಕಲಿಯಿರಿ. ದುಂದುವೆಚ್ಚದಿಂದ ದಿನಾಂತ್ಯದಲ್ಲಿ ಹಣದ ಅಭಾವ. ಹೃದಯ ಸಂಬಂಧಿ ಸಮಸ್ಯೆಗಳು ಬಾಧಿಸಬಹುದು, ಜಾಗ್ರತೆ ವಹಿಸಿರಿ.

ವೃಷಭ: ಹೂವಿನ ವ್ಯಾಪಾರಿಗಳಿಗೆ ಉತ್ತಮ ವ್ಯಾಪಾರ ಹಾಗೂ ಲಾಭ. ಕಾರ್ಖಾನೆಯ ನಿರಂತರತೆಯನ್ನು ಗಮನವಿಟ್ಟುಕೊಳ್ಳುವುದರಿಂದ ಈಗಿರುವ ವ್ಯವಸ್ಥೆಗೆ ಹೊರತಾಗಿ ಪರ್ಯಾಯ ವ್ಯವಸ್ಥೆಗೆ ತಯಾರಾಗಿರಿ.

ಮಿಥುನ: ಮರದ ಕೆತ್ತನೆಯ ಕುಶಲ ಕರ್ಮಿಗಳಿಗೆ ಆದಾಯ ಮತ್ತು ಬೇಡಿಕೆ ಹೆಚ್ಚಳ. ಸ್ವಂತ ಉದ್ಯೋಗ ನಡೆಸುವವರು ಜವಾಬ್ದಾರಿಗಳನ್ನು ಕಡಿಮೆ ಮಾಡಿಕೊಳ್ಳುವ ಬಗ್ಗೆ ಹೆಚ್ಚಿನ ಗಮನಹರಿಸಿ. ದುಬಾರಿ ವಸ್ತುಗಳಿಗೆ ಮನಸೋಲುವುದು.

ಕರ್ಕಾಟಕ: ಗುರುಬಲವಿರುವುದರಿಂದ ನೀವು ಕೈಹಾಕಿದ ಕೆಲಸಗಳು ಜಯದ ಜೊತೆಯಲ್ಲಿ ಪೂರ್ಣಗೊಳ್ಳುವುದು. ಗುಂಪು ಚಟುವಟಿಕೆಗಳಿಗೆ ಈ ದಿನ ನಿಮ್ಮ ಮುಂದಾಳತ್ವ ಅಗತ್ಯ. ಕಾನೂನಿಗೆ ಗೌರವ ಕೊಡುವುದನ್ನು ಮರೆಯದಿರಿ.

ಸಿಂಹ: ನೀವು ಆಡಿದ ಮಾತುಗಳನ್ನು ಉಳಿಸಿಕೊಳ್ಳುವ ವಿಚಾರದಲ್ಲಿ ನಿಮ್ಮ ಪ್ರಯತ್ನವಿರಲಿ. ನಿಮ್ಮ ನಿಶ್ಚಿತ ಗುರಿ ಸಾಧಿಸಲು ಬಹಳ ಶ್ರಮಪಡಬೇಕಾಗಿಲ್ಲ. ತಂದೆ ತಾಯಿಯ ಆರೋಗ್ಯದ ಬಗ್ಗೆ ಮುತುವರ್ಜಿವಹಿಸುವುದು ಒಳ್ಳೆಯದು.

ಕನ್ಯಾ: ಅವಿವಾಹಿತರಿಗೆ ಶುಭ ಫಲಗಳ ಲಭ್ಯತೆ. ಯಂತ್ರೋಪಕರಣಗಳ ಮಾರಾಟ ಮತ್ತು ಪಶು ಸಂಗೋಪನೆಯಿಂದ ಹೆಚ್ಚಿನ ಲಾಭ. ನಿಮ್ಮ ಜೀವನದ ಅಭಿವೃದ್ಧಿಗೆ ಬೇಕಾದ ಕಾರ್ಯಗಳು ನಿರಂತರವಾಗಿ ಮುಂದುವರಿಯಲಿದೆ.

ತುಲಾ: ನಿಮ್ಮ ಮಿತ್ರರಿಂದ ಉತ್ತಮ ಸಹಾಯ ಸಹಕಾರ ದೊರೆಯುವ ಲಕ್ಷಣ. ಕೃಷಿಕರು, ವ್ಯಾಪಾರಸ್ಥರು ದಲ್ಲಾಳಿಗಳಿಂದ ಮೋಸ ಹೋಗುವ ಸ್ಥಿತಿ ಬರುವುದು ಎಚ್ಚರವಹಿಸಿ. ಹೊಸ ಬಟ್ಟೆಯನ್ನು ಖರೀದಿ ಮಾಡುವ ಮನಸ್ಸಾಗಲಿದೆ.

ವೃಶ್ಚಿಕ: ಮೇಲಾಧಿಕಾರಿಗಳೊಂದಿಗೆ ಉದ್ವೇಗಕ್ಕೆ ಒಳಗಾಗದೆ ತಾಳ್ಮೆಯಿಂದ ವ್ಯವಹರಿಸಿದರೆ ನಿಮ್ಮ ಹಾದಿ ಸುಗಮ. ಶ್ರಮಜೀವನದಿಂದ ಐಶ್ವರ್ಯ ವೃದ್ಧಿ. ದುರ್ಗಾಪರಮೇಶ್ವರಿಯ ಆರಾಧನೆಯು ನಿಮಗೆ ಶಾಂತಿದಾಯಕವಾಗಿರುತ್ತದೆ.

ಧನು: ಆರ್ಥಿಕ, ಮಾನಸಿಕ ಹಾಗೂ ದೈಹಿಕ ಆರೋಗ್ಯದ ವಿಷಯದಲ್ಲಿ ಹೆಚ್ಚಿನ ನೆಮ್ಮದಿಯನ್ನು ನೀವು ಅಪೇಕ್ಷಿಸಬಹುದು. ಇಚ್ಛಾ ಕಾರ್ಯಗಳ ಸಿದ್ಧಿಯ ಕಾಲವು ಸಮೀಪವಾಗುವುದು. ವೈವಾಹಿಕ ಮಾತುಕತೆಗಳಲ್ಲಿ ಶುಭಫಲ.

ಮಕರ: ವಿದೇಶ ಪ್ರವಾಸಕ್ಕೆ ಸಂಬಂಧಿಸಿದಂತೆ ಸಂತಸಕರ ಬೆಳವಣಿಗೆಗಳು ಕಂಡು ಬರಲಿವೆ. ರಾಜಕೀಯದಲ್ಲಿರುವವರಿಗೆ ಸಮಾಜದಲ್ಲಿ ಸ್ಥಾನಮಾನ ಹೆಚ್ಚಾಗಲಿದೆ. ಬೇಕರಿ ವ್ಯಾಪಾರಿಗಳಿಗೆ ಈ ದಿನ ಹೆಚ್ಚಿನ ಲಾಭವಿರುತ್ತದೆ.

ಕುಂಭ: ಪರಿಣಾಮಕಾರಿ ನಿರ್ಧಾರಗಳನ್ನು ತೆಗೆದುಕೊಳ್ಳುವುದು ಅಗತ್ಯ. ತಿಳಿಯಾದ ಮನಸ್ಸಿನಿಂದ ಆಲೋಚಿಸಿ ಅಥವಾ ಅನುಭವಸ್ಥರ ಅಭಿಪ್ರಾಯ ತಿಳಿದು ಸೂಕ್ತ ನಿರ್ಧಾರ ಕೈಗೊಳ್ಳಿರಿ. ಚಾಲಕ ವರ್ಗದವರಿಗೆ ಉತ್ತಮ ಆದಾಯ.

ಮೀನ: ಎಲ್ಲಾ ವ್ಯವಹಾರಗಳೂ ಸಾಮಾನ್ಯ ಗತಿಯಲ್ಲಿ ಮುಂದುವರಿಯಲಿದೆ. ಪಾಕಪ್ರವೀಣರಿಗೆ ವೃತ್ತಿಯಲ್ಲಿ ಉನ್ನತ ಸ್ಥಾನ ಪಡೆಯುವ ಕಾಲ. ಬದುಕಿನ ಕವಲುದಾರಿಯಲ್ಲಿರುವ ನಿಮಗೆ ಸರಿಯಾದ ಮಾರ್ಗದರ್ಶನದ ಕೊರತೆ ಇದೆ.

ಪದಬಂಧ 5035

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಕರದಲ್ಲಿರುವುದು ನೇಯುವ ಸಾಧನ (3)
3.ಪರವಾಗಿ ತೆಗೆದುಕೊಂಡಿರುವ ವೇತನ (3)
5.ಕಯ್ಯಾರೆ ಮಾಡಿಕೊಂಡಿರುವ ಕಲೆ! (2)
6.ಗುಟುರು ಹಾಕುತ್ತಿರುವ ಗಂಡು ಕುರಿ (3)
7.ನೆನಪಲ್ಲೇ ಇರುವ ವ್ಯಾಜ್ಯ (2)
9.ಮದುವೆ ಗಂಡು ತೋರಿಸಿರುವ ವ್ಯಾಯಾಮದ ಪಟ್ಟು (3)
10.ಬರಲು ಹೇಳಿದವ ಕುಂಟ (3)
11.ತಿರುವು ಮುರುವಾಗಿ ಹಾಕಿರುವ ರಂಗೋಲಿ (2)
13.ವರ್ತಕನು ನಿಭಾಯಿಸಿದ ಕೆಲಸ (3)
15.ಕಾಮನೆ ಹುಟ್ಟಿಸಿರುವ ಸದನ! (2)
16.ಬಿಸಿಲು ಬಂದಾಗ ಚಿಗುರೊಡೆದ ರೆಂಬೆ (3)
17.ನೃತ್ಯವನ್ನು ಹೀಗೆನ್ನಿ (3)

ಮೇಲಿಂದ ಕೆಳಕ್ಕೆ
1.ಚಹಕ್ಕೆ ಕರೆದವನ ಮುದ್ರೆ! (3)
2.ಕರದಲ್ಲಿ ಹಿಡಿದಿರುವ ಚಿಪ್ಪು (3)
3.ಸುಗಂಧಯುಕ್ತವಾದ ಜಲ (3)
4.ಸಾಗಿಸುವಿಕೆಗೊಂದು ಪರ್ಯಾಯ ಪದ (3)
5.ಖಡ್ಗದಿಂದ ಮಾಡುವ ಸಾಧನೆ (5)
8.ವರ್ತನೆಯಲ್ಲಿ ಈ ಪರಿ ಆಗಿರುವ ಬದಲಾವಣೆ! (5)
12.ಹಟ್ಟಿಯಲ್ಲಿ ಸಿಕ್ಕಿರುವ ಅಂಕೆ (3)
13.ನಕಲು ಎಂದು ಗೊತ್ತಾಗಿರುವುದಕ್ಕೆ ಹೀಗೆ ಸಿಟ್ಟಿಗೇಳು (3)
14.ವ್ಯವಸಾಯಗಾರನ ಅಳಲು (3)
15.ಮನದಲ್ಲಿಯೇ ನೀವುವಿಕೆ (3)



5034ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಉದಾಹರಣೆ 3.ಜನನ
5.ಕರತಾಡನ 7.ನಟನೆ
9.ಒನಪು 11.ಪ್ರವಾಹ
13.ರಕ್ತತಿಲಕ 15.ಹಂತಕ
16.ಪಾಕಪ್ರವೀಣ

ಮೇಲಿಂದ ಕೆಳಕ್ಕೆ:
1.ಉದಾಸೀನ 2.ರಸಿಕ
4.ನಯನ 6.ತಾರೀಪು
8.ಟಕ್ಕ 9.ಒಡತಿ
10.ರವಾ 12.ಹರಿವಾಣ
13.ರಕುತ 14.ಕಟುಕ

ಸುಡೊಕು 5421

			4		2		7	
3		6				2		5
	2			5			8	
8		5						1
			5	9	3		2	
7		2		6		5		4
				2		8		7
2		7					6	
			7		9	4		2

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5420 ಸುಡೊಕು

5	3	4	9	8	2	1	7	6
1	7	6	3	4	5	9	8	2
9	8	2	1	6	7	3	4	5
7	2	3	5	9	8	6	1	4
6	5	9	7	1	4	2	3	8
4	1	8	2	3	6	5	9	7
2	9	5	8	7	1	4	6	3
3	6	7	4	2	9	8	5	1
8	4	1	6	5	3	7	2	9

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಲಿಂಗಾಯತ ಪಂಚಮಸಾಲಿ ಸಮಾಜಕ್ಕೆ 2(ಎ) ಮೀಸಲಾತಿ ಕಲ್ಪಿಸಲು ಆಗ್ರಹಿಸಿ ಹುಬ್ಬಳ್ಳಿಯ ಚನ್ನಮ್ಮ ವೃತ್ತದಲ್ಲಿ ಬಸವಜಯ ಮೃತ್ಯುಂಜಯ ಸ್ವಾಮೀಜಿ ನೇತೃತ್ವದಲ್ಲಿ ಸಮಾಜದವರು ಶನಿವಾರ ಧರಣಿ ಸತ್ಯಾಗ್ರಹ ನಡೆಸಿದರು

ಲಿಂಗಾಯತ ಪಂಚಮಸಾಲಿಗೆ 2ಎ ಮೀಸಲಾತಿಗೆ ಧರಣಿ

ಮುಖ್ಯಮಂತ್ರಿ ಮನೆಗೆ ಮುತ್ತಿಗೆ ಎಚ್ಚರಿಕೆ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: 'ಲಿಂಗಾಯತ ಪಂಚಮಸಾಲಿ ಸಮಾಜಕ್ಕೆ ಆಗಸ್ಟ್ 22ರ ಒಳಗೆ 2(ಎ) ಮೀಸಲಾತಿ ಕಲ್ಪಿಸಬೇಕು. ಇಲ್ಲದಿದ್ದರೆ ಆಗಸ್ಟ್ 23ರಂದು ಶಿಗ್ಗಾಂವಿಯಲ್ಲಿರುವ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ನಿವಾಸಕ್ಕೆ ಮುತ್ತಿಗೆ ಹಾಕಲಾಗುವುದು' ಎಂದು ಪಂಚಮಸಾಲಿ ಮಹಾಸಭಾದ ರಾಷ್ಟ್ರೀಯ ಅಧ್ಯಕ್ಷ ವಿಜಯಾನಂದ ಕಾಶಪ್ಪನವರ ಎಚ್ಚರಿಸಿದರು.

ಲಿಂಗಾಯತ ಪಂಚಮಸಾಲಿ ಸಮಾಜದಿಂದ ಶನಿವಾರ ಹುಬ್ಬಳ್ಳಿಯಲ್ಲಿ ನಡೆದ ಹಕ್ಕೊತ್ತಾಯ ರ‍್ಯಾಲಿ ಮತ್ತು ಧರಣಿಯಲ್ಲಿ ಅವರು ಮಾತನಾಡಿದರು. 'ಮೀಸಲಾತಿ ಕಲ್ಪಿಸಿದರೆ ಮುಖ್ಯಮಂತ್ರಿ ಸನ್ಮಾನ ಮಾಡಲಾಗುವುದು. ಇಲ್ಲದಿದ್ದರೆ ಅವಮಾನ ಮಾಡಲು ಹಿಂಜರಿಯುವುದಿಲ್ಲ. ಇದು ಕೊನೆಯ ಹಂತದ ಮಾಡು ಇಲ್ಲವೆ ಮಡಿ ಹೋರಾಟ' ಎಂದರು. ಕೂಡಲಸಂಗಮದ ಪಂಚಮಸಾಲಿ ಪೀಠದ ಬಸವಜಯ ಮೃತ್ಯುಂಜಯ ಸ್ವಾಮೀಜಿ ಮಾತನಾಡಿ, 'ಪಂಚಮಸಾಲಿ ಸಮಾಜದ ಬೆಂಬಲ ಇಲ್ಲದೆ ಯಾವ ಪಕ್ಷಗಳೂ ಚುನಾವಣೆಯಲ್ಲಿ ಗೆಲ್ಲಲು ಸಾಧ್ಯವಿಲ್ಲ. ಮೀಸಲಾತಿ ಕಲ್ಪಿಸುವುದರಿಂದ 2023ರ ಚುನಾವಣೆಯಲ್ಲಿ ನಮ್ಮ ಸಹಕಾರ ಇರುತ್ತದೆ' ಎಂದು ಹೇಳಿದರು.

'ಮುಖ್ಯಮಂತ್ರಿ ಅವರು ಕೊಟ್ಟ ಮಾತು ಉಳಿಸಿಕೊಳ್ಳುವ ವಿಶ್ವಾಸವಿದೆ. ಮೀಸಲಾತಿ ನೀಡಿದರೆ ಅವರಿಗೆ ಕಲ್ಲುಸಕ್ಕರೆಯ ತುಲಾಭಾರ ಮಾಡಲಾಗುವುದು. ಮಾತು ತಪ್ಪಿದರೆ ಉಗ್ರ ಹೋರಾಟ ಎದುರಿಸಬೇಕಾಗುತ್ತದೆ' ಎಂದು ಎಚ್ಚರಿಸಿದರು.

ವೀರಶೈವರನ್ನು ಒಬಿಸಿ ಪಟ್ಟಿಗೆ ಸೇರಿಸಲು ಆಗ್ರಹ: ನಾಳೆ ಸಭೆ

ಬೆಂಗಳೂರು: ವೀರಶೈವ ಸಮಾಜದ ಎಲ್ಲ ಪಂಗಡಗಳನ್ನೂ ಕೇಂದ್ರ ಸರ್ಕಾರದ ಹಿಂದುಳಿದ ವರ್ಗಗಳ (ಒಬಿಸಿ) ಪಟ್ಟಿಗೆ ಸೇರಿಸುವಂತೆ ಆಗ್ರಹಿಸಿ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಆಗಸ್ಟ್ 1ರಂದು ಸಭೆ ನಡೆಸಲಾಗುವುದು ಎಂದು ಅಖಿಲ ಭಾರತ ವೀರಶೈವ ಮಹಾಸಭಾ ಕರ್ನಾಟಕ ರಾಜ್ಯ ಘಟಕದ ಅಧ್ಯಕ್ಷ ಎನ್. ತಿಪ್ಪಣ್ಣ ತಿಳಿಸಿದರು.

ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ವೀರಶೈವ- ಲಿಂಗಾಯತ ಸಮುದಾಯವು 60 ವರ್ಷಗಳಿಂದಲೂ ರಾಜ್ಯದ ಹಿಂದುಳಿದ ವರ್ಗಗಳ ಪಟ್ಟಿಯಲ್ಲಿವೆ. ಆದರೆ, ಕೇಂದ್ರದ ಹಿಂದುಳಿದ ವರ್ಗಗಳ ಪಟ್ಟಿಗೆ ಸೇರಿಸಬೇಕೆಂಬ ಬೇಡಿಕೆ ಈಡೇರಿಲ್ಲ. ನಮ್ಮ ಬೇಡಿಕೆ ಈಡೇರಿಸುವಂತೆ ಒತ್ತಾಯಿಸಿ ಆ.1ರಂದು ಸ್ವಾತಂತ್ರ್ಯ ಉದ್ಯಾನದಲ್ಲಿ ಸಭೆ ನಡೆಸಿ, ಜಿಲ್ಲಾಧಿಕಾರಿ ಮೂಲಕ ಮುಖ್ಯ-ಮಂತ್ರಿಯವರಿಗೆ ಮನವಿ ಸಲ್ಲಿಸಲಾಗುವುದು' ಎಂದರು.

ವೀರಶೈವ- ಲಿಂಗಾಯತ ಸಮಾಜವನ್ನು ಕೇಂದ್ರದ ಒಬಿಸಿ ಪಟ್ಟಿಯಿಂದ ಹೊರಗಿಟ್ಟಿರುವುದಕ್ಕೆ ಯಾವುದೇ ಕಾರಣಗಳಿಲ್ಲ. ರಾಜ್ಯ ಸರ್ಕಾರ ತಮ್ಮ ಬೇಡಿಕೆಗೆ ಪೂರಕವಾಗಿ ಸಂಪುಟ ಸಭೆಯಲ್ಲಿ ನಿರ್ಧಾರ ಕೈಗೊಂಡು ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡಬೇಕು ಎಂದರು.

ಕೇಂದ್ರದ ಒಬಿಸಿ ಪಟ್ಟಿಯಲ್ಲಿ ಸೇರದೇ ಇರುವುದರಿಂದ ಕೇಂದ್ರ ಸರ್ಕಾರದ ವಿವಿಧ ಹುದ್ದೆಗಳು ಮತ್ತು ಅಖಿಲ ಭಾರತ ಸೇವೆಗಳಲ್ಲಿ ವೀರಶೈವ- ಲಿಂಗಾಯತ ಸಮಾಜಕ್ಕೆ ಅನ್ಯಾಯವಾಗುತ್ತಿದೆ. ಇತರ ಸಮುದಾಯಗಳಿಗೆ ನೀಡಿದಂತೆ ವೀರಶೈವ- ಲಿಂಗಾಯತರಿಗೂ ಕೇಂದ್ರದ ಒಬಿಸಿ ಪಟ್ಟಿಯಲ್ಲಿ ಮಾನ್ಯತೆ ನೀಡಬೇಕು ಎಂದರು. ಮಹಾಸಭೆಯ ಕಾರ್ಯದರ್ಶಿ ಎಚ್.ಎಂ. ರೇಣುಕ ಪ್ರಸನ್ನ, ಬೆಂಗಳೂರು ನಗರ ಘಟಕದ ಅಧ್ಯಕ್ಷ ಎಸ್. ಗುರುಸ್ವಾಮಿ, ಪ್ರಧಾನ ಕಾರ್ಯದರ್ಶಿ ಜಿ.ಎಸ್. ಮೃತ್ಯುಂಜಯ ಸ್ವಾಮಿ, ಕಾರ್ಯದರ್ಶಿ ಡಿ.ಬಿ. ಬಾಲಚಂದ್ರ ಪತ್ರಿಕಾಗೋಷ್ಠಿಯಲ್ಲಿದ್ದರು.

ಕೆಮ್ಮುವಾಗ, ಸೀನುವಾಗ ಕರವಸ್ತ್ರದಿಂದ ಮುಚ್ಚಿಕೊಳ್ಳಿ

ಇ.ಡಿ ತನಿಖೆ: ಡಿ.ಕೆ. ಶಿವಕುಮಾರ್ ಜಾಮೀನು ಅರ್ಜಿ

ಆದೇಶ ಕಾಯ್ದಿರಿಸಿದ ಕೋರ್ಟ್

ಪ್ರಜಾವಾಣಿ ವಾರ್ತೆ

ನವದೆಹಲಿ: ಹಣ ಅಕ್ರಮ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿದಂತೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಹಾಗೂ ಇತರ ನಾಲ್ವರು ಆರೋಪಿಗಳ ಜಾಮೀನು ಅರ್ಜಿಯ ಆದೇಶವನ್ನು ಇಲ್ಲಿನ ಜನಪ್ರತಿನಿಧಿಗಳ ಪ್ರಕರಣಗಳ ವಿಶೇಷ ನ್ಯಾಯಾಲಯ (ಇ.ಡಿ. ನ್ಯಾಯಾಲಯ) ಕಾಯ್ದಿರಿಸಿದೆ.

ಶಿವಕುಮಾರ್, ಅವರ ನಿಕಟವರ್ತಿಗಳಾದ ಉದ್ಯಮಿ ಸಚಿನ್ ನಾರಾಯಣ್, ಶರ್ಮಾ ಟ್ರಾನ್ಸ್‌ಪೋರ್ಟ್ ಮಾಲೀಕ ಸುನಿಲ್ ಕುಮಾರ್ ಶರ್ಮಾ, ದೆಹಲಿಯ ಆಂಜನೇಯ ಹನುಮಂತಯ್ಯ ಮತ್ತು ರಾಜೇಂದ್ರ ಎನ್. ವಿರುದ್ಧ ವಿಚಾರಣೆ ಆರಂಭಿಸುವಂತೆ ಕೋರಿ ನ್ಯಾಯಾಲಯಕ್ಕೆ ಜಾರಿ ನಿರ್ದೇಶನಾಲಯದ ಅಧಿಕಾರಿಗಳು ಆರೋಪ ಪಟ್ಟಿ ಸಲ್ಲಿಸಿದ್ದರು. ಈ ವರದಿಯನ್ನು ಮಾನ್ಯ ಮಾಡಿದ ನ್ಯಾಯಾಲಯವು ಜುಲೈ 1ರಂದು ವಿಚಾರಣೆಗೆ ಹಾಜರಾಗುವಂತೆ ಎಲ್ಲ ಆರೋಪಿಗಳಿಗೂ ಸಮನ್ಸ್ ಜಾರಿ ಮಾಡಿತ್ತು. ಜಾಮೀನು ಅರ್ಜಿ ಬಗ್ಗೆ ಆಕ್ಷೇಪಣೆ ಸಲ್ಲಿಸಲು ಕಾಲಾವಕಾಶ ನೀಡಬೇಕು ಎಂದು ಇ.ಡಿ ವಕೀಲರು ಮನವಿ ಮಾಡಿದ್ದರು. ಬಳಿಕ ಜುಲೈ 30ಕ್ಕೆ ವಿಚಾರಣೆಯನ್ನು ಮುಂದೂಡಲಾಗಿತ್ತು.

ಶಿವಕುಮಾರ್ ಹಾಗೂ ಇತರ ಆರೋಪಿಗಳು ವಕೀಲರೊಂದಿಗೆ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ವಿಕಾಸ್ ದುಲ್ ಮುಂದೆ ಶನಿವಾರ ಹಾಜರಾದರು. ಜಾಮೀನು ನೀಡಬೇಕು ಎಂದು ಆರೋಪಿಗಳ ಪರ ವಕೀಲರು ಮನವಿ ಮಾಡಿದರು. ಇದಕ್ಕೆ ಇ.ಡಿ ವಕೀಲರು ಆಕ್ಷೇಪ ವ್ಯಕ್ತಪಡಿಸಿದರು. ಉಭಯ ವಾದಗಳನ್ನು ಆಲಿಸಿದ ನ್ಯಾಯಾಧೀಶರು ಆದೇಶವನ್ನು ಕಾಯ್ದಿರಿಸಿ ಆಗಸ್ಟ್ 2ರಂದು ಮಧ್ಯಾಹ್ನ 3 ಗಂಟೆಗೆ ವಿಚಾರಣೆಯನ್ನು ಮುಂದೂಡಿದರು. ವಿಚಾರಣೆಯ ವೇಳೆ ಎಲ್ಲ ಆರೋಪಿಗಳು ಹಾಜರಿರಬೇಕು ಎಂದು ನ್ಯಾಯಾಧೀಶರು ಸೂಚಿಸಿದರು.

2017ರಲ್ಲಿ ಶಿವಕುಮಾರ್ ಅವರಿಗೆ ಸಂಬಂಧಿಸಿದ ಸ್ಥಳಗಳ ಮೇಲೆ ದಾಳಿ ಮಾಡಿದ್ದ ಆದಾಯ ತೆರಿಗೆ ಇಲಾಖೆ ಅಧಿಕಾರಿಗಳು ಶೋಧ ನಡೆಸಿದ್ದರು. ಆಗ, ದೆಹಲಿಯ ವಿವಿಧ ಸ್ಥಳಗಳಲ್ಲಿ ₹ 8.59 ಕೋಟಿ ನಗದು ವಶಕ್ಕೆ ಪಡೆಯಲಾಗಿತ್ತು. ಬಳಿಕ ಶಿವಕುಮಾರ್ ಅವರನ್ನು ಬಂಧಿಸಲಾಯಿತು. ನಂತರ ಅವರಿಗೆ ನ್ಯಾಯಾಲಯ ಜಾಮೀನು ನೀಡಿತ್ತು. ಹಣ ಅಕ್ರಮ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯ ತನಿಖೆ ನಡೆಸಿತ್ತು.

ಹಿಂದೂ ಲಿಂಗಾಯತ–ಗಾಣಿಗ ಲಿಂಗಾಯತ ಎರಡೂ ಒಂದೇ: ಸುಪ್ರೀಂ ಕೋರ್ಟ್

ಪ್ರಜಾವಾಣಿ ವಾರ್ತೆ

ನವದೆಹಲಿ: ಉತ್ತರ ಕರ್ನಾಟಕದಲ್ಲಿರುವ ಗಾಣಿಗೇರ್ ಮತ್ತು ಗಾಣಿಗ ಸಮುದಾಯಗಳು ಒಂದೇ ಆಗಿದ್ದು, ಹಿಂದೂ ಲಿಂಗಾಯತ ಮತ್ತು ಗಾಣಿಗ ಲಿಂಗಾಯತ ಧರ್ಮಗಳು ಬೇರೆ ಬೇರೆ ಅಲ್ಲ ಎಂದು ಸುಪ್ರೀಂ ಕೋರ್ಟ್ ತೀರ್ಪು ನೀಡಿದೆ.

ಬೆಂಗಳೂರು ನಗರ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಸಂಗಪ್ಪ ಹಸನಪ್ಪ ಮಲ್ಲಣ್ಣವರ್ ಅವರಿಗೆ ಗಾಣಿಗ ಜಾತಿ ಪ್ರಮಾಣಪತ್ರ ನೀಡಿರುವುದನ್ನು ರದ್ದುಪಡಿಸಿ ಒಬಿಸಿ ಮೀಸಲಾತಿ ಪಡೆಯುವಂತೆ ಕರ್ನಾಟಕ ಹೈಕೋರ್ಟ್ ಏಕಸದಸ್ಯ ಪೀಠ 2017ರಲ್ಲಿ ಸೂಚಿಸಿತ್ತು. ಈ ಆದೇಶವನ್ನು ಹೈಕೋರ್ಟ್ ವಿಭಾಗೀಯ ಪೀಠ ರದ್ದುಪಡಿಸಿ ಸಂಗಪ್ಪ ಪರವಾಗಿ ತೀರ್ಪು ನೀಡಿತ್ತು. ಈ ಆದೇಶ ಪ್ರಶ್ನಿಸಿ ಐಪಿಎಸ್ ಅಧಿಕಾರಿ ಎ.ವಿ. ಚಂದ್ರಕಾಂತ್ ಸಲ್ಲಿಸಿದ್ದ ಅರ್ಜಿಯನ್ನು ನ್ಯಾ.ಇಂದಿರಾ ಬ್ಯಾನರ್ಜಿ ಮತ್ತು ವಿ.ಕೆ.ಮಹೇಶ್ವರಿ ಅವರಿದ್ದ ನ್ಯಾಯಪೀಠ ತಿರಸ್ಕರಿಸಿ ವಜಾಗೊಳಿಸಿದೆ. ಸಂಗಪ್ಪ ಪರವಾಗಿ ಸುಪ್ರೀಂ ಕೋರ್ಟ್‌ನ ವಕೀಲ ಎಚ್.ಚಂದ್ರಶೇಖರ್ ವಾದಿಸಿದ್ದರು.

ಕರ್ನಾಟಕ ಲೋಕಸೇವಾ ಆಯೋಗದ (ಕೆಪಿಎಸ್‌ಸಿ) 1999ನೇ ಸಾಲಿನ ಗೆಜೆಟೆಡ್ ಪ್ರೊಬೆಷನರಿ ಗ್ರೂಪ್ ಎ ಹಾಗೂ ಬಿ ಹುದ್ದೆಗಳಿಗೆ ನೇಮಕಾತಿಯಾದ ಅಧಿಕಾರಿಗಳಲ್ಲಿ ಸಂಗಪ್ಪ ಅವರೂ ಒಬ್ಬರು. ಚಂದ್ರಕಾಂತ್ ಅವರು ಡಿವೈಎಸ್‌ಪಿ ಹಾಗೂ ಉಪವಿಭಾಗಾಧಿಕಾರಿ (ಜೂನಿಯರ್ ಗ್ರೇಡ್) ಹುದ್ದೆಗೆ ಸಂಗಪ್ಪ ಆಯ್ಕೆಯಾಗಿದ್ದರು. ಸಂಗಪ್ಪ ಅವರ ತಂದೆ 'ಲಿಂಗಾಯತ' ಜಾತಿಗೆ ಸೇರಿದವರು. ಆದರೆ, ಸಂಗಪ್ಪ ಅವರು 'ಗಾಣಿಗ' ಜಾತಿಗೆ ಸೇರಿದವರು ಎಂದು ಹೇಳಿಕೊಂಡು ಮೀಸಲಾತಿಯ ಪ್ರಯೋಜನವನ್ನು ಪಡೆದಿದ್ದಾರೆ ಎಂದು ಚಂದ್ರಕಾಂತ್ ಅವರು ನ್ಯಾಯಾಲಯದ ಮೆಟ್ಟಿಲೇರಿದ್ದರು.

ಅರ್ಜಿ ವಿಚಾರಣೆ ನಡೆಸಿದ ಹೈಕೋರ್ಟ್‌ನ ಏಕ ಸದಸ್ಯ ಪೀಠ, 'ಸಂಗಪ್ಪ ಅವರ ತಂದೆ ಹಿಂದೂ ಲಿಂಗಾಯತ ಜಾತಿಗೆ ಸೇರಿದವರು ಎಂದು ಶಾಲೆಯ ದಾಖಲೆಗಳು ಬಹಿರಂಗಪಡಿಸುತ್ತ-ವೆ. ಆದ್ದರಿಂದ ಅವರ ಪುತ್ರ ಗಾಣಿಗ ಸಮುದಾಯ ಎಂದು ಹೇಳಿಕೊಂಡಿರುವುದು ಸರಿಯಲ್ಲ' ಎಂದು ತೀರ್ಪು ನೀಡಿತ್ತು. ಆದರೆ, ವಿಭಾಗೀಯ ಪೀಠವು ಏಕ ಪೀಠದ ಆದೇಶವನ್ನು ತಳ್ಳಿಹಾಕಿತ್ತು.

ವಿಭಾಗೀಯ ಪೀಠದ ಆದೇಶವನ್ನು ಎತ್ತಿಹಿಡಿದಿರುವ ಸುಪ್ರೀಂ ಕೋರ್ಟ್, 'ಸಂಗಪ್ಪ ಅವರ ತಂದೆ 1953ರಲ್ಲಿ ಶಾಲೆಗೆ ದಾಖಲಾದ ವೇಳೆ ಹಿಂದುಳಿದ ವರ್ಗಗಳಿಗೆ ಮೀಸಲಾತಿಯನ್ನು ಪರಿಚಯಿಸಿರಲಿಲ್ಲ ಎಂಬ ಅಂಶವನ್ನು ಗಮನಿಸಬೇಕು. ಆದರೆ, ಸಂಗಪ್ಪ ಅವರು ಶಾಲೆಗೆ ದಾಖಲಾಗುವ ಸಂದರ್ಭದಲ್ಲಿ ಮೀಸಲಾತಿ ಸೌಲಭ್ಯವನ್ನು ಪರಿಚಯಿಸಲಾಗಿತ್ತು. ಅದ್ದರಿಂದ ಅವರ ತಂದೆಯ ಜಾತಿ ಕೇವಲ 'ಲಿಂಗಾಯತ' ಹಾಗೂ ಪುತ್ರನ ದಾಖಲಾತಿಯಲ್ಲಿ 'ಹಿಂದೂ ಗಾಣಿಗ' ಎಂದು ಉಲ್ಲೇಖಿಸಲ್ಪಟ್ಟಿದೆ' ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿತು.

'ಲಿಂಗಾಯತ ಹಿಂದೂ ಉತ್ತರಾಧಿಕಾರ ಕಾಯ್ದೆ 1956, ಹಿಂದೂ ವಿವಾಹ ಕಾಯ್ದೆ 1955, ಹಿಂದೂ ಅಲ್ಪಸಂಖ್ಯಾತ ಮತ್ತು ಪಾಲಕತ್ವ ಕಾಯ್ದೆ 1956, ಹಿಂದೂ ದತ್ತು ಮತ್ತು ನಿರ್ವಹಣೆ ಕಾಯ್ದೆ 1956 ಪ್ರಕಾರ ಲಿಂಗಾಯತರು ಸಹ ಹಿಂದೂಗಳು ಎಂದು ಪರಿಗಣಿಸಲ್ಪಡುತ್ತಾರೆ. ಸಂಗಪ್ಪ ಅವರ ಜಾತಿಯನ್ನು ಅವರ ತಂದೆ ಶಾಲಾ ದಾಖಲಾತಿಯಲ್ಲಿ 'ಹಿಂದೂ-ಲಿಂಗಾಯತ' ಎಂದು ಉಲ್ಲೇಖಿಸಿರುವುದರಿಂದ' ಎಂದು ನ್ಯಾಯಾಲಯ ಅಭಿಪ್ರಾಯಪಟ್ಟಿದೆ.

ಪ್ರಕರಣದ ವಿಚಾರಣೆ ವೇಳೆ, ಸಂಗಪ್ಪ ಅವರು 1909 ರ ನೋಂದಣಿಯ ದಾಖಲೆಯನ್ನು ಸಲ್ಲಿಸಿದರು. ಅಲ್ಲಿ ಅವರ ತಾತನ ಜಾತಿಯನ್ನು 'ಗಾಣಿಗೇರ್' ಎಂದು ತೋರಿಸಲಾಗಿದೆ. ಆದ್ದರಿಂದ ಸಂಗಪ್ಪನ ಜಾತಿಯನ್ನು 'ಗಾಣಿಗ' ಎಂದು ಸಾಬೀತುಪಡಿಸಿದ ದಾಖಲೆಯು ಪ್ರಸ್ತುತವಾಗಿದೆ. ಸಂಗಪ್ಪ ಅವರು ತಮ್ಮ ಸಂಬಂಧಿಕರಿಗೆ ನೀಡಲಾದ ಜಾತಿ ಪ್ರಮಾಣ-ಪತ್ರಗಳನ್ನು ಅವಲಂಬಿಸಿದ್ದಾರೆ ಎಂದು ಸುಪ್ರೀಂಕೋರ್ಟ್ ಆದೇಶದಲ್ಲಿ ತಿಳಿಸಿದೆ.

ಬಹು ಮಾಧ್ಯಮ ಪ್ರಜಾವಾಣಿ LIVE
www.prajavani.net
Prajavani.net Prajavani Prajavani
ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರಪ್ರಸಾರ

ಇಂದು

ಕನ್ನಡ ಧ್ವನಿ

ಪಾಡ್‌ಕಾಸ್ಟ್: ಪ್ರಚಲಿತ: ಬೆಳಿಗ್ಗೆ 9
ಸಂಪಾದಕೀಯ: ಬೆಳಿಗ್ಗೆ 9.30
ಪ್ರಜಾವಾಣಿ ವಾರ್ತೆ: ಬೆಳಿಗ್ಗೆ 8, ಮಧ್ಯಾಹ್ನ 2 ಮತ್ತು ರಾತ್ರಿ 8

ನಾಳೆ

ಕರ್ನಾಟಕದ ಕೋಮುಹಿಂಸೆ ನಿಲ್ಲುವುದು ಯಾವಾಗ?

ಭಾಗವಹಿಸುವವರು:
ಮುನೀರ್ ಕಾಟಿಪಳ್ಳ, ರಾಜ್ಯಾಧ್ಯಕ್ಷ, ಡಿವೈಎಫ್ಐ, ಮಂಗಳೂರು
ಪ್ರೀತಿ ನಾಗರಾಜ್, ಲೇಖಕಿ, ಮೈಸೂರು
ವಿನಯ್ ಬಿದರೆ, ರಾಜ್ಯ ಕಾರ್ಯದರ್ಶಿ, ಬಿಜೆಪಿ, ಬೆಂಗಳೂರು
ಗೌರಿ, ಸಮನ್ವಯಕಾರ್ತಿ, ಕರ್ನಾಟಕ ಜನಶಕ್ತಿ, ಬೆಂಗಳೂರು

ಸಂವಾದ
ಮಧ್ಯಾಹ್ನ 12 ರಿಂದ 1

ಪರಿಷತ್: ಬಾಬುರಾವ್ ಚಿಂಚನಸೂರು ಬಿಜೆಪಿ ಅಭ್ಯರ್ಥಿ

ಬೆಂಗಳೂರು: ವಿಧಾನಸಭೆಯಿಂದ ವಿಧಾನ ಪರಿಷತ್‌ನ ಒಂದು ಸ್ಥಾನಕ್ಕೆ ಆಗಸ್ಟ್ 11ರಂದು ನಡೆಯುತ್ತಿರುವ ಚುನಾವಣೆಗೆ ನಿಜ ಶರಣ ಅಂಬಿಗರ ಚೌಡಯ್ಯ ನಿಗಮದ ಅಧ್ಯಕ್ಷ ಬಾಬುರಾವ್ ಚಿಂಚನಸೂರು ಅವರನ್ನು ಬಿಜೆಪಿ ಅಭ್ಯರ್ಥಿಯನ್ನಾಗಿ ಆಯ್ಕೆ ಮಾಡಲಾಗಿದೆ.

ಬಿಜೆಪಿ ಕೇಂದ್ರೀಯ ಚುನಾವಣಾ ಸಮಿತಿ ಈ ನಿರ್ಧಾರ ಕೈಗೊಂಡಿದ್ದು, ಚಿಂಚನಸೂರು ಅವರಿಗೆ ಟಿಕೆಟ್ ನೀಡುವ ತೀರ್ಮಾನವನ್ನು ಪಕ್ಷದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಅರುಣ್ ಸಿಂಗ್ ಶನಿವಾರ ಪ್ರಕಟಿಸಿದ್ದಾರೆ.

ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷರಾಗಿರುವ ಸಿ.ಎಂ. ಇಬ್ರಾಹಿಂ ಈ ಹಿಂದೆ ವಿಧಾನ ಪರಿಷತ್‌ನಲ್ಲಿ ಕಾಂಗ್ರೆಸ್ ಸದಸ್ಯರಾಗಿದ್ದರು. ಜೆಡಿಎಸ್ ಸೇರುವುದಕ್ಕಾಗಿ ಅವರು ಮಾರ್ಚ್ 31ರಂದು ಪರಿಷತ್ ಸದಸ್ಯ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು. ಸದಸ್ಯತ್ವದ 20 ತಿಂಗಳ ಅವಧಿಗಾಗಿ ಚುನಾವಣೆ ನಡೆಯುತ್ತಿದೆ.

ವಿಧಾನ ಪರಿಷತ್ ಮಾಜಿ ಸದಸ್ಯ ಮೋಹನ ಲಿಂಬಿಕಾಯಿ, ಬ್ರಾಹ್ಮಣ ಅಭಿವೃದ್ಧಿ ನಿಗಮದ ಅಧ್ಯಕ್ಷ ಸಚ್ಚಿದಾನಂದ ಮೂರ್ತಿ, ಪಕ್ಷದ ಮುಖಂಡ ಲಿಂಗರಾಜ ಪಾಟೀಲ ಸೇರಿದಂತೆ ಹಲವರು ಈ ಚುನಾವಣೆಯ ಟಿಕೆಟ್ ಆಕಾಂಕ್ಷಿಗಳಾಗಿದ್ದರು. ಆದರೆ, ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಕೋಲಿ ಸಮುದಾಯದ ಮತಗಳ ಮೇಲೆ ಕಣ್ಣಿಟ್ಟು ಚಿಂಚನಸೂರು ಅವರಿಗೆ ಟಿಕೆಟ್ ನೀಡಲಾಗಿದೆ ಎಂದು ಬಿಜೆಪಿ ಮೂಲಗಳು ತಿಳಿಸಿವೆ.

ದೀರ್ಘಕಾಲ ಕಾಂಗ್ರೆಸ್ ಪಕ್ಷದಲ್ಲಿದ್ದ ಚಿಂಚನಸೂರು, 5 ಬಾರಿ ವಿಧಾನಸಭಾ ಸದಸ್ಯರಾಗಿದ್ದರು. ಎಸ್.ಎಂ. ಕೃಷ್ಣ ಮತ್ತು ಸಿದ್ದರಾಮಯ್ಯ ಸಂಪುಟದಲ್ಲಿ ಸಚಿವರಾಗಿದ್ದರು. 2018ರಲ್ಲಿ ಬಿಜೆಪಿ ಸೇರಿ, ಆ ಪಕ್ಷದಿಂದ ವಿಧಾನಸಭಾ ಚುನಾವಣೆಗೆ ಸ್ಪರ್ಧಿಸಿ ಸೋತಿದ್ದರು. ಬಳಿಕ ಅಂಬಿಗರ ಚೌಡಯ್ಯ ನಿಗಮದ ಅಧ್ಯಕ್ಷರನ್ನಾಗಿ ಅವರನ್ನು ನೇಮಿಸಲಾಗಿತ್ತು.

ಕೊಡಗು: ಹಂದಿಗಳ ಖರೀದಿ ಸ್ಥಗಿತ

ಮಡಿಕೇರಿ: ಕೇರಳದ ವಯನಾಡಿನಲ್ಲಿ ಆಫ್ರಿಕನ್ ಹಂದಿಜ್ವರದ ಪ್ರಕರಣಗಳು ಕಂಡು ಬಂದಿರು ವುದರಿಂದ ತಾತ್ಕಾಲಿಕವಾಗಿ ಹಂದಿ ಹಾಗೂ ಹಂದಿ ಮಾಂಸ ಖರೀದಿಯನ್ನು ನಿಲ್ಲಿಸಲಾಗಿದೆ.

'ಜಿಲ್ಲೆಯ ಗಡಿಭಾಗದ ಎಲ್ಲಾ ಚೆಕ್‌ಪೋಸ್ಟ್‌ಗಳಲ್ಲಿ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ. ಹಂದಿಗಳು ಅಸ್ವಾಭಾವಿಕವಾಗಿ ಮೃತಪಟ್ಟರೆ ಕೂಡಲೇ ಸಮೀಪದ ಪಶು ವೈದ್ಯಕೀಯ ಆಸ್ಪತ್ರೆಗೆ ಮಾಹಿತಿ ನೀಡಬೇಕು' ಎಂದು ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯ ಉಪನಿರ್ದೇಶಕ ಡಾ.ಸುರೇಶ ಭಟ್ ಮನವಿ ಮಾಡಿದ್ದಾರೆ.

मौलाना आज़ाद नेशनल उर्दू यूनिवर्सिटी مولانا آزاد نیشنل اردو یونیورسٹی
MAULANA AZAD NATIONAL URDU UNIVERSITY
(A Central University established by an Act of Parliament in 1998)
Accredited with "A" Grade by NAAC
EPABX : 23008402-04

ದೂರ ಶಿಕ್ಷಣ ನಿರ್ದೇಶನಾಲಯ
ಪ್ರವೇಶಾತಿ ಅಧಿಸೂಚನೆ– 2022–23 ಅವಧಿ ಜುಲೈ, 2022

ಜುಲೈ 2022 ರಿಂದ ಆರಂಭವಾಗಲಿರುವ 2022–23ನೇ ಶೈಕ್ಷಣಿಕ ಅವಧಿಯ ಕೆಳಕಂಡ ದೂರ ಶಿಕ್ಷಣ ಕಾರ್ಯಕ್ರಮಗಳಿಗೆ ಪ್ರವೇಶಾತಿ ಪಡೆಯಲು ಆನ್‌ಲೈನ್ ಅರ್ಜಿಗಳನ್ನು ಆಹ್ವಾನಿಸಲಾಗಿದೆ:

(1) ಎಂ.ಎ. (ಉರ್ದು) (2) ಎಂ.ಎ. (ಇಂಗ್ಲಿಷ್) (3) ಎಂ.ಎ. (ಇಸ್ಲಾಮಿಕ್ ಅಧ್ಯಯನಗಳು) (4) ಬಿ.ಎ (5) ಬಿ.ಕಾಮ್	ಯುಜಿಸಿ – ಡಿಇಬಿ, ನವದೆಹಲಿ ಇವರ ದಿನಾಂಕ 02.03.2022ರ ಪತ್ರ ಸಂ. ಎಫ್.ನಂ. 8–2/2021 (ಡಿಇಬಿ–3), ದಿನಾಂಕ 17.05.2018ರ ಎಫ್.ನಂ. 8–2/2018 (ಡಿಇಬಿ–3) ಪಾರ್ಟ್ ಫೈಲ್ ಪ್ರಕಾರ ಮಾನ್ಯತೆ ಹೊಂದಿದೆ
(6) ಇಂಗ್ಲಿಷ್ ಬೋಧನೆಯಲ್ಲಿ ಡಿಪ್ಲೋಮ (7) ಪತ್ರಿಕೋದ್ಯಮ ಹಾಗೂ ಸಮೂಹ ಸಂವಹನ ಡಿಪ್ಲೋಮ (8) ಇಂಗ್ಲಿಷ್ ಮೂಲಕ ಉರ್ದು ಪ್ರಾವಿಣ್ಯತೆಯಲ್ಲಿ ಸರ್ಟಿಫಿಕೇಟ್ (9) ಫಂಕ್ಷನಲ್ ಇಂಗ್ಲಿಷ್ ಸರ್ಟಿಫಿಕೇಟ್	

ದಿನಾಂಕ 31 ಜುಲೈ, 2022 ರಿಂದ manuu.edu.in/dde (ಅಡ್ಮಿಷನ್ ಪೋರ್ಟಲ್: manuuadmission.samarth.edu.in) ಜಾಲತಾನದಲ್ಲಿ ಇ-ಕೈಪಿಡಿ ಮತ್ತು ಆನ್‌ಲೈನ್ ಅರ್ಜಿ ನಮೂನೆಗಳು ಲಭ್ಯವಿರುತ್ತವೆ. ನೋಂದಣಿ ಶುಲ್ಕದ ಸಮೇತ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವುದು ಮತ್ತು ದಾಖಲಾತಿಗಳ ಯಶಸ್ವಿ ಪರಿಶೀಲನೆಯ ನಂತರ, ಜುಲೈ 2022ರ ಕೈಪಿಡಿಯಲ್ಲಿ ನೀಡಲಾಗಿರುವ ಕಾರ್ಯಕ್ರಮ ಶುಲ್ಕವನ್ನು ಪಾವತಿಸುವುದು. ಅಭ್ಯರ್ಥಿಗಳು, ಹೆಚ್ಚಿನ ವಿವರಗಳಿಗಾಗಿ ಸ್ಟೂಡೆಂಟ್ ಸಪೋರ್ಟ್ ಯೂನಿಟ್ (ಎಸ್‌ಎಸ್‌ಯು) ಹೆಲ್ಪ್‌ಲೈನ್ 040–23008463 ಅಥವಾ 040–23120600 (ಎಕ್ಸ್‌ಟೆನ್ಷನ್. 2207 ಮತ್ತು 2208) ಮತ್ತು ಟೋಲ್‌ಫ್ರೀ ನಂ. 18004252958 ಸಂಖ್ಯೆಗಳನ್ನು ಬೆಳಿಗ್ಗೆ 9:00 ರಿಂದ ಸಂಜೆ 7.00 ಗಂಟೆಯವರೆಗೆ ಸಂಪರ್ಕಿಸಬಹುದು. ಆಸಕ್ತಿಯುಳ್ಳ ಅಭ್ಯರ್ಥಿಗಳು ಹೆಚ್ಚಿನ ಮಾಹಿತಿಗಾಗಿ, ನವದೆಹಲಿ, ಕೋಲ್ಕತಾ, ಬೆಂಗಳೂರು, ಮುಂಬೈ, ಪಾಟ್ನಾ, ದರ್ಭಾಂಗ, ಭೋಪಾಳ, ರಾಂಚಿ, ಶ್ರೀನಗರ, ಅಮರಾವತಿ, ಹೈದರಾಬಾದ್, ಜಮ್ಮು, ನೂಹ್, ವಾರಾಣಸಿ ಮತ್ತು ಲಕ್ನೋ ನಗರಗಳಲ್ಲಿರುವ ಎಂಎಎನ್‌ಯುಯು ಸಂಸ್ಥೆಯ ಯಾವುದೇ ಪ್ರಾದೇಶಿಕ ಕೇಂದ್ರ/ ಉಪ-ಪ್ರಾದೇಶಿಕ ಕೇದ್ರಗಳನ್ನು ಸಂಪರ್ಕಿಸಬಹುದು ಅಥವಾ manuu.edu.in/dde ವೆಬ್‌ಸೈಟ್‌ಗೆ ಭೇಟಿ ನೀಡಬಹುದು.

ಆನ್‌ಲೈನ್ ಅರ್ಜಿ ನಮೂನೆಗಳನ್ನು ಸಲ್ಲಿಸುವ ಕೊನೆಯ ದಿನಾಂಕ 20 ಅಕ್ಟೋಬರ್ 2022 ಮತ್ತು ಪ್ರವೇಶ ಶುಲ್ಕ ಪಾವತಿಸುವ ಅಂತಿಮ ದಿನಾಂಕ 31 ಅಕ್ಟೋಬರ್, 2022 ರಂದು 23:59 ಗಂಟೆ ಆಗಿರುತ್ತದೆ.

ನಿರ್ದೇಶಕರು, ಡಿಡಿಇ manuu.edu.in/ddi ರಜಿಸ್ಟ್ರಾರ್

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜನೀಯರರು,
ಲೋಕೋಪಯೋಗಿ ಇಲಾಖೆ ವಿಭಾಗ ವಿಜಯಪುರ.
ಐ.ಎಫ್.ಟಿ. ಸಂ: ಕಾ.ನಿ.ಇಂ./ಲೋ.ಇ/ವಿ.ಜೆ.ಪಿ/ಪಿ.ಬಿ/5054/2022–23/2128
ದಿನಾಂಕ:27.07.2022

ಅಲ್ಪಾವಧಿ ಗುತ್ತಿಗೆ ಆಹ್ವಾನ ಪ್ರಕಟಣೆ (ಇ–ಪ್ರಕ್ಯೂರ್‌ಮೆಂಟ್) (2ನೇ ಕರೆ)

ಕಾರ್ಯನಿರ್ವಾಹಕ ಇಂಜಿನಿಯರರು ಲೋಕೋಪಯೋಗಿ ಇಲಾಖೆ ವಿಭಾಗ, ವಿಜಯಪುರ ಅಡಿಯಲ್ಲಿ ಐಟಂವಾರು ಗುತ್ತಿಗೆಗಳನ್ನು ಇ–ಪ್ರೋಕ್ಯೂರಮೆಂಟ್‌ನಲ್ಲಿ ನೋಂದಾಯಿತ ಗುತ್ತಿಗೆದಾರರು ಲೋಕೋಪಯೋಗಿ ಬಂದರು & ಒಳನಾಡು ಜಲಸಾರಿಗೆ ಇಲಾಖೆಯಲ್ಲಿ ನೊಂದಣಿ ಮತ್ತು ನವೀಕರಣ ಪ್ರಮಾಣ ಪತ್ರದ ದಾಖಲೆಗಳನ್ನು ಗೆಜೆಟೆಡ್ ಅಧಿಕಾರಿಯಿಂದ ಪ್ರಮಾಣೀಕರಿಸಿ ಟೆಂಡರ್‌ನೊಂದಿಗೆ ಸಲ್ಲಿಸುವುದು ಮತ್ತು ಅರ್ಹ ಗುತ್ತಿಗೆದಾರರಿಂದ ಸ್ಟ್ಯಾಂಡರ್ಡ ಟೆಂಡರ ಡಾಕ್ಯೂಮೆಂಟ್ ಕೆ.ಡಬ್ಲ್ಯೂ–2 ರಲ್ಲಿ ಲೆಕ್ಕ ಶೀರ್ಷಿಕೆ 5054–04–337–0–01–135 (ಯೋಜನೆ) ಜಿಲ್ಲಾ ಮತ್ತು ಇತರೆ ರಸ್ತೆಗಳು – ವಿಶೇಷ ಅಭಿವೃದ್ಧಿ ಯೋಜನೆ ಪರಿಶಿಷ್ಟ ಜಾತಿ ಉಪಯೋಜನೆ (ಎಸ್.ಡಿ.ಪಿ–ಎಸ್.ಸಿ.ಪಿ) ಅಡಿಯಲ್ಲಿ ಮುದ್ದೇಬಿಹಾಳ ಪಟ್ಟಣದ ಎಸ್.ಸಿ (ಆಶ್ರಯ) ಕಾಲೋನಿಯಲ್ಲಿ ಸಿ.ಸಿ ರಸ್ತೆ ನಿರ್ಮಾಣ (ಇಂಡೆಂಟ ನಂ. 149180–2ನೇ ಕರೆ) ಕಾಮಗಾರಿಗೆ ಗುತ್ತಿಗೆಯನ್ನು ಕರೆಯಲಾಗಿದ್ದು, ಸದರ ಕಾಮಗಾರಿಯು ಪರಿಶಿಷ್ಟ ಜಾತಿಗೆ ಸೇರಿದ ಗುತ್ತಿಗೆದಾರರಿಗೆ ಮೀಸಲಿಡಲಾಗಿದೆ,. ಅಂದಾಜು ಮೊತ್ತ ರೂ. 35.67 ಲಕ್ಷಗಳು & ಮುಂಗಡ ಠೇವಣಿ ಮೊತ್ತ 35,700/– ರೂಗಳು. ಸರ್ಕಾರದ ಪತ್ರ ಸಂಖ್ಯೆ. ಎಫ್.ಡಿ:876:ಇಎಕ್ಸಪಿ–12/2017 ಬೆಂಗಳೂರು ದಿನಾಂಕ:–10–10–2017 ರನ್ವಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಗುತ್ತಿಗೆದಾರರಿಗೆ ಇ.ಎಂ.ಡಿ ರಿಯಾಯಿತಿ ಒದಗಿಸಲಾಗಿದೆ. ಸದರ ಕಾಮಾಗಾರಿ ಗುತ್ತಿಗೆ ಮೊತ್ತಕ್ಕೆ ಅನುಗುಣವಾಗಿ ಜಿ.ಎಸ್.ಟಿ ಪ್ರತ್ಯೇಕವಾಗಿ ನೀಡಲಾಗುವುದು. ಹಾಗೂ ವಿಸ್ತೃತ ಗುತ್ತಿಗೆ ಅವಧಿಯು, ಗುತ್ತಿಗೆ ಅವಧಿಯು ಗುತ್ತಿಗೆದಾರರ ವಿಳಂಬದಿಂದ ಉಂಟಾದಲ್ಲಿ ಆ ಅವಧಿಯಲ್ಲಿ ಜಿ.ಎಸ್.ಟಿ ದರಗಳಲ್ಲಿ ಹೆಚ್ಚಳವಾದಲ್ಲಿ ಇದನ್ನು ಗುತ್ತಿಗೆದಾರರೇ ಭರಿಸುವರು. ಟೆಂಡರಗಳನ್ನು ಸ್ವೀಕರಿಸುವ ದಿನಾಂಕ: 08.08.2022 ರ ಸಂಜೆ 4.30 ಗಂಟೆಯವರೆಗೆ, ಟೆಂಡರ್‌ಗಳನ್ನು ತೆರೆಯುವ ದಿನಾಂಕ: 10.08.2022 ರ ಮುಂಜಾನೆ 11.00 ಗಂಟೆಯ ನಂತರ. ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಈ ಕೆಳಗೆ ಸಹಿ ಮಾಡಿದವರ ಕಛೇರಿಯಲ್ಲಿ ಹಾಗೂ ಅಂತರ್ ಜಾಲದ ಮೂಲಕ ವೆಬ್‌ಸೈಟ್ ವಿಳಾಸ www.eproc.karnataka.gov.in ರಲ್ಲಿ ಪಡೆಯಬಹುದು.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ವಿಭಾಗ, ವಿಜಯಪುರ
ವಾಪಾಸಂಇ/ವಿಜಯಪುರ/315/ಎಂಸಿಎ/2022–23

ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರ, ಬಳ್ಳಾರಿ–583101
ಸಂಖ್ಯೆ: ಬನಆಪ್ರಾ/ಇಎನ್‌ಜಿಜಿ/ಇಂಡೆಂಟ್ ಸಂಖ್ಯೆ:448&449/2022–23
ದಿನಾಂಕ:27/07/2022

ಅಲ್ಪಾವಧಿ ಮರು ಟೆಂಡರ್ ಪ್ರಕಟಣೆ

ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತರಾದ ಆಸಕ್ತಿಯುಳ್ಳ ಗುತ್ತೇದಾರರಿಂದ ಈ ಕೆಳಕಾಣಿಸಿದ ಕಾಮಗಾರಿಗೆ ಟೆಂಡರನ್ನು ಇ_ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಅಲ್ಪಾವದಿ ಮರು ಟೆಂಡರ್ ಆಹ್ವಾನಸಲಾಗಿದೆ. ಇದಕ್ಕಾಗಿ, ಗುತ್ತೇದಾರರು ಅಂತರ್ಜಾಲದ ಮೂಲಕ ವೆಬ್ ಸೈಟ್ ವಿಳಾಸ http://eproc.karnataka.gov.in ನ್ನು ಸಂದರ್ಶಿಸಬಹುದಾಗಿರುತ್ತದೆ. ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತೇದಾರರು ಈ ಕೆಳಗೆ ಸಹಿ ಮಾಡಿದ ಅಧಿಕಾರಿಗಳ ಕಛೇರಿಯಲ್ಲಿ ಕಛೇರಿ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿರುತ್ತದೆ.

ಕಾಮಗಾರಿಯ ವಿವರ: 1.BUDA/2021-22/RD/WORK_INDENT 448/Call-2. ಟೆಂಡರ್‌ಗೆ ಸೂಚಿಸಿದ ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ) 900.00. 2. BUDA/2021-22/OW/WORK_INDENT459/Call-2. ಟೆಂಡರ್‌ಗೆ ಸೂಚಿಸಿದ ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ) 373.62

ಸೂಚನೆ : ಕಾರಣಾಂತರಗಳಿಂದಾಗಿ ಈ ಕೆಳಗೆ ತಿಳಿಯಪಡಿಸಿದ ಟೆಂಡರ್ ದಿನಾಂಕಗಳು ಹಾಗೂ ಇನ್ನಿತರೆ ಯಾವುದೇ ಬದಲಾವಣೆಗಳಾದಲ್ಲಿ ಗುತ್ತೇದಾರರು–ಇ_ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಗಮನಿಸಬಹುದಾಗಿದೆ.

ಟೆಂಡರಿಗಾಗಿ ನಿಗದಿಪಡಿಸಿದ ದಿನಾಂಕಗಳು ಕೆಳಗಿನಂತಿವೆ :

01 ಪ್ರೀ ಬಿಡ್ ಸಭೆ ದಿನಾಂಕ: 03–08–2022ರಂದು 11.30 ಗಂಟೆಗೆ ಅಯುಕ್ತರು, ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರ, ಬಳ್ಳಾರಿರವರ ಕಛೇರಿಯಲ್ಲಿ. 02 ಟೆಂಡರ್ ಆಕ್ಷೇಪಣೆಗಳಿಗಾಗಿ ನಿಗದಿಪಡಿಸಲಾದ ದಿನಾಂಕ: 04–08–2022ರಂದು 04.30 ಗಂಟೆಯ ವರೆಗೆ. 03 ಇ–ಪೋರ್ಟ್‌ಲ್ ಮುಖಾಂತರ ಟೆಂಡರನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: 05–08–2022ರಂದು 04.30 ಗಂಟೆಯ ವರೆಗೆ. 04 ತಾಂತ್ರಿಕ ಬಿಡನ್ನು ತೆರೆಯುವ ದಿನಾಂಕ ಮತ್ತು ಸಮಯ: 08–08–2022 ಆಯುಕ್ತರು, ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರ, ಬಳ್ಳಾರಿ. 2022ರಂದು 04.30ಗಂಟೆಗೆ ಅಯುಕ್ತರು, ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರ, ಬಳ್ಳಾರಿ, ಇವರ ಕಛೇರಿಯಲ್ಲಿ ತೆರೆಯಲಾಗುವುದು. 05 ಹಾಗೂ ಹಣಕಾಸು ಬಿಡನ್ನು ತೆರೆಯುವ ದಿನಾಂಕ ಮತ್ತು ಸಮಯ: 17–08–2022ರಂದು 04.30ಗಂಟೆಗೆ ಅಯುಕ್ತರು, ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರ, ಬಳ್ಳಾರಿ, ಇವರ ಕಛೇರಿಯಲ್ಲಿ ತೆರೆಯಲಾಗುವುದು.

ಟೆಂಡರ್‌ನಲ್ಲಿನ ಹೆಚ್ಚಿನ ಮಾಹಿತಿಗಾಗಿ ರಜಾ ದಿನಗಳನ್ನು ಹೊರತುಪಡಿಸಿ ಕಛೇರಿ ವೇಳೆಯಲ್ಲಿ ಅಥವಾ www.eproc.karnataka.gov.in ವೆಬ್ ಸೈಟ್‌ನಲ್ಲಿ ಅಥವಾ ಈ ಕಛೇರಿಯ ದೂರವಾಣಿ ಸಂಖ್ಯೆ:08392–273731 ರವರಿಂದ ಪಡೆಯಬಹುದಾಗಿದೆ. ನಿಬಂಧನೆಗಳು 1)ಯಾವುದೇ ಕಾರಣಕ್ಕೂ ನಿಗದಿಪಡಿಸಿದ ಕೊನೆಯ ದಿನಾಂಕದಂದು ಸಂಪರ್ಕಜಾಲ (ಆನ್‌ಲೈನ್) ಸಿಗದಿದ್ದರೆ ಈ ಕಛೇರಿ ಜವಾಬ್ದಾರಿಯಾಗಿರುವುದಿಲ್ಲ 2)ಯಾವುದೇ ಟೆಂಡರ್ ಅಂಗೀಕರಿಸುವ ಅಥವಾ ತಿರಸ್ಕರಿಸುವ ಅಧಿಕಾರ ಅಯುಕ್ತರು, ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರ, ಬಳ್ಳಾರಿ ಇವರು ಕಾಯ್ದಿರಿಸಿಕೊಂಡಿರುತ್ತಾರೆ ಹಾಗೂ ಇನ್ನುಳಿದ ಎಲ್ಲಾ ಷರತ್ತುಗಳು ಅನ್ವಯವಾಗುತ್ತದೆ.

ಸಹಿ/– ಆಯುಕ್ತರು, ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರ, ಬಳ್ಳಾರಿ.
ಡಿಐಪಿಆರ್/ಬಳ್ಳಾರಿ/308/ಎಂಸಿಎ/2022–23

ಕರ್ನಾಟಕ ರಾಜ್ಯ ವೈದ್ಯಕೀಯ ಸರಬರಾಜು ನಿಗಮ ನಿಯಮಿತ
ಪಿ.ಹೆಚ್.ಐ ಕಟ್ಟಡ, ಎಸ್.ಜೆ.ಪಿ ಪಾಲಿಟೆಕ್ನಿಕ್ ಎದುರು, ಕೆ.ಆರ್. ಸರ್ಕಲ್,
ಶೇಷಾದ್ರಿ ರಸ್ತೆ, ಬೆಂಗಳೂರು–560 001. ದೂರವಾಣಿ ಸಂಖ್ಯೆ: +91–80–29619801
ಮಿಂಚ್ ಅಂಚೆ: md.ksmscl@gmail.com
No: KSMSCL/DRUGS/ TND (II)/MH-IFA/10/2022-23 DATED: 30.07.2022

ಟೆಂಡರ್ ಪ್ರಕಟಣೆ

ಉಲ್ಲೇಖ:
1. ಈ ಕಛೇರಿಯ ಟೆಂಡರ ಅಧಿಸೂಚನೆ ಸಂಖ್ಯೆ: HFW/KSMSCL/EQPT /MH-TND/13/2022-23, Dated: 30.07.2022 /(IND- 962)
2. ಈ ಕಛೇರಿಯ ಟೆಂಡರ ಅಧಿಸೂಚನೆ ಸಂಖ್ಯೆ: HFW/KSMSCL/EQPT / TND/ENT/11/2022-23, Dated: 30.07.2022 /(IND- 963)
3. ಈ ಕಛೇರಿಯ ಟೆಂಡರ ಅಧಿಸೂಚನೆ ಸಂಖ್ಯೆ: KSMSCL/DRUGS/TND (II)//MH-IFA/10/2022-23, Dated: 30.07.2022 (IND-964)
4. ಈ ಕಛೇರಿಯ ಟೆಂಡರ ಅಧಿಸೂಚನೆ ಸಂಖ್ಯೆ: KSMSCL/DRUGS/ TND(III)/IVF-RL/11/2022-23, Dated:30.07.2022 (IND-965).
5. ಈ ಕಛೇರಿಯ ಟೆಂಡರ ಅಧಿಸೂಚನೆ ಸಂಖ್ಯೆ: KSMSCL/DRUGS / TND(III)/IVF-D5%/12/2022-23, Dated: 30.07.2022 (IND- 966).
6. ಈ ಕಛೇರಿಯ ಟೆಂಡರ ಅಧಿಸೂಚನೆ ಸಂಖ್ಯೆ: KSMSCL/DRUGS / TND(III)/IVF-DNS/13/2022-23, Dated: 30.07.2022 (IND- 967).
7. ಈ ಕಛೇರಿಯ ಟೆಂಡರ ಅಧಿಸೂಚನೆ ಸಂಖ್ಯೆ: KSMSCL/DRUGS/TND (III)/IVF-Metronidazole/14/2022-23, Dated: 30.07.2022 (IND-968).

ಇ–ಟೆಂಡರಿಂಗ್ ವ್ಯವಸ್ಥೆಯಡಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯ ಪಾರದರ್ಶಕತೆ ಅಧಿನಿಯಮ 1999 ಮತ್ತು ನಿಯಮ 2000 ರಂತೆ ಈ ಕೆಳಕಂಡ ರಾಷ್ಟ್ರ ವ್ಯಾಪ್ತಿ ಇ–ಟೆಂಡರ್ ಕರೆಯಲಾಗಿದೆ.

1. 2022–23 ನೇ ಸಾಲಿಗೆ ತಾಯಿ ಆರೋಗ್ಯ ಕಾರ್ಯಕ್ರಮಕ್ಕೆ ಅವಶ್ಯವಿರುವ ಉಪಕರಣಗಳನ್ನು ಖರೀದಿಸಿ ಪೂರೈಸಲು ಟೆಂಡರ್ ಕರೆಯುವ ಬಗ್ಗೆ. (IND-962).
2. 2022–23 ನೇ ಸಾಲಿಗೆ NPPCD ಕಾರ್ಯಕ್ರಮಕ್ಕೆ ಅವಶ್ಯವಿರುವ ಉಪಕರಣಗಳನ್ನು ಖರೀದಿಸಿ ಪೂರೈಸಲು ಟೆಂಡರ್ ಕರೆಯುವ ಬಗ್ಗೆ. (IND-963).
3. 2021–22 ನೇ ಸಾಲಿಗೆ ತಾಯಿ ಆರೋಗ್ಯ ಕಾರ್ಯಕ್ರಮಕ್ಕೆ ಅವಶ್ಯವಿರುವ Iron & Folic Acid Tablet ಗಳನ್ನು ಖರೀದಿಸಿ ಪೂರೈಸಲು ಟೆಂಡರ್ ಕರೆಯುವ ಬಗ್ಗೆ. (IND-964).
4. 2020–21 ನೇ ಸಾಲಿಗೆ ರಾಜ್ಯದ ವಿವಿಧ ಆರೋಗ್ಯ ಸಂಸ್ಥೆಗಳಿಗೆ ಅವಶ್ಯವಿರುವ ಅವಶ್ಯವಿರುವ IV-RL ದ್ರಾವಣವನ್ನು ಖರೀದಿಸಿ ಪೂರೈಸಲು ಟೆಂಡರ್ ಕರೆಯುವ ಬಗ್ಗೆ. (IND-965).
5. 2020–21 ನೇ ಸಾಲಿಗೆ ರಾಜ್ಯದ ವಿವಿಧ ಆರೋಗ್ಯ ಸಂಸ್ಥೆಗಳಿಗೆ ಅವಶ್ಯವಿರುವ ಅವಶ್ಯವಿರುವ IV-D5% ದ್ರಾವಣಗಳನ್ನು ಖರೀದಿಸಿ ಪೂರೈಸಲು ಟೆಂಡರ್ ಕರೆಯುವ ಬಗ್ಗೆ. (IND-966).
6. 2020–21 ನೇ ಸಾಲಿಗೆ ರಾಜ್ಯದ ವಿವಿಧ ಆರೋಗ್ಯ ಸಂಸ್ಥೆಗಳಿಗೆ ಅವಶ್ಯವಿರುವ ಅವಶ್ಯವಿರುವ IV-DNS ದ್ರಾವಣಗಳನ್ನು ಖರೀದಿಸಿ ಪೂರೈಸಲು ಟೆಂಡರ್ ಕರೆಯುವ ಬಗ್ಗೆ. (IND-967).
7. 2020–21 ನೇ ಸಾಲಿಗೆ ರಾಜ್ಯದ ವಿವಿಧ ಆರೋಗ್ಯ ಸಂಸ್ಥೆಗಳಿಗೆ ಅವಶ್ಯವಿರುವ ಅವಶ್ಯವಿರುವ IV-Metronidazole ದ್ರಾವಣಗಳನ್ನು ಖರೀದಿಸಿ ಪೂರೈಸಲು ಟೆಂಡರ್ ಕರೆಯುವ ಬಗ್ಗೆ. (IND-968).

ತಾಂತ್ರಿಕ ವಿವರಣೆ, ಇ.ಎಮ್.ಡಿ, ಟೆಂಡರ್ ನಿಯಮಾವಳಿ ಹಾಗೂ ಇತರೆ ಮಾಹಿತಿಯನ್ನು ಈ–ಟೆಂಡರ್ ವ್ಯವಸ್ಥೆಯಡಿಯಲ್ಲಿ ವೆಬ್ ಸೈಟ್ ಮುಖಾಂತರ: https:eproc.karnataka.gov.in ನಲ್ಲಿ ದಿನಾಂಕ: 30.07.2022 ರಿಂದ ಔಷಧಿ ಟೆಂಡರ್ ಗಳ ದಾಸ್ತಾವೇಜುಗಳನ್ನು ಡೌನ್ ಲೋಡ್ ಮಾಡಬಹುದಾಗಿದ್ದು, ಹಚ್ಚಿನ ವಿವರಣೆಯನ್ನು ಈ ಕಛೇರಿಯಿಂದ ಕೆಲಸದ ಅವಧಿಯಲ್ಲಿ ಪಡೆಯಬಹುದಾಗಿದೆ.

ಸಹಿ/– ವ್ಯವಸ್ಥಾಪಕ ನಿರ್ದೇಶಕರು,
DIPR/CP/RO1584/AAPL/2022-23 ಕೆ.ಎಸ್.ಎಂ.ಎಸ್.ಸಿ.ಎಲ್., ಬೆಂಗಳೂರು.

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಚೇರಿ–1, (ಕೆರೆಗಳು) 3ನೇ ಮಹಡಿ,
ಅನೆಕ್ಸ್ ಕಟ್ಟಡ–3, ನರಸಿಂಹರಾಜ ಚೌಕ, ಬೆಂಗಳೂರು–02.
ಸಂಖ್ಯೆ:ಕಾಪಾಅ–1(ಕೆರೆಗಳು)/ಟೆಂಡರ್/05/2022–23 ದಿನಾಂಕ: 30.07.2022

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ)
(ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಕಾರ್ಯಪಾಲಕ ಅಭಿಯಂತರರು–1 (ಕೆರೆಗಳು), ಬೃ.ಬೆಂ.ಮ.ಪಾಲಿಕೆ ಇವರು ಈ ಕೆಳಕಂಡ ಕಾಮಗಾರಿಗಳಿಗೆ ಅರ್ಹ ಟೆಂಡರುದಾರರುಗಳಿಂದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕಾಮಗಾರಿಗಳ ಹೆಸರು	ಕಾಮಗಾರಿಯ ಅಂದಾಜು ಮೊತ್ತ (₹.ಲಕ್ಷಗಳಲ್ಲಿ)	ಇಎಂಡಿ (₹.ಗಳಲ್ಲಿ)
1	ಸೀಗೆಹಳ್ಳಿ ಕೆರೆ ಮತ್ತು ಚಿಕ್ಕಬಸವನಪುರ ಕೆರೆಯಲ್ಲಿ ಬಾಕಿ ಉಳಿಕೆ ಅಭಿವೃದ್ಧಿ ಕಾಮಗಾರಿಗಳನ್ನು ಮಾಡುವುದು.	284.00	4,26,000.00
2	ನಲ್ಲೂರಹಳ್ಳಿ ಕೆರೆಯಲ್ಲಿ ಬಾಕಿ ಉಳಿಕೆ ರೀಚ್‌ಗಳಿಗೆ ಚೈನ್‌ಲಿಂಕ್ ತಂತಿಬೇಲಿ ಒದಗಿಸುವುದು.	75.00	1,50,000.00
3	ಸಾರಕ್ಕಿ ಕೆರೆಯಲ್ಲಿ ತುರ್ತು ಕಾಮಗಾರಿ–ಗಳನ್ನು ಮಾಡುವುದು.	100.00	2,00,000.00

ಟೆಂಡರ್ ವೇಳಾಪಟ್ಟಿ: (1) ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ದಿನಾಂಕ 05.08.2022ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. (2) ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 22.08.2022ರ ಸಂಜೆ 4:00 ಗಂಟೆಯವರೆಗೆ. (3) ಬಿಡ್ ಪೂರ್ವಭಾವಿ ಸಭೆಯನ್ನು ಕಾರ್ಯಪಾಲಕ ಅಭಿಯಂತರರ ಕಚೇರಿ–1, ಕೆರೆಗಳು, ಬೃ.ಬೆಂ.ಮ.ಪಾ ಇಲ್ಲಿ ದಿನಾಂಕ: 11.08.2022ರ ಮಧ್ಯಾಹ್ನ 3:00 ಗಂಟೆಗೆ ನಡೆಸಲಾಗುವುದು. (4) ತಾಂತ್ರಿಕ ಬಿಡ್‌ಗಳನ್ನು ಕಾರ್ಯಪಾಲಕ ಅಭಿಯಂತರರ ಕಚೇರಿ–1, (ಕೆರೆಗಳು), ಇಲ್ಲಿ ದಿನಾಂಕ: 23.08.2022ರ ಸಂಜೆ 4:30 ಗಂಟೆಗೆ ತೆರೆಯಲಾಗುವುದು. ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಚೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ವೆಬ್‌ಸೈಟ್ https://eproc.karnataka.gov.in ನಲ್ಲಿ ಪಡೆದುಕೊಳ್ಳಬಹುದಾಗಿದೆ.

ಸಹಿ/– ಕಾರ್ಯಪಾಲಕ ಅಭಿಯಂತರರು–1, (ಕೆರೆಗಳು)

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರ್ಕಾರ
(ಪೊಲೀಸ್ ಇಲಾಖೆ)
ಪೊಲೀಸ್ ಕಮೀಷನರ್‌ರವರ ಕಛೇರಿ, ಮೈಸೂರು ನಗರ
ಸಂಖ್ಯೆ:ಸಿಓಪಿ/ಸಂಗ್ರಹ/ಟೆಂಡರ್/328/2021–22 ದಿನಾಂಕ: 22.07.2022

ಟೆಂಡರ್ ಪ್ರಕಟಣೆ

(ONLY THROUGH "e-Procurement SYSTEM)

ಮೈಸೂರು ನಗರದ ವಿವಿಧ ಸ್ಥಳಗಳಲ್ಲಿ ಒಟ್ಟು 40 ಸಂಖ್ಯೆ ಟ್ರಾಫಿಕ್ ಎನ್‌ಫೋರ್ಸ್‌ಮೆಂಟ್ ಕ್ಯಾಮೆರಾಗಳನ್ನು (ಸಿಸಿಟಿವಿ) ಅಳವಡಿಸುವ ಸಲುವಾಗಿ ಇ–ಪ್ರಕ್ಯೂರ್‌ಮೆಂಟ್ ರೀತ್ಯ 30 ದಿನಗಳ ಟೆಂಡರ್ ಆಹ್ವಾನಿಸಲಾಗಿದೆ.

Sl. No. 1. Name of the work: "Tender Document for the Supply, Installation and Maintenance of Traffic Enforcement Cameras with ANPR analytics and Optical Fiber connectivity to TMC in Mysore Police Commissionerate"
No. of CCTV Cameras: 40 No.s

1) Floating of Bid Douments online at www.eproc.karnataka.gov.in: 22.07.2022 - 04.00 PM. 2) Last Date for Submission of queries: 03.08.2022 - 05.00 PM. 3) Date of Pre-Bid Meeting: 04.08.2022 - 11.00 AM. 4) Last Date for Submission of Bid Document: 22.08.2022 - 04.00 PM 5) Date of Opening the Technical Bid: 23.08.2022 - 04.10 PM. 6) Date of Technical Evaluation: 25.08.2022 - 11.00 AM. 7) Date of Opening of Commercial Bid: 25.08.2022 - 04.00 PM.

"e-Procurement" Portal ನಲ್ಲಿ ಅರ್ಜಿ ಸಲ್ಲಿಸಲು ಪ್ರಾರಂಭದ ದಿನಾಂಕ: 22.07.2022ರ ಸಂಜೆ 04.00 ಗಂಟೆಗೆ – ಮಾಹಿತಿಯನ್ನು "eproc.karnataka.gov.in "ವೆಬ್‌ಸೈಟ್‌ನಲ್ಲಿ ಹಾಗೂ "e-Procurement Helpdesk Phone Numbers: +91 80 46010000, +91 80 68948777 or email at support@eprochelpdesk.com ನಲ್ಲಿ ಪಡೆಯಬಹುದು. ಹೆಚ್ಚಿನ ಮಾಹಿತಿಯನ್ನು ಪೊಲೀಸ್ ಕಮೀಷನರ್‌ರವರ ಕಛೇರಿಯ ಸಂಗ್ರಹ ಶಾಖೆಯಿಂದ ಕಛೇರಿ ವೇಳೆಯಲ್ಲಿ ಪಡೆಯಬಹುದು. Phone Number – 0821–2418575. (e-mail: storemyc@ksp.gov.in)

ಸಹಿ/– ಪೊಲೀಸ್ ಕಮೀಷನರ್, ಮೈಸೂರು ನಗರ
DIPR/DD-MYS/MCA/290/2022-23

ನಗರಾಭಿವೃದ್ಧಿ ಪ್ರಾಧಿಕಾರ ತುಮಕೂರು
ಬೆಳಗುಂಬ ರಸ್ತೆ, ತುಮಕೂರು–572103. ಫ್ಯಾಕ್ಸ್ : 0816–2255761 ದೂರವಾಣಿ : 2272280 email: tudatmk@yahoo.co.in Website: tuda.co.in
ಸಂಖ್ಯೆ : TUDA/LBPAS-00031/2021–22/CLU ದಿನಾಂಕ: 25.07.2022

ಸಾರ್ವಜನಿಕ ಪ್ರಕಟಣೆ

ಈ ಕೆಳಕಂಡ ಕೋಷ್ಟಕದಲ್ಲಿ ನಮೂದಿಸಿರುವ ಜಮೀನು ತುಮಕೂರು ನಗರಾಭಿವೃದ್ಧಿ ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶಕ್ಕೆ ಸರ್ಕಾರದಿಂದ ಅನುಮೋದನೆಯಾಗಿರುವ ಮಹಾಯೋಜನೆ (ಪರಿಷ್ಕೃತ–2) – 2031 ರಂತೆ ಸಾರ್ವಜನಿಕ ಮತ್ತು ಅರೆ ಸಾರ್ವಜನಿಕ ವಲಯಕ್ಕೆ ಕಾಯ್ದಿರಿಸಲಾಗಿರುತ್ತದೆ. ಅರ್ಜಿದಾರರು ಪ್ರಾಧಿಕಾರಕ್ಕೆ ಮನವಿ ಸಲ್ಲಿಸಿ, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 69(2) ರಿಂದ 69(4) ರನ್ವಯ ವಸತಿ ಉದ್ದೇಶಕ್ಕೆ ಭೂ ಉಪಯೋಗ ನಿಗಧಿಪಡಿಸಲು ಕೋರಿರುತ್ತಾರೆ.

ಭೂ ಉಪಯೋಗ ನಿಗಧಿಪಡಿಸುವ ಸಂಬಂಧ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 69(3) ರಂತೆ ವಸತಿ ಉದ್ದೇಶಕ್ಕೆ ಭೂ ಉಪಯೋಗವನ್ನು ನಿಗಧಿಪಡಿಸಲು ಈ ಪ್ರಕಟಣೆಯನ್ನು ನೀಡಲಾಗಿದೆ. ಸದರಿ ಪ್ರಸ್ತಾವನೆಗೆ ಸಾರ್ವಜನಿಕರಿಂದ ಆಕ್ಷೇಪಣೆಗಳೇನಾದರೂ ಇದ್ದಲ್ಲಿ ಈ ಪ್ರಕಟಣೆಯ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಯುಕ್ತರು, ನಗರಾಭಿವೃದ್ಧಿ ಪ್ರಾಧಿಕಾರ, ತುಮಕೂರು ಇವರಿಗೆ ಲಿಖಿತವಾಗಿ ಸಲ್ಲಿಸಬಹುದೆಂದು ತಿಳಿಯಪಡಿಸಿದೆ. ನಿಗದಿತ ಅವಧಿಯ ನಂತರ ಸಲ್ಲಿಸುವ ಸಲಹೆ / ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಕ್ರ ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮ	ಸರ್ವೆ ನಂ.	ವಿಸ್ತೀರ್ಣ ಎ/ಗುಂ	ಮಹಾಯೋಜನೆ ಯಂತೆ ಭೂ ಉಪಯೋಗ	ಕೋರಿರುವ ಭೂ ಉಪಯೋಗ
1	ಶೈಲಜ.ಜಿ ಕೋಂ ವೆಂಕಟರಮಣ.ಬಿ.ವಿ	ತುಮಕೂರು	ಕಸಬಾ ದಕ್ಷಿಣ	ಶೆಟ್ಟಿಹಳ್ಳಿ	220/3	00–02.08ಗು	ಸಾರ್ವಜನಿಕ ಮತ್ತು ಅರೆ ಸಾರ್ವಜನಿಕ	ವಸತಿ

ಈ ಮೇಲ್ಕಂಡ ಪ್ರಕಟಣೆಯಲ್ಲಿ ತಿಳಿಸಿರುವ ಸರ್ವೆ.ನಂ.ಗಳ ಜಮೀನುಗಳಿಗೆ ಯಾವುದಾದರೂ ಇಲಾಖೆ/ಪ್ರಾಧಿಕಾರವು ಸಾರ್ವಜನಿಕ ಉದ್ದೇಶಕ್ಕಾಗಿ ಭೂ ಸ್ವಾಧೀನ ಪ್ರಕ್ರಿಯೆಯನ್ನು ಕೈಗೊಂಡಿದ್ದಲ್ಲಿ ನಿಗಧಿತ ಅವಧಿಯೊಳಗೆ ಈ ಪ್ರಾಧಿಕಾರಕ್ಕೆ ಮಾಹಿತಿಯನ್ನು ಸಲ್ಲಿಸುವುದು. ತಪ್ಪಿದಲ್ಲಿ ಈ ಜಮೀನುಗಳು ಯಾವುದೇ ಭೂಸ್ವಾಧೀನಕ್ಕೆ ಒಳಪಟ್ಟಿರುವುದಿಲ್ಲ ಎಂದು ತಿಳಿದು, ಅರ್ಜಿದಾರರ ಕೋರಿಕೆಯನ್ನು ಪರಿಗಣಿಸಲಾಗುವುದು.

DIPR/TUM/366/MCA/2022-23 ಸಹಿ/– ಆಯುಕ್ತರು ನಗರಾಭಿವೃದ್ಧಿ ಪ್ರಾಧಿಕಾರ, ತುಮಕೂರು.

ಮಂಗಳೂರು: ರಾಜ್ಯ ಸರ್ಕಾರದಿಂದ ಒಂದು ಕೋಮಿನ ಪರ ಕೆಲಸ – ಆಕ್ಷೇಪ

ಶಾಂತಿಸಭೆ: ಮುಸ್ಲಿಮರಿಂದ ಬಹಿಷ್ಕಾರ

ಪ್ರಜಾವಾಣಿ ವಾರ್ತೆ

ಮಂಗಳೂರು: ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಾನೂನು ಸುವ್ಯವಸ್ಥೆ ಕಾಪಾಡುವ ಉದ್ದೇಶದಿಂದ ಜಿಲ್ಲಾಡಳಿತ ಶನಿವಾರ ಶಾಂತಿ ಸಭೆ ನಡೆಸಿತು. ಆದರೆ, ಒಂದು ಸಮುದಾಯದ ಮುಖಂಡರು ಸಭೆ ಬಹಿಷ್ಕರಿಸಿದರು.

'ರಾಜ್ಯ ಸರ್ಕಾರ ಒಂದು ಕೋಮಿನ ಪರ ಕೆಲಸ ಮಾಡುತ್ತಿದೆ. ಮುಸ್ಲಿಂ ಸಮುದಾಯವನ್ನು ಗುರಿಯಾಗಿಸಿ ಕ್ರಮಕೈಗೊಳ್ಳುತ್ತಿದೆ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು, ಹತ್ಯೆಯಾದ ಪ್ರವೀಣ್ ನೆಟ್ಟಾರು ಅವರ ಮನೆಗೆ ಗುರುವಾರ ಭೇಟಿ ನೀಡಿದ್ದರು. ಬಿಜೆಪಿ ಪರವಾಗಿ ಬಂದವರಂತೆ ಅವರು ನಡೆದುಕೊಂಡಿದ್ದಾರೆ. ಪ್ರವೀಣ್ ಮನೆಗೆ ಭೇಟಿ ನೀಡಿದ ಮುಖ್ಯಮಂತ್ರಿಯವರು, ಅಲ್ಲೇ ಸಮೀಪದ ಕಳೆಂಜ ಗ್ರಾಮದ ಮಸೂದ್ ಮನೆಗೂ ಭೇಟಿ ನೀಡಬಹುದಿತ್ತು. ಇಂತಹ ತಾರತಮ್ಯವನ್ನು ಖಂಡಿಸಿ ಮುಸ್ಲಿಂ ಸಮುದಾಯ ಶಾಂತಿ ಸಭೆಯನ್ನು ಬಹಿಷ್ಕರಿಸಿದೆ' ಎಂದು ದಕ್ಷಿಣ ಕನ್ನಡ– ಉಡುಪಿ ಜಿಲ್ಲೆಯ ಮುಸ್ಲಿಂ ಸೆಂಟ್ರಲ್ ಕಮಿಟಿ ಉಪಾಧ್ಯಕ್ಷ ಬಿ.ಮುಮ್ತಾಜ್ ಅಲಿ ಕೃಷ್ಣಾಪುರ ತಿಳಿಸಿದರು.

'ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮೂರು ಜೀವಗಳು ಕೆಲವೇ ದಿನಗಳಲ್ಲಿ ಬಲಿಯಾಗಿವೆ. ಈ ಬಗ್ಗೆ ಸಾರ್ವಜನಿಕರಲ್ಲಿ ನೋವು ಇದೆ. ಜಿಲ್ಲೆಯಲ್ಲಿ ಹತ್ಯೆಗೊಳಗಾದ ಯುವಕರ ಕುಟುಂಬಗಳಿಗೆ ಪರಿಹಾರ ನೀಡುವ ವಿಚಾರದಲ್ಲೂ ತಾರತಮ್ಯ ನಡೆಸಲಾಗಿದೆ. ಹತ್ಯೆಗೊಳಗಾದ ಮುಸ್ಲಿಂ ಸಮುದಾಯದ ಯುವಕರ ಕುಟುಂಬದವರಿಗೆ ಪರಿಹಾರ ನೀಡಿಲ್ಲ. ಮುಖ್ಯಮಂತ್ರಿಯವರು ಪಕ್ಷದಿಂದ ಪ್ರವೀಣ್ ನೆಟ್ಟಾರು ಕುಟುಂಬಕ್ಕೆ ಪರಿಹಾರ ನೀಡಿರುವುದಕ್ಕೆ ನಮ್ಮ ಅಭ್ಯಂತರ ಇಲ್ಲ. ಆದರೆ ಸರ್ಕಾರದಿಂದ ಪರಿಹಾರ ನೀಡುವಾಗ ಎಲ್ಲ ಸಮುದಾಯಗಳನ್ನು ಸಮಾನವಾಗಿ ನಡೆಸಿಕೊಳ್ಳಬೇಕಲ್ಲವೇ' ಎಂದು ಅವರು ಪ್ರಶ್ನಿಸಿದರು.

'ಮುಸ್ಲಿಂ ಸಮುದಾಯಕ್ಕೆ ಆಗುತ್ತಿರುವ ಅನ್ಯಾಯದ ಬಗ್ಗೆ ಮಸೀದಿಗಳಲ್ಲಿ ಚರ್ಚಿಸಿದ್ದೇವೆ. ಸರ್ಕಾರ ಮೊದಲು ಸಮಾನತೆಗೆ ಆದ್ಯತೆ ನೀಡಲಿ. ಆ ಬಳಿಕ ಬೇಕಿದ್ದರೆ ಶಾಂತಿ ಸಭೆ ಕರೆಯಲಿ ಎಂಬ ಅಭಿಪ್ರಾಯ ಮಸೀದಿಗಳಲ್ಲಿ ನಡೆದ ಚರ್ಚೆಯಲ್ಲಿ ವ್ಯಕ್ತವಾಗಿದೆ' ಎಂದು ಅವರು 'ಪ್ರಜಾವಾಣಿ'ಗೆ ತಿಳಿಸಿದರು.

ಆರೋಪ: 'ಕ್ರಿಯೆಗೆ ತಕ್ಕ ಪ್ರತಿಕ್ರಿಯೆ ಇರುತ್ತದೆ' ಎಂದು ಗೃಹಸಚಿವರಾಗಿದ್ದಾಗ ಹೇಳಿಕೆ ನೀಡಿದ್ದ ಬಸವರಾಜ ಬೊಮ್ಮಾಯಿ ಅವರು, ಮುಖ್ಯಮಂತ್ರಿಯಾದ ಬಳಿಕವೂ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಡೆದ ಕೊಲೆಗಳಿಗೆ ಸ್ಪಂದಿಸುವ ವಿಚಾರದಲ್ಲೂ ಅನ್ಯಾಯವನ್ನು ಎಸಗಿದ್ದಾರೆ. ಮೃತರ ಕುಟುಂಬಕ್ಕೆ ಸಂತಾಪ ಸೂಚಿಸಲು ಭೇಟಿ ನೀಡುವಾಗಲೂ ಸತ್ತವರ ಧರ್ಮವನ್ನು ನೋಡಿದ್ದಾರೆ' ಎಂದು ದಕ್ಷಿಣ ಕನ್ನಡ ಜಿಲ್ಲಾ ಮುಸ್ಲಿಂ ಒಕ್ಕೂಟದ ಅಧ್ಯಕ್ಷ ಕೆ.ಅಶ್ರಫ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

'ಸಮಿತಿಗಳನ್ನು ಬಲಪಡಿಸುತ್ತೇವೆ'

'ಡ್ರಗ್ಸ್ ಹಾಗೂ ಗಾಂಜಾ ಹಾವಳಿ ಹತ್ತಿಕ್ಕುವಂತೆಯೂ ಶಾಂತಿ ಸಭೆಯಲ್ಲಿ ಅನೇಕರು ಒತ್ತಾಯಿಸಿದ್ದಾರೆ. ಈ ವಿಚಾರವನ್ನು ಗಂಭೀರವಾಗಿ ಪರಿಶೀಲಿಸುವಂತೆ ಪೊಲೀಸ್ ಅಧಿಕಾರಿಗಳಿಗೆ ಸೂಚಿಸಿದ್ದೇನೆ' ಎಂದು ರಾಜ್ಯ ಕಾನೂನು ಸುವ್ಯವಸ್ಥೆ ವಿಭಾಗದ ಎಡಿಜಿಪಿ ಅಲೋಕ್ ಕುಮಾರ್ ತಿಳಿಸಿದರು.

'ಪೊಲೀಸ್ ಠಾಣಾ ಹಂತದಲ್ಲಿ ಗಸ್ತು ಸಮಿತಿ, ಮೊಹಲ್ಲಾ ಸಮಿತಿ ಹಾಗೂ ಶಾಂತಿ ಸಮಿತಿಗಳನ್ನು ಬಲಪಡಿಸುತ್ತೇವೆ. ಜನರ ಜೊತೆಗೆ ಉತ್ತಮ ಬಾಂಧವ್ಯ ಹೊಂದುವ ಉದ್ದೇಶದಿಂದ ಆಗಾಗ ಸಭೆಗಳನ್ನು ಆಯೋಜಿಸುತ್ತೇವೆ. ಸೂಕ್ಷ್ಮ ಪ್ರದೇಶಗಳ ನಿವಾಸಿಗಳಲ್ಲಿ ಸ್ಥೈರ್ಯ ತುಂಬುವ ಉದ್ದೇಶದಿಂದ, ಅಂತಹ ಕಡೆಗಳಲ್ಲೂ ಆಗಾಗ ಸಭೆಗಳನ್ನು ಆಯೋಜಿಸುತ್ತೇವೆ' ಎಂದರು.

ಶಾಂತಿ ಸಭೆಯನ್ನು ಮುಸ್ಲಿಂ ಸಮುದಾಯದ ಮುಖಂಡರು ಸಭೆಯನ್ನು ಬಹಿಷ್ಕರಿಸಿರುವ ವಿಚಾರವನ್ನೂ ಪರಿಶೀಲಿಸುತ್ತೇವೆ. ಇನ್ನೊಂದು ಸಭೆಯನ್ನು ಆಯೋಜಿಸುತ್ತೇವೆ

ಡಾ.ರಾಜೇಂದ್ರ ಕೆ.ವಿ., ಜಿಲ್ಲಾಧಿಕಾರಿ

ಅವರು ಶಾಂತಿ ಕಾಪಾಡಲು ಸಹಕರಿಸುವುದಿಲ್ಲ ಎಂಬುದು ಅದರ ಅರ್ಥವಲ್ಲ. ಶಾಂತಿ ಸಭೆಯಲ್ಲಿ ಭಾಗವಹಿಸಲು ಸಾಧ್ಯವಾಗುತ್ತಿಲ್ಲ ಎಂದು ಕೆಲವು ಮುಸ್ಲಿಂ ಮುಖಂಡರು ಮೊದಲೇ ತಿಳಿಸಿದ್ದಾರೆ

ಎನ್.ಶಶಿಕುಮಾರ್, ಪೊಲೀಸ್ ಕಮಿಷನರ್

'ಪ್ರವೀಣ್‌ಗೆ ಬೆದರಿಕೆ ಇದ್ದರೂ ಕ್ರಮ ಕೈಗೊಳ್ಳದಿರುವುದು ಲೋಪ'

ಸುಳ್ಯ: 'ಪ್ರವೀಣ್ ನೆಟ್ಟಾರು ಅವರಿಗೆ ಜೀವ ಬೆದರಿಕೆ ಇದ್ದ ಬಗ್ಗೆ ಪೊಲೀಸರಿಗೆ ಮಾಹಿತಿ ನೀಡಿದ್ದರೂ ಯಾವುದೇ ಕ್ರಮ ಕೈಗೊಂಡಿಲ್ಲ. ರಾಜ್ಯದಲ್ಲಿ ನಮ್ಮ ಪಕ್ಷದ್ದೇ ಸರ್ಕಾರ ಇದ್ದರೂ ಹತ್ಯೆ ತಪ್ಪಿಸಲು ಕ್ರಮ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗಿಲ್ಲ ಎಂಬ ಆರೋಪ ಇದೆ. ಇದು ನಿಜವಾಗಿದ್ದರೆ ಇದೊಂದು ಗಂಭೀರ ಲೋಪ' ಎಂದು ಸಂಸದ ಡಿ.ವಿ.ಸದಾನಂದ ಗೌಡ ಹೇಳಿದರು.

ಪ್ರವೀಣ್ ನೆಟ್ಟಾರು ಅವರ ಮನೆಗೆ ಶನಿವಾರ ಭೇಟಿ ನೀಡಿದ ಕುಟುಂಬದವರಿಗೆ ಸಾಂತ್ವನ ಹೇಳಿದ ನಂತರ ಸುದ್ದಿಗಾರರ ಜೊತೆ ಮಾತನಾಡಿದರು.

ಗೃಹ ಸಚಿವ ಆರಗ ಜ್ಞಾನೇಂದ್ರ ಅವರ ಬೆಂಗಳೂರಿನ ಮನೆ ಎದುರು ಸೇರಿದ್ದ ಎಬಿವಿಪಿ ಕಾರ್ಯಕರ್ತರು, ಕರ್ತವ್ಯದಲ್ಲಿದ್ದ ಪೊಲೀಸ್ ಸಿಬ್ಬಂದಿಯನ್ನು ತಳ್ಳಿ ಒಳಗೆ ನುಗ್ಗಿದ್ದರು – ಪ್ರಜಾವಾಣಿ ಚಿತ್ರ

ಗೃಹ ಸಚಿವರ ಮನೆಗೆ ನುಗ್ಗಿ ಗಲಭೆ

ಒಂದನೇ ಪುಟದಿಂದ....

ಕೆಲವರನ್ನು ಎತ್ತಿಕೊಂಡು ಹೋಗಿ ವಾಹನದಲ್ಲಿ ಕೂರಿಸಿ ಠಾಣೆಗೆ ಕರೆದೊಯ್ದರು. ಪರಸ್ಪರ ತಳ್ಳಾಟದ ವೇಳೆ ಮನೆಯ ಹೂವಿನ ಕುಂಡಗಳು ಚೆಲ್ಲಾಪಿಲ್ಲಿಯಾದವು.

ಅನುಮತಿ ಪಡೆಯದೇ ಪ್ರತಿಭಟನೆ: 'ಎಬಿವಿಪಿ ಕಾರ್ಯಕರ್ತರು ಯಾವುದೇ ಅನುಮತಿ ಪಡೆಯದೇ ಏಕಾಏಕಿ ಪ್ರತಿಭಟನೆ ನಡೆಸಿದ್ದರು. ಭದ್ರತಾ ಸಿಬ್ಬಂದಿ ಹಾಗೂ ಪೊಲೀಸರು, ಕಾನೂನು ಪ್ರಕಾರ ಕ್ರಮ ಜರುಗಿಸಿ ಪರಿಸ್ಥಿತಿ ತಿಳಿಗೊಳಿಸಿದ್ದಾರೆ. ಅಕ್ರಮ ಕೂಟ (ಐಪಿಸಿ 143), ಗಲಭೆ (ಐಪಿಸಿ 147), ಅಕ್ರಮವಾಗಿ ಗುಂಪು ಸೇರುವುದು (ಐಪಿಸಿ 149), ಅಕ್ರಮ ಪ್ರವೇಶ (ಐಪಿಸಿ 448) ಹಾಗೂ ಸಾರ್ವಜನಿಕರ ಆಸ್ತಿಗೆ ನಷ್ಟ ಉಂಟು ಮಾಡಿದ (ಐಪಿಸಿ 427) ಆರೋಪದಡಿ 30 ಪ್ರತಿಭಟನಕಾರರ ವಿರುದ್ಧ ಜೆ.ಸಿ.ನಗರ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ. ಕೆಲವರನ್ನು ವಶಕ್ಕೆ ಪಡೆಯಲಾಗಿದೆ'ಎಂದು ಉತ್ತರ ವಿಭಾಗದ ಡಿಸಿಪಿ ವಿನಾಯಕ್ ಪಾಟೀಲ ಹೇಳಿದರು.

ತೇಜಸ್ವಿ ಸೂರ್ಯ ಕಚೇರಿಗೆ ಮುತ್ತಿಗೆ ಯತ್ನ

ಸಂಸದ ತೇಜಸ್ವಿ ಸೂರ್ಯ ಅವರ ಕಚೇರಿಗೆ ಮುತ್ತಿಗೆ ಹಾಕುವ ಜತೆಗೆ, ಹೂವು–ಕಲ್ಲು ನೀಡಲು ಹೊರಟಿದ್ದ ಕಾಂಗ್ರೆಸ್ ಕಾರ್ಯಕರ್ತರನ್ನು ಪೊಲೀಸರು ವಶಕ್ಕೆ ಪಡೆದರು.

'ಪ್ರವೀಣ್ ಹತ್ಯೆ ಸಂಬಂಧ ಮಾತನಾಡಿದ್ದ ತೇಜಸ್ವಿ, ಕಾಂಗ್ರೆಸ್ ಸರ್ಕಾರ ಇದ್ದಿದ್ದರೆ ಕಲ್ಲು ಹೊಡೆಯಬಹುದಿತ್ತು' ಎಂದು ಹೇಳಿದ್ದು ಜಾಲತಾಣಗಳಲ್ಲಿ ಹರಿದಾಡಿತ್ತು. ಸಂಸದರ ಕಚೇರಿಗೆ ಕಲ್ಲು, ಹೂವು ನೀಡುವ ಜತೆಗೆ ಮುತ್ತಿಗೆ ಹಾಕಲು ಮುಂದಾಗಿದ್ದ ಕಾಂಗ್ರೆಸ್ ಕಾರ್ಯಕರ್ತರು, ಗಿರಿನಗರದಲ್ಲಿರುವ ಸಂಸದರ ಗೃಹಕಚೇರಿಯತ್ತ ಮೆರವಣಿಗೆಯಲ್ಲಿ ಹೊರಟಿದ್ದರು. ಯಾವುದೇ ಅನುಮತಿ ಪಡೆಯದಿದ್ದರಿಂದ ಕಾರ್ಯಕರ್ತರನ್ನು ವಶಕ್ಕೆ ಪಡೆಯಲಾಯಿತು' ಎಂದು ಪೊಲೀಸರು ಹೇಳಿದರು.

'ಎಬಿವಿಪಿಯವರ ಭಾವನೆ ಅರ್ಥವಾಗಿದೆ'

'ಎಸ್‌ಡಿಪಿಐ, ಪಿಎಫ್‌ಐಯಂಥ ಸಂಘಟನೆಗಳನ್ನು ನಿಷೇಧಿಸುವಂತೆ ಬೇಡಿಕೆ ಇಟ್ಟಿರುವ ಎಬಿವಿಪಿ ಕಾರ್ಯಕರ್ತರ ಭಾವನೆಗಳನ್ನು ನಾನು ಅರ್ಥ ಮಾಡಿಕೊಂಡಿದ್ದೇನೆ. ಸರ್ಕಾರ ಕೂಡಾ ಆ ನಿಟ್ಟಿನಲ್ಲಿ ಯೋಚಿಸುತ್ತಿದೆ' ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ಹೇಳಿದ್ದಾರೆ.

ಎಬಿವಿಪಿ ಕಾರ್ಯಕರ್ತರ ಪ್ರತಿಭಟನೆಯ ಬಗ್ಗೆ ಪ್ರತಿಕ್ರಿಯಿಸಿದ ಅವರು, 'ಡಿ.ಜಿ. ಹಳ್ಳಿ, ಕೆ.ಜಿ. ಹಳ್ಳಿ ಗಲಭೆಗಳಿಂದ ಹಿಡಿದು, ಬಿಜೆಪಿ ಕಾರ್ಯಕರ್ತ ಪ್ರವೀಣ್ ನೆಟ್ಟಾರು ಅವರ ಹತ್ಯೆಯಂಥ ಘಟನೆಯ ಕಾರಣಕ್ಕೆ ಈ ಸಂಘಟನೆಗಳನ್ನು ನಿಷೇಧಿಸುವಂತೆ ಬೇಡಿಕೆ ಇಟ್ಟಿದ್ದಾರೆ' ಎಂದಿದ್ದಾರೆ.

'ನನ್ನನ್ನು ಭೇಟಿಯಾಗಲು ಮನೆಗೆ ಬಂದಿದ್ದ ಎಬಿವಿಪಿ ಕಾರ್ಯಕರ್ತರು ನನ್ನ ಅನುಪಸ್ಥಿತಿಯಲ್ಲಿ ತಮ್ಮ ಭಾವನೆಗಳನ್ನು ವ್ಯಕ್ತಪಡಿಸಿದ್ದಾರೆ. ಎಬಿವಿಪಿ ಸದಸ್ಯರನ್ನು ನಾನೇ ಆಹ್ವಾನಿಸಿ ಮಾತನಾಡುತ್ತೇನೆ' ಎಂದೂ ಅವರು ಹೇಳಿದ್ದಾರೆ.

ಪಿಎಸ್‌ಐ, ಹೆಡ್ ಕಾನ್‌ಸ್ಟೆಬಲ್ ಅಮಾನತು

ಎಬಿವಿಪಿ ಕಾರ್ಯಕರ್ತರ ಮುತ್ತಿಗೆ ಪ್ರಕರಣ ಸಂಬಂಧ, ಜೆ.ಸಿ.ನಗರ ಠಾಣೆ ಪಿಎಸ್‌ಐ ರಾಜೇಸಾಬ್ ಹಾಗೂ ಹೆಡ್ ಕಾನ್‌ಸ್ಟೆಬಲ್ ಶ್ರೀನಿವಾಸ್ ಮೂರ್ತಿ ಅವರನ್ನು ಸೇವೆಯಿಂದ ಅಮಾನತು ಮಾಡಲಾಗಿದೆ.

'ಗೃಹ ಸಚಿವರ ಮನೆ ಜೆ.ಸಿ. ನಗರ ಠಾಣೆ ವ್ಯಾಪ್ತಿಯಲ್ಲಿದೆ. ಇಲ್ಲಿಯ ಇನ್‌ಸ್ಪೆಕ್ಟರ್ ವರ್ಗಾವಣೆ ಆಗಿದ್ದು, ಸದ್ಯ ಈ ಹುದ್ದೆ ಖಾಲಿ ಇದೆ. ಪಿಎಸ್‌ಐ ರಾಜೇಸಾಬ್ ಅವರಿಗೆ ಪ್ರಭಾರಿಯಾಗಿ ಠಾಣಾಧಿಕಾರಿ ಜವಾಬ್ದಾರಿ ನೀಡಲಾಗಿತ್ತು. ಪ್ರತಿಭಟನೆ ಬಗ್ಗೆ ಮಾಹಿತಿ ಬಂದರೂ ಪಿಎಸ್‌ಐ ಹಾಗೂ ಹೆಡ್ ಕಾನ್‌ಸ್ಟೆಬಲ್ ತುರ್ತಾಗಿ ಸ್ಥಳಕ್ಕೆ ಹೋಗದೇ ಕರ್ತವ್ಯಲೋಪ ಎಸಗಿದ್ದರು. ಈ ಬಗ್ಗೆ ಪ್ರಾಥಮಿಕ ತನಿಖೆ ನಡೆಸಿದ ಉತ್ತರ ವಿಭಾಗದ ಡಿಸಿಪಿ ವಿನಾಯಕ್ ಪಾಟೀಲ, ಇಬ್ಬರನ್ನೂ ಅಮಾನತು ಮಾಡಿ ಆದೇಶ ಹೊರಡಿಸಿದ್ದಾರೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

ಪ್ರವೀಣ್ ಹತ್ಯೆ ಆರೋಪಿಗಳು ಪೊಲೀಸ್ ಕಸ್ಟಡಿಗೆ

ಮಹಮ್ಮದ್ ಫಾಝಿಲ್ ಹತ್ಯೆ: ವಾಹನಗಳ ಜಾಡು ಹಿಡಿದ ತನಿಖೆ

ಪ್ರಜಾವಾಣಿ ವಾರ್ತೆ

ಮಂಗಳೂರು: ಪ್ರವೀಣ್ ನೆಟ್ಟಾರು ಹತ್ಯೆ ಪ್ರಕರಣದ ಆರೋಪಿಗಳಾದ ಮಹಮ್ಮದ್ ಜಾಕೀರ್ ಸವಣೂರು ಹಾಗೂ ಶಫೀಕ್ ಬೆಳ್ಳಾರೆ ಅವರನ್ನು ಪೊಲೀಸರು ಕಸ್ಟಡಿಗೆ ಪಡೆದು ಹೆಚ್ಚಿನ ವಿಚಾರಣೆಗೆ ಒಳಪಡಿಸುತ್ತಿದ್ದಾರೆ.

ಇವರನ್ನು ಪುತ್ತೂರಿನ ನ್ಯಾಯಾಲಯವು ಐದು ದಿನಗಳ ಕಾಲ ಪೊಲೀಸ್ ಕಸ್ಟಡಿಗೆ ಒಪ್ಪಿಸಿದೆ.

ಆರೋಪಿಗಳು ನೀಡಿದ ಮಾಹಿತಿ ಆಧಾರದಲ್ಲಿ ಪೊಲೀಸು ಒಟ್ಟು ಏಳು ಮಂದಿಯನ್ನು ವಶಕ್ಕೆ ಪಡೆದು ವಿಚಾರಣೆ ನಡೆಸುತ್ತಿದ್ದಾರೆ. ಪ್ರಮುಖ ಆರೋಪಿಗಳ ಪತ್ತೆಗಾಗಿ ಕೇರಳಕ್ಕೆ ತೆರಳಿದ್ದ ತಂಡವು ಅಲ್ಲಿ ಇಬ್ಬರನ್ನು ವಶಕ್ಕೆ ಪಡೆದಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಪ್ರವೀಣ್ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಮತ್ತೆ ಯಾರನ್ನೂ ಬಂಧಿಸಿಲ್ಲ. ಆರೋಪಿಗಳಿಬ್ಬರು ನೀಡಿರುವ ಮಾಹಿತಿ ಆಧಾರದಲ್ಲಿ ಮತ್ತೆ ಏಳು ಮಂದಿಯನ್ನು ವಶಕ್ಕೆ ಪಡೆದು ವಿಚಾರಣೆ ನಡೆಸುತ್ತಿದ್ದೇವೆ. ಇನ್ನೂ ಹಂತಕರ ಬಗ್ಗೆ ಸ್ಪಷ್ಟ ಸುಳಿವು ಸಿಕ್ಕಿಲ್ಲ' ಎಂದು ದಕ್ಷಿಣ ಕನ್ನಡ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಹೃಷಿಕೇಶ್ ಸೋನಾವಣೆ ಅವರು 'ಪ್ರಜಾವಾಣಿ'ಗೆ ತಿಳಿಸಿದರು.

'ಪ್ರವೀಣ್‌ಗೆ ಜೀವ ಬೆದರಿಕೆ ಇದ್ದ ಬಗ್ಗೆ ಬೆಳ್ಳಾರೆ ಠಾಣೆಗೆ ಯಾರೂ ಲಿಖಿತವಾಗಿ ದೂರು ನೀಡಿರಲಿಲ್ಲ. ಆದರೂ ಈ ಆರೋಪದ ಬಗ್ಗೆಯೂ ಪರಿಶೀಲನೆ ನಡೆಸುತ್ತಿದ್ದೇವೆ' ಎಂದರು.

ಸುರತ್ಕಲ್‌ನಲ್ಲಿ ಗುರುವಾರ ಸಂಜೆ ನಡೆದ ಮಹಮ್ಮದ್ ಫಾಝಿಲ್ ಹತ್ಯೆಯೂ ಪೊಲೀಸರ ಪಾಲಿಗೆ ಕಗ್ಗಂಟಾಗಿದೆ. ಈ ಹತ್ಯೆಗೆ ಬಳಸಿರುವ ವಾಹನದ ಜಾಡು ಹಿಡಿದು ಪೊಲೀಸರು ತನಿಖೆ ನಡೆಸುತ್ತಿದ್ದಾರೆ. ಸಿ.ಸಿ.ಟಿ.ವಿ ಕ್ಯಾಮೆರಾಗಳಲ್ಲಿ ದಾಖಲಾಗಿರುವ ದೃಶ್ಯಗಳನ್ನು ಆಧರಿಸಿ, ಕೃತ್ಯಕ್ಕೆ ಬಳಸಿದ್ದ ಮಾದರಿಯ ಕಾರುಗಳ ಮಾಲೀಕರನ್ನು ವಿಚಾರಣೆಗೊಳಪಡಿಸುತ್ತಿದ್ದಾರೆ. ಪ್ರಕರಣ ಸಂಬಂಧ ಇದುವರೆಗೆ 50ಕ್ಕೂ ಹೆಚ್ಚು ಮಂದಿಯನ್ನು ಪೊಲೀಸರು ವಿಚಾರಣೆಗೆ ಒಳಪಡಿಸಿದ್ದಾರೆ. ಕೃತ್ಯಕ್ಕೆ ಸಂಬಂಧ ಇಲ್ಲ ಎಂದು ಖಚಿತ ಆದ ಬಳಿಕ ಕೆಲವರನ್ನು ಬಿಟ್ಟು ಕಳುಹಿಸಿದ್ದಾರೆ.

'ಕೃತ್ಯಕ್ಕೆ ಬಳಸಿರುವ ಕಾರಿನ ಮಾದರಿಯ ವಾಹನಗಳನ್ನು ಹೊಂದಿದ್ದ ಒಂಬತ್ತು ಮಂದಿ ಮಾಲೀಕರನ್ನು ವಶಕ್ಕೆ ಪಡೆದು ಮಾಹಿತಿ ಕಲೆ ಹಾಕಿದ್ದೇವೆ. ಇದರಿಂದ ಪ್ರಕರಣದ ಕುರಿತು ಮಹತ್ವದ ಸುಳಿವು ಸಿಗುವ ನಿರೀಕ್ಷೆ ಇದೆ. ಇದುರೆಗೆ ಯಾರನ್ನೂ ಬಂಧಿಸಿಲ್ಲ' ಎಂದು ನಗರ ಪೊಲೀಸ್ ಕಮಿಷನರ್ ಎನ್.ಶಶಿಕುಮಾರ್ 'ಪ್ರಜಾವಾಣಿ'ಗೆ ತಿಳಿಸಿದರು.

ಕಾರ್ಯಕರ್ತರ ಮನೆಗೆ ನುಗ್ಗಿದರೆ ಧರಣಿ: ಶಾಸಕ ಭರತ್ ಶೆಟ್ಟಿ ಎಚ್ಚರಿಕೆ

ಮಂಗಳೂರು: 'ಫಾಝಿಲ್ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ನೈಜ ಆರೋಪಿಗಳನ್ನು ಶೀಘ್ರವಾಗಿ ಬಂಧಿಸುವುದನ್ನು ಬಿಟ್ಟು, ಅಮಾಯಕ ಕಾರ್ಯಕರ್ತರನ್ನು ಎಳೆದುಕೊಂಡು ಹೋಗಿ ತನಿಖೆಯ ನೆಪದಲ್ಲಿ ಕಿರುಕುಳ ನೀಡಲಾಗುತ್ತಿದೆ' ಎಂದು ಮಂಗಳೂರು ಉತ್ತರ ಕ್ಷೇತ್ರದ ಶಾಸಕ ಭರತ್ ಶೆಟ್ಟಿ ದೂರಿದ್ದಾರೆ.

'ಸಾಕ್ಷ್ಯಾಧಾರಗಳು ನಿಮ್ಮ ಕೈಯ್ಯಲ್ಲಿವೆ. ಹಂತಕರನ್ನು ಬಂಧಿಸಿ. ಇದಕ್ಕೆ ನನ್ನ ಸಂಪೂರ್ಣ ಸಹಕಾರ ಇದೆ. ಆದರೆ, ಅಮಾಯಕ ಕಾರ್ಯಕರ್ತರ ಮನೆಗೆ ನುಗ್ಗಿ, ಅವರ ಕುಟುಂಬದಲ್ಲಿ ಭೀತಿ ಹುಟ್ಟಿಸಿದರೆ ನಗರ ಪೊಲೀಸ್ ಕಮಿಷನರ್ ಕಚೇರಿಯ ಎದುರು ಪ್ರತಿಭಟನೆ ನಡೆಸಬೇಕಾಗುತ್ತದೆ. ಪೊಲೀಸರ ಅನುಚಿತ ವರ್ತನೆಯ ಬಗ್ಗೆ ಗೃಹ ಸಚಿವರಿಗೆ ದೂರು ನೀಡುತ್ತೇನೆ' ಎಂದೂ ಅವರು ಹೇಳಿದ್ದಾರೆ.

ಶಾಸಕರ ಈ ಹೇಳಿಕೆಗೆ ಪ್ರತಿಕ್ರಿಯಿಸಿರುವ ನಗರ ಪೊಲೀಸ್ ಕಮಿಷನರ್ ಶಶಿಕುಮಾರ್, 'ನಮಗೆ ಆರೋಪಿಗಳಷ್ಟೇ ಮುಖ್ಯ. ನಾವು ಅವರು ಯಾವ ಸಂಘಟನೆಯವರು ಎಂದೆಲ್ಲಾ ನೋಡಲು ಹೋಗುವುದಿಲ್ಲ' ಎಂದು ಸ್ಪಷ್ಟಪಡಿಸಿದರು.

ಮುಸ್ಲಿಂ ಸೆಂಟ್ರಲ್ ಕಮಿಟಿಯಿಂದ ₹30 ಲಕ್ಷ ಪರಿಹಾರ

ಮಂಗಳೂರು: ಹತ್ಯೆಗೊಳಗಾದ ಸುಳ್ಯ ತಾಲ್ಲೂಕಿನ ಕಳೆಂಜ ಗ್ರಾಮದ ಮಸೂದ್ ಹಾಗೂ ಸುರತ್ಕಲ್ ಕಾಟಿಪಳ್ಳ ಮಂಗಳಪೇಟೆಯ ಮಹಮ್ಮದ್ ಫಾಝಿಲ್ ಕುಟುಂಬಗಳಿಗೆ ಮುಸ್ಲಿಂ ಸೆಂಟ್ರಲ್ ಕಮಿಟಿಯು ತಲಾ ₹30 ಲಕ್ಷ ಪರಿಹಾರ ಘೋಷಣೆ ಮಾಡಿದೆ.

'ಕಮಿಟಿಯ ಅಧ್ಯಕ್ಷ ಕೆ.ಎಸ್. ಮೊಹಮ್ಮದ್ ಮಸೂದ್ ನೇತೃತ್ವದಲ್ಲಿ ಕಮಿಟಿಯ ಮುಖಂಡರು ಶನಿವಾರ ಸಭೆ ನಡೆಸಿ ಈ ನಿರ್ಧಾರ ಕೈಗೊಂಡಿದ್ದೇವೆ' ಎಂದು ಕಮಿಟಿಯ ಉಪಾಧ್ಯಕ್ಷ ಬಿ.ಎಂ. ಮುಮ್ತಾಜ್ ಅಲಿ ತಿಳಿಸಿದರು.

'ಹತ್ಯೆಗೊಳಗಾದ ಪ್ರವೀಣ್ ನೆಟ್ಟಾರು ಕುಟುಂಬದವರನ್ನು ಭೇಟಿಯಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸಾಂತ್ವನ ಹೇಳಿದ್ದಾರೆ. ಪ್ರವೀಣ್ ಕುಟುಂಬಕ್ಕೆ ಸರ್ಕಾರ ₹25 ಲಕ್ಷ ಪರಿಹಾರ ನೀಡಿದೆ. ಜಿಲ್ಲೆಯಲ್ಲಿ ಮುಸ್ಲಿಂ ಸಮುದಾಯದ ಇಬ್ಬರು ಯುವಕರ ಹತ್ಯೆ ನಡೆದಿದ್ದರೂ ಅವರ ಕುಟುಂಬಗಳನ್ನು ಮುಖ್ಯಮಂತ್ರಿಯವರು ಭೇಟಿಯೂ ಮಾಡಿಲ್ಲ, ಅವರಿಗೆ ಪರಿಹಾರವನ್ನೂ ನೀಡಿಲ್ಲ. ಸರ್ಕಾರದ ಈ ತಾರತಮ್ಯ ನೀತಿ ಖಂಡಿಸಿ, ನಾವೇ ದೇಣಿಗೆ ಸಂಗ್ರಹಿಸಿ ಸಂತ್ರಸ್ತ ಕುಟುಂಬಗಳಿಗೆ ನೀಡುವ ತೀರ್ಮಾನ ಕೈಗೊಂಡಿದ್ದೇವೆ' ಎಂದರು.

ಸುಧಾ, ಮಯೂರ ಓದಿ

ಸರ್ಕಾರದ ವಿರುದ್ಧ ಬಿಜೆಪಿ ಶಾಸಕ ಹರ್ಷವರ್ಧನ್ ಆಕ್ರೋಶ

ಮೈಸೂರು: 'ಯಾವುದೇ ಪಕ್ಷ ಅಧಿಕಾರದಲ್ಲಿದ್ದರೆ, ಎರಡು ಮುಖ್ಯ ಜವಾಬ್ದಾರಿಗಳಿರುತ್ತವೆ. ಸಾರ್ವಜನಿಕರ ಜೀವ ಕಾಪಾಡುವ ಜತೆಗೆ ಕಾನೂನು–ಸುವ್ಯವಸ್ಥೆ ಕಾಪಾಡುವುದು ಪ್ರಮುಖವಾಗುತ್ತದೆ. ಆ ಕೆಲಸ ಮಾಡದಿದ್ದರೆ, ಅಂತಹ ಸರ್ಕಾರ ಇದ್ದರೆಷ್ಟು, ಬಿಟ್ಟರೆಷ್ಟು?' ಎಂದು ನಂಜನಗೂಡು ಕ್ಷೇತ್ರದ ಬಿಜೆಪಿ ಶಾಸಕ ಹರ್ಷವರ್ಧನ್ ತಮ್ಮದೇ ಸರ್ಕಾರದ ವಿರುದ್ಧ ಗುಡುಗಿದರು.

ಬಿಜೆಪಿ ಯುವ ಮೋರ್ಚಾ ಕಾರ್ಯಕರ್ತ ಪ್ರವೀಣ್ ನೆಟ್ಟಾರು ಹತ್ಯೆ ಖಂಡಿಸಿ ಹಿಂದೂ ಜನ ಜಾಗೃತಿ ಸಮಿತಿಯಿಂದ ನಗರದ ಜಿಲ್ಲಾಧಿಕಾರಿ ಕಚೇರಿ ಮುಂಭಾಗದಲ್ಲಿ ಶನಿವಾರ ನಡೆದ ಪ್ರತಿಭಟನೆಯಲ್ಲಿ ಮಾತನಾಡಿದ ಅವರು, ಸರ್ಕಾರದ ವಿರುದ್ಧ ಬಹಿರಂಗವಾಗಿಯೇ ಅಸಮಾಧಾನ ವ್ಯಕ್ತಪಡಿಸಿದರು.

'ಪ್ರವೀಣ್ ನೆಟ್ಟಾರು ಹತ್ಯೆ ನಡೆದಿರುವುದು ನೋವಿನ ವಿಚಾರ. ಪಕ್ಷದಲ್ಲಿ ನಡೆದಿರುವ ಘಟನೆಗಳು ತೀವ್ರ ನೋವು ತಂದಿದೆ. 48 ಗಂಟೆಗಳಲ್ಲಿ ಆರೋಪಿಗಳನ್ನು ಬಂಧಿಸಲಾಗಿದೆ ಸರಿ. ಆದರೆ, ಇಂತಹ ಕೃತ್ಯಗಳನ್ನು ಹೊಸ ಕಾನೂನು ಜಾರಿಗೆ ತಂದು ತಡೆಯಬೇಕು' ಎಂದು ಒತ್ತಾಯಿಸಿದರು.

'ನಂಜನಗೂಡು, ಗುಂಡ್ಲುಪೇಟೆ ಕೇರಳದ ಗಡಿ ಭಾಗದಲ್ಲಿದ್ದು, ಅಲ್ಲಿ ಇಂತಹ ಘಟನೆಗಳು ನಡೆಯುವುದಿಲ್ಲ ಎನ್ನುವುದಕ್ಕೆ ಗ್ಯಾರಂಟಿ ಏನಿದೆ?' ಎಂದರು.

'ಬಿಜೆಪಿ ಬೆಳೆಯಲು ಕಾರ್ಯಕರ್ತರ ಬೆವರು–ರಕ್ತ ಹರಿಸಿದ್ದಾರೆ. ಎಲ್ಲರನ್ನೂ ರಕ್ಷಿಸುವ ಕೆಲಸವನ್ನು ಮುಖ್ಯಮಂತ್ರಿ ಮಾಡಬೇಕು' ಎಂದು ಒತ್ತಾಯಿಸಿದರು.

ಕೃಷ್ಣರಾಜ ಕ್ಷೇತ್ರದ ಶಾಸಕ ಎಸ್.ಎ.ರಾಮದಾಸ್, 'ರಾಜ್ಯದಲ್ಲಿ ನಮ್ಮನ್ನು ಉಳಿಸಿ ಎಂದು ಕೇಳುವ ಪರಿಸ್ಥಿತಿ ಎದುರಾಗಿದೆ. ಇದಕ್ಕಿಂತ ಅವಮಾನ ಮತ್ತೊಂದಿಲ್ಲ. ಮುಂದಿನ ದಶಕದಲ್ಲಿ ನಮ್ಮನ್ನು ಮನುಷ್ಯರನ್ನಾಗಿ ಉಳಿಸಿಕೊಳ್ಳಲು ಈ ಹೋರಾಟ ನಡೆಸುತ್ತಿದ್ದೇವೆ. ಈ ದೇಶ ಭಾರತವಾಗಿಯೇ ಇರಬೇಕೇ ಹೊರತು ಪಾಕಿಸ್ತಾನ ಆಗಬಾರದು. ನಮ್ಮ ಜೀವಕ್ಕಿಂತ ಭಾರತಾಂಬೆಯ ಪಾದ ಮುಖ್ಯ' ಎಂದರು.

ಪ್ರವೀಣ್ ನೆಟ್ಟಾರು ಹಾಗೂ ಸುರತ್ಕಲ್‌ನ ಮಹಮ್ಮದ್ ಫಾಝಿಲ್ ಕೊಲೆ ತನಿಖೆ ವಿಚಾರದಲ್ಲಿ ವಿರೋಧ ಪಕ್ಷಗಳು ಆರೋಪಿಸುವಂತೆ ಸರ್ಕಾರ ಯಾವುದೇ ತಾರತಮ್ಯ ಮಾಡುತ್ತಿಲ್ಲ

ಆರಗ ಜ್ಞಾನೇಂದ್ರ, ಗೃಹ ಸಚಿವ

ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ಳಾರೆಯಲ್ಲಿ ಕೊಲೆಯಾದ ಬಿಜೆಪಿ ಮುಖಂಡ ಪ್ರವೀಣ್ ಮನೆಗೆ ಭೇಟಿ ನೀಡಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ₹ 50 ಲಕ್ಷ ಪರಿಹಾರ ಘೋಷಿಸುತ್ತಾರೆ. ಆದರೆ, ಅದೇ ಜಿಲ್ಲೆಯಲ್ಲಿ ಕೊಲೆಯಾದ ಮುಸ್ಲಿಂ ಯುವಕನ ಕುಟುಂಬಕ್ಕೆ ಪರಿಹಾರ ಏಕೆ ಘೋಷಿಸಲ್ಲ

ಎಚ್.ಡಿ. ಕುಮಾರಸ್ವಾಮಿ, ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ

ಸಂಘ ಪರಿವಾರದೊಳಗಿನ ಬಿಕ್ಕಟ್ಟು ಗಲಭೆಗೆ ಕಾರಣ ಎಂದು ಹೇಳಿರುವ ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಎರಡು ದಿನ ಆರ್‌ಎಸ್‌ಎಸ್ ಶಾಖೆಗೆ ಬಂದು ನಾಲಿಗೆ ಸ್ವಚ್ಛ ಮಾಡಿಕೊಳ್ಳಲಿ. ಸಂಘದ ಸ್ವಯಂಸೇವಕನ ಪಾದದ ದೂಳಿಗೂ ಅವರು ಸಮವಲ್ಲ. ಅವರು ಕೂಡಲೇ ಕ್ಷಮೆ ಯಾಚಿಸಲಿ

ಕೆ.ಎಸ್. ಈಶ್ವರಪ್ಪ, ಶಾಸಕ

ಕರಾವಳಿಯಲ್ಲಿ ನಡೆದ ಘಟನೆಗಳು ಇಡೀ ರಾಜ್ಯಕ್ಕೆ ನೋವು ತರುವ ಸಂಗತಿಗಳು. ಇಂಥ ವಿಚಾರದಲ್ಲಿ ತಪ್ಪಿತಸ್ಥರ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ತೆಗೆದುಕೊಳ್ಳಬೇಕು. ಹೈದರಾಬಾದ್‌ನಲ್ಲಿ ಗ್ಯಾಂಗ್ ರೇಪ್ ಮಾಡಿದವರ ಮೇಲೆ ಐಪಿಎಸ್ ಅಧಿಕಾರಿ ಸಜ್ಜನರ ತಂಡ ಮಾಡಿದ ರೀತಿಯಲ್ಲೇ ನಮ್ಮ ರಾಜ್ಯದಲ್ಲೂ ಎನ್‌ಕೌಂಟರ್ ಮಾಡಬೇಕು

ಬಸವರಾಜ ಹೊರಟ್ಟಿ, ವಿಧಾನ ಪರಿಷತ್ ಸದಸ್ಯ

ತಮ್ಮ ಪಕ್ಷದ ಕಾರ್ಯಕರ್ತರು (ಎಬಿವಿಪಿ) ಪ್ರತಿಭಟನೆ ನಡೆಸಲಿರುವ ಮಾಹಿತಿಯನ್ನು ಗೃಹ ಸಚಿವರಿಗೆ ಪಡೆಯಲು ಸಾಧ್ಯವಾಗದಿದ್ದರೆ, ಜನರಿಗೆ ಅವರು ಹೇಗೆ ರಕ್ಷಣೆ ನೀಡುತ್ತಾರೆ. ಕಾನೂನು ಸುವ್ಯವಸ್ಥೆ ಕಾಪಾಡಲು ವಿಫಲವಾಗಿರುವ ಸಿ.ಎಂ, ಗೃಹ ಸಚಿವರು ರಾಜೀನಾಮೆ ನೀಡಬೇಕು

ಪ್ರಿಯಾಂಕ್ ಖರ್ಗೆ, ಕೆಪಿಸಿಸಿ ಸಂವಹನ ಮತ್ತು ಸಾಮಾಜಿಕ ಜಾಲತಾಣದ ಅಧ್ಯಕ್ಷ

ಅವರವರ ವಿಚಾರಧಾರೆ ಏನೇ ಇದ್ದರೂ ಕೊಲೆ ಎಲ್ಲದಕ್ಕೂ ಪರಿಹಾರವಲ್ಲ. ದೇಶದಲ್ಲಿ ಮುಸ್ಲಿಂ ಮೂಲಭೂತವಾದ ತೀವ್ರಗೊಳ್ಳುತ್ತಿದೆ. ಇದನ್ನು ಹೇಳಿದರೆ ಕಾಂಗ್ರೆಸ್‌ನವರು ಕೋಮುವಾದಿ ಎನ್ನುತ್ತಾರೆ. ಆಯಾ ಸಮುದಾಯಗಳ ಮುಖಂಡರು ತಮ್ಮ ಜನರಿಗೆ ಬುದ್ಧಿ ಹೇಳಬೇಕು

ಪ್ರಲ್ಹಾದ ಜೋಶಿ, ಕೇಂದ್ರ ಸಚಿವ

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ,
ಕಲಬುರಗಿ ವಲಯ, ಕಲಬುರಗಿ
ಮುಖ್ಯ ಅಭಿಯಂತರ ಕಛೇರಿ, ಕ.ನ.ನೀ.ಸ ಮತ್ತು ಒಚ ಮಂಡಳಿ, ಕಲಬುರಗಿ ವಲಯ,
ಮಿನಿ ವಿಧಾನಸೌಧ ಎದುರುಗಡೆ, ಐವಾನ–ಇ–ಶಾಹಿ ರಸ್ತೆ, ಕಲಬುರಗಿ–585102, ದೂ: 08472–220817, ಫಾ: 08472–260818, E-mail ID : kwbceklb14@gmail.com

ಕ್ರ.ಸಂ.ಕಜಮ/ಮುಅ.ಕ/ತಾಂತ್ರಿಕ/ಸಅ–3/ಚಿಟಗುಪ್ಪಾ ನಗರೋತ್ಥಾನ/553/2022–23 ದಿನಾಂಕ: 29–07–2022

–: ಅಲ್ಪಾವಧಿ ಟೆಂಡರ್ ಪ್ರಕಟಣೆ (3ನೇ ಕರೆ):–

1) ಕಾಮಗಾರಿ ವಿವರ : ನಗರೋತ್ಥಾನ ಹಂತ–3 ರಡಿಯಲ್ಲಿ ಚಿಟಗುಪ್ಪಾ ಪಟ್ಟಣದ ವಾರ್ಡ ಸಂಖ್ಯೆ–22 ರಲ್ಲಿ 5.00 ಲಕ್ಷ ಲೀಟರ್ ಸಾಮರ್ಥ್ಯದ 15 ಮೀಟರ್ ಎತ್ತರದ ಮೇಲ್ಮಟ್ಟದ ಜಲಸಂಗ್ರಹಗಾರ ನಿರ್ಮಾಣ, ಫೀಡರ್ ಮೇನ್ ಮತ್ತು ವಿತರಣಾ ಕೊಳವೆ ಮಾರ್ಗವನ್ನು ಒದಗಿಸುವುದು ಹಾಗೂ ಅಳವಡಿಸುವ ಕಾಮಗಾರಿ. (ವರ್ಕ ಇಂಡೆಂಟ್ ಸಂಖ್ಯೆ : ಕೆಯುಡಬ್ಲೂಎಸ್‌ಡಿಬಿ / 2021–22 / ಡಬ್ಲ್ಯೂಎಸ್/ವರ್ಕ ಇಂಡೆಂಟ್– 3129/ 3ನೇ ಕರೆ), 2) ಕಾಮಗಾರಿಯ ಟೆಂಡರ್‌ಗಿಟ್ಟ ಮೊತ್ತ : **ರೂ.244.24 ಲಕ್ಷಗಳು (ಜಿ.ಎಸ್.ಟಿ ಹೊರತುಪಡಿಸಿ)**, 3) ಗುತ್ತಿಗೆದಾರರ ಅರ್ಹತೆ ವಿವರ : ಗುತ್ತಿಗೆದಾರರ ಅರ್ಹತೆಯಂತೆ. 4) ಟೆಂಡರ್ ಅರ್ಜಿಯ ಬೆಲೆ ಮತ್ತು ಇ.ಎಂ.ಡಿ ಮೊತ್ತದ ವಿವರ : ರೂ.3,67,000/– 5) ಕಾಮಗಾರಿಯ ಅವಧಿ : 09 ತಿಂಗಳು (ಮಳೆಗಾಲ ಸೇರಿ), 6) ಟೆಂಡರ್ ಬಗ್ಗೆ ಮಾಹಿತಿ ಹಾಗೂ ಕ್ಲಾರಿಫಿಕೇಷನ್ ಕೊನೆಯ ದಿನಾಂಕ : **06–08–2022 ಸಮಯ : 11:00 ಗಂಟೆಯವರೆಗೆ,** 7) ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ : **16–08–2022 ಸಮಯ : 17:00 ಗಂಟೆಯವರೆಗೆ,** 8) ತಾಂತ್ರಿಕ ಟೆಂಡರ್‌ಗಳನ್ನು ತೆರೆಯುವ ದಿನಾಂಕ : **18–08–2022 ಸಮಯ : 11:00 ಗಂಟೆಯವರೆಗೆ,** 9) ಹೆಚ್ಚಿನ ವಿವರಗಳಿಗೆ : ಮುಖ್ಯ ಅಭಿಯಂತರರವರ ಕಛೇರಿ ಕ.ನ.ನೀ.ಸ ಮತ್ತು ಒಚ ಮಂಡಳಿ, ಕಲಬುರಗಿ ವಲಯ, ಮಿನಿ ವಿಧಾನಸೌಧ ಎದುರುಗಡೆ, ಐವಾನ–ಇ–ಶಾಹಿ ರಸ್ತೆ, ಕಲಬುರಗಿ–585102 ದೂ: 08472–220817 E-mail ID : kwbceklb14@gmail.com, 10) ಅಂತರಜಾಲ ತಾಣದ ವಿಳಾಸ : www.eproc.karnataka.gov.in

ಸಹಿ/– ಮುಖ್ಯ ಅಭಿಯಂತರರು,
ಕನನೀಸ ಮತ್ತು ಒಳಚರಂಡಿ ಮಂಡಳಿ, ಕಲಬುರಗಿ ವಲಯ, ಕಲಬುರಗಿ
ವಾ.ಸಾ.ಸಂ.ಇ/ಕಲಬುರಗಿ/438/ಎಂ.ಸಿ.&ಎ/2022–23

ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರ
7ನೇ ಮಹಡಿ, ಎಂ.ಎಸ್.ಐ.ಎಲ್.ಹೌಸ್, ಕನ್ನಿಂಗ್ ಹ್ಯಾಂ ರಸ್ತೆ, ಬೆಂಗಳೂರು –560052
ಫೋನ್ : 080–22371120 Email: rscdirector@yahoo.in

ಸಂಖ್ಯೆ: ಕರಾರಸುಪ್ರಾ/ಎಸ್‌ಆರ್–13&19/2022–23 ದಿನಾಂಕ: 30.07.2022

ಇ–ಟೆಂಡರ್ ಪ್ರಕಟಣೆ

ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರವು ಈ ಕೆಳಗಿನವುಗಳಿಗೆ ಅಲ್ಪಾವಧಿ ಪ್ರಸ್ತಾವನೆಗಳನ್ನು ಆಹ್ವಾನಿಸುತ್ತದೆ.
1) ರಸ್ತೆ ಸುರಕ್ಷತಾ ಜಾಗೃತಿಯ ಬಗ್ಗೆ ಸಾಕ್ಷ್ಯಚಿತ್ರ, ಕಿರುಚಿತ್ರಗಳನ್ನು ತಯಾರಿಸುವ ಸಲುವಾಗಿ ಪ್ರಸ್ತಾವನೆ.
2) ಮಾಸಿಕ ಬಾಡಿಗೆ ಆಧಾರದ ಮೇಲೆ ಚಾಲಕರೊಂದಿಗೆ ಮೋಟಾರು ಕ್ಯಾಬ್ (ಹವಾನಿಯಂತ್ರಿತ) ಅನ್ನು ಪೂರೈಸುವ ಪ್ರಸ್ತಾವನೆ.
ಬಿಡ್ ಪ್ರಕ್ರಿಯೆಯ ವಿವರಗಳು ಈ ಕೆಳಗಿನಂತಿವೆ.

1	ಟೆಂಡರ್ ಉಲ್ಲೇಖ ನಂ. 1) ರಸ್ತೆ ಸುರಕ್ಷತಾ ಜಾಗೃತಿಯ ಬಗ್ಗೆ ಸಾಕ್ಷ್ಯಚಿತ್ರ, ಕಿರುಚಿತ್ರಗಳನ್ನು ತಯಾರಿಸುವ ಸಲುವಾಗಿ ಪ್ರಸ್ತಾವನೆ. 2) ಮಾಸಿಕ ಬಾಡಿಗೆ ಆಧಾರದ ಮೇಲೆ ಚಾಲಕರೊಂದಿಗೆ ಮೋಟಾರು ಕ್ಯಾಬ್ (ಹವಾನಿಯಂತ್ರಿತ) ಅನ್ನು ಪೂರೈಸುವ ಪ್ರಸ್ತಾವನೆ.	1) ಕರಾರಸುಪ್ರಾ/ಎಸ್‌ಆರ್–13/2022–23 2) ಕರಾರಸುಪ್ರಾ/ಎಸ್‌ಆರ್–19/2022–23
2	ಇ–ಪ್ರೊಕ್ಯೂರ್‌ಮೆಂಟ್ ಜಾಲತಾಣ http://eproc.karnataka.gov.in ಮುಖಾಂತರ ದಸ್ತಾವೇಜುಗಳನ್ನು ಡೌನ್‌ಲೋಡ್ ಮಾಡಿಕೊಳ್ಳಲು ಪ್ರಾರಂಭದ ದಿನಾಂಕ:	30.07.2022 ರಿಂದ.
3	ಪ್ರೀ ಬಿಡ್ ಮೀಟಿಂಗ್ ದಿನಾಂಕ ಮತ್ತು ಸಮಯ	02.08.2022, ಬೆಳಿಗ್ಗೆ 11.00 ಗಂಟೆಗೆ. ಸ್ಥಳ: ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರ, 7ನೇ ಮಹಡಿ, ಎಂಎಸ್‌ಐಎಲ್ ಬಿಲ್ಡಿಂಗ್, ಕನ್ನಿಂಗ್ ಹ್ಯಾಮ್ ರಸ್ತೆ, ಬೆಂಗಳೂರು–560052. ದೂರವಾಣಿ: 080–22371120.
4	ಇ–ಪ್ರೊಕ್ಯೂರ್‌ಮೆಂಟ್ ನಲ್ಲಿ ಟೆಂಡರ್ ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ ಮತ್ತು ಸಮಯ	08.08.2022, ಸಾಯಂಕಾಲ 5.00 ಗಂಟೆ ಮತ್ತು 5.30 ಗಂಟೆ ಕ್ರಮ ಸಂಖ್ಯೆ 1 ಮತ್ತು 2 ಕ್ರಮವಾಗಿ.
5	ತಾಂತ್ರಿಕ ಬಿಡ್ ಆನ್‌ಲೈನ್ ನಲ್ಲಿ ತೆರೆಯುವ ದಿನಾಂಕ ಮತ್ತು ಸಮಯ	10.08.2022, ಬೆಳಿಗ್ಗೆ 11.00 ಗಂಟೆ.
6	ಸಂಪರ್ಕಿಸುವ ವಿಳಾಸ :	ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರ, 7ನೇ ಮಹಡಿ, ಎಂಎಸ್‌ಐಎಲ್ ಬಿಲ್ಡಿಂಗ್, ಕನ್ನಿಂಗ್ ಹ್ಯಾಮ್ ರಸ್ತೆ, ಬೆಂಗಳೂರು–560052. ದೂರವಾಣಿ: 080 –22371120. ಇ ಮೇಲ್ ಐಡಿ: rscdirector@yahoo.in

1. ಟೆಂಡರ್ ದಸ್ತಾವೇಜುಗಳನ್ನು ವೆಬ್‌ಸೈಟ್: http://eproc.karnataka.gov.in ನಿಂದ ಡೌನ್ ಲೋಡ್ ಮಾಡಿಕೊಳ್ಳಬಹುದು.
2. ಇತರೆ ವಿವರಗಳನ್ನು ಟೆಂಡರ್ ದಸ್ತಾವೇಜಿನಲ್ಲಿ ನೋಡಬಹುದು.

ಸಹಿ/–
ಅಪರ ಆಯುಕ್ತರು, ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರ, ಬೆಂಗಳೂರು
DIPR/CP/1593/Zenkar/2022-23

ರಾಜೀವ್ ಗಾಂಧಿ ವಸತಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
9ನೇ ಮಹಡಿ, ಇ ಮತ್ತು ಎಫ್ ಬ್ಲಾಕ್, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು–560009, ದೂರವಾಣಿ: 080–23118888
ಇ–ಮೇಲ್ : rgrhclfinance@gmail.com ವೆಬ್‌ಸೈಟ್: https://ashraya.karnataka.gov.in

ನೋಟಿಫಿಕೇಷನ್ ನಂ. ಆರ್‌ಜಿಹೆಚ್‌ಸಿಎಲ್ 02 ಎಲ್‌ಆರ್‌ಪಿ 2022 ದಿನಾಂಕ:30.07.2022

ಸರ್ಕಾರದ ವಸತಿ ಯೋಜನೆಗಳನ್ನು ಅನುಷ್ಠಾನಗೊಳಿಸುವ ಮೂಲಕ ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಹಿಂದುಳಿದ ವರ್ಗದವರಿಗೆ ನೆರವು ನೀಡಲು ಬ್ಯಾಂಕುಗಳು ಮತ್ತು ಹಣಕಾಸು ಸಂಸ್ಥೆಗಳಿಂದ ಅಲ್ಪಾವಧಿ ಸಾಲ ಪಡೆಯಲು ಕೊಟೇಷನ್ ಆಹ್ವಾನ

ರಾಜೀವ್ ಗಾಂಧಿ ವಸತಿ ನಿಗಮ ನಿಯಮಿತವು ಕರ್ನಾಟಕ ಸರ್ಕಾರದ ವತಿಯಿಂದ ಕಂಪನಿ ಕಾಯ್ದೆಯನ್ವಯ ನೋಂದಣಿಯಾಗಿರುವ ಕಂಪನಿಯಾಗಿದ್ದು, ಸಮಾಜದ ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಹಿಂದುಳಿದ ವರ್ಗದವರಿಗೆ ವಸತಿಯನ್ನು ಕಲ್ಪಿಸಲು ರಾಜ್ಯ ಸರ್ಕಾರದಿಂದ ಸ್ಥಾಪಿಸಲ್ಪಟ್ಟಿದೆ. ಕಂಪನಿಯ ವತಿಯಿಂದ ರಾಜ್ಯ ಮತ್ತು ಕೇಂದ್ರ ಸರ್ಕಾರದ ವಿವಿಧ ವಸತಿ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.
ಕರ್ನಾಟಕ ಸರ್ಕಾರವು ರೂ. 250 ಕೋಟಿಗಳನ್ನು ಸಾಲ ಪಡೆಯಲು ರಾಜೀವ್ ಗಾಂಧಿ ವಸತಿ ನಿಗಮ ನಿಯಮಿತಕ್ಕೆ ಅನುಮತಿ ನೀಡಿದೆ. ಕರ್ನಾಟಕ ಸರ್ಕಾರದ ಖಾತರಿಯ ಆಧಾರದಲ್ಲಿ ಸಾಲ ಪಡೆಯಲಾಗುವುದು. ಸದರಿ ಸಾಲವನ್ನು ಫಲಾನುಭವಿ ವಂತಿಕೆಯಿಂದ ಭರಿಸಲಾಗುವುದು.
ಕಂಪನಿ ಮೊದಲ ಕಂತಿನಲ್ಲಿ 26.08.2022 ರೊಳಗೆ ರೂ.150 ಕೋಟಿ ಸಾಲ ಪಡೆಯಲು ಪ್ರಸ್ತಾವನೆ ಸಲ್ಲಿಸುತ್ತದೆ ಮತ್ತು ಉಳಿದ ಸಾಲವನ್ನು ಅಗತ್ಯಕ್ಕೆ ಅನುಗುಣವಾಗಿ ಮತ್ತು ಹಣಕಾಸು ಇಲಾಖೆ, ಕರ್ನಾಟಕ ಸರ್ಕಾರದ ಅನುಮೋದನೆಯ ಆಧಾರದಲ್ಲಿ ಪಡೆಯಾಲಾಗುವುದು. ಆದರೂ ಬ್ಯಾಂಕುಗಳು/ಹಣಕಾಸು ಸಂಸ್ಥೆಗಳು ನಮೂದಿಸುವ ದರ ದಾಖಲೆಗಳಲ್ಲಿ ತಿಳಿಸಿರುವಂತೆ ಸಂಪೂರ್ಣ ಸಾಲಕ್ಕೆ ಅನ್ವಯವಾಗಲಿದೆ.
ಸಾಲ ಮರುಪಾವತಿ 10 ವರ್ಷಗಳಾಗಲಿದ್ದು, ಕನಿಷ್ಟ ಒಂದು ವರ್ಷದ ಮಾರಿಟೋರಿಯಂ ಬೇಕಿದ್ದು, ಬಡ್ಡಿ ದರವನ್ನು ಮಾಸಿಕ ಆಧಾರದಲ್ಲಿ ಲೆಕ್ಕಹಾಕಬೇಕು ಮತ್ತು ಬಡ್ಡಿ ಮತ್ತು ಅಸಲನ್ನು ತ್ರೈಮಾಸಿಕವಾಗಿ ರಾಜ್ಯ ಸರ್ಕಾರದ ನಿಯಮಾನುಸಾರ ಮರುಪಾವತಿಸಲಾಗುವುದು.
ಆಸಕ್ತ ಬ್ಯಾಂಕುಗಳು/ಹಣಕಾಸು ಸಂಸ್ಥೆಗಳು ಅಲ್ಪಾವಧಿ ಸಾಲಕ್ಕಾಗಿ ಕಡಿಮೆ ದರವನ್ನು ನಮೂದಿಸಿ, ಇತರೆ ನಿಯಮಗಳು ಮತ್ತು ಇತರೆ ವೆಚ್ಚಗಳನ್ನು ಸೇರಿಸಿ ಕೊಟೇಷನ್ ಸಲ್ಲಿಸಬಹುದು, ಕೋಟೇಷನ್ ಅನ್ನು ಒಂದು ಬ್ಯಾಂಕ್/ಹಣಕಾಸು ಸಂಸ್ಥೆ ಸಲ್ಲಿಸಬಹುದು ಅಥವಾ ಒಂದು ಬ್ಯಾಂಕ್/ ಹಣಕಾಸು ಸಂಸ್ಥೆಯಿಂದ ಕನಿಷ್ಠ ರೂ. 50.00 ಕೋಟಿ ಸಾಲ ನೀಡುವಂತೆ ಬ್ಯಾಂಕುಗಳ ಒಕ್ಕೂಟವೂ ಕೊಟೇಷನ್ ಸಲ್ಲಿಸಬಹುದು, ಬ್ಯಾಂಕುಗಳ ಒಕ್ಕೂಟ ಕೋಟೇಷನ್ ನೀಡಿದಾಗ ಎಲ್ಲಾ ಬ್ಯಾಂಕುಗಳೂ ಒಂದೇ ಬಡ್ಡಿದರವನ್ನು ನಮೂದಿಸಬೇಕು ಮತ್ತು ನಿಯಮಾವಳಿಗಳು ಏಕರೂಪವಾಗಿರಬೇಕು. ಬ್ಯಾಂಕುಗಳು/ಹಣಕಾಸು ಸಂಸ್ಥೆಗಳು ನಿರ್ದಿಷ್ಟ ಸಾಲದ ಸ್ವರೂಪದ ಆಧಾರದಲ್ಲಿ ನಿರ್ದಿಷ್ಟ ಬಡ್ಡಿ ದರಗಳನ್ನು ನಮೂದಿಸಬೇಕು. ಸ್ಥಿರ ದರವಾಗಿದ್ದಲ್ಲಿ ಬಡ್ಡಿದರವನ್ನು ಕನಿಷ್ಠ 5 ವರ್ಷಗಳಿಗೊಮ್ಮೆ ಮರು ಹೊಂದಿಸಬೇಕು. ಸರಾಸರಿ ದರಗಳನ್ನು ನಮೂದಿಸಬಾರದು. ಸರಾಸರಿ ದರಗಳನ್ನು ನಮೂದಿಸಿದ ಬ್ಯಾಂಕುಗಳನ್ನು ಪರಿಗಣಿಸಲಾಗುವುದಿಲ್ಲ.
ಬಿಡ್ ಪೂರ್ವ ಸಭೆ **ದಿನಾಂಕ:04.08.2022 ರಂದು ಸಂಜೆ:4.00ಗಂಟೆಗೆ** ಮೇಲೆ ತಿಳಿಸಿರುವ ವಿಳಾಸದಲ್ಲಿ ಆರ್.ಜಿ.ಹೆಚ್.ಸಿ.ಎಲ್.ನ ಸಭಾಂಗಣದಲ್ಲಿ ನಡೆಯಲಿದೆ. ಸಭೆಯಲ್ಲಿ ಸಾಲ ಪಡೆಯುವ ವಿಧಾನಗಳು ಮತ್ತು ಅಲ್ಪಾವಧಿ ಸಾಲದ ಕುರಿತು ಸ್ಪಷ್ಟೀಕರಣ ನೀಡಲಾಗುವುದು. ಆಸಕ್ತ ಬ್ಯಾಂಕು/ಹಣಕಾಸು ಸಂಸ್ಥೆಗಳು ಸಭೆಯಲ್ಲಿ ಪಾಲ್ಗೊಳ್ಳಬಹುದು. ಕೊಟೇಷನ್ ಸಲ್ಲಿಸಲು ಕೊನೆಯ ದಿನಾಂಕ: **10.08.2022 ಮಧ್ಯಾಹ್ನ 04.00 ಗಂಟೆ**. ನಿಗದಿತ ಸಮಯದ ನಂತರ ಸಲ್ಲಿಕೆಯಾಗುವ ಕೊಟೇಷನ್‌ಗಳನ್ನು ಸ್ವೀಕರಿಸುವುದಿಲ್ಲ. ಮೊಹರು ಮಾಡಿದ ಕೊಟೇಷನ್ ಲಕೋಟೆಯ ಮೇಲೆ **"ಮುಖ್ಯಮಂತ್ರಿಗಳ ಒಂದು ಲಕ್ಷ ವಸತಿ ಯೋಜನೆಯ ಅನುಷ್ಠಾನಕ್ಕಾಗಿ ಅಲ್ಪಾವಧಿ ಸಾಲ ಒದಗಿಸಲು ಕೊಟೇಷನ್"** ಎಂದು ನಮೂದಿಸಿ, ರಾಜೀವ್ ಗಾಂಧಿ ವಸತಿ ನಿಗಮ ನಿಯಮಿತದ ಮೇಲ್ಕಂಡ ವಿಳಾಸಕ್ಕೆ ಸಲ್ಲಿಸಬೇಕು.

ಸಹಿ/–
ವ್ಯವಸ್ಥಾಪಕ ನಿರ್ದೇಶಕರು,
ರಾಗಾಂವನಿನಿ
ವಾಸಾಸಂಇ/ವಾಪ್ರ/ಜೆಎ/1596/2022–23

ಕರ್ನಾಟಕ ಸರ್ಕಾರ
ಗುಲಬರ್ಗಾ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಕಲಬುರಗಿ
(ಕರ್ನಾಟಕ ಸರ್ಕಾರ ಸ್ವಾಯತ್ತ ಸಂಸ್ಥೆ)
ಇ–ಮೇಲ್ : directorgimsgulbarga@gmail.com, gimsadmoffice@gmail.com

No. GIMS/KLB/Tender-Section/796/2022-23 DATE 30-07-2022

ಇ–ಪ್ರಕ್ಯೂರಮೆಂಟ್ ಟೆಂಡರ ಪ್ರಕಟಣೆ

ಗುಲಬರ್ಗಾ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಕಲಬುರಗಿ ಆಸ್ಪತ್ರೆಯ ವಿವಿಧ ವಿಭಾಗಗಳಿಗೆ ಅವಶ್ಯಕವಿರುವ Tablets & Capsules, Surgical Items, Injections & IV Fluids, Miscellaneous Items, X-Ray Films and Other Items ಗಳನ್ನು ಖರೀದಿಸಲು ಅಧಿಕೃತ ಸರಬರಾಜುದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಕೆ.ಟಿ.ಪಿ.ಪಿ ಅಧಿನಿಯಮ 1999 ಮತ್ತು ನಿಯಮಗಳು 2000ರ ಪ್ರಕಾರ ದ್ವಿ–ಲಕೋಟೆ ಪದ್ಧತಿಯಲ್ಲಿ ಇ–ಪ್ರಕ್ಯೂರಮೆಂಟ್ ಮುಖಾಂತರ ಇ–ಟೆಂಡರ್ ಆಹ್ವಾನಿಸಲಾಗಿರುತ್ತದೆ, ಎಲ್ಲಾ ವಿವರಗಳು https://eproc.karnataka.gov.in ಜಾಲತಾಣದಲ್ಲಿ ನೋಡಬಹುದಾಗಿದೆ.
1) ಟೆಂಡರ ವಿವರ : 1. Tablets & Capsules ಇಂಡೆಂಟ ನಂಬರ್ : ME/2022-23/IND4621, 2. Surgical Items ಇಂಡೆಂಟ ನಂಬರ್: ME/2022-23/IND4632, 3. Injections & IV Fluids, ಇಂಡೆಂಟ ನಂಬರ್ : ME/2022-23/IND4587, 4. Miscellaneous Items ಇಂಡೆಂಟ ನಂಬರ್ : ME/2022-23/IND4588, 5. X-Ray Films and Other Items ಇಂಡೆಂಟ ನಂಬರ್ : ME/2022-23/IND4624, 2) ಟೆಂಡರ ಅಂದಾಜು ಮೊತ್ತ : **ಕನಿಷ್ಠ ರೂ. 16,80,902.00, ಗರಿಷ್ಠ ರೂ. 4,49,39,496.00,** 3) ಇ.ಎಂ.ಡಿ ಮೊತ್ತ : ಕನಿಷ್ಠ ರೂ. 42,023.00, ಗರಿಷ್ಠ ರೂ. 11,23,487.00, 4) ಟೆಂಡರ ಕರೆದ ದಿನಾಂಕ : **29–07–2022,** 5) ಟೆಂಡರ ಸಲ್ಲಿಸುವ ಅಂತಿಮ ದಿನಾಂಕ : **11–08–2022 @ 4:30 pm,** 6) ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 12-08-2022 @ 5:00pm (T. Bid), 7) ಹಣಕಾಸಿನ ಬಿಡ್ ತೆರೆಯುವ ದಿನಾಂಕ : 16-08-2022, @ 11:00am (F. Bid), ಸಂಪರ್ಕಿಸುವ ವಿಳಾಸ : ನಿರ್ದೇಶಕರು, ಗುಲಬರ್ಗಾ ವೈದ್ಯಕೀಯ ವಿಜ್ಞಾಗಳ ಸಂಸ್ಥೆ, ಕಲಬುರಗಿ ಸೇಡಂ ರಸ್ತೆ ಕಲಬುರಗಿ–585105, ದೂರವಾಣಿ ಸಂಖ್ಯೆ:08472–260252, 9482093568, 9448712914, E-mail id: directorgimsgulbarga@gmail.com

ಸಹಿ/– ನಿರ್ದೇಶಕರು,
ಗುಲಬರ್ಗಾ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಕಲಬುರಗಿ
ವಾ.ಸಾ.ಸಂ.ಇ/ಕಲಬುರಗಿ/445/ಎಂ.ಸಿ&ಎ/2022–23

ಶಿಕ್ಷಕರ ಹೊರಗುತ್ತಿಗೆ ನೇಮಕ ಸಲ್ಲ: ಹೈಕೋರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸರ್ಕಾರಿ ವಸತಿ ಶಾಲೆಗಳಿಗೆ ವೃಂದ ಮತ್ತು ನೇಮಕಾತಿ ನಿಯಮಗಳ ಪ್ರಕಾರವೇ ಶಿಕ್ಷಕರ ನೇಮಕಾತಿ ಪ್ರಕ್ರಿಯೆ ನಡೆಸಬೇಕು, ಹೊರಗುತ್ತಿಗೆ ಏಜೆನ್ಸಿಗಳ ಮೂಲಕ ಗುತ್ತಿಗೆ ಆಧಾರದಲ್ಲಿ ನೇಮಕಾತಿ ಮಾಡಬಾರದು' ಎಂದು ಹೈಕೋರ್ಟ್ ಸರ್ಕಾರಕ್ಕೆ ಆದೇಶಿಸಿದೆ.

ತಮ್ಮ ಹುದ್ದೆಗಳನ್ನು ಕಾಯಂ ಗೊಳಿಸುವಂತೆ ಕೋರಿ ಹೊರಗುತ್ತಿಗೆ ಏಜೆನ್ಸಿ ಮೂಲಕ ಗುತ್ತಿಗೆ ಆಧಾರದಲ್ಲಿ ನೇಮಕಗೊಂಡಿದ್ದ ಆರ್.ಅಶ್ವಿನಿರಾಜ್ ಮತ್ತಿತರರು ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ವಿಲೇವಾರಿ ಮಾಡಿದ್ದು, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸೊಸೈಟಿ ಟೆಂಡರ್ ಕರೆದು ಹೊರಗುತ್ತಿಗೆ ಏಜೆನ್ಸಿಗಳ ಮೂಲಕ ವಸತಿ ಶಾಲೆಗಳಿಗೆ ಶಿಕ್ಷಕರನ್ನು ನೇಮಿಸುವ ಪದ್ಧತಿಯ ಬಗ್ಗೆ ತೀವ್ರ ಕಳವಳ ವ್ಯಕ್ತಪಡಿಸಿದೆ.

'ಹೊರಗುತ್ತಿಗೆ ಏಜೆನ್ಸಿಗಳ ಮೂಲಕ ನೇಮಕಗೊಂಡ ಶಿಕ್ಷಕರು ತಮ್ಮ ತಿಂಗಳ ಸಂಬಳದ ಒಂದು ಭಾಗವನ್ನು ಏಜೆನ್ಸಿಗೆ ಪಾವತಿಸುವ ಕ್ರಮ ಎಷ್ಟರಮಟ್ಟಿಗೆ ಸರಿ' ಎಂದು ಪ್ರಶ್ನಿಸಿರುವ ನ್ಯಾಯಪೀಠ, 'ಹೊರಗುತ್ತಿಗೆ ಬೋಧಕ ಸಿಬ್ಬಂದಿಯಿಂದ ಪಾವತಿಸಬೇಕಾದ ಸಂಬಳದಿಂದ ತಿಂಗಳ ಸೇವಾ ಶುಲ್ಕ ಕಡಿತಗೊಳಿಸುತ್ತಿರುವುದೂ ಸಮಂಜಸವಲ್ಲ' ಎಂಬ ಅಭಿಪ್ರಾಯ ವ್ಯಕ್ತಪಡಿಸಿದೆ. 'ಸರ್ಕಾರ ಅಂತಹ ಶಿಕ್ಷಕರಿಗೆ ಸೇವಾ ಭದ್ರತೆ ನೀಡಲು ಗಂಭೀರ ಕ್ರಮ ಕೈಗೊಳ್ಳಬೇಕು' ಎಂದು ತಾಕೀತು ಮಾಡಿದೆ.

ಸಿಇಟಿ ರ‍್ಯಾಂಕ್ ಪಟ್ಟಿಯಲ್ಲಿ ತಾರತಮ್ಯ: ವಿದ್ಯಾರ್ಥಿಗಳ ಆರೋಪ

ಕೆಇಎ ಮುಂದೆ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಿಂದಿನ ಶೈಕ್ಷಣಿಕ ಸಾಲಿನಲ್ಲಿ ದ್ವಿತೀಯ ಪಿಯು ಉತ್ತೀರ್ಣರಾಗಿದ್ದು, ಈ ಬಾರಿ ಸಿಇಟಿ ಪರೀಕ್ಷೆ ತೆಗೆದುಕೊಂಡಿದ್ದ ವಿದ್ಯಾರ್ಥಿಗಳ ಪಿಯು ಅಂಕಗಳನ್ನು ರ‍್ಯಾಂಕ್ ಪಟ್ಟಿಗೆ ತೆಗೆದುಕೊಂಡಿಲ್ಲ ಎಂದು ಆರೋಪಿಸಿ ವಿದ್ಯಾರ್ಥಿಗಳು ಮತ್ತು ಪೋಷಕರು ಶನಿವಾರ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಮುಂದೆ ಪ್ರತಿಭಟನೆ ನಡೆಸಿದರು.

ಸಾಮಾನ್ಯವಾಗಿ ಕೆಇಎನಲ್ಲಿ ಸಿಇಟಿ ಮತ್ತು ದ್ವಿತೀಯ ಪಿಯು ಪರೀಕ್ಷೆಗಳ ಅಂಕಗಳನ್ನು ಆಧಾರವಾಗಿ ಇಟ್ಟುಕೊಂಡೇ ರ‍್ಯಾಂಕಿಂಗ್ ನಿರ್ಧರಿಸಲಾಗುತ್ತದೆ. ಈ ಬಾರಿಯೂ ಅದೇ ರೀತಿ ಮಾಡಲಾಗಿದೆ. ಆದರೆ, ಕಳೆದ ಬಾರಿ ಪಿಯು ಉತ್ತೀರ್ಣರಾದವರ ಅಂಕಗಳನ್ನು ಕಡೆಗಣಿಸಲಾಗಿದೆ ಎಂದು ಪ್ರತಿಭಟನನಿರತರು ದೂರಿದರು.

ಮುಖ್ಯಾಂಶಗಳು

- ಕಳೆದ ಬಾರಿ ಪಿಯು ಉತ್ತೀರ್ಣರಾದವರ ಅಂಕ ಕಡೆಗಣನೆ
- ಕೋವಿಡ್ ಕಾರಣ ಹಿಂದಿನ ವರ್ಷ ಪಿಯು ಪರೀಕ್ಷೆ ನಡೆಸಿರಲಿಲ್ಲ

ಕೋವಿಡ್ ಪಾಸ್‌ಗೆ ಸಿಇಟಿ ಅಂಕ ಮಾತ್ರ ಪರಿಗಣನೆ: ಕಳೆದ ವರ್ಷ ದ್ವಿತೀಯ ಪಿಯು ಉತ್ತೀರ್ಣರಾದ ಕೆಲವು ವಿದ್ಯಾರ್ಥಿಗಳು ಈ ಬಾರಿಯೂ ಸಿಇಟಿ ಪರೀಕ್ಷೆ ತೆಗೆದುಕೊಂಡಿದ್ದು, ಅಂತಹ ವಿದ್ಯಾರ್ಥಿಗಳ ರ‍್ಯಾಂಕಿಂಗ್ ಅನ್ನು ಸಿಇಟಿ ಪರೀಕ್ಷೆಯ ಅಂಕಗಳನ್ನು ಆಧಾರವಾಗಿಯೇ ನಿರ್ಧರಿಸಲಾಗಿದೆ. ಕೋವಿಡ್ ಇದ್ದ ಕಾರಣ ಹಿಂದಿನ ವರ್ಷ ದ್ವಿತೀಯ ಪಿಯು ಪರೀಕ್ಷೆಗಳನ್ನು ನಡೆಸಿರಲಿಲ್ಲ. ಹಾಗಾಗಿ, ಕೇವಲ ಸಿಇಟಿ ಪರೀಕ್ಷೆಯಲ್ಲಿ ಪಡೆದ ಅಂಕ ಆಧಾರಿಸಿ ರ‍್ಯಾಂಕಿಂಗ್ ನೀಡಲಾಗಿತ್ತು. ಆ ವರ್ಷದ ವಿದ್ಯಾರ್ಥಿಗಳಿಗೆ ಅದೇ ನಿಯಮ ಅನ್ವಯವಾಗುತ್ತದೆ ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕಿ ರಮ್ಯಾ ಪ್ರತಿಕ್ರಿಯಿಸಿದರು.

ಕಳೆದ ವರ್ಷ ಪಿಯು ತೇರ್ಗಡೆಯಾದ ಸುಮಾರು 24 ಸಾವಿರ ವಿದ್ಯಾರ್ಥಿಗಳು ಈ ಬಾರಿಯೂ ಸಿಇಟಿ ಪರೀಕ್ಷೆ ತೆಗೆದುಕೊಂಡಿದ್ದಾರೆ. ಪರೀಕ್ಷೆ ಇಲ್ಲದೆ ಪಿಯು ಫಲಿತಾಂಶ ನೀಡಿದ್ದ ಕಾರಣ ಸಹಜವಾಗಿ ಅವರ ಅಂಕಗಳು ಅಧಿಕವಿದ್ದವು. ಅವರೆಲ್ಲರ ಅಂಕಗಳನ್ನು ಪರಿಗಣಿಸಿದರೆ ಈ ವರ್ಷದ ವಿದ್ಯಾರ್ಥಿಗಳಿಗೆ ಭಾರಿ ಅನ್ಯಾಯವಾಗುತ್ತದೆ. ಅಲ್ಲದೇ, ಕಳೆದ ಬಾರಿ ಕೇವಲ ಸಿಇಟಿ ಪರೀಕ್ಷೆ ಮೇಲೆ ರ‍್ಯಾಂಕಿಂಗ್ ಪಡೆದು ಈಗ ಬೇರೆ ಬೇರೆ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವವರಿಗೂ ಅನ್ಯಾಯ ಮಾಡಿದಂತೆ ಆಗುತ್ತದೆ ಎಂದು ವಿವರಿಸಿದರು.

ಸಿಇಟಿ: ಉಡುಪಿಯ ಅವಳಿ ಸಹೋದರರ ಸಾಧನೆ

ಪ್ರಜಾವಾಣಿ ವಾರ್ತೆ

ವೃಷಾನ್

ವ್ರಜೇಶ್

ಉಡುಪಿ: ಸಿಇಟಿಯಲ್ಲಿ ಉಡುಪಿಯ ಅವಳಿ ಸಹೋದರರಾದ ವ್ರಜೇಶ್ ವೀಣಾಧರ ಶೆಟ್ಟಿ ಹಾಗೂ ವೃಷಾನ್ ವೀಣಾಧರ ಶೆಟ್ಟಿ ಗಮನಾರ್ಹ ಸಾಧನೆ ಮಾಡಿದ್ದಾರೆ.

ವ್ರಜೇಶ್ ಬಿಎನ್‌ವೈಎಸ್‌ನಲ್ಲಿ 2, ಅಗ್ರಿಕಲ್ಚರ್‌ನಲ್ಲಿ 9, ವೆಟರ್ನರಿ ಸೈನ್ಸ್‌ನಲ್ಲಿ 6 ಹಾಗೂ ಫಾರ್ಮಸಿಯಲ್ಲಿ 7ನೇ ರ‍್ಯಾಂಕ್ ಪಡೆದುಕೊಂಡಿದ್ದಾರೆ. ವೃಷಾನ್ ಬಿಎನ್‌ವೈಎಸ್‌ನಲ್ಲಿ 5, ವೆಟರ್ನರಿ ಸೈನ್ಸ್‌ನಲ್ಲಿ 5 ಹಾಗೂ ಫಾರ್ಮಸಿಯಲ್ಲಿ 9ನೇ ರ‍್ಯಾಂಕ್ ಪಡೆದುಕೊಂಡಿದ್ದಾರೆ.

ವೃಷಾನ್ ಹಾಗೂ ವ್ರಜೇಶ್ ಮಣಿಪಾಲದ ಮಾಧವ ಕೃಪಾ ಶಾಲೆಯ ವಿದ್ಯಾರ್ಥಿಗಳಾಗಿದ್ದು ರೇಖಾ ಹಾಗೂ ವೀಣಾಧರ ಶೆಟ್ಟಿ ದಂಪತಿ ಪುತ್ರರು. 'ಇಬ್ಬರು ನೀಟ್ ಪರೀಕ್ಷೆಯನ್ನು ಬರೆದಿದ್ದು ಫಲಿತಾಂಶಕ್ಕಾಗಿ ಕಾಯುತ್ತಿದ್ದಾರೆ. ಮುಂದೆ ವೈದ್ಯರಾಗುವ ಅಭಿಲಾಷೆ ಹೊಂದಿದ್ದಾರೆ' ಎಂದು ತಾಯಿ ರೇಖಾ ತಿಳಿಸಿದರು.

ಸಿಇಟಿ ಹಾಗೂ ನೀಟ್ ಪರೀಕ್ಷೆಗೆ ಉತ್ತಮ ತಯಾರಿ ನಡೆಸಿದ್ದರು. ನಿರೀಕ್ಷೆಯಂತೆ ಫಲಿತಾಂಶ ಬಂದಿದೆ ಎಂದು ತಾಯಿ ರೇಖಾ ಸಂತಸ ಹಂಚಿಕೊಂಡರು.

ನೇಮಕ ಅಕ್ರಮ: ಮುಂಬೈನಲ್ಲಿ ಸಿಕ್ಕಿಬಿದ್ದ ಪಿಎಸ್ಐ

ಬೆಂಗಳೂರು: ಪಿಎಸ್‌ಐ ನೇಮಕಾತಿ ಅಕ್ರಮದಲ್ಲಿ ಮಧ್ಯವರ್ತಿಯಾಗಿದ್ದರು ಎನ್ನಲಾದ ಪಿಎಸ್‌ಐ ಶರೀಫ್ ಕಳ್ಳಿಮನಿ ಅವರನ್ನು ಸಿಐಡಿ ಅಧಿಕಾರಿಗಳು ಮುಂಬೈನಲ್ಲಿ ಬಂಧಿಸಿದ್ದಾರೆ.

'ಆರೋಪಿ ಶರೀಫ್, ಕಾಮಾಕ್ಷಿಪಾಳ್ಯ ಠಾಣೆಯಲ್ಲಿ ಕೆಲಸ ಮಾಡುತ್ತಿದ್ದ. ಪಿಎಸ್‌ಐ ಅಕ್ರಮ ಸಂಬಂಧ ಪ್ರಕರಣ ದಾಖಲಾಗುತ್ತಿದ್ದಂತೆ ಮುಂಬೈಗೆ ಹೋಗಿ ತಲೆಮರೆಸಿಕೊಂಡಿದ್ದ. ವಿಶೇಷ ತಂಡ, ಅಲ್ಲಿಗೆ ಹೋಗಿ ಆರೋಪಿಯನ್ನು ಬಂಧಿಸಿ ನಗರಕ್ಕೆ ಕರೆತಂದಿದೆ' ಎಂದು ಸಿಐಡಿ ಮೂಲಗಳು ಹೇಳಿವೆ.

'ಶರೀಫ್‌ನನ್ನು ಒಂದನೇ ಎಸಿಎಂಎಂ ನ್ಯಾಯಾಲಯಕ್ಕೆ ಶನಿವಾರ ಹಾಜರುಪಡಿಸಲಾಗಿದೆ. ಹೆಚ್ಚಿನ ವಿಚಾರಣೆಗಾಗಿ 10 ದಿನ ಕಸ್ಟಡಿಗೆ ಪಡೆಯಲಾಗಿದೆ' ಎಂದು ಮೂಲಗಳು ತಿಳಿಸಿವೆ. 'ಪೊಲೀಸ್ ನೇಮಕಾತಿ ವಿಭಾಗದ ಪ್ರಥಮ ದರ್ಜೆ ಸಹಾಯಕ (ಎಫ್‌ಡಿಎ) ಹರ್ಷನಿಗೆ ಅಭ್ಯರ್ಥಿಗಳನ್ನು ಪರಿಚಯ ಮಾಡಿಕೊಟ್ಟಿದ್ದ ಶರೀಫ್, ಅದಕ್ಕಾಗಿ ಕಮಿಷನ್ ಪಡೆದಿದ್ದನೆಂದು ಗೊತ್ತಾಗಿದೆ' ಎಂದೂ ಮೂಲಗಳು ಹೇಳಿವೆ.

ಹೆಜ್ಜೇನು ದಾಳಿ: 12 ಮಕ್ಕಳು ಆಸ್ಪತ್ರೆಗೆ ದಾಖಲು

ಹಾವೇರಿ: ತಾಲ್ಲೂಕಿನ ದೇವಿಹೊಸೂರಿನ ಸರ್ಕಾರಿ ಉರ್ದು ಹಿರಿಯ ಪ್ರಾಥಮಿಕ ಶಾಲೆಯ ಮಕ್ಕಳ ಮೇಲೆ ಶನಿವಾರ ಹೆಜ್ಜೇನು ದಾಳಿ ನಡೆದಿದೆ. ಅಸ್ವಸ್ಥಗೊಂಡ 12 ಮಕ್ಕಳನ್ನು ಹಾವೇರಿ ಜಿಲ್ಲಾಸ್ಪತ್ರೆಗೆ ದಾಖಲಿಸಲಾಗಿದೆ. ಸುಮಾರು 22 ಮಕ್ಕಳಿಗೆ ಹೆಜ್ಜೇನು ಕಚ್ಚಿದ್ದರಿಂದ ತಲೆ, ಬೆನ್ನು, ಕೆನ್ನೆ, ತುಟಿ ಮುಂತಾದ ಭಾಗಗಳಲ್ಲಿ ಊತ ಕಾಣಿಸಿಕೊಂಡಿತು.

ಸಿಇಟಿ: ರ‍್ಯಾಂಕ್ ಪಡೆದ ವಿದ್ಯಾರ್ಥಿಗಳು

ಎಂಜಿನಿಯರಿಂಗ್	
1	ಅಪೂರ್ವ್ ಟಂಡನ್, ನ್ಯಾಷನಲ್ ಪಬ್ಲಿಕ್ ಸ್ಕೂಲ್, ಬೆಂಗಳೂರು.
2	ಸಿದ್ಧಾರ್ಥ ಸಿಂಗ್, ಶ್ರೀ ಚೈತನ್ಯ ಟೆಕ್ನೋ ಸ್ಕೂಲ್, ಬೆಂಗಳೂರು.
3	ಆತ್ಮಕೂರಿ ವೆಂಕಟ ಮಾಧವ ಶ್ರೀರಾಮ್, ಶ್ರೀ ಚೈತನ್ಯ ಟೆಕ್ನೋ ಸ್ಕೂಲ್, ಬೆಂಗಳೂರು.
4	ಆರ್.ಕೆ.ಶಿಶಿರ್, ನಾರಾಯಣ ಇ-ಟೆಕ್ನೋ ಸ್ಕೂಲ್, ಬೆಂಗಳೂರು.
5	ವಿಶಾಲ್ ಬೈಸಾನಿ, ಮಹೇಶ್ ಪಿಯು ಕಾಲೇಜ್, ಬೆಂಗಳೂರು.
6	ಕೆ.ವಿ.ಸಾಗರ್, ಮಹೇಶ್ ಪಿಯು ಕಾಲೇಜ್, ಬೆಂಗಳೂರು.
7	ವಿ.ಮಹೇಶ್ ಕುಮಾರ್, ನಾರಾಯಣ ಇ-ಟೆಕ್ನೋ ಸ್ಕೂಲ್, ಬೆಂಗಳೂರು.
8	ಜಿ.ವಿ.ಸಿದ್ಧಾರ್ಥ್, ಶ್ರೀಕುಮಾರನ್ ಚಿಲ್ಡ್ರನ್ಸ್ ಹೋಂ, ಬೆಂಗಳೂರು.
9	ವಿ.ಸಾತ್ವಿಕ್, ಶ್ರೀ ಚೈತನ್ಯ ಟೆಕ್ನೋ ಸ್ಕೂಲ್, ಬೆಂಗಳೂರು.

ಬಿಎಸ್ಸಿ (ಕೃಷಿ)	
1	ಅರ್ಜುನ್ ರವಿಶಂಕರ್, ಎಚ್‌ಎಎಲ್ ಪಬ್ಲಿಕ್ ಸ್ಕೂಲ್, ಬೆಂಗಳೂರು.
2	ಸುಮಿತ್ ಎಸ್.ಪಾಟೀಲ್, ಶ್ರೀ ಚೈತನ್ಯ ಟೆಕ್ನೋ ಸ್ಕೂಲ್, ಬೆಂಗಳೂರು.
3	ವೈ.ಎಂ.ಸುದೀಪ್, ವಿದ್ಯಾನಿಕೇತನ್ ಪಿಯು ಕಾಲೇಜ್, ತುಮಕೂರು.
4	ಹಿತೈಷ್ ಲಕ್ಷ್ಮಿಕಾಂತ್, ಡೆಲ್ಲಿ ಪಬ್ಲಿಕ್ ಸ್ಕೂಲ್, ಬೆಂಗಳೂರು.
5	ಎನ್.ಮನೋಜ್, ಆಳ್ವಾಸ್ ಕಾಲೇಜು, ಮೂಡಬಿದರೆ.
6	ಎ.ಕಿಶೋರ್, ಮಿರಾಂಡಾ ಪಿಯು ಕಾಲೇಜ್, ಬೆಂಗಳೂರು.
7	ಮುರಿಕಿ ಶ್ರೀ ಬರುನಿ, ವಿಶ್ವಚೇತನ ವಿದ್ಯಾನಿಕೇತನ ಆರ್‌ಇಎಸ್ ಕಾಲೇಜು.
8	ಕ್ಷಿತಿಜ್ ದೇಸಾಯಿ, ನ್ಯಾಷನಲ್ ಪಬ್ಲಿಕ್ ಸ್ಕೂಲ್, ಬೆಂಗಳೂರು.
9	ವ್ರಜೇಶ್ ವೀಣಾಧರ್ ಶೆಟ್ಟಿ, ಮಾಧವಕೃಪ ಇಂಗ್ಲಿಷ್ ಸ್ಕೂಲ್, ಉಡುಪಿ.

ಪಶುವೈದ್ಯಕೀಯ	
1	ಹೃಷಿಕೇಶ್ ನಾಗಭೂಷಣ್ ಗಂಗೂಲಿ, ನ್ಯಾಷನಲ್ ಸೆಂಟರ್ ಫಾರ್ ಎಕ್ಸಲೆನ್ಸ್ ಕಾಲೇಜು, ಬೆಂಗಳೂರು.
2	ಎಸ್.ಎ.ಮನೀಶ್, ಶ್ರೀ ಚೈತನ್ಯ ಟೆಕ್ನೋ ಸ್ಕೂಲ್, ಬೆಂಗಳೂರು.
3	ಶುಭಾ ಕೌಶಿಕ್, ಶ್ರೀ ಚೈತನ್ಯ ಟೆಕ್ನೋ ಸ್ಕೂಲ್, ಬೆಂಗಳೂರು.
4	ಎಸ್.ಆರ್.ಕೃಷ್ಣ, ಶ್ರೀ ಚೈತನ್ಯ ಟೆಕ್ನೋ ಸ್ಕೂಲ್, ಬೆಂಗಳೂರು.
5	ವೃಷಾನ್ ವೀಣಾಧರ ಶೆಟ್ಟಿ, ಮಾಧವಕೃಪ ಇಂಗ್ಲಿಷ್ ಸ್ಕೂಲ್, ಉಡುಪಿ.
6	ವ್ರಜೇಶ್ ವೀಣಾಧರ್ ಶೆಟ್ಟಿ, ಮಾಧವಕೃಪ ಇಂಗ್ಲಿಷ್ ಸ್ಕೂಲ್, ಉಡುಪಿ.
7	ಲಿಖಿತಾ ಪ್ರಕಾಶ್, ವಿಐಪಿಎಸ್, ಬೆಂಗಳೂರು.
8	ಎಸ್.ನಿತಿನ್, ನ್ಯಾಷನಲ್ ಪಬ್ಲಿಕ್ ಸ್ಕೂಲ್, ಬೆಂಗಳೂರು.
9	ಬಿ.ವಿಶಾಲ್, ಶ್ರೀ ಚೈತನ್ಯ ಟೆಕ್ನೋ ಸ್ಕೂಲ್, ಬೆಂಗಳೂರು.

ನ್ಯಾಚುರೋಪತಿ, ಯೋಗ ವಿಜ್ಞಾನ	
1	ಹೃಷಿಕೇಶ್ ನಾಗಭೂಷಣ್ ಗಂಗೂಲಿ, ನ್ಯಾಷನಲ್ ಸೆಂಟರ್ ಫಾರ್ ಎಕ್ಸಲೆನ್ಸ್ ಕಾಲೇಜು, ಬೆಂಗಳೂರು.
2	ವ್ರಜೇಶ್ ವೀಣಾಧರ್ ಶೆಟ್ಟಿ, ಮಾಧವಕೃಪ ಇಂಗ್ಲಿಷ್ ಸ್ಕೂಲ್, ಉಡುಪಿ.
3	ಎಸ್.ಆರ್. ಕೃಷ್ಣಾ, ಶ್ರೀ ಚೈತನ್ಯ ಟೆಕ್ನೋ ಸ್ಕೂಲ್, ಬೆಂಗಳೂರು.
4	ವೃಷಾನ್ ವೀಣಾಧರ ಶೆಟ್ಟಿ, ಮಾಧವಕೃಪ ಇಂಗ್ಲಿಷ್ ಸ್ಕೂಲ್, ಉಡುಪಿ.
5	ಬಿ.ವಿಶಾಲ್, ಶ್ರೀ ಚೈತನ್ಯ ಟೆಕ್ನೋ ಸ್ಕೂಲ್, ಬೆಂಗಳೂರು.
6	ಆದಿತ್ಯ ಕಾಮತ್, ಎಕ್ಸ್‌ಪರ್ಟ್ ಪಿಯು ಕಾಲೇಜ್, ಮಂಗಳೂರು.
7	ಎನ್. ಮನೋಜ್, ಆಳ್ವಾಸ್ ಕಾಲೇಜು, ಮೂಡಬಿದರೆ.
8	ಅನನ್ಯ ಐಶ್ವರ್ಯ, ಶ್ರೀ ಚೈತನ್ಯ ಟೆಕ್ನೋ ಸ್ಕೂಲ್, ಬೆಂಗಳೂರು.

ಬಿ.ಫಾರ್ಮಾ	
1	ಆರ್.ಕೆ.ಶಿಶಿರ್, ನಾರಾಯಣ ಇ-ಟೆಕ್ನೋ ಸ್ಕೂಲ್, ಬೆಂಗಳೂರು.
2	ಹೃಷಿಕೇಶ್ ನಾಗಭೂಷಣ್, ನ್ಯಾಷನಲ್ ಸೆಂಟರ್ ಫಾರ್ ಎಕ್ಸಲೆನ್ಸ್ ಕಾಲೇಜು, ಬೆಂಗಳೂರು.
3	ಅಪೂರ್ವ್ ಟಂಡನ್, ನ್ಯಾಷನಲ್ ಪಬ್ಲಿಕ್ ಸ್ಕೂಲ್, ಬೆಂಗಳೂರು.
4	ಆತ್ಮಕೂರಿ ವೆಂಕಟ ಮಾಧವ ಶ್ರೀರಾಮ್, ಶ್ರೀ ಚೈತನ್ಯ ಟೆಕ್ನೋ ಸ್ಕೂಲ್, ಬೆಂಗಳೂರು.
5	ಎಸ್.ಎ.ಮನೀಶ್, ಶ್ರೀ ಚೈತನ್ಯ ಟೆಕ್ನೋ ಸ್ಕೂಲ್, ಬೆಂಗಳೂರು.
6	ಸಿದ್ಧಾರ್ಥ ಸಿಂಗ್, ಶ್ರೀ ಚೈತನ್ಯ ಟೆಕ್ನೋ ಸ್ಕೂಲ್, ಬೆಂಗಳೂರು.
7	ವ್ರಜೇಶ್ ವೀಣಾಧರ ಶೆಟ್ಟಿ, ಮಾಧವಕೃಪ ಇಂಗ್ಲಿಷ್ ಸ್ಕೂಲ್, ಉಡುಪಿ.
8	ವೃಷಾನ್ ವೀಣಾಧರ ಶೆಟ್ಟಿ, ಮಾಧವಕೃಪ ಇಂಗ್ಲಿಷ್ ಸ್ಕೂಲ್, ಉಡುಪಿ.
9	ಎಸ್.ಆರ್.ಕೃಷ್ಣ, ಶ್ರೀ ಚೈತನ್ಯ ಟೆಕ್ನೋ ಸ್ಕೂಲ್, ಬೆಂಗಳೂರು.

ಸಿಇಟಿ ರ‍್ಯಾಂಕ್: ಬೆಂಗಳೂರೇ ಅಗ್ರ

ಒಂದನೇ ಪುಟದಿಂದ...

ರ‍್ಯಾಂಕ್‌ಗಳಲ್ಲಿ ಸಿಬಿಎಸ್‌ಇ ವಿದ್ಯಾರ್ಥಿಗಳೇ ಮೇಲುಗೈ ಸಾಧಿಸಿದ್ದಾರೆ. ನ್ಯಾಚುರೋಪತಿ ವಿಭಾಗ ಹೊರತುಪಡಿಸಿ ಉಳಿದ ವಿಭಾಗಗಳಲ್ಲಿ ಬಾಲಕರು ಪಾರಮ್ಯ ಮೆರೆದಿದ್ದಾರೆ.

ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ಅವರು ಸಿಇಟಿ ಫಲಿತಾಂಶವನ್ನು ಶನಿವಾರ ಪ್ರಕಟಿಸಿದರು.

'ಪ್ರಶ್ನೆ ಪತ್ರಿಕೆಯ ಮುದ್ರಣ, ತಾಂತ್ರಿಕ ಲೋಪದ ಕಾರಣ ಸಿಇಟಿಯಲ್ಲಿ ಈ ಬಾರಿ ಗಣಿತ ವಿಷಯದಲ್ಲಿ 5, ಭೌತವಿಜ್ಞಾನ, ರಸಾಯನಶಾಸ್ತ್ರ ವಿಷಯದಲ್ಲಿ ತಲಾ 1 ಅಂಕವನ್ನು ಕೃಪಾಂಕವಾಗಿ ನೀಡಲಾಗಿದೆ. ಒಟ್ಟು 7 ಅಂಕಗಳು ಅಭ್ಯರ್ಥಿಗಳಿಗೆ ಸಿಕ್ಕಿವೆ' ಎಂದು ಮಾಹಿತಿ ನೀಡಿದರು.

2,10,829 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದರು. ಮೆರಿಟ್ ಪಟ್ಟಿ ಸಿದ್ಧಪಡಿಸಿದ ನಂತರ ಎಂಜಿನಿಯರಿಂಗ್ ಕೋರ್ಸ್‌ಗೆ 1,71,656 ವಿದ್ಯಾರ್ಥಿಗಳು, ಕೃಷಿಗೆ 1,39,968, ಪಶುಸಂಗೋಪನೆಗೆ 1,42,820 ಯೋಗ ಮತ್ತು ನ್ಯಾಚುರೋಪತಿಗೆ 1,42,750 ಹಾಗೂ ಬಿ.ಫಾರ್ಮಾಗೆ 1,74,568 ವಿದ್ಯಾರ್ಥಿಗಳು ಅರ್ಹತೆ ಪಡೆದಿದ್ದಾರೆ.

ವೈದ್ಯಕೀಯ ಕೋರ್ಸ್ ಪ್ರವೇಶ: 'ರಾಷ್ಟ್ರೀಯ ಅರ್ಹತಾ ಪರೀಕ್ಷೆ (ನೀಟ್) ಫಲಿತಾಂಶ ಬಂದ ನಂತರ ಅದರ ಅಂಕಗಳ ಆಧಾರದ ಮೇಲೆ ವೈದ್ಯಕೀಯ, ದಂತ ವೈದ್ಯಕೀಯ ಮತ್ತು ಭಾರತೀಯ ವೈದ್ಯ ಪದ್ಧತಿ ಹಾಗೂ ಹೋಮಿಯೋಪತಿ ಕೋರ್ಸುಗಳ ಪ್ರವೇಶಕ್ಕೆ ಪರಿಗಣಿಸಲಾಗುವುದು. ನ್ಯಾಷನಲ್ ಆಪ್ಟಿಟ್ಯೂಡ್ ಟೆಸ್ಟ್ ಇನ್ ಆರ್ಕಿಟೆಕ್ಚರ್ (ಎನ್‌ಎಟಿಎ-2022) ಪರೀಕ್ಷೆಯ ಅಂಕಗಳ ಆಧಾರದಲ್ಲಿ ಆರ್ಕಿಟೆಕ್ಚರ್ ಕೋರ್ಸುಗಳ ಪ್ರವೇಶಕ್ಕೆ ರ‍್ಯಾಂಕ್ ಪ್ರಕಟಿಸಲಾಗುವುದು' ಎಂದು ಸಚಿವರು ಮಾಹಿತಿ ನೀಡಿದರು.

ಸಿಇಟಿ ಫಲಿತಾಂಶಕ್ಕೆ http://kea.kar.nic.in ಮತ್ತು http://karresults.nic.in. ಸಂಪರ್ಕಿಸಬಹುದು.

5ರಿಂದ ದಾಖಲೆಗಳ ಪರಿಶೀಲನೆ

ಸಿಇಟಿ ಪಟ್ಟಿಯಲ್ಲಿ ವಿವಿಧ ಕೋರ್ಸ್‌ಗಳ ಪ್ರವೇಶಕ್ಕೆ ಅರ್ಹತೆ ಪಡೆದಿರುವ ವಿದ್ಯಾರ್ಥಿಗಳ ದಾಖಲೆ ಪರಿಶೀಲನಾ ಕಾರ್ಯ ಆ.5ರಿಂದ ಆರಂಭವಾಗಲಿದೆ. ಪೂರ್ಣ ವಿವರಗಳನ್ನು ಪ್ರಾಧಿಕಾರ ಆ.1ರಂದು ವೆಬ್‌ಸೈಟ್‌ನಲ್ಲಿ ಪ್ರಕಟಿಸಲಿದೆ.

ದಾಖಲಾತಿಯನ್ನು ಆನ್‌ಲೈನ್ ಮುಖಾಂತರ ಪರಿಶೀಲನೆ ನಡೆಸಲು ಹೊಸ ತಂತ್ರಾಂಶ ಅಭಿವೃದ್ಧಿಪಡಿಸಲಾಗಿದೆ. ಹಾಗಾಗಿ, ಸೀಟು ಹಂಚಿಕೆಯೂ ಅತಿ ಕಡಿಮೆ ಅವಧಿಯಲ್ಲಿ ಪೂರ್ಣಗೊಳಿಸಲಾಗುವುದು. ತಪ್ಪು ಮಾಹಿತಿಗಳ ತಿದ್ದುಪಡಿಗೆ ಮತ್ತೆ ಅವಕಾಶ ಇಲ್ಲ ಎಂದು ಕೆಇಎ ಕಾರ್ಯನಿರ್ವಾಹಕ ನಿರ್ದೇಶಕಿ ಎಸ್.ರಮ್ಯಾ ವಿವರ ನೀಡಿದರು.

ರ‍್ಯಾಂಕ್ ತಡೆಹಿಡಿಯಲಾದ ವಿದ್ಯಾರ್ಥಿಗಳು ತಮ್ಮ ಅರ್ಹತಾ ಪರೀಕ್ಷೆಯ ಅಂಕಪಟ್ಟಿಯ ಯಥಾ ಪ್ರತಿಯನ್ನು ಕೆಇಎ ಕಚೇರಿಗೆ ಖುದ್ದಾಗಿ ಅಥವಾ ಇ-ಮೇಲ್ keauthority-ka@nic.in ಮೂಲಕ ಸಲ್ಲಿಸಿ, ರ‍್ಯಾಂಕ್‌ಗಳನ್ನು ಪಡೆಯಬಹುದು. ದಾಖಲೆಗಳ ಪರಿಶೀಲನೆಯ ನಂತರ ಸೀಟು ಹಂಚಿಕೆ ಅರ್ಹತೆಗೆ ಪರಿಗಣಿಸಲಾಗುವುದು ಎಂದು ಮಾಹಿತಿ ನೀಡಿದರು.

ಎಂಜಿನಿಯರಿಂಗ್ ರ‍್ಯಾಂಕಿಂಗ್‌ನಲ್ಲಿ ಮೊದಲ 10ರ ಒಳಗೆ ಬರುವ ನಿರೀಕ್ಷೆ ಇತ್ತು. ಮೊದಲಿಗನಾಗಿದಕ್ಕೆ ಹೆಮ್ಮೆ ಎನಿಸುತ್ತಿದೆ. ಪೋಷಕರು, ಶಿಕ್ಷಕರ ಸಹಕಾರ ಮರೆಯಲಾರೆ
ಅಪೂರ್ವ್ ಟಂಡನ್

ಎರಡು ವಿಷಯಗಳಲ್ಲಿ ಮೊದಲ ರ‍್ಯಾಂಕ್ ಸಿಕ್ಕಿದೆ. ವೈದ್ಯನಾಗಬೇಕು ಎನ್ನುವುದು ನನ್ನ ಕನಸು. ನೀಟ್ ಫಲಿತಾಂಶ ನೋಡಿಕೊಂಡು ನಿರ್ಧಾರ ತೆಗೆದುಕೊಳ್ಳುವೆ
ಹೃಷಿಕೇಶ್ ನಾಗಭೂಷಣ್ ಗಂಗೂಲಿ

ಎಂಜಿನಿಯರಿಂಗ್‌ನಲ್ಲಿ 36ನೇ ರ‍್ಯಾಂಕ್ ಇದ್ದರೂ ಆದ್ಯತೆ ಅದೇ ಕೋರ್ಸ್‌ಗೆ. ಕೃಷಿಯಲ್ಲಿ ಮೊದಲ ರ‍್ಯಾಂಕ್ ಬಂದಿರುವುದು ಆತ್ಮವಿಶ್ವಾಸ ಹೆಚ್ಚಿಸಿದೆ
ಅರ್ಜುನ್ ರವಿಶಂಕರ್

ಬಿ.ಫಾರ್ಮಾದಲ್ಲಿ ಮೊದಲ ರ‍್ಯಾಂಕ್ ಬಂದರೂ, ಕಂಪ್ಯೂಟರ್ ಸೈನ್ಸ್‌ನಲ್ಲಿ ಎಂಜಿನಿಯರಿಂಗ್ ಸೇರಲು ನಿರ್ಧರಿಸಿರುವೆ. ಕಾಲೇಜಿನಲ್ಲೇ ತರಬೇತಿ ಪಡೆದಿದ್ದೆ
ಆರ್.ಕೆ.ಶಿಶಿರ್

ಸಮಾಜ ವಿಜ್ಞಾನ ಪಠ್ಯಕ್ಕೆ ನಾರಾಯಣ ಗುರು ಪಾಠ

ಬೆಂಗಳೂರು: ಬ್ರಹ್ಮಶ್ರೀ ನಾರಾಯಣ ಗುರುಗಳ ಪಾಠವನ್ನು ಕನ್ನಡ ಭಾಷಾ ವಿಷಯದಿಂದ ಕೈಬಿಟ್ಟು ಸಮಾಜ ವಿಜ್ಞಾನ ಪಠ್ಯದಲ್ಲಿ ಅಳವಡಿಸಲು ಸರ್ಕಾರ ಆದೇಶ ಹೊರಡಿಸಿದೆ.

ರೋಹಿತ್ ಚಕ್ರತೀರ್ಥ ಸಮಿತಿ ಪರಿಷ್ಕರಿಸುವ ಮುನ್ನ ನಾರಾಯಣಗುರು ಅವರ ಬದುಕು, ಚಿಂತನೆ, ಹೋರಾಟ ಪರಿಚಯಿಸುವ ಪಠ್ಯ ಸಮಾಜ ವಿಜ್ಞಾನ ಪಠ್ಯದಲ್ಲಿತ್ತು. ಪರಿಷ್ಕರಣೆ ಬಳಿಕ, 10ನೇ ತರಗತಿಯ ಕನ್ನಡ ಭಾಷಾ ಪುಸ್ತಕದಲ್ಲಿ ಸೇರಿಸಲಾಗಿತ್ತು. ಪರಿಷ್ಕರಣೆಗೆ ಹಿಂದಿನ ಪಠ್ಯದಲ್ಲಿದ್ದ ವಿವರಗಳನ್ನು ಕಡಿತಗೊಳಿಸಲಾಗಿತ್ತು.

ಸರ್ಕಾರದ ಈ ನಡೆ ಆಕ್ರೋಶಕ್ಕೆ ಕಾರಣವಾಗಿತ್ತು. ಆದರೆ, ಸಚಿವ ಬಿ.ಸಿ. ನಾಗೇಶ್, ಯಾವುದೇ ಬದಲಾವಣೆ ಮಾಡಿಲ್ಲ ಎಂದೂ ಪ್ರತಿಪಾದಿಸಿದ್ದರು. ಆಕ್ರೋಶ ತೀವ್ರಗೊಂಡ ಬಳಿಕ, ಮರು ಪರಿಷ್ಕರಣೆಗೆ ಸರ್ಕಾರ ಮುಂದಾಯಿತು.

ಇಲಾಖೆ ಹೊರಡಿಸಿದ ಆದೇಶದಲ್ಲಿ, ನಾರಾಯಣಗುರು ಅವರ ಪಾಠವನ್ನು 10ನೇ ತರಗತಿಯ ಸಮಾಜ ವಿಜ್ಞಾನ ಭಾಗ 1ರಲ್ಲಿ ಅಳವಡಿಸಿಕೊಂಡು 2022-23ನೇ ಸಾಲಿನಿಂದಲೇ ಬೋಧನೆ, ಕಲಿಕೆ, ಮೌಲ್ಯಮಾಪನಕ್ಕೆ ಪರಿಗಣಿಸುವಂತೆ ಸೂಚಿಸಲಾಗಿದೆ.

'ಕನ್ನಡ ಭಾಷಾ ಅಭಿವೃದ್ಧಿ ಮಸೂದೆ' ಅನುಷ್ಠಾನ ಅನುಮಾನ: ನಾಗಾಭರಣ

ಧಾರವಾಡ: 'ಸಮಗ್ರ ಕನ್ನಡ ಭಾಷಾ ಅಭಿವೃದ್ಧಿ ಮಸೂದೆ'ಯ ಕರಡನ್ನು ಮುಖ್ಯಮಂತ್ರಿಗಳಿಗೆ ಶೀಘ್ರವೇ ಸಲ್ಲಿಸಲಾಗುವುದು. ಆದರೆ ಈ ಮಸೂದೆಯ ಅನುಷ್ಠಾನ ಕುರಿತು ನನಗೂ ಅನುಮಾನಗಳಿವೆ' ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಟಿ.ಎಸ್. ನಾಗಾಭರಣ ಹೇಳಿದರು.

ಕನ್ನಡ ಭಾಷಾ ಅನುಷ್ಠಾನ ಕುರಿತು ಶನಿವಾರ ವಿವಿಧ ಇಲಾಖೆಗಳೊಂದಿಗೆ ಸಭೆ ನಡೆಸಿದ ನಂತರ ಅವರು ಸುದ್ದಿಗಾರರೊಂದಿಗೆ ಮಾತನಾಡಿದರು.

'ನ್ಯಾಯಮೂರ್ತಿ ಎಸ್.ಆರ್. ಬನ್ನೂರಮಠ ಅವರ ನೇತೃತ್ವದಲ್ಲಿ ಕನ್ನಡ ಭಾಷೆ ಸಮಗ್ರ ಅಭಿವೃದ್ಧಿ ಮಸೂದೆ-2022ರ ಕರಡನ್ನು ಸಿದ್ಧಪಡಿಸಲಾಗಿದೆ. ಇದು ಅನುಷ್ಠಾನಗೊಂಡಲ್ಲಿ ಸರೋಜಿನಿ ಮಹಿಷಿ ವರದಿಯೂ ಸೇರಿದಂತೆ ಕನ್ನಡ ಅನುಷ್ಠಾನಕ್ಕೆ ಕಾನೂನು ಬಲ ಸಿಗಲಿದೆ' ಎಂದರು.

'ಕನ್ನಡ ಉಳಿಸುವ ಕುರಿತು ಸರ್ಕಾರ ಉತ್ಸಾಹ ತೋರಿಸುತ್ತದೆ. ಆದರೆ ಅನುಷ್ಠಾನಗೊಳಿಸಬೇಕಾದ ಅಧಿಕಾರಿಗಳಿಂದ ಆ ಮಟ್ಟದ ಸಹಕಾರ ಸಿಗುತ್ತಿಲ್ಲ. ಹೀಗಾಗಿ ಯಾವುದೇ ಅಧಿವೇಶನದಲ್ಲಿ ಮಂಡನೆಯಾಗಬಹುದಾದ ಈ ಮಸೂದೆಯ ಸಮರ್ಪಕ ಜಾರಿ ಕುರಿತು ಸಂದೇಹಗಳಿವೆ' ಎಂದರು.

ಪ್ರೌಢ ಶಾಲೆಯಾಗಿ ಉನ್ನತೀಕರಣ

ಬೆಂಗಳೂರು: 95 ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳನ್ನು ಪ್ರೌಢ ಶಾಲೆಗಳಾಗಿ ಉನ್ನತೀಕರಿಸಿ ರಾಜ್ಯ ಸರ್ಕಾರ ಶನಿವಾರ ಆದೇಶಿಸಿದೆ. 103 ಹಿರಿಯ ಪ್ರಾಥಮಿಕ ಶಾಲೆಗಳನ್ನು ಪ್ರೌಢ ಶಾಲೆಗಳಾಗಿ ಉನ್ನತೀಕರಿಸಲು ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರಿಂದ ಸರ್ಕಾರ ವರದಿ ಪಡೆದಿತ್ತು.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆಆರ್‌ಎಸ್*	124.80	124.80	16,545	16,545
ಹಾರಂಗಿ	2,859	2,857.64	1,020	1,020
ಕಬಿನಿ	2,284	2,283.41	5,248	5,000
ಹೇಮಾವತಿ	2,922	2,922	4,785	4,785
ಲಿಂಗನಮಕ್ಕಿ	1,819	1,798.50	7,921	-
ಸೂಪಾ (ಮೀ)	564	541.75	2,981	3,903
ಮಾಣಿ	594	584.30	1,500	-
ತುಂಗಭದ್ರಾ	1,633	1,632.21	43,697	43,698
ಮಲಪ್ರಭಾ	2079.5	2069.40	2,813	394
ಘಟಪ್ರಭಾ	2175	2,157	4,366	173
ಭದ್ರಾ	186	184.1	6157	3733
ಆಲಮಟ್ಟಿ (ಮೀ)	519.6	518.55	27,154	18,451
ನಾರಾಯಣಪುರ (ಮೀ)	492.25	491.93	30,000	29,080

* ನೆಲಮಟ್ಟದಿಂದ

ಕರ್ನಾಟಕ ಸರ್ಕಾರ (ಜಿಲ್ಲಾಧಿಕಾರಿಗಳ ಕಾರ್ಯಾಲಯ)
(ಜಿಲ್ಲಾ ನಗರಾಭಿವೃದ್ಧಿ ಕೋಶ) ಹಾವೇರಿ ಜಿಲ್ಲೆ, ಹಾವೇರಿ-581110
ದೂ : 08375-249097 e-mail : dc_haveri@yahoo.co.in
ನಂ:ಮಸ (04)/ಟೆಂಡರ/ವಹಿ-1/2022-23 ದಿನಾಂಕ : 29-07-2022

ಟೆಂಡರ ಇ-ಪ್ರಕಟಣೆ (ದ್ವಿಲಕೋಟಿ ಪದ್ಧತಿಯಲ್ಲಿ)
(ಇ-ಪ್ರೊಕ್ಯೂರಮೆಂಟ್ ಪೋರ್ಟಲ್ ಮುಖಾಂತರ)

ಹಾವೇರಿ ಜಿಲ್ಲೆಗೆ ಮಾನ್ಯ ಮುಖ್ಯಮಂತ್ರಿಗಳ ಅಮೃತ ನಗರೋತ್ಥಾನ (ಮುನಿಸಿಪಾಲಿಟಿ) ಯೋಜನೆ ಹಂತ-4 ರ ಯೋಜನೆಯಲ್ಲಿ ನಗರಸಭೆ ರಾಣೇಬೆನ್ನೂರು ಇಂಡೆಂಟ್ ಸಂಖ್ಯೆ : DMA/2022-23/OW/WORK_INDENT 132962 ಮೊತ್ತ ರೂ. 2024.80 ಲಕ್ಷಗಳ ಕಾಮಗಾರಿಗಳನ್ನು ನಿರ್ವಹಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ನಿಯಮ 2000 ಹಾಗೂ ತಿದ್ದುಪಡಿ ನಿಯಮ 2001 ಕ್ಕೆ ಒಳಪಟ್ಟು ಇ-ಪ್ರೊಕ್ಯೂರಮೆಂಟ್ ಪೋರ್ಟಲ್ ಮೂಲಕ ಟೆಂಡರ ಹಾಗೂ ಅಲ್ಪಾವಧಿ ಮರು ಟೆಂಡರನ್ನು KW-4 ಷರತ್ತಿಗೊಳಪಟ್ಟು ಆಹ್ವಾನಿಸಲಾಗಿದೆ. ವಿವರಗಳನ್ನು www.eproc.karnataka.gov.in ವೆಬ್‌ಸೈಟ್ ಮೂಲಕ ಪಡೆದುಕೊಂಡು ಇ-ಪ್ರೊಕ್ಯೂರಮೆಂಟ್ ಮುಖಾಂತರ ಸಲ್ಲಿಸತಕ್ಕದ್ದು. ಹೆಚ್ಚಿನ ಮಾಹಿತಿ ಬೇಕಾದಲ್ಲಿ ಜಿಲ್ಲಾ ನಗರಾಭಿವೃದ್ಧಿಕೋಶ ಹಾವೇರಿ ಜಿಲ್ಲೆ ಹಾವೇರಿ ಇಲ್ಲಿ ಸಂಪರ್ಕಿಸಬಹುದಾಗಿದೆ.

ಸಹಿ/- ಕಾರ್ಯಪಾಲಕ ಅಭಿಯಂತರರು,
ಜಿಲ್ಲಾ ನಗರಾಭಿವೃದ್ಧಿ ಕೋಶ, ಹಾವೇರಿ.
ವಾಸಾಸಂಇ/ಹಾವೇರಿ/ಎಂಸಿಎ/192/2022-23

ಕರ್ನಾಟಕ ಸರ್ಕಾರ
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ,
ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಾರ್ಯಾಲಯ, ಇಂಡಿ

ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

2022-23 ನೇ ಸಾಲಿಗೆ ಶಿಶು ಅಭಿವೃದ್ಧಿ ಯೋಜನೆ ಇಂಡಿ ಉಗ್ರಾಣಕ್ಕೆ/ ಎಂ.ಎಸ್.ಪಿ.ಸಿ ಉಗ್ರಾಣಕ್ಕೆ ಎಫ್.ಸಿ.ಐ ದಿಂದ ಪಡಿತರ ಅಕ್ಕಿ ಮತ್ತು ಗೋಧಿ ಎತ್ತುವಳಿ ಮಾಡಲು ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಕರೆಯಲಾಗಿದೆ. ಟೆಂಡರ್ ವೆಬ್‌ಸೈಟ್ ನಂಬರwww.eproc.karnataka.gov.in ಆಗಿರುತ್ತದೆ. ಸದರ ಟೆಂಡರದಲ್ಲಿ ಇಚ್ಛೆವುಳ್ಳ ಟೆಂಡರ್‌ದಾರರು ಭಾಗವಹಿಸಬಹುದಾಗಿರುತ್ತದೆ. **ಟೆಂಡರ್ ಅಂದಾಜು ಮೊತ್ತ ರೂ.4,00,000/- ಹಾಗೂ ಟೆಂಡರ್ ಇಎಂಡಿ ಮೊತ್ತ ರೂ.10,000/-** ಟೆಂಡರ್ ಸಲ್ಲಿಸುವ ವಿವರ ಕೆಳಗಿನಂತಿರುತ್ತದೆ.
1) 'ಇ-ಪ್ರೊಕ್ಯೂರ್‌ಮೆಂಟ್' ಮೂಲಕ ಭರ್ತಿ ಮಾಡಿದ ಟೆಂಡರ್‌ಗಳನ್ನು ಆನ್‌ಲೈನ್ ಮುಖಾಂತರ ಸಲ್ಲಿಸಲು ಕೊನೆಯ ದಿನಾಂಕ:22.07.2022 ರಿಂದ 08.08.2022 ಸಂಜೆ 5.30 ಗಂಟೆಯವರೆಗೆ. 2)ಟೆಕ್ನಿಕಲ್ ಬಿಡ್‌ನ್ನು ತೆರೆಯುವ ದಿನಾಂಕ:10.08.2022 ಬೆಳಿಗ್ಗೆ 11.00 ಗಂಟೆಗೆ. 3)ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ: 12.08.2022 ಬೆಳಿಗ್ಗೆ 11.00 ಗಂಟೆಗೆ. 4) ಟೆಂಡರ್ ತೆರೆಯುವ ಸ್ಥಳ: ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಾರ್ಯಾಲಯ ಇಂಡಿ. ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ: 08359-225076

ಸಹಿ/-ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು,
ಶಿಶು ಅಭಿವೃದ್ಧಿ ಯೋಜನೆ, ಇಂಡಿ
ವಾಸಾಸಂಇ/ವಿಜಯಪುರ/ಆರ್‌ಓಸಂ.316/ಎಂಸಿಎ/2022-23

ಕರ್ನಾಟಕ ಲೋಕಸೇವಾ ಆಯೋಗ
"ಉದ್ಯೋಗ ಸೌಧ", ಬೆಂಗಳೂರು - 560 001
ಸಂಖ್ಯೆ: ಪಿಎಸ್‌ಸಿ182ಆರ್‌ಟಿಬಿ(2)/2022-23/1296 ದಿನಾಂಕ: 26.07.2022

ಸಂಕ್ಷಿಪ್ತ ಅಧಿಸೂಚನೆ

ಆಯೋಗವು ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದಲ್ಲಿನ ಹೈದರಾಬಾದ್ ಕರ್ನಾಟಕ ವೃಂದದ ಸಹಾಯಕ ಸಾಂಖ್ಯಿಕ ಅಧಿಕಾರಿ ಗ್ರೂಪ್ "ಸಿ" ಹುದ್ದೆಗಳನ್ನು ಕರ್ನಾಟಕ ಸಾಮಾನ್ಯ ಸೇವೆಗಳು (ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ) (ನೇಮಕಾತಿ) ನಿಯಮಗಳು 2009 ಹಾಗೂ ಕಾಲಕಾಲಕ್ಕೆ ತಿದ್ದುಪಡಿಯಾದ ಕರ್ನಾಟಕ ನಾಗರೀಕ ಸೇವಾ (ನೇರ ನೇಮಕಾತಿ) (ಸಾಮಾನ್ಯ) ನಿಯಮಗಳು 2021 ಮತ್ತು ತಿದ್ದುಪಡಿ ನಿಯಮ 2022 ರನ್ವಯ ಸ್ಪರ್ಧಾತ್ಮಕ ಪರೀಕ್ಷೆ ಮೂಲಕ ಭರ್ತಿ ಮಾಡಲು ಅಧಿಸೂಚನೆ ಹೊರಡಿಸಿ ಅರ್ಹ ಅಭ್ಯರ್ಥಿಗಳಿಂದ ಆನ್‌ಲೈನ್ ಅರ್ಜಿಗಳನ್ನು ಆಹ್ವಾನಿಸಿದೆ.

ಕ್ರ.ಸಂ.	ಇಲಾಖೆಯ ಹೆಸರು/ಹುದ್ದೆಯ ಪದನಾಮ	ಹುದ್ದೆಗಳ ಸಂಖ್ಯೆ
	ಹೈದರಾಬಾದ್ ಕರ್ನಾಟಕ ವೃಂದ	
1	ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದಲ್ಲಿನ ಸಹಾಯಕ ಸಾಂಖ್ಯಿಕ ಅಧಿಕಾರಿ	05

ಅಭ್ಯರ್ಥಿಗಳು ಅರ್ಜಿಯನ್ನು ಭರ್ತಿ ಮಾಡುವ ಮೊದಲು ಹಾಗೂ ಶುಲ್ಕ ಪಾವತಿಸುವ ಬಗ್ಗೆ NOTIFICATION ನಲ್ಲಿ ಲಭ್ಯವಿರುವ ಮಾಹಿತಿಗಳನ್ನು ಓದಿಕೊಳ್ಳತಕ್ಕದ್ದು.
* ಆನ್‌ಲೈನ್ ಅರ್ಜಿ ಸಲ್ಲಿಸಲು ಪ್ರಾರಂಭ ದಿನಾಂಕ: 01.08.2022.
* ಆನ್‌ಲೈನ್ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 30.08.2022 (ರಾತ್ರಿ 11-45 ಗಂಟೆಯೊಳಗೆ)
* ಶುಲ್ಕವನ್ನು ಪಾವತಿಸಲು ಕೊನೆಯ ದಿನಾಂಕ: 31.08.2022.

ಇನ್ನೂ ಹೆಚ್ಚಿನ ವಿವರಗಳಿಗೆ ಆಯೋಗದ ದಿನಾಂಕ: 26.07.2022ರ ಅಧಿಸೂಚನೆಯನ್ನು ಆಯೋಗದ ವೆಬ್‌ಸೈಟ್ "http://kpsc.kar.nic.in/Notification" ರಲ್ಲಿ ನೋಡಬಹುದಾಗಿದೆ.

ಸಹಿ/-
ಕಾರ್ಯದರ್ಶಿ
ಕರ್ನಾಟಕ ಲೋಕಸೇವಾ ಆಯೋಗ.

ಶ್ರೀನಿಧಿ ಸೌಹಾರ್ದ ಸಹಕಾರಿ ಬ್ಯಾಂಕ್ ನಿಯಮಿತ
(RBI License No: UBD.KAN 0027P, Dated 6/1/2003)
ಆಡಳಿತ ಕಛೇರಿ: ನಂ.113, ಆರ್.ವಿ.ರಸ್ತೆ, ವಿ.ವಿ.ಪುರಂ, ಬೆಂಗಳೂರು-560004.
ದೂ: 080 26601152/22410151 Website: www.sreenidhibank.com

24ನೇ ವಾರ್ಷಿಕ ಸರ್ವ ಸದಸ್ಯರ ಮಹಾಸಭೆಯ ನೋಟೀಸು

ಆತ್ಮೀಯ ಸದಸ್ಯರೇ,
ನಮ್ಮ ಬ್ಯಾಂಕಿನ '2021-22ನೇ ಸಾಲಿನ ಸರ್ವ ಸದಸ್ಯರ ಮಹಾಸಭೆಯನ್ನು' ದಿನಾಂಕ 21-08-2022 ರಂದು ಭಾನುವಾರ ಬೆಳಿಗ್ಗೆ 10:30 ಗಂಟೆಗೆ 'ನಿಮ್ಹಾನ್ಸ್ ಕನ್ವೆನ್ಷನ್ ಸೆಂಟರ್' ಹೊಸೂರು ಮುಖ್ಯ ರಸ್ತೆ, ಲಕ್ಕಸಂದ್ರ ಬಸ್ ನಿಲ್ದಾಣದ ಎದುರು, ಬೆಂಗಳೂರು-560029, ಇಲ್ಲಿ ನಡೆಸಲು ತೀರ್ಮಾನಿಸಲಾಗಿದೆ. ಸದಸ್ಯರಿಗೆ ಸಭೆಯ ಆಹ್ವಾನ ಪತ್ರಿಕೆ ಮತ್ತು ವಾರ್ಷಿಕ ವರದಿಯನ್ನು ಈಗಾಗಲೇ ಅಂಚೆ ಮೂಲಕ ಕಳುಹಿಸಲಾಗಿದ್ದು, ಅಂಚೆ ತಲುಪದಿದ್ದಲ್ಲಿ ಈ ಪ್ರಕಟಣೆಯನ್ನೇ ಅಧಿಕೃತ ನೋಟಿಸ್ ಎಂದು ತಿಳಿದು ತಾವೆಲ್ಲರೂ ಈ ಸಭೆಯಲ್ಲಿ ಖುದ್ದಾಗಿ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಯಾಗಿ ನೆರವೇರಿಸಿಕೊಡಬೇಕಾಗಿ ವಿನಂತಿ.

ದಿನಾಂಕ: 30/07/2022 ಆಡಳಿತ ಮಂಡಳಿಯ ಅಪ್ಪಣೆ ಮೇರೆಗೆ
ಸ್ಥಳ: ಬೆಂಗಳೂರು ಸಹಿ/- ಎಲ್.ಬಾಬು ರೆಡ್ಡಿ, ಮುಖ್ಯ ಕಾರ್ಯನಿರ್ವಹಣಾಧಿಕಾರಿ

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ
(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)
(CIN-U04010KA2002SGC030438)

ಸಂಕ್ಷಿಪ್ತ ಟೆಂಡರ್ ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್ ವಿಧಾನದ ಮೂಲಕ)

ಬೆವಿಕಂನ ಪ್ರಕಟಣೆ ಸಂ: ಬೆವಿಕಂ/ಬಿಸಿಪಿ-1430/2022-23, ಬೆವಿಕಂಗೆ ಅಗತ್ಯವಿರುವ ಸ್ವನ್ ಪೋಲ್‌ಗಳನ್ನು ಖರೀದಿಸಲು ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಅರ್ಹ ಬಿಡ್ಡುದಾರರಿಂದ ಟೆಂಡರನ್ನು ಆಹ್ವಾನಿಸಿದೆ. ಬಿಡ್ ದಾಖಲೆಗಳ ಲಭ್ಯತೆ: 01.08.2022 ರಿಂದ. ಬಿಡ್ ದಾಖಲೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 16.08.2022 ರಂದು ಸಂಜೆ 4:00 ಗಂಟೆಯವರೆಗೆ. ಬಿಡ್ ದಾಖಲೆಗಳನ್ನು ತೆರೆಯುವ ದಿನಾಂಕ: 17.08.2022ರಂದು ಸಂಜೆ 4:15 ಗಂಟೆಗೆ. ಸಂಬಂಧಿಸಿದ ವಿಚಾರಣೆ ಬಗ್ಗೆ ವಿವರವಾದ ಪ್ರಕಟಣೆಯನ್ನು ವೆಬ್‌ಸೈಟ್ https://eproc.karnataka.gov.in ನಿಂದ ಪಡೆಯಬಹುದು. ಇತರೆ ಯಾವುದೇ ವಿವರಗಳನ್ನು ಕೆಳ ಸಹಿದಾರರ ಕಛೇರಿ ಅಥವಾ ಸಹಾಯವಾಣಿ ಸಂ: (+91-8046010000, +91-8068948777) ಅಥವಾ ಇಮೇಲ್ support@eprochelpdesk.com ಗೆ ಸಂಪರ್ಕಿಸಬಹುದು.

ವಿದ್ಯುತ್ ಸಂಬಂಧಿತ ದೂರುಗಳಿಗೆ ಕರೆಮಾಡಿ: 1912
ಬೆಸ್ಕಾಂ ಮಿತ್ರ Mobile APP ಡೌನ್‌ಲೋಡ್ ಮಾಡಿಕೊಳ್ಳಿ

ಸಹಿ/-
ಪ್ರಧಾನ ವ್ಯವಸ್ಥಾಪಕರು (ವಿದ್ಯುತ್)
ಖರೀದಿ, ಬೆವಿಕಂ

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರವರ ಕಛೇರಿ, ಯೋಜನೆ ಕೇಂದ್ರ-01 ವಿಭಾಗ,
ಎನ್.ಆರ್. ಚೌಕ, ಬೆಂಗಳೂರು-560 002.
ಸಂ: ಕಾಪಾಅ/ಯೋಕೇಂ01/ಟೆಂಡರ್/04/2022-23 ದಿನಾಂಕ:30.07.2022

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ) (2ನೇ ಕರೆ)
(ಜಿಒಕೆ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, ಯೋಜನೆ-ಕೇಂದ್ರ-01 ವಿಭಾಗ, ಇವರು ಅರ್ಹ ಗುತ್ತಿಗೆದಾರರಿಂದ ಕೆಳಕಂಡ ಕಾಮಗಾರಿಗಾಗಿ ಟೆಂಡರನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ	ಕಾಮಗಾರಿಯ ವಿವರ	ಟೆಂಡರಿಗಿಟ್ಟ ಮೊತ್ತ (ರೂ. ಲಕ್ಷಗಳಲ್ಲಿ)	ಇಎಂಡಿ (ರೂ. ಗಳಲ್ಲಿ)
1	ಬಿಬಿಎಂಪಿ ವ್ಯಾಪ್ತಿಯಲ್ಲಿ ಬರುವ ಆಯ್ದ ಆರ್ಟೀರಿಯಲ್ ರಸ್ತೆಗಳು, ಉಪ-ಆರ್ಟೀರಿಯಲ್ ರಸ್ತೆಗಳು ಮತ್ತು ವಾರ್ಡ್ ರಸ್ತೆಗಳ ನಿರ್ವಹಣಾ ಕಾಮಗಾರಿ.	760.30	ರೂ. 11.41/-ಲಕ್ಷಗಳು (ರೂ. 1.00/-ಲಕ್ಷ ಇ-ಪ್ರೊಕ್ಯೂರ್‌ಮೆಂಟ್ ಮೂಲಕ & ರೂ. 10.41/-ಲಕ್ಷಗಳು ಬ್ಯಾಂಕ್ ಗ್ಯಾರಂಟಿ ಮೂಲಕ)

1) ಟೆಂಡರ್ ಡಾಕ್ಯುಮೆಂಟ್‌ಗಳನ್ನು ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. 2)ಪ್ರಿ-ಬಿಡ್ ಮೀಟಿಂಗ್: 11.08.2022ರ ಸಂಜೆ 4.00 ಗಂಟೆಗೆ. 3) ಟೆಂಡರ್ ಡಾಕ್ಯುಮೆಂಟ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: 20.08.2022 ರ ಸಂಜೆ 5.30 ಗಂಟೆಯವರೆಗೆ 4) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: 22.08.2022ರ ಸಂಜೆ 4.00 ಗಂಟೆಗೆ. ಹೆಚ್ಚಿನ ಮಾಹಿತಿಗಾಗಿ ವೆಬ್‌ಸೈಟ್: https://eproc.karnataka.gov.in ನಲ್ಲಿ ಲಾಗಿನ್ ಮಾಡಿ ಅಥವಾ ಇ-ಪ್ರೊಕ್ಯೂರ್‌ಮೆಂಟ್ ಸಹಾಯವಾಣಿ 080-22441076 ನಿಂದ ಪಡೆಯಬಹುದು.

ಸಹಿ/- ಕಾರ್ಯಪಾಲಕ ಅಭಿಯಂತರರು, ಯೋಜನೆ- ಕೇಂದ್ರ-01 ವಿಭಾಗ.

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರ್ಕಾರ
ಕಾಲೇಜು ಶಿಕ್ಷಣ ಇಲಾಖೆ
ಸರ್ಕಾರಿ ಕಲಾ ಕಾಲೇಜು (ಸ್ವಾಯತ್ತ), ಚಿತ್ರದುರ್ಗ.
ಸಂಖ್ಯೆ: ಸಕಾಕಾಚಿ/ಟೆಂಡರ್/257/2021-22 ದಿನಾಂಕ: 26.07.2022

ಟೆಂಡರ್ ಪ್ರಕಟಣೆ

ಸರ್ಕಾರಿ ಕಲಾ ಕಾಲೇಜು (ಸ್ವಾಯತ್ತ), ಚಿತ್ರದುರ್ಗ ಇಲ್ಲಿಗೆ ಉತ್ತರ ಪತ್ರಿಕೆಗಳನ್ನು ಮುದ್ರಿಸಿ ಸರಬರಾಜು ಮಾಡಲು ಅಧಿಕೃತ ಸುರಕ್ಷಿತ ಮುದ್ರಣ ಸಂಸ್ಥೆಗಳಿಂದ ಟೆಂಡರ್ ಅರ್ಜಿಯನ್ನು ದ್ವಿ-ಲಕೋಟೆಯಲ್ಲಿ ಆಹ್ವಾನಿಸಲಾಗಿದೆ. ಟೆಂಡರ್ ಅರ್ಜಿಗಳನ್ನು ಕಾಲೇಜು ಕಛೇರಿ ಇಲ್ಲಿ ಪಡೆಯಬಹುದು. ಅರ್ಜಿ ಶುಲ್ಕ ರೂ. 500/- ಟೆಂಡರ್ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 24.08.2022 ಮಧ್ಯಾಹ್ನ 3.00 ಗಂಟೆಗೆ.
Website: https://gfgc.kar.nic.in/gac-chitradurga
email:chitradurgagac@gmail.com Phone: 08194-235908

RO.No.410:DIPR/CTA/MCA/2022-23
ಸಹಿ/- ಪ್ರಾಂಶುಪಾಲರು,
ಸರ್ಕಾರಿ ಕಲಾ ಕಾಲೇಜು (ಸ್ವಾಯತ್ತ), ಚಿತ್ರದುರ್ಗ

ಮೈಸೂರು ವಿಶ್ವವಿದ್ಯಾನಿಲಯ
ನಿರ್ದೇಶಕರ ಕಛೇರಿ, ಮೈಸೂರು ವಿಶ್ವವಿದ್ಯಾನಿಲಯ ಮುದ್ರಣಾಲಯ ಮತ್ತು ಲೇಖನ ಸಾಮಗ್ರಿ ವಿಭಾಗ, ಮಾನಸಗಂಗೋತ್ರಿ, ಮೈಸೂರು-570006.
ದೂ:0821-2419367, 2419285
ಸಂಖ್ಯೆ:ಜಿ.ಎಲ್1/382/(A)/2015-16 ದಿನಾಂಕ:16.07.2022

ಟೆಂಡರ್ ಪ್ರಕಟಣೆ

ವಿಷಯ: ಬಿಳಿ ಮ್ಯಾಪ್ಲಿತೋ ಕಾಗದಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಖರೀದಿಸಲು ಟೆಂಡರ್ ಕರೆಯುವ ಬಗ್ಗೆ.
ಮೈಸೂರು ವಿಶ್ವವಿದ್ಯಾನಿಲಯ ಮುದ್ರಣಾಲಯಕ್ಕೆ ಅಗತ್ಯವಾಗಿ ಬೇಕಾಗಿರುವ ಬಿಳಿ ಮ್ಯಾಪ್ಲಿತೋ ಕಾಗದಗಳನ್ನು ಖರೀದಿಸಲು ಇ-ಟೆಂಡರ್ ಮೂಲಕ ದರಪಟ್ಟಿ ನೀಡಲು ಕೋರಲಾಗಿದೆ. ದರಗಳು ಮುಂದಿನ ಒಂದು ವರ್ಷದವರೆಗೆ ಚಾಲ್ತಿಯಲ್ಲಿರುವಂತೆ ನೀಡಬೇಕು ಸರಬರಾಜು ಮಾಡಬೇಕಾದ ಲೇಖನ ಸಾಮಾಗ್ರಿಗಳ ವಿವರ, ನಿಬಂಧನೆಗಳು, ಷರತ್ತುಗಳು ಮತ್ತು ಇತರೆ ಮಾಹಿತಿಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಪಡೆಯಬಹುದಾಗಿದೆ. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 30.08.2022.
ಹೆಚ್ಚಿನ ವಿವರಗಳನ್ನು www.eproc.karnataka.gov.in.tender ನಲ್ಲಿ ಪಡೆಯಬಹುದು. 1. MU/PP/SD/Paper/2022-23/IND-839. ದೂರವಾಣಿ ಸಂಖ್ಯೆ: 0821-2419367, 2419285 ಮತ್ತು ಮೊಬೈಲ್ ಸಂಖ್ಯೆ: 9916906047.

ಸಹಿ/- ನಿರ್ದೇಶಕರು,
ಮೈ.ವಿ.ವಿ. ಮುದ್ರಣಾಲಯ ಮತ್ತು ಲೇಖನ ಸಾಮಾಗ್ರಿ ವಿಭಾಗ,
ಮಾನಸಗಂಗೋತ್ರಿ, ಮೈಸೂರು-9
DIPR/MYS/KAVITA/312/22-23

ನಗರ ಸಭೆ, ರಬಕವಿ - ಬನಹಟ್ಟಿ
Tel:Off. : 230236 STD : 08353
ಜಿಲ್ಲಾ: ಬಾಗಲಕೋಟ, ಕಾರ್ಯಾಲಯ : ರಾಮಪೂರ, ಕರ್ನಾಟಕ ರಾಜ್ಯ
ಕ್ರ.ಸಂ.: ನಸರಬ/ಲೋವಿ/ಎಸ್‌ಎಫ್‌ಸಿ.ವಿ.ಅ./ಇಟೆಂಪ್ರ/ಕಾಲ್-3/2022-23 ದಿನಾಂಕ: 30-07-2022

ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ಟೆಂಡರ್ ಪ್ರಕಟಣೆ (3ನೇ ಕರೆ)

ಪೌರಾಯುಕ್ತರು, ನಗರಸಭೆ, ರಬಕವಿ-ಬನಹಟ್ಟಿ ಇವರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಅಧಿನಿಯಮ 1999 ಮತ್ತು ನಿಯಮಗಳು 2000 ರ ಪ್ರಕಾರ ಸ್ಟ್ಯಾಂಡರ್ಡ್ ಬಿಡ್ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಸನ್ 2021-22 ನೇ ಸಾಲಿನ ಎಸ್‌ಎಫ್‌ಸಿ ವಿಶೇಷ ಅನುದಾನದಲ್ಲಿ ಸಿವಿಲ್ ಕಾಮಗಾರಿಗಳಿಗೆ ಟೆಂಡರ್ ಪ್ರಕಟಣೆ ಕರೆಯಲಾಗಿದೆ. ಅರ್ಹ ಗುತ್ತಿಗೆದಾರರು ಇಪ್ರೊಕ್ಯೂರ್ ಮೆಂಟ್ ಪೋರ್ಟಲ್‌ನ https://eproc.karnataka.gov.in ನಿಂದ ಟೆಂಡರ್ ದಾಖಲಾತಿಗಳನ್ನು ಡೌನ್‌ಲೋಡ್ ಮಾಡಿಕೊಂಡು ದಿನಾಂಕ 16-08-2022 ರ ಮಧ್ಯಾಹ್ನ 1:30 ಗಂಟೆ ಒಳಗಾಗಿ ಆನ್‌ಲೈನ್ ಮುಖಾಂತರ ಟೆಂಡರ್ ಸಲ್ಲಿಸಬಹುದು. ಹಾಗೂ ಟೆಂಡರ್‌ಗಳನ್ನು ದಿನಾಂಕ 17-08-2022 ರಂದು ತೆರೆಯಲಾಗುವದು. ಹೆಚ್ಚಿನ ವಿವರಗಳಿಗಾಗಿ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಅಥವಾ ಈ ಕಛೇರಿಗೆ ಸಂಪರ್ಕಿಸಬಹುದಾಗಿದೆ.

ಇಂಡೆಂಟ್ ನಂಬರ್	ಪ್ಯಾಕೇಜ್ ನಂಬರ್	ಟೆಂಡರ್‌ಗಿಟ್ಟ ಪ್ಯಾಕೇಜ್ ಮೊತ್ತ	ಇಎಂಡಿ ಮೊತ್ತ	ಕಾಮಗಾರಿ ಅವಧಿ	ಮೀಸಲಾತಿ/ ಗುತ್ತಿಗೆದಾರರ ದರ್ಜೆ
DMA/2022-23/OW/WORK_INDENT 131135 Call-3	ಪ್ಯಾಕೇಜ ನಂ.2	35,81,305	35,813	180 ದಿನ	ಮೀಸಲಾತಿ ಅನ್ವಯಿಸುವದಿಲ್ಲ, ಗುತ್ತಿಗೆದಾರರ ದರ್ಜೆ-ಸಿವ್ಹಿಲ್ 1ನೇ ದರ್ಜೆ

ಸಹಿ/- ಪೌರಾಯುಕ್ತರು ನಗರಸಭೆ, ರಬಕವಿ-ಬನಹಟ್ಟಿ
ಸಹಿ/- ಅಧ್ಯಕ್ಷರು ನಗರಸಭೆ, ರಬಕವಿ-ಬನಹಟ್ಟಿ

ರಾಜಸ್ಥಾನ, ಗುಜರಾತಿನವರು ಹೋದರೆ ಮುಂಬೈನಲ್ಲಿ ಹಣ ಇರಲ್ಲ: ಕೋಶಿಯಾರಿ ಹೇಳಿಕೆಗೆ ವಿರೋಧ

ವಿವಾದ ಸೃಷ್ಟಿಸಿದ ಮಹಾರಾಷ್ಟ್ರ ರಾಜ್ಯಪಾಲ

ಮುಂಬೈ (ಪಿಟಿಐ): 'ಗುಜರಾತ್ ಹಾಗೂ ರಾಜಸ್ಥಾನದವರು ಒಂದು ವೇಳೆ ಮುಂಬೈ ಹಾಗೂ ಠಾಣೆ ನಗರಗಳಿಂದ ಹೊರನಡೆದರೆ, ಈ ನಗರಗಳಲ್ಲಿ ದುಡ್ಡೇ ಇರುವುದಿಲ್ಲ ಹಾಗೂ ಮುಂಬೈಗೆ ವಾಣಿಜ್ಯ ರಾಜಧಾನಿ ಎಂಬ ಪಟ್ಟವೂ ಇರುವುದಿಲ್ಲ' ಎಂದು ಮಹಾರಾಷ್ಟ್ರ ರಾಜ್ಯಪಾಲ ಭಗತ್ ಸಿಂಗ್ ಕೋಶಿಯಾರಿ ಅವರು ನೀಡಿರುವ ಹೇಳಿಕೆಗೆ ತೀವ್ರ ವಿರೋಧ ವ್ಯಕ್ತವಾಗಿದೆ. ರಾಜ್ಯಪಾಲರ ವಿರುದ್ಧ ಶಿವಸೇನಾ, ಎನ್‌ಸಿಪಿ ಕಿಡಿಕಾರಿದ್ದು, ರಾಜೀನಾಮೆಗೆ ಆಗ್ರಹಿಸಿವೆ. ಕೋಶಿಯಾರಿ ಅವರ ಮಾತನ್ನು ಒಪ್ಪುವುದಿಲ್ಲ ಎಂದು ಮಹಾರಾಷ್ಟ್ರ ಮುಖ್ಯಮಂತ್ರಿ ಏಕನಾಥ ಶಿಂದೆ ಪ್ರತಿಕ್ರಿಯಿಸಿದ್ದಾರೆ.

ತಮ್ಮ ಮಾತು ವಿವಾದದ ಸ್ವರೂಪ ಪಡೆಯುತ್ತಿದ್ದಂತೆಯೇ ಸ್ಪಷ್ಟೀಕರಣ ನೀಡಿರುವ ರಾಜ್ಯಪಾಲರು, ತಮ್ಮ ಮಾತನ್ನು ತಪ್ಪಾಗಿ ಅರ್ಥೈಸಲಾಗಿದೆ ಎಂದು ಹೇಳಿದ್ದಾರೆ. ಮಹಾರಾಷ್ಟ್ರದ ಅಭಿವೃದ್ಧಿಯಲ್ಲಿ ಮರಾಠಿ ಭಾಷಿಕರ ಕೊಡುಗೆ ಹಾಗೂ ಅವರ ಕಠಿಣ ಪರಿಶ್ರಮವನ್ನು ನಾನು ಕೀಳಾಗಿ ನೋಡಿಲ್ಲ' ಎಂದು ಕೋಶಿಯಾರಿ ಹೇಳಿದ್ದಾರೆ.

ಒಂದು ಸಮುದಾಯವನ್ನು ಹೊಗಳಿದ ಮಾತ್ರಕ್ಕೆ, ಮತ್ತೊಂದನ್ನು ತೆಗಳಲಾಗಿದೆ ಎಂದು ಅರ್ಥವಲ್ಲ. ನಾನು ಮಹಾರಾಷ್ಟ್ರವನ್ನು, ಮರಾಠಿಗರನ್ನು ಎಂದಿಗೂ ಅಪಮಾನಿಸುವುದಿಲ್ಲ

ಭಗತ್ ಸಿಂಗ್ ಕೋಶಿಯಾರಿ ಮಹಾರಾಷ್ಟ್ರ ರಾಜ್ಯಪಾಲ

ಸಂಸತ್ತಿನಲ್ಲಿ ಬಹುಮತವಿದೆ ಎಂಬ ಕಾರಣಕ್ಕೆ ಬಿಜೆಪಿ ಅಧಿಕಾರ ದರ್ಪ ಪ್ರದರ್ಶಿಸುತ್ತಿದೆ. ಇಂತಹ ದುರಹಂಕಾರಕ್ಕೆ ಪಾಠ ಕಲಿಸುವ ಸಾಮರ್ಥ್ಯ ಜನರಿಗಿದೆ.

ಶರದ್ ಪವಾರ್, ಎನ್‌ಸಿಪಿ ಮುಖ್ಯಸ್ಥ

ರಾಜ್ಯಪಾಲರ ಮಾತುಗಳನ್ನು ಒಪ್ಪುವುದಿಲ್ಲ. ಸಾಂವಿಧಾನಿಕ ಹುದ್ದೆಯಲ್ಲಿದ್ದುಕೊಂಡು ಎಚ್ಚರದಿಂದ ಮಾತನಾಡಬೇಕು. ಮುಂಬೈ ಬೆಳವಣಿಗೆಯಲ್ಲಿ ಮರಾಠಿಗರ ಕೊಡುಗೆ ಕಡೆಗಣಿಸಲಾಗದು

ಏಕನಾಥ ಶಿಂದೆ, ಮಹಾರಾಷ್ಟ್ರ ಮುಖ್ಯಮಂತ್ರಿ

ಶುಕ್ರವಾರ ಸಂಜೆ ಅಂಧೇರಿಯಲ್ಲಿ ನಡೆದ ಕಾರ್ಯಕ್ರಮವೊಂದರಲ್ಲಿ ಕೋಶಿಯಾರಿ ಮಾತನಾಡಿದ್ದರು. ಮುಂಬೈ ನಗರವನ್ನು ದೇಶದ ವಾಣಿಜ್ಯ ರಾಜಧಾನಿಯಾಗಿಸುವಲ್ಲಿ ರಾಜಸ್ಥಾನದ ಮಾರ್ವಾಡಿ ಹಾಗೂ ಗುಜರಾತಿನ ಸಮುದಾಯದ ಪಾತ್ರವನ್ನು ಕೋಶಿಯಾರಿ ಪ್ರಶಂಸಿಸಿದ್ದರು. ರಾಜಸ್ಥಾನಿ ಮಾರ್ವಾಡಿ ಸಮುದಾಯವು ದೇಶದ ಹಲವು ಕಡೆ ವಾಸಿಸುತ್ತಿದೆ. ಪಕ್ಕದ ನೇಪಾಳ ಹಾಗೂ ಮಾರಿಷಸ್‌ನಲ್ಲೂ ಇದೆ. 'ಮಾರ್ವಾಡಿಗಳು ಎಲ್ಲೇ ಹೋದರೂ ಅವರು ಕೇವಲ ವ್ಯವಹಾರವನ್ನಷ್ಟೇ ಮಾಡುವುದಿಲ್ಲ. ಶಾಲೆ, ಆಸ್ಪತ್ರೆಗಳನ್ನು ತೆರೆದು ಜನಪರ ಕೆಲಸಗಳನ್ನೂ ಮಾಡುತ್ತಾರೆ' ಎಂದು ಶ್ಲಾಘಿಸಿದ್ದರು.

ಬಳಿಕ ನೀಡಿರುವ ಸ್ಪಷ್ಟನೆಯಲ್ಲಿ 'ನಗರದ ವಾಣಿಜ್ಯ ಹಾಗೂ ಉದ್ಯಮಕ್ಕೆ ಗುಜರಾತಿ ಹಾಗೂ ರಾಜಸ್ಥಾನಿ ಸಮುದಾಯಗಳು ನೀಡಿರುವ ಕೊಡುಗೆಯ ಬಗ್ಗೆಯಷ್ಟೇ ನಾನು ಮಾತನಾಡಿದ್ದೇನೆ. ಮರಾಠಿ ಭಾಷಿಕರನ್ನು ಕೀಳಾಗಿ ಕಾಣುವ ಯಾವುದೇ ಉದ್ದೇಶವಿಲ್ಲ' ಎಂದು ಹೇಳಿದ್ದಾರೆ. 'ಹೆಸರಾಂತ ರಾಜ್ಯದ ರಾಜ್ಯಪಾಲನಾಗಿ ಕೆಲಸ ಮಾಡುತ್ತಿರುವುದಕ್ಕೆ ನನಗೆ ಹೆಮ್ಮೆಯಿದೆ. ಈ ಕಡಿಮೆ ಅವಧಿಯಲ್ಲಿ ಮರಾಠಿ ಮಾತನಾಡುವುದನ್ನು ಕಲಿಯಲು ಯತ್ನಿಸುತ್ತಿದ್ದೇನೆ. ಮರಾಠಿಗರ ಕೈಗಾರಿಕೆಗಳು ರಾಜ್ಯ ಮಾತ್ರವಲ್ಲ, ದೇಶ, ವಿದೇಶಗಳಲ್ಲಿ ಹೆಸರು ಮಾಡಿವೆ. ಎಲ್ಲವನ್ನೂ ರಾಜಕೀಯದ ದೃಷ್ಟಿಕೋನದಲ್ಲಿ ನೋಡುವ ಹವ್ಯಾಸದ ಕಾರಣದಿಂದ ನನ್ನ ಮಾತುಗಳನ್ನು ತಪ್ಪಾಗಿ ಅರ್ಥೈಸಲಾಗಿದೆ. ಈ ಧೋರಣೆ ಬದಲಾಗಬೇಕು' ಎಂದು ಅವರು ಹೇಳಿದ್ದಾರೆ.

ಕ್ಷಮೆಯಾಚಿಸಲು ಉದ್ಧವ್ ಆಗ್ರಹ

ಮುಂಬೈ ಕುರಿತ ತಮ್ಮ ಮಾತುಗಳಿಗೆ ರಾಜ್ಯಪಾಲರು ಕ್ಷಮೆ ಯಾಚಿಸಬೇಕು ಎಂದು ಶಿವಸೇನಾ ಮುಖ್ಯಸ್ಥ ಉದ್ಧವ್ ಠಾಕ್ರೆ ಆಗ್ರಹಿಸಿದ್ದಾರೆ. 'ರಾಜ್ಯಪಾಲರನ್ನು ಮನೆಗೆ ಕಳುಹಿಸಬೇಕೇ ಅಥವಾ ಜೈಲಿಗೆ ಕಳುಹಿಸಬೇಕೇ ಎಂಬುದನ್ನು ನಿರ್ಧರಿಸುವ ಸಮಯ ಬಂದಿದೆ ಎಂದಿದ್ದಾರೆ. ಮುಂಬೈ ಹಾಗೂ ಠಾಣೆ ನಗರಗಳಲ್ಲಿ ಶಾಂತಿಯುತವಾಗಿ ವಾಸಿಸುತ್ತಿರುವ ಹಿಂದೂಗಳನ್ನು ಒಡೆಯಲು ರಾಜ್ಯಪಾಲರು ಯತ್ನಿಸಿದ್ದಾರೆ. ಮರಾಠಿಗರ ಬಗ್ಗೆ ರಾಜ್ಯಪಾಲರು ಹೊಂದಿರುವ ದ್ವೇಷ ಭಾವನೆಯು ಅವರಿಗೆ ಅರಿವಿಲ್ಲದಂತೆಯೇ ಹೊರಬಂದಿದೆ. ಕಳೆದ ಮೂರು ವರ್ಷಗಳಿಂದ ಮಹಾರಾಷ್ಟ್ರದಲ್ಲಿ ಇದ್ದುಕೊಂಡು ಮರಾಠಿಗರನ್ನು ಅಪಮಾನಿಸಿದ್ದಾರೆ. ಅವರಿಗೆ ವಿಶ್ವಪ್ರಸಿದ್ಧ ಕೊಲ್ಲಾಪುರದ ಚಪ್ಪಲಿಗಳನ್ನು ತೋರಿಸುವ ಅಗತ್ಯವಿದೆ' ಎಂದು ಉದ್ಧವ್ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಸುದ್ದಿ 2 ನಿಮಿಷ

ಯೂಟ್ಯೂಬ್ ನೋಡಿ ವೈನ್ ತಯಾರಿಸಿದ ಬಾಲಕ: ಕುಡಿದು ಆಸ್ಪತ್ರೆ ಸೇರಿದ ಸಹಪಾಠಿ

ತಿರುವನಂತಪುರ (ಪಿಟಿಐ): ಯೂಟ್ಯೂಬ್ ನೋಡಿ ವೈನ್ ತಯಾರಿಸಿದ್ದ ಕೇರಳದ ಶಾಲಾ ಬಾಲಕನೊಬ್ಬ ಈಗ ಸಂಕಷ್ಟಕ್ಕೆ ಸಿಲುಕಿದ್ದಾನೆ. ವೈನ್ ಸೇವಿಸಿದ್ದ ಆತನ ಸಹಪಾಠಿ ಆಸ್ಪತ್ರೆಗೆ ದಾಖಲಾಗಿದ್ದು, ಈ ಸಂಬಂಧ ಸ್ಥಳೀಯ ಪೊಲೀಸರು ಸ್ವಯಂ ಪ್ರೇರಿತ ದೂರು ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದಾರೆ.

'ಚಿರಾಯಿಂಕೀಜು ಸಮೀಪದ ಸರ್ಕಾರಿ ಶಾಲೆಯಲ್ಲಿ ಓದುತ್ತಿರುವ ಬಾಲಕ, ಮನೆಯಲ್ಲಿದ್ದ ದ್ರಾಕ್ಷಿಗಳನ್ನು ಬಳಸಿ ವೈನ್ ಸಿದ್ಧಪಡಿಸಿದ್ದ. ಅದನ್ನು ಬಾಟಲ್‌ವೊಂದರಲ್ಲಿ ತುಂಬಿಕೊಂಡು ಹೋಗಿ ತನ್ನ ಸಹಪಾಠಿಗಳಿಗೆ ನೀಡಿದ್ದ. ಅದನ್ನು ಕುಡಿದವರ ಪೈಕಿ ಒಬ್ಬ ವಾಂತಿ ಮಾಡಿಕೊಂಡಿದ್ದ. ಕೂಡಲೇ ಆತನನ್ನು ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆತನ ಆರೋಗ್ಯ ಸ್ಥಿರವಾಗಿದ್ದು, ಆಸ್ಪತ್ರೆಯಿಂದ ಶುಕ್ರವಾರ ಬಿಡುಗಡೆ ಮಾಡಲಾಗಿದೆ' ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

'ಮನೆಯಲ್ಲಿದ್ದ ದ್ರಾಕ್ಷಿಗಳಿಂದ ವೈನ್ ತಯಾರಿಸಿದ್ದ ಬಾಲಕ, ಬಳಿಕ ಯೂಟ್ಯೂಬ್‌ನಲ್ಲಿ ತೋರಿಸಿದಂತೆಯೇ ಅದನ್ನು ನೆಲದಲ್ಲಿ ಹೂತಿಟ್ಟಿದ್ದ. ಅದರಲ್ಲಿ ಯಾವುದೇ ರೀತಿಯ ರಾಸಾಯನಿಕ ಬೆರೆಸಿಲ್ಲ ಎಂದು ವಿಚಾರಣೆ ವೇಳೆ ತಿಳಿಸಿದ್ದಾನೆ. ಆತ ಸಿದ್ಧಪಡಿಸಿದ್ದ ವೈನ್‌ನ ಮಾದರಿ ಸಂಗ್ರಹಿಸಿ ಪರೀಕ್ಷೆಗಾಗಿ ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ' ಎಂದು ಅಧಿಕಾರಿಯೊಬ್ಬರು ಮಾಹಿತಿ ನೀಡಿದ್ದಾರೆ.



'ವೈನ್‌ನಲ್ಲಿ ರಾಸಾಯನಿಕ ಅಥವಾ ಇತರೆ ಯಾವುದಾದರೂ ದ್ರಾವಣ ಬೆರೆಸಿರುವುದು ದೃಢಪಟ್ಟರೆ ಬಾಲಕನ ವಿರುದ್ಧ ಬಾಲಾಪರಾಧ ಕಾಯ್ದೆಯಡಿ ಪ್ರಕರಣ ದಾಖಲಿಸಲಾಗುತ್ತದೆ. ಬಾಲಕನ ಪೋಷಕರು ಹಾಗೂ ಶಾಲಾ ಆಡಳಿತ ಮಂಡಳಿಯವರಿಗೂ ಈ ಕುರಿತ ಮಾಹಿತಿ ನೀಡಲಾಗಿದೆ' ಎಂದು ತಿಳಿಸಿದ್ದಾರೆ.

ಮಲಯಾಳ ಚಿತ್ರನಟ ಶರತ್ ಚಂದ್ರನ್ ಶವವಾಗಿ ಪತ್ತೆ

ಕೊಚ್ಚಿ (ಪಿಟಿಐ): ಮಲಯಾಳ ಚಿತ್ರನಟ ಶರತ್ ಚಂದ್ರನ್ (37) ಅವರ ಮೃತದೇಹವು ಇಲ್ಲಿನ ಕಕ್ಕಾಡ್‌ನಲ್ಲಿರುವ ಅವರ ಮನೆಯಲ್ಲಿ ಶನಿವಾರ ಪತ್ತೆಯಾಗಿದೆ.

ಶರತ್ ಅವರು ಬರೆದಿಟ್ಟಿರುವ ಪತ್ರ ಲಭಿಸಿದ್ದು, ಅವರು ಆತ್ಮಹತ್ಯೆ ಮಾಡಿಕೊಂಡಿರುವ ಶಂಕೆ ಇದೆ ಎಂದು ಪೊಲೀಸರು ತಿಳಿಸಿದ್ದಾರೆ. ತನ್ನ ಸಾವಿಗೆ ಯಾರೂ ಕಾರಣರಲ್ಲ ಎಂದು ಅವರು ಪತ್ರದಲ್ಲಿ ಬರೆದಿದ್ದಾರೆ ಎಂದೂ ಹೇಳಿದ್ದಾರೆ.

ಶರತ್ ಅವರು 'ಅಂಗಮಾಲಿ ಡೈರೀಸ್', 'ಒರು ಮೆಕ್ಸಿಕನ್ ಅಪರತ', 'ಸಿಐಎ', 'ಕೂಡೆ' ಮೊದಲಾದ ಚಿತ್ರಗಳಲ್ಲಿ ನಟಿಸಿದ್ದರು.

ಅಖಿಲ ಭಾರತ ಜಿಲ್ಲಾ ಕಾನೂನುಸೇವೆಗಳ ಪ್ರಾಧಿಕಾರಗಳ ಪ್ರಥಮ ಸಮಾವೇಶದಲ್ಲಿ ಮೋದಿ

ವಿಚಾರಣಾಧೀನ ಕೈದಿಗಳ ತ್ವರಿತ ಬಿಡುಗಡೆಗೆ ಕ್ರಮ

ನವದೆಹಲಿ: 'ವಿಚಾರಣಾಧೀನ ಕೈದಿಗಳ ಬಗ್ಗೆ ಸಂವೇದನಾಶೀಲತೆಯ ಅಗತ್ಯತೆಯನ್ನು ಸುಪ್ರೀಂಕೋರ್ಟ್ ಹಲವಾರು ಸಂದರ್ಭಗಳಲ್ಲಿ ಪ್ರತಿಪಾದಿಸಿದೆ. ಹೀಗಾಗಿ, ಸ್ವಾತಂತ್ರ್ಯದ ಅಮೃತಮಹೋತ್ಸವದ ಈ ಸಂದರ್ಭದಲ್ಲಿ ವಿಚಾರಣಾಧೀನ ಕೈದಿಗಳ ಬಿಡುಗಡೆ ಪ್ರಕ್ರಿಯೆಯನ್ನು ತ್ವರಿತಗೊಳಿಸಲು ನ್ಯಾಯಾಂಗ ಕ್ರಮ ಕೈಗೊಳ್ಳಬೇಕು' ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದರು.

ಶನಿವಾರ ಇಲ್ಲಿ ಆರಂಭವಾದ ಎರಡು ದಿನಗಳ ಅಖಿಲ ಭಾರತ ಜಿಲ್ಲಾ ಕಾನೂನುಸೇವೆಗಳ ಪ್ರಾಧಿಕಾರಗಳ ಪ್ರಥಮ ಸಮಾವೇಶವನ್ನು ಉದ್ದೇಶಿಸಿ ಅವರು ಮಾತನಾಡಿದರು.

'ವಿಚಾರಣಾಧೀನ ಕೈದಿಗಳಿಗೆ ಕಾನೂನು ನೆರವು ಒದಗಿಸುವ ಜವಾಬ್ದಾರಿಯನ್ನು ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರಿಗಳು (ಡಿಎಲ್‌ಎಸ್‌ಎ) ವಹಿಸಿಕೊಳ್ಳಬೇಕು. ಇಂಥ ಕ್ರಮಗಳಿಂದ ವಿಚಾರಣಾಧೀನ ಕೈದಿಗಳ ಬಿಡುಗಡೆ ಪ್ರಕ್ರಿಯೆಗೆ ಮತ್ತಷ್ಟೂ ವೇಗ ಸಿಗಲಿದೆ' ಎಂದು ಮೋದಿ ಹೇಳಿದರು.

'ಸುಲಲಿತ ವ್ಯಾಪಾರ, ಸುಲಲಿತ ಜೀವನದಂತೆಯೇ ನ್ಯಾಯ ನೀಡುವ ಪ್ರಕ್ರಿಯೆಯೂ ಸರಳವಾಗಿರಬೇಕು. ಸ್ವಾತಂತ್ರ್ಯೋತ್ಸವದ 75ನೇ ವರ್ಷಾಚರಣೆಯ ಈ ಸಂದರ್ಭದಲ್ಲಿ ಕೈಗೊಳ್ಳುವ ಇಂತಹ ಸಂಕಲ್ಪವು ಮುಂದಿನ 25 ವರ್ಷಗಳ ಅವಧಿಯಲ್ಲಿ ದೇಶವನ್ನು ಮತ್ತಷ್ಟೂ ಎತ್ತರಕ್ಕೆ ಕೊಂಡೊಯ್ಯುವುದು' ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಅಖಿಲ ಭಾರತ ಜಿಲ್ಲಾ ಕಾನೂನುಸೇವೆಗಳ ಪ್ರಾಧಿಕಾರಗಳ ಪ್ರಥಮ ಸಮಾವೇಶದ ಉದ್ಘಾಟನಾ ಸಮಾರಂಭದಲ್ಲಿ ಪಾಲ್ಗೊಂಡಿದ್ದ ಸುಪ್ರೀಂಕೋರ್ಟ್‌ನ ಮುಖ್ಯನ್ಯಾಯಮೂರ್ತಿ ಎನ್‌.ವಿ.ರಮಣ ಹಾಗೂ ಪ್ರಧಾನಿ ನರೇಂದ್ರ ಮೋದಿ ಅವರು ಸಮಾಲೋಚನೆಯಲ್ಲಿ ತೊಡಗಿದ್ದರು –ಪಿಟಿಐ ಚಿತ್ರ

ನ್ಯಾಯದಾನಕ್ಕೆ ಸಂಬಂಧಿಸಿದ ಪ್ರಾಚೀನ ಮೌಲ್ಯಗಳಿಗೆ ಬದ್ಧವಾಗಿರುವುದರ ಜೊತೆಗೆ 21ನೇ ಶತಮಾನದ ಆಶಯಗಳಿಗೂ ಸ್ಪಂದಿಸುವುದನ್ನು ನಮ್ಮ ನ್ಯಾಯಾಂಗ ವ್ಯವಸ್ಥೆ ಸಾಬೀತುಪಡಿಸಿದೆ

ನರೇಂದ್ರ ಮೋದಿ, ಪ್ರಧಾನಿ

ವಿಚಾರಣಾಧೀನ ಕೈದಿಗಳ ಬಿಡುಗಡೆಗೆ ಸಂಬಂಧಿಸಿ ರಾಷ್ಟ್ರೀಯ ಕಾನೂನು ಸೇವೆಗಳ ಪ್ರಾಧಿಕಾರವು (ಎನ್‌ಎಎಲ್‌ಎಸ್‌ಎ) ಕೈಗೊಂಡಿರುವ ಅಭಿಯಾನವನ್ನು ಶ್ಲಾಘಿಸಿದ ಪ್ರಧಾನಿ, ವಕೀಲರು ಹೆಚ್ಚಿನ ಸಂಖ್ಯೆಯಲ್ಲಿ ಈ ಕಾರ್ಯದಲ್ಲಿ ತೊಡಗುವಂತೆ ವಕೀಲರ ಸಂಘ ಅವರನ್ನು ಉತ್ತೇಜಿಸಬೇಕು ಎಂದರು.

ಸುಪ್ರೀಂಕೋರ್ಟ್ ಮುಖ್ಯನ್ಯಾಯಮೂರ್ತಿ ಎನ್‌.ವಿ.ರಮಣ, ನ್ಯಾಯಮೂರ್ತಿಗಳಾದ ಯು.ಯು.ಲಲಿತ್, ಡಿ.ವೈ.ಚಂದ್ರಚೂಡ್, ಕಾನೂನು ಸಚಿವ ಕಿರಣ್ ರಿಜಿಜು, ಕೇಂದ್ರ ಕಾನೂನು ಖಾತೆ ರಾಜ್ಯ ಸಚಿವ ಎಸ್.ಪಿ.ಎಸ್ ಬಘೇಲ್ ಇದ್ದರು. ಹೈಕೋರ್ಟ್‌ಗಳ ಮುಖ್ಯನ್ಯಾಯಮೂರ್ತಿಗಳು, ರಾಜ್ಯ ಕಾನೂನುಸೇವೆಗಳ ಪ್ರಾಧಿಕಾರಗಳ (ಎಸ್‌ಎಲ್‌ಎಸ್‌ಎ) ಕಾರ್ಯಕಾರಿ ಚೇರಮನ್‌ಗಳು ಹಾಗೂ ಡಿಎಲ್‌ಎಸ್‌ಎಗಳ ಚೇರಮನ್ ಪಾಲ್ಗೊಂಡಿದ್ದರು.

ಪ್ರತಿ ಜಿಲ್ಲೆಯಲ್ಲೂ 'ಕಾನೂನು ನೆರವು' ವ್ಯವಸ್ಥೆ ಸ್ಥಾಪನೆ: ನ್ಯಾಯಮೂರ್ತಿ ಲಲಿತ್

'ಬಡವರು ಹಾಗೂ ಶೋಷಿತರ ಅನುಕೂಲಕ್ಕಾಗಿ ರಾಷ್ಟ್ರೀಯ ಕಾನೂನು ಸೇವೆಗಳ ಪ್ರಾಧಿಕಾರದ (ಎನ್‌ಎಎಲ್‌ಎಸ್‌ಎ) ವತಿಯಿಂದ ಪ್ರತಿ ಜಿಲ್ಲೆಯಲ್ಲಿಯೂ ಕಾನೂನು ನೆರವು ವ್ಯವಸ್ಥೆಯನ್ನು ಆರಂಭಿಸಲಾಗುವುದು' ಎಂದು ಸುಪ್ರೀಂಕೋರ್ಟ್ ನ್ಯಾಯಮೂರ್ತಿ ಯು.ಯು.ಲಲಿತ್ ಹೇಳಿದರು.

ಪ್ರಾಧಿಕಾರದ ಕಾರ್ಯನಿರ್ವಾಹಕ ಅಧ್ಯಕ್ಷ ಕೂಡ ಆಗಿರುವ ನ್ಯಾಯಮೂರ್ತಿ ಲಲಿತ್, 'ಮೊದಲ ಹಂತದಲ್ಲಿ ದೇಶದ 350 ಜಿಲ್ಲೆಗಳಲ್ಲಿ ಈ ವ್ಯವಸ್ಥೆಯನ್ನು ಜಾರಿಗೊಳಿಸಲಾಗುವುದು' ಎಂದರು.

'ಪ್ರತಿಯೊಂದು ಜಿಲ್ಲಾ ಕಾನೂನು ಸೇವೆ ಪ್ರಾಧಿಕಾರದಲ್ಲಿ ಇ–ಗ್ರಂಥಾಲಯ ಸ್ಥಾಪಿಸಲಾಗುವುದು' ಎಂದೂ ಹೇಳಿದರು.

'ಕೋರ್ಟ್ ಮೆಟ್ಟಿಲೇರುವವರು ಕಡಿಮೆ'

'ದೇಶದ ಜನಸಂಖ್ಯೆಯಲ್ಲಿ ನ್ಯಾಯ ಕೋರಿ ಕೋರ್ಟ್ ಮೆಟ್ಟಿಲೇರುವವರ ಸಂಖ್ಯೆ ಬಹಳ ಕಡಿಮೆ. ಬಹುತೇಕ ಜನರು ಮೌನವಾಗಿಯೇ ನೋವು ಅನುಭವಿಸುತ್ತಾರೆ. ಕಾನೂನು ನೆರವು ಪಡೆಯುವ ಕುರಿತ ಅರಿವಿನ ಕೊರತೆ ಹಾಗೂ ಸೇವೆ ಲಭ್ಯವಾಗದಿರುವುದು ಇದಕ್ಕೆ ಕಾರಣ' ಎಂದು ಸುಪ್ರೀಂಕೋರ್ಟ್‌ನ ಮುಖ್ಯನ್ಯಾಯಮೂರ್ತಿ ಎನ್‌.ವಿ.ರಮಣ ಅಭಿಪ್ರಾಯಪಟ್ಟರು.

'ನ್ಯಾಯ ಪಡೆಯುವ ದಿಸೆಯಲ್ಲಿ ತಂತ್ರಜ್ಞಾನ ದೊಡ್ಡ ಶಕ್ತಿಯಾಗಿ ಹೊರಹೊಮ್ಮಿದೆ. ನ್ಯಾಯ ಪಡೆಯುವ ಪ್ರಕ್ರಿಯೆಯಲ್ಲಿ ಆಧುನಿಕ ತಂತ್ರಜ್ಞಾನ ಆಧರಿತ ಸೌಲಭ್ಯಗಳನ್ನು ಎಲ್ಲರೂ ಬಳಸಿಕೊಳ್ಳಬೇಕು' ಎಂದು ಹೇಳಿದರು.

'ಲೆಟರ್ಸ್ ಟು ಸೆಲ್ಫ್' ಆಗಸ್ಟ್‌ನಲ್ಲಿ ಮಾರುಕಟ್ಟೆಗೆ

ನವದೆಹಲಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರು ಗುಜರಾತಿ ಭಾಷೆಯಲ್ಲಿ ಬರೆದಿರುವ ಕವನಗಳನ್ನು ಇಂಗ್ಲಿಷ್‌ಗೆ ಅನುವಾದಿಸಲಾಗಿದೆ.

ಅನುವಾದಿತ ಕೃತಿ 'ಲೆಟರ್ಸ್ ಟು ಸೆಲ್ಫ್', ಆಗಸ್ಟ್‌ನಲ್ಲಿ ಮಾರುಕಟ್ಟೆಗೆ ಬಿಡುಗಡೆಯಾಗಲಿದೆ.

ಮೂಲ ಕೃತಿ 'ಆಂಖ್ ಕಾ ಧನ್ಯ ಛೆ' ಅನ್ನು 2007ರಲ್ಲಿ ಬಿಡುಗಡೆ ಮಾಡಲಾಗಿತ್ತು. ಈ ಕವನಗಳನ್ನು ಪತ್ರಕರ್ತೆ ಹಾಗೂ ಇತಿಹಾಸ ತಜ್ಞೆ ಭಾವನಾ ಸೋಮಾಯಾ ಅವರು ಇಂಗ್ಲಿಷ್‌ಗೆ ಅನುವಾದಿಸಿದ್ದು, 'ಫಿಂಗರ್‌ಪ್ರಿಂಟ್ ಪಬ್ಲಿಷಿಂಗ್' ಸಂಸ್ಥೆಯು ಪ್ರಕಟಿಸಿದೆ.

'ಪ್ರಗತಿ, ಹತಾಶೆ, ಅನ್ವೇಷಣೆ, ಧೈರ್ಯ ಹಾಗೂ ಸಹಾನುಭೂತಿಯಂತಹ ವಿಷಯಗಳನ್ನಿಟ್ಟುಕೊಂಡು ಮೋದಿ ಕವನ ರಚಿಸಿದ್ದಾರೆ. ಅವರ ಭಾವನೆಗಳ ಮಂಥನವನ್ನು ಈ ಕವನಗಳು ಹಿಡಿದಿಟ್ಟಿವೆ. ಅವರ ಉತ್ಸಾಹ, ಉಮೇದನ್ನು ಈ ಕವನಗಳಲ್ಲಿ ಕಾಣಬಹುದು' ಎಂದು ಅನುವಾದಕಿ ಭಾವನಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

'ಈ ಕೃತಿ ಕವನ ಪ್ರಿಯರಿಗೆ ಇಷ್ಟವಾಗುತ್ತವೆ. ಅನುವಾದವೂ ಅದ್ಭುತವಾಗಿದೆ' ಎಂದು ಫಿಂಗರ್‌ಪ್ರಿಂಟ್ ಪಬ್ಲಿಷಿಂಗ್‌ನ ಕಾರ್ಯನಿರ್ವಾಹಕ ಪ್ರಕಾಶಕ ಶಂತನು ದತ್ತಗುಪ್ತಾ ಹೇಳಿದ್ದಾರೆ.

ತೀಸ್ತಾ, ಶ್ರೀಕುಮಾರ್‌ಗೆ ಜಾಮೀನು ನಿರಾಕರಣೆ

ಅಹಮದಾಬಾದ್ (ಪಿಟಿಐ): ಸಾಮಾಜಿಕ ಕಾರ್ಯಕರ್ತೆ ತೀಸ್ತಾ ಸೆಟಲ್‌ವಾಡ್ ಹಾಗೂ ಮಾಜಿ ಐಪಿಎಸ್ ಅಧಿಕಾರಿ ಆರ್.ಬಿ.ಶ್ರೀಕುಮಾರ್‌ಗೆ ಜಾಮೀನು ಮಂಜೂರು ಮಾಡಲು ಇಲ್ಲಿನ ಸೆಷನ್ಸ್ ನ್ಯಾಯಾಲಯ ಶನಿವಾರ ನಿರಾಕರಿಸಿದೆ.

'ಸೆಟಲ್‌ವಾಡ್ ಹಾಗೂ ಶ್ರೀಕುಮಾರ್ ಮೇಲೆ ಗಂಭೀರ ಆರೋಪಗಳಿವೆ. ಹೀಗಾಗಿ ಅವರಿಗೆ ಜಾಮೀನು ನೀಡಲು ಸಾಧ್ಯವಿಲ್ಲ' ಎಂದು ಹೆಚ್ಚುವರಿ ಪ್ರಧಾನ ನ್ಯಾಯಾಧೀಶ ಡಿ.ಡಿ. ಠಕ್ಕರ್ ಶನಿವಾರ ಹೇಳಿದ್ದಾರೆ.

'ದೇಶದ ಮೊದಲ ಮಂಕಿಪಾಕ್ಸ್ ಸೋಂಕಿತ ಗುಣಮುಖ'

ತಿರುವನಂತಪುರ (ಪಿಟಿಐ): ದೇಶದ ಮೊದಲ ಮಂಕಿಪಾಕ್ಸ್ ಸೋಂಕು ಬಾಧಿತ ಕೇರಳದ ವ್ಯಕ್ತಿ ಗುಣಮುಖರಾಗಿದ್ದಾರೆ ಎಂದು ಅಲ್ಲಿನ ಆರೋಗ್ಯ ಸಚಿವೆ ವೀಣಾ ಜಾರ್ಜ್ ಶನಿವಾರ ತಿಳಿಸಿದ್ದಾರೆ.

ಕೊಲ್ಲಂನ 35 ವರ್ಷದ ವ್ಯಕ್ತಿಗೆ ತಿರುವನಂತಪುರದ ವೈದ್ಯಕೀಯ ಕಾಲೇಜು ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗಿದೆ ಎಂದೂ ಹೇಳಿದ್ದಾರೆ.

ರಾಷ್ಟ್ರೀಯ ವೈರಾಣು ಸಂಸ್ಥೆಯ ಸೂಚನೆಯಂತೆ ಪರೀಕ್ಷೆ ನಡೆಸಿ ವ್ಯಕ್ತಿಯು ಸೋಂಕು ಮುಕ್ತನಾಗಿರುವುದನ್ನು ದೃಢಪಡಿಸಲಾಗಿದೆ ಎಂದಿದ್ದಾರೆ.

'ಧಾರ್ಮಿಕ ದ್ವೇಷದಿಂದ ದೇಶಕ್ಕೆ ತೊಂದರೆ'

ನವದೆಹಲಿ (ಪಿಟಿಐ): ಕೆಲವರು ಧರ್ಮ ಮತ್ತು ಸಿದ್ಧಾಂತದ ಹೆಸರಿನಲ್ಲಿ ದ್ವೇಷ ಸೃಷ್ಟಿಸಲು ಪ್ರಯತ್ನಿಸುತ್ತಿದ್ದು, ಇದು ದೇಶದ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತದೆ. ಇದನ್ನು ಎದುರಿಸಲು ಧಾರ್ಮಿಕ ಮುಖಂಡರು ಸೇರಿದಂತೆ ಎಲ್ಲರೂ ಒಟ್ಟಾಗಿ ಕೆಲಸ ಮಾಡಬೇಕು ಎಂದು ಎಂದು ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ಡೊಭಾಲ್ ಹೇಳಿದರು.

ಇಲ್ಲಿನ ಕಾನ್‌ಸ್ಟಿಟ್ಯೂಷನ್ ಕ್ಲಬ್‌ನಲ್ಲಿ ಅಖಿಲ ಭಾರತ ಸೂಫಿ ಸಜ್ಜದನಾಶಿನ್ ಕೌನ್ಸಿಲ್ (ಎಐಎಸ್‌ಎಸ್‌ಸಿ) ಆಯೋಜಿಸಿದ್ದ ಸರ್ವಧರ್ಮ ಸಮ್ಮೇಳನದ ಧಾರ್ಮಿಕ ಮುಖಂಡರ ಸಮ್ಮುಖದಲ್ಲಿ ಮಾತನಾಡಿದ ಅವರು, ತಪ್ಪು ತಿಳಿವಳಿಕೆ ನಿವಾರಿಸಲು ಮತ್ತು ಧಾರ್ಮಿಕ ಸಂಸ್ಥೆಗಳು ದೇಶದ ಅವಿಭಾಜ್ಯ ಅಂಗವೆಂದು ಭಾವಿಸಲು ಪ್ರಯತ್ನಗಳ ಅಗತ್ಯವಿದೆ ಎಂದರು.

ಕೆಲವರು ಧರ್ಮದ ಹೆಸರಿನಲ್ಲಿ ದ್ವೇಷ ಸೃಷ್ಟಿಸಲು ಪ್ರಯತ್ನಿಸುತ್ತಾರೆ. ಇದು ದೇಶ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಪರಿಣಾಮ ಬೀರುತ್ತದೆ. ನಾವು ಮೂಕ ಪ್ರೇಕ್ಷಕರಾಗಲು ಸಾಧ್ಯವಿಲ್ಲ. ಧಾರ್ಮಿಕ ದ್ವೇಷ ಎದುರಿಸಲು ಒಟ್ಟಾಗಿ ಕೆಲಸ ಮಾಡಬೇಕು ಎಂದು ತಿಳಿಸಿದರು.

'ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ (ಪಿಎಫ್‌ಐ)' ಮತ್ತು ದೇಶ ವಿರೋಧಿ ಚಟುವಟಿಕೆಗಳಲ್ಲಿ ತೊಡಗಿರುವ ಇತರೆ ಸಂಘಟನೆಗಳನ್ನು ನಿಷೇಧಿಸುವ ನಿರ್ಣಯವನ್ನು ಸಮ್ಮೇಳನದಲ್ಲಿ ಧಾರ್ಮಿಕ ಮುಖಂಡರು ಅಂಗೀಕರಿಸಿದರು.

₹110 ಕೋಟಿ ಮೌಲ್ಯದ ಆಸ್ತಿ ಜಪ್ತಿ ಮಾಡಿದ ಇ.ಡಿ

ನವದೆಹಲಿ (ಪಿಟಿಐ): ಕಾರ್ವಿ ಸ್ಟಾಕ್ ಬ್ರೋಕಿಂಗ್ ಲಿಮಿಟೆಡ್ (ಕೆಎಸ್‌ಬಿಎಲ್) ಹಾಗೂ ಅದರ ಸಿಎಂಡಿ ಸಿ. ಪಾರ್ಥಸಾರಥಿ ಮತ್ತು ಇತರರ ವಿರುದ್ಧ ಅಕ್ರಮ ಹಣ ವರ್ಗಾವಣೆ ತನಿಖೆಗೆ ಸಂಬಂಧಿಸಿದಂತೆ ₹110 ಕೋಟಿಗೂ ಹೆಚ್ಚು ಮೌಲ್ಯದ ಹೊಸ ಆಸ್ತಿ ಜಪ್ತಿ ಮಾಡಲಾಗಿದೆ ಎಂದು ಜಾರಿ ನಿರ್ದೇಶನಾಲಯ (ಇ.ಡಿ) ಶನಿವಾರ ತಿಳಿಸಿದೆ.

ಕಾರ್ವಿ ಗ್ರೂಪ್ ಸುಮಾರು ₹2,800 ಕೋಟಿ ಮೌಲ್ಯದ ತಮ್ಮ ಗ್ರಾಹಕರ ಷೇರುಗಳನ್ನು ಅಕ್ರಮವಾಗಿ ಅಡವಿಟ್ಟು ದೊಡ್ಡ ಮೊತ್ತದ ಸಾಲ ಪಡೆದಿದೆ ಎಂದು ಆರೋಪಿಸಿ ಸಾಲ ನೀಡಿದ ಬ್ಯಾಂಕ್‌ಗಳ ದೂರುಗಳ ಆಧಾರದ ಮೇಲೆ ಎಫ್‌ಐಆರ್ ಆಧರಿಸಿ ಹೈದರಾಬಾದ್ ಪೊಲೀಸರು ಹಣ ವರ್ಗಾವಣೆ ಪ್ರಕರಣ ದಾಖಲಿಸಿದ್ದಾರೆ.

ಒಟ್ಟು ₹110.70 ಕೋಟಿ ಚರ ಆಸ್ತಿಯನ್ನು ಗುರುತಿಸಿ, ಜಪ್ತಿ ಮಾಡಿದೆ ಎಂದು ತನಿಖಾ ಸಂಸ್ಥೆ ಹೇಳಿಕೆಯಲ್ಲಿ ತಿಳಿಸಿದೆ. ಈ ಪ್ರಕರಣದಲ್ಲಿ ಇ.ಡಿ ಒಟ್ಟು ₹ 2,095 ಕೋಟಿ ಆಸ್ತಿಯನ್ನು ಜಪ್ತಿ ಮಾಡಿದೆ.

ಸಂಕ್ಷಿಪ್ತ ಸುದ್ದಿ

ಸ್ಪೇನ್: ಮಂಕಿಪಾಕ್ಸ್‌ನಿಂದ ಎರಡನೇ ಸಾವು

ಮ್ಯಾಡ್ರಿಡ್ (ಎಎಫ್‌ಪಿ): ಸ್ಪೇನ್‌ನಲ್ಲಿ ಮಂಕಿಪಾಕ್ಸ್ ವೈರಸ್ ಸಂಬಂಧಿತ ಮತ್ತೊಂದು ಸಾವು ಸಂಭವಿಸಿರುವುದು ವರದಿಯಾಗಿದೆ. ಈ ಮೂಲಕ ದೇಶದಲ್ಲಿ ಮಂಕಿಪಾಕ್ಸ್ ಸೋಂಕಿನಿಂದ ಮೃತಪಟ್ಟವರ ಸಂಖ್ಯೆ ಎರಡಕ್ಕೆ ಏರಿಕೆಯಾಗಿದೆ.

'ಒಟ್ಟು 3,750 ರೋಗಿಗಳ ಪೈಕಿ 120 ಮಂದಿ ಆಸ್ಪತ್ರೆಗೆ ದಾಖಲಾಗಿದ್ದಾರೆ. ಇಬ್ಬರು ಮೃತಪಟ್ಟಿದ್ದಾರೆ' ಎಂದು ಆರೋಗ್ಯ ಸಚಿವಾಲಯ ವರದಿಯಲ್ಲಿ ತಿಳಿಸಿದೆ.

ಆರೋಗ್ಯ ಇಲಾಖೆ ಪ್ರಕಾರ ಸ್ಪೇನ್‌ನಲ್ಲಿ ಈವರೆಗೆ 4,298 ಜನರಿಗೆ ಸೋಂಕು ತಗುಲಿದೆ.

ಮಂಕಿಪಾಕ್ಸ್‌ಗೆ ಸ್ಪೇನ್‌ನಲ್ಲಿ ಶುಕ್ರವಾರ ವ್ಯಕ್ತಿಯೊಬ್ಬರು ಮೃತಪಟ್ಟಿದ್ದರು. ಇದನ್ನು ಐರೋಪ್ಯ ಒಕ್ಕೂಟದ ರಾಷ್ಟ್ರಗಳಲ್ಲಿ ಮಂಕಿಪಾಕ್ಸ್‌ನಿಂದ ಸಂಭವಿಸಿದ ಮೊದಲ ಸಾವು ಎಂದು ಸ್ಪೇನಿನ ಮಾಧ್ಯಮಗಳು ವರದಿ ಮಾಡಿದ್ದವು. ಬ್ರೆಜಿಲ್‌ನಲ್ಲೂ ಶುಕ್ರವಾರ ಮಂಕಿಪಾಕ್ಸ್ ಸಂಬಂಧಿತ ಒಂದು ಸಾವು ಸಂಭವಿಸಿತ್ತು.

ರಾಷ್ಟ್ರೀಯ ಸರ್ಕಾರ ರಚನೆಗೆ ವಿಕ್ರಮಸಿಂಘೆ ಕರೆ

ಕೊಲಂಬೊ (ಪಿಟಿಐ): ಆರ್ಥಿಕ ಬಿಕ್ಕಟ್ಟಿನಲ್ಲಿರುವ ಶ್ರೀಲಂಕಾದ ಪುನಃಶ್ಚೇತನ ಉದ್ದೇಶದಿಂದ ಸರ್ವಪಕ್ಷಗಳ ರಾಷ್ಟ್ರೀಯ ಸರ್ಕಾರ ರಚನೆಗೆ ಮುಂದಾಗುವಂತೆ ಅಧ್ಯಕ್ಷ ರಾನಿಲ್ ವಿಕ್ರಮಸಿಂಘೆ ಅವರು ಸಂಸತ್ ಸದಸ್ಯರಿಗೆ ಪತ್ರ ಬರೆದಿದ್ದಾರೆ.

'ಆರ್ಥಿಕ ಬಿಕ್ಕಟ್ಟಿನಿಂದ ನಿರ್ಮಾಣವಾಗಿರುವ ಸಾಮಾಜಿಕ ಮತ್ತು ರಾಜಕೀಯ ಕ್ಷೋಭೆಗಳನ್ನು ಬಗೆಹರಿಸಲು ಸರ್ಕಾರ ಸಾಕಷ್ಟು ಕ್ರಮಗಳನ್ನು ಕೈಗೊಳ್ಳುತ್ತಿದೆ. ಅದೇ ರೀತಿ ಆರ್ಥಿಕ ಸ್ಥಿರತೆಗೆ ವ್ಯವಸ್ಥಿತ ಆರ್ಥಿಕ ಕಾರ್ಯಕ್ರಮಗಳ ಅನುಷ್ಠಾನ ಅಗತ್ಯವಾಗಿದೆ. ಇದಕ್ಕೆ ಎಲ್ಲಾ ರಾಜಕೀಯ ಪಕ್ಷಗಳ ಸಹಭಾಗಿತ್ವ ಅತ್ಯಗತ್ಯ' ಎಂದು ಅವರು ಪತ್ರದಲ್ಲಿ ತಿಳಿಸಿದ್ದಾರೆ.

ಹಣದುಬ್ಬರ ಶೇ 60ಕ್ಕೆ ಏರಿಕೆ: ಶ್ರೀಲಂಕಾದ ಆರ್ಥಿಕ ಬಿಕ್ಕಟ್ಟಿನಿಂದ ಅಲ್ಲಿನ ಹಣದುಬ್ಬರ ದಿನೇ ದಿನೇ ಏರಿಕೆಯಾಗುತ್ತಾ ಸಾಗಿದೆ. ಜುಲೈ ತಿಂಗಳಲ್ಲಿ ದೇಶದ ಹಣದುಬ್ಬರ ಪ್ರಮಾಣ ಶೇ 60.8ರಷ್ಟು ದಾಖಲಾಗಿದೆ. ಜೂನ್ ತಿಂಗಳಲ್ಲಿ ಇದು ಶೇ 54.6ರಷ್ಟಿತ್ತು ಎಂದು ಶ್ರೀಲಂಕಾದ ಅಂಕಿ ಸಂಖ್ಯಾ ಇಲಾಖೆ ಶನಿವಾರ ತಿಳಿಸಿದೆ.

ಮೊಕ್ತಾದ ಸಾದರ್ ಅವರ ಸಾವಿರಾರು ಬೆಂಬಲಿಗರು ಶನಿವಾರ ಇರಾಕ್ ಸಂಸತ್ತಿನೊಳಗೆ ನುಗ್ಗಿದ್ದರು –ಎಎಫ್‌ಪಿ ಚಿತ್ರ

ಇರಾಕ್: ಮತ್ತೊಮ್ಮೆ ಸಂಸತ್‌ಗೆ ನುಗ್ಗಿದ ಸಾದರ್ ಬೆಂಬಲಿಗರು

ಬಾಗ್ದಾದ್ (ಎಪಿ): ಶಿಯಾ ಧರ್ಮಗುರು ಮೊಕ್ತಾದ ಸಾದರ್ ಅವರ ಸಾವಿರಾರು ಬೆಂಬಲಿಗರು ಮತ್ತೊಮ್ಮೆ ಸಂಸತ್ತಿಗೆ ನುಗ್ಗಿ ಇರಾಕ್ ಧ್ವಜಗಳನ್ನು ಹಾರಿಸಿದ್ದಾರೆ.

ಪ್ರತಿಭಟನಕಾರರನ್ನು ಚದುರಿಸಲು ಪೊಲೀಸರು ಶನಿವಾರ ಅಶ್ರುವಾಯು, ಭಾರಿ ಶಬ್ದ ಮತ್ತು ಬೆಳಕು ಬರುವ ಬಾಂಬ್‌ಗಳನ್ನು (ಸೌಂಡ್ ಬಾಂಬ್) ಸಿಡಿಸಿದ್ದರಿಂದ ಸುಮಾರು 60 ಮಂದಿ ಗಾಯಗೊಂಡಿದ್ದಾರೆ.

ಎದುರಾಳಿ ಬಣದವರು ಪ್ರಧಾನಿ ಹುದ್ದೆಗೆ ಮೊಹಮ್ಮದ್ ಅಲ್ ಸುದಾನಿ ಅವರನ್ನು ಅಭ್ಯರ್ಥಿಯನ್ನಾಗಿ ಘೋಷಿಸಿರುವುದರಿಂದ ಕೆರಳಿರುವ ಸಾದರ್ ಬೆಂಬಲಿಗರು ಮುಖ್ಯದ್ವಾರದ ಬಳಿ ಅಳವಡಿಸಲಾಗಿದ್ದ ಸಿಮೆಂಟ್ ತಡೆಗೋಡೆಗಳನ್ನು ರೋಪ್‌ಗಳ ಮೂಲಕ ದಾಟಿ ಸಂಸತ್‌ನೊಳಗೆ ಪ್ರವೇಶಿಸಿದ್ದಾರೆ.

'ಭ್ರಷ್ಟಚಾರ ತೊಡೆದುಹಾಕಿ, ಭ್ರಷ್ಟ ರಾಜಕಾರಣಿಗಳು ಸಂಸತ್ತಿನ ಕಲಾಪದಲ್ಲಿ ಭಾಗವಹಿಸದಂತೆ ತಡೆಯಿರಿ ಎಂದು ಸಾದರ್ ಕರೆ ನೀಡಿದ್ದಾರೆ. ಅವರ ಕರೆಗೆ ಓಗೊಟ್ಟು ನಾವು ಪ್ರತಿಭಟನೆ ನಡೆಸಲು ಬಂದಿದ್ದೇವೆ' ಎಂದು 41 ವರ್ಷದ ರಾಡ್ ಥಾಬೆಟ್ ಎಂಬುವರು ಹೇಳಿದ್ದಾರೆ.

ಪ್ರತಿಭಟನೆ ಕಾರಣ ಶನಿವಾರ ನಿಗದಿಯಾಗಿದ್ದ ಸಂಸತ್ ಕಲಾಪ ರದ್ದು ಮಾಡಲಾಗಿದೆ. ಬುಧವಾರ ಮೊದಲ ಸಲ ಸಂಸತ್ತಿನೊಳಗೆ ನುಗ್ಗಿದ್ದ ಸಾದರ್ ಬೆಂಬಲಿಗರು ಹಾಡಿ–ಕುಣಿದಾಡಿದ್ದರು.

ನಿವೃತ್ತಿ ಇಂಗಿತ ವ್ಯಕ್ತಪಡಿಸಿದ ಪೋಪ್ ಫ್ರಾನ್ಸಿಸ್

ವ್ಯಾಟಿಕನ್ ಸಿಟಿ (ಎಪಿ): 'ಮೊಣಕಾಲು ನೋವಿನ ಕಾರಣದಿಂದ ಈ ಹಿಂದಿನಂತೆ ಓಡಾಡಲು ಸಾಧ್ಯವಾಗುತ್ತಿಲ್ಲ. ಒಂದು ವಾರದ ಕೆನಡಾ ಯಾತ್ರೆಯಲ್ಲಿ ನನ್ನ ಸಾಮರ್ಥ್ಯದ ಪರೀಕ್ಷೆ ನಡೆದಿದೆ. ಒಂದು ದಿನ ನಿವೃತ್ತಿ ಪಡೆಯಬೇಕಾಗುತ್ತದೆ ಎನ್ನುವುದನ್ನು ತೋರಿಸಿದೆ' ಎಂದು ಪೋಪ್ ಫ್ರಾನ್ಸಿಸ್ ಶನಿವಾರ ತಿಳಿಸಿದ್ದಾರೆ.

'ರಾಜೀನಾಮೆಯ ಯೋಚನೆ ಬಂದಿಲ್ಲ, ಆದರೆ 'ಬಾಗಿಲು ತೆರೆದಿದೆ' ಮತ್ತು ಹುದ್ದೆಯಿಂದ ಕೆಳಗಿಳಿಯುವುದರಲ್ಲಿ ಯಾವುದೇ ತಪ್ಪಿಲ್ಲ. ನೀವು ಪೋಪ್ ಅನ್ನು ಬದಲಾಯಿಸಬಹುದು' ಎಂದು ಪೋಪ್ ಹೇಳಿದ್ದಾರೆ.

ಬಾಂಗ್ಲಾ: ಮಿನಿಬಸ್‌ಗೆ ರೈಲು ಡಿಕ್ಕಿ– 11 ಸಾವು

ಢಾಕಾ (ಪಿಟಿಐ): ಬಾಂಗ್ಲಾದೇಶದ ಚಿತ್ತಗಾಂಗ್ ಜಿಲ್ಲೆಯಲ್ಲಿ ಕಾವಲುಗಾರರಿಲ್ಲದ ಲೆವಲ್ ಕ್ರಾಸಿಂಗ್‌ನಲ್ಲಿ ಮಿನಿ ಬಸ್‌ಗೆ ರೈಲು ಡಿಕ್ಕಿ ಹೊಡೆದ ಪರಿಣಾಮ 11 ಜನರು ಮೃತಪಟ್ಟಿದ್ದಾರೆ. ಮೃತಪಟ್ಟವರಲ್ಲಿ ಏಳು ವಿದ್ಯಾರ್ಥಿಗಳು ಮತ್ತು ನಾಲ್ವರು ಶಿಕ್ಷಕರಾಗಿದ್ದಾರೆ ಎಂದು ಢಾಕಾ ಟ್ರಿಬ್ಯೂನ್ ವರದಿ ಮಾಡಿದೆ.

ಚಿತ್ತಗಾಂಗ್‌ನ ಮಿರ್ಶರಾಯ್ ಪ್ರದೇಶದ ರೈಲ್ವೆ ಕ್ರಾಸಿಂಗ್ ಅನ್ನು ಮಿನಿ ಬಸ್ ದಾಟುತ್ತಿದ್ದ ಸಂದರ್ಭದಲ್ಲಿ ಢಾಕಾ– ಬೌಂಡ್ ಪ್ರೋವತಿ ಎಕ್ಸ್‌ಪ್ರೆಸ್ ಗುದ್ದಿ, ನೂರಾರು ಮೀಟರ್‌ನಷ್ಟು ದೂರಕ್ಕೆ ಬಸ್ ಅನ್ನು ಎಳೆದುಕೊಂಡು ಹೋಗಿದೆ. ಈ ಮಿನಿ ಬಸ್‌ನಲ್ಲಿದ್ದವರ ಪೈಕಿ 11 ಮಂದಿ ಸ್ಥಳದಲ್ಲಿಯೇ ಮೃತಪಟ್ಟಿದ್ದರೆ, ಏಳು ಮಂದಿ ತೀವ್ರಗಾಯಗೊಂಡಿದ್ದರು ಎಂದು ಪತ್ರಿಕೆ ಹೇಳಿದೆ.

ಅತ್ಯಾಚಾರ ಪ್ರಕರಣ

'ಡಿಎನ್‌ಎ ಪರೀಕ್ಷೆಯೇ ಅಂತಿಮ ಸಾಕ್ಷ್ಯವಲ್ಲ'

ಮುಂಬೈ (ಪಿಟಿಐ): 'ಅತ್ಯಾಚಾರ ಪ್ರಕರಣದಲ್ಲಿ ಡಿಎನ್‌ಎ ಪರೀಕ್ಷೆಯನ್ನೇ ಅಂತಿಮ ಸಾಕ್ಷ್ಯವೆಂದು ಪರಿಗಣಿಸಲಾಗುವುದಿಲ್ಲ. ಅತ್ಯಾಚಾರ ನಡೆದಿದೆಯೇ ಇಲ್ಲವೇ ಎಂಬುದನ್ನು ದೃಢೀಕರಿಸುವುದಕ್ಕಷ್ಟೇ ಅದನ್ನು ನಡೆಸಲಾಗುತ್ತದೆ' ಎಂದು ಬಾಂಬೆ ಹೈಕೋರ್ಟ್ ಹೇಳಿದೆ.

ನೆರೆಮನೆಯ ಬಾಲಕಿ ಮೇಲೆ ನಿರಂತರ ಅತ್ಯಾಚಾರ ನಡೆಸಿದ ಆರೋಪದಡಿ ಬಂಧಿತನಾಗಿರುವ ಮುಂಬೈ ಮೂಲದ ವ್ಯಕ್ತಿ ಸಲ್ಲಿಸಿದ್ದ ಜಾಮೀನು ಅರ್ಜಿಯ ವಿಚಾರಣೆ ವೇಳೆ ನ್ಯಾಯಾಧೀಶೆ ಭಾರತಿ ಡಾಂಗ್ರೆ ಈ ರೀತಿ ಅಭಿಪ್ರಾಯಪಟ್ಟಿದ್ದು, ಜಾಮೀನು ಅರ್ಜಿ ತಿರಸ್ಕರಿಸಿದ್ದಾರೆ.

'ಒಂದೊಮ್ಮೆ ಡಿಎನ್‌ಎ ಪರೀಕ್ಷೆಯ ವರದಿ 'ನೆಗೆಟಿವ್' ಬಂದರೆ, ಸಂತ್ರಸ್ತೆ ಹೇಳಿರುವುದನ್ನೆಲ್ಲಾ ಸುಳ್ಳು ಎನ್ನಲಾಗದು. ಏಕೆಂದರೆ ಸಿಆರ್‌ಪಿಸಿ ಸೆಕ್ಷನ್ 164ರಡಿ ಸಂತ್ರಸ್ತೆ ಹಾಗೂ ಆಕೆಯ ತಾಯಿಯ ಹೇಳಿಕೆ ದಾಖಲಿಸಲಾಗಿರುತ್ತದೆ. ಸಂತ್ರಸ್ತೆಯು ಘಟನೆಯನ್ನು ಎಳೆ ಎಳೆಯಾಗಿ ಬಿಚ್ಚಿಟ್ಟಿರುತ್ತಾಳೆ' ಎಂದು ಡಾಂಗ್ರೆ ತಿಳಿಸಿದ್ದಾರೆ.

'ಆರೋಪಿಯು ಪ್ರಕರಣ ಮುಚ್ಚಿಹಾಕಲು ಬಾಲಕಿಗೆ ಹಣದ ಆಮಿಷವೊಡ್ಡಿದ್ದಾನೆ. ಅತ್ಯಾಚಾರದ ವಿಚಾರ ಯಾರಿಗೂ ಹೇಳದಂತೆ ಬೆದರಿಸಿದ್ದಾನೆ. ಗರ್ಭಿಣಿ ಎಂಬುದು ದೃಢಪಟ್ಟ ಬಳಿಕ ಆಕೆಯು ಆರೋಪಿ ಬಲವಂತವಾಗಿ ತನ್ನ ಮೇಲೆ ಅತ್ಯಾಚಾರ ನಡೆಸಿರುವ ವಿಚಾರವನ್ನು ಪೋಷಕರ ಬಳಿ ಹೇಳಿದ್ದಾಳೆ. ಆರೋಪಿಯು ಮಗುವಿನ ತಂದೆಯಲ್ಲ ಎಂಬುದು ಡಿಎನ್‌ಎ ಪರೀಕ್ಷೆಯಿಂದ ದೃಢಪಟ್ಟಿರಬಹುದು. ಹಾಗಂತ ಬಾಲಕಿಯ ಹೇಳಿಕೆ ತಳ್ಳಿಹಾಕುವುದು ಅಸಾಧ್ಯ' ಎಂದೂ ಹೇಳಿದ್ದಾರೆ.

ಅತ್ಯಾಚಾರ ಪ್ರಕರಣದಡಿ ಆರೋಪಿಯನ್ನು 2020ರ ಸೆಪ್ಟೆಂಬರ್‌ನಲ್ಲಿ ಪೊಲೀಸರು ಬಂಧಿಸಿದ್ದರು. ಆತನು 10 ದಿನಗಳ ಕಾಲ ನಿರಂತರವಾಗಿ ಬಾಲಕಿ ಮೇಲೆ ಅತ್ಯಾಚಾರ ಎಸಗಿದ್ದ. ಕೆಲದಿನಗಳ ಬಳಿಕ ಬಾಲಕಿಗೆ ಹೊಟ್ಟೆನೋವು ಕಾಣಿಸಿಕೊಂಡಿತ್ತು. ಆಕೆ ಗರ್ಭಿಣಿಯಾಗಿರುವುದು ವೈದ್ಯಕೀಯ ಪರೀಕ್ಷೆಯಿಂದ ದೃಢಪಟ್ಟಿತ್ತು. ಮುಂಬೈನ ನೆರುಲ್ ಪೊಲೀಸ್ ಠಾಣೆಯಲ್ಲಿ ಆರೋಪಿಯ ವಿರುದ್ಧ ಎಫ್‌ಐಆರ್ ದಾಖಲಿಸಿ ಬಳಿಕ ಬಂಧಿಸಲಾಗಿತ್ತು ಎಂದು ಆರೋಪಪಟ್ಟಿಯಲ್ಲಿ ತಿಳಿಸಲಾಗಿದೆ.

ಕಾರ್ಗಿಲ್ ಯುದ್ಧ: ಪಾಯಿಂಟ್ 5140 ಈಗ 'ಗನ್ ಹಿಲ್'

ಶ್ರೀನಗರ (ಪಿಟಿಐ): ಭಾರತೀಯ ಸಶಸ್ತ್ರ ಪಡೆಗಳ ವಿಜಯದ ಸ್ಮರಣಾರ್ಥ ಮತ್ತು 'ಆಪರೇಷನ್ ವಿಜಯ್'ನಲ್ಲಿ ಸೈನಿಕರ ಪರಮೋಚ್ಚ ತ್ಯಾಗಕ್ಕೆ ಗೌರವ ಸಲ್ಲಿಸಲು ಕಾರ್ಗಿಲ್‌ನ ಡ್ರಾಸ್‌ನಲ್ಲಿರುವ ಪಾಯಿಂಟ್ 5140 ಅನ್ನು 'ಗನ್ ಹಿಲ್' ಎಂದು ನಾಮಕರಣ ಮಾಡಲಾಗಿದೆ ಎಂದು ರಕ್ಷಣಾ ವಕ್ತಾರರು ಶನಿವಾರ ತಿಳಿಸಿದರು.

ಆಪರೇಷನ್ ವಿಜಯ್‌ನಲ್ಲಿ 'ಕಾರ್ಗಿಲ್' ಎಂಬ ಗೌರವ ಪ್ರಶಸ್ತಿಯನ್ನು ಪಡೆದ ಎಲ್ಲಾ ಫಿರಂಗಿ ರೆಜಿಮೆಂಟ್‌ಗಳ ಅನುಭವಿಗಳ ಉಪಸ್ಥಿತಿಯಲ್ಲಿ ಸಮಾರಂಭವನ್ನು ನಡೆಸಲಾಯಿತು. ಈ ವೇಳೆ ಮಾತನಾಡಿದ ರಕ್ಷಣಾ ವಕ್ತಾರರು, 'ಮಾರಕ ಮತ್ತು ನಿಖರವಾದ ಬಂದೂಕು ಶಕ್ತಿ, ಫಿರಂಗಿ ರೆಜಿಮೆಂಟ್‌ನೊಂದಿಗೆ, ಪಾಯಿಂಟ್ 5140 ಸ್ಥಳವೂ ಸೇರಿದಂತೆ ಶತ್ರು ಪಡೆಗಳಿಗೆ ತಕ್ಕ ಉತ್ತರವನ್ನು ನೀಡಲು ಸಾಧ್ಯವಾಯಿತು. ಇದು 1999ರ ಕಾರ್ಗಿಲ್ ಯುದ್ಧ ತ್ವರಿತವಾಗಿ ಕೊನೆಗೊಳ್ಳಲು ಪ್ರಮುಖ ಕಾರಣವಾಯಿತು' ಎಂದರು.

₹34 ಸಾವಿರ ಕೋಟಿ ಮೊತ್ತದ ಡಿಎಚ್‌ಎಫ್‌ಎಲ್ ಹಗರಣ

ಆಗಸ್ಟಾ ವೆಸ್ಟ್‌ಲ್ಯಾಂಡ್ ಹೆಲಿಕಾಪ್ಟರ್ ಜಪ್ತಿ

ನವದೆಹಲಿ (ಪಿಟಿಐ): ₹34 ಸಾವಿರ ಕೋಟಿ ಮೊತ್ತದ ಡಿಎಚ್‌ಎಫ್‌ಎಲ್ ಹಗರಣಕ್ಕೆ ಸಂಬಂಧಪಟ್ಟಂತೆ ಪುಣೆಯ ರಿಯಲ್ ಎಸ್ಟೇಟ್ ಉದ್ಯಮಿ ಅವಿನಾಶ್ ಭೋಸಲೆ ಅವರಿಗೆ ಸೇರಿದ ಜಾಗದಿಂದ ಆಗಸ್ಟಾ ವೆಸ್ಟ್‌ಲ್ಯಾಂಡ್ ಹೆಲಿಕಾಪ್ಟರ್ ಅನ್ನು ಸಿಬಿಐ ಅಧಿಕಾರಿಗಳು ಶನಿವಾರ ಜಪ್ತಿ ಮಾಡಿದ್ದಾರೆ.

2011ರಲ್ಲಿ, 'ವ್ಯಕ್ತಿಗಳ ಗುಂಪಿ'ನ (ಅಸೋಸಿಯೇಷನ್ ಆಫ್ ಪರ್ಸನ್ಸ್) ಒಡೆತನದ ವಾರ್ವಾ ಏವಿಯೇಷನ್ ಕಂಪನಿಯು ಈ ಹೆಲಿಕಾಪ್ಟರ್ ಅನ್ನು (ಎಡಬ್ಲ್ಯು109 ಎಸ್‌ಪಿ) ₹36 ಕೋಟಿಗೆ ಖರೀದಿಸಿತ್ತು. ಡಿಎಚ್‌ಎಫ್‌ಎಲ್ ಗ್ರೂಪ್ ಒಡೆತನದಲ್ಲಿರುವ ಆರ್‌ಕೆಡಬ್ಲ್ಯು ಡೆವಲಪರ್ಸ್ ಪ್ರೈ.ಲಿ. ಸಂಸ್ಥೆಯು 2017ರಲ್ಲಿ ಕೋಟ್ಯಂತರ ರೂಪಾಯಿ ತೆತ್ತು ವ್ಯಕ್ತಿಗಳ ಗುಂಪಿನ ಸದಸ್ಯತ್ವ ಪಡೆದಿತ್ತು ಎಂದು ಹೇಳಲಾಗಿದೆ.

ಆರ್‌ಕೆಡಬ್ಲ್ಯು ಡೆವಲಪರ್ಸ್ ಸಂಸ್ಥೆಯು 17 ವಿವಿಧ ಬ್ಯಾಂಕ್‌ಗಳ ಒಕ್ಕೂಟದಿಂದ ₹34,615 ಕೋಟಿ ಸಾಲ ಪಡೆದು ವಂಚಿಸಿದ ಆರೋಪ ಎದುರಿಸುತ್ತಿದೆ. ಹೆಲಿಕಾಪ್ಟರ್ ಖರೀದಿಗೆ ಈ ಹಣ ಬಳಸಿಕೊಳ್ಳಲಾಗಿದೆ. ಜೊತೆಗೆ ವ್ಯಕ್ತಿಗಳ ಗುಂಪಿನಲ್ಲಿ ಪಾಲು ಖರೀದಿಸಲೂ ಈ ಸಾಲದ ಹಣವನ್ನು ಆರ್‌ಕೆಡಬ್ಲ್ಯು ಡೆವಲಪರ್ಸ್ ಬಳಸಿಕೊಂಡಿದೆ ಎನ್ನಲಾಗಿದೆ.

ಪುಣೆಯ ರಿಯಲ್ ಎಸ್ಟೇಟ್ ಉದ್ಯಮಿ ಅವಿನಾಶ್ ಭೋಸಲೆ ಅವರಿಗೆ ಸೇರಿದ ಜಾಗದಲ್ಲಿ ಜಪ್ತಿ ಮಾಡಲಾದ ಆಗಸ್ಟಾ ವೆಸ್ಟ್‌ಲ್ಯಾಂಡ್ ಹೆಲಿಕಾಪ್ಟರ್–ಪಿಟಿಐ ಚಿತ್ರ

ಹೂಡಿಕೆ ಬಗ್ಗೆ ಮಾಹಿತಿ ಸಿಕ್ಕ ಬಳಿಕ, ಸಿಬಿಐ ಅಧಿಕಾರಿಗಳು ಹೆಲಿಕಾಪ್ಟರ್ ಅನ್ನು ಜಪ್ತಿ ಮಾಡಿದ್ದಾರೆ. ಡಿಎಚ್‌ಎಫ್‌ಎಲ್ ಹಾಗೂ ಯೆಸ್ ಬ್ಯಾಂಕ್‌ಗೆ ಸಂಬಂಧಿಸಿದ ಪ್ರತ್ಯೇಕ ಪ್ರಕರಣವೊಂದರಲ್ಲಿ ಸಿಬಿಐ ಅಧಿಕಾರಿಗಳು ಭೋಸಲೆ ವಿರುದ್ಧ ಇತ್ತೀಚೆಗೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು.

₹34 ಸಾವಿರ ಕೋಟಿ ಮೊತ್ತದ ಈ ಹಗರಣ ಕುರಿತಂತೆ ಕೇಂದ್ರೀಯ ತನಿಖಾ ಸಂಸ್ಥೆಯು ದಿವಾನ್ ಹೌಸಿಂಗ್ ಫೈನಾನ್ಸ್ ಲಿ., ವಾಧ್ವಾನಾ ಸಹೋದರರು ಹಾಗೂ ಇತರರ ವಿರುದ್ಧ ಜೂನ್ 20ರಂದು ಪ್ರಕರಣ ದಾಖಲಿಸಿಕೊಂಡಿತ್ತು.

ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ ನೇತೃತ್ವದ 17 ಬ್ಯಾಂಕ್‌ಗಳ ಒಕ್ಕೂಟ ನೀಡಿದ್ದ ಸಾಲದ ಹಣವನ್ನು ಡಿಎಚ್‌ಎಫ್‌ಎಲ್‌ನ ನಕಲಿ ಖಾತೆ ಪುಸ್ತಕಗಳನ್ನು ಸೃಷ್ಟಿಸಿ ಬೇರೆಡೆಗೆ ವಿನಿಯೋಗಿಸಲಾಗಿದೆ ಎಂದು ಆರೋಪಿಸಲಾಗಿದೆ.

ಡಿಎಚ್‌ಎಫ್‌ಎಲ್‌ನಲ್ಲಿದ್ದ ಸಾರ್ವಜನಿಕರ ಹಣವನ್ನು ಪರ್ಯಾಯ ಖಾತೆ ಎಂದು ಕರೆಯಲಾಗುವ 'ಬಾಂದ್ರಾ ಬುಕ್ಸ್' ವ್ಯವಸ್ಥೆ ಹಾಗೂ ಶೆಲ್ (ಹಣ ಅಕ್ರಮ ವರ್ಗಾವಣೆಗಾಗಿ ಸೃಷ್ಟಿಸಿದ ಕಂಪನಿ) ಕಂಪನಿಗಳ ಮೂಲಕ ರಿಟೇಲ್ ಸಾಲದ ಹೆಸರಿನಲ್ಲಿ ನಕಲಿ ಕಂಪನಿಗಳಿಗೆ ವಿತರಣೆ ಮಾಡಲಾಗಿದೆ ಎಂಬ ಆರೋಪವೂ ಇದೆ. ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ ನೀಡಿದ ದೂರಿನ ಮೇಲೆ ಸಿಬಿಐ ಕ್ರಮ ತೆಗೆದುಕೊಂಡಿದೆ.

ಅಧಿಕಾರ ಕ್ರೌರ್ಯದ ಫಲ ಫೂಲನ್ 13

ಧುಮ್ಮಿಕ್ಕಿತು ಕ್ಷೀರಸಾಗರ! 15

ಜನಕುಂಡ ಭರತಖಂಡ!

ಕಲೆ: ಎನ್.ಎಸ್. ಹರ್ಷ

ಜಗತ್ತಿನ ಜನಸಂಖ್ಯಾ ಗ್ರಾಫ್‌ನಲ್ಲಿ ಭಾರತ ಇನ್ನೇನು ಚೀನಾ ದೇಶವನ್ನು ಹಿಂದಿಕ್ಕಿ ಮೊದಲಿಗನಾಗುವ ದಿನಗಳು ಹತ್ತಿರವಾಗಿವೆ. ಇಷ್ಟೊಂದು ಮಾನವ ಸಂಪನ್ಮೂಲವನ್ನು ಹೊಂದಿರುವ ಯಾವುದೇ ದೇಶ ಮನಸ್ಸು ಮಾಡಿದರೆ ಅಭಿವೃದ್ಧಿಯಲ್ಲಿ ದಾಪುಗಾಲು ಹಾಕಬಹುದು. ಆದರೆ, ನಮ್ಮ ಯುವಶಕ್ತಿಯ ಮುಂದೆ ನಿರುದ್ಯೋಗ ಸಮಸ್ಯೆ ದೈತ್ಯಾಕಾರವಾಗಿ ಬೆಳೆದು ನಿಂತಿದೆ. ಕಿಕ್ಕಿರಿದು ತುಂಬಿರುವ ನಗರಗಳು ಜನರಿಗೆ ಸೌಲಭ್ಯ ಒದಗಿಸಲಾಗದೆ ಸೋತಿವೆ. ಜನಸಂಖ್ಯೆಯ ಶಕ್ತಿ ಹಾಗೂ ಭಾರ ಎರಡನ್ನೂ ಹೊತ್ತುಕೊಂಡ ಭಾರತ ಅಭಿವೃದ್ಧಿಯತ್ತ ಸಾಗುವ ಹಾದಿ ಎಲ್ಲಿದೆ?

ಎಂ.ವಿ. ಕೇಶವಮೂರ್ತಿ

ದೃಶ್ಯ-1

ಸಮಯ: 2050ನೆಯ ಇಸವಿ ಒಂದು ಮುಂಜಾನೆ ಒಂಬತ್ತೂವರೆ ಗಂಟೆ, ಸ್ಥಳ: ಬೆಂಗಳೂರಿನ ಸಿಲ್ಕ್ ಬೋರ್ಡ್ ಜಂಕ್ಷನ್

ಕಣ್ಣು ಹಾಯಿಸಿದಷ್ಟು ಉದ್ದಕ್ಕೂ ವಾಹನಗಳ ಸಾಲು, ಎಲೆಕ್ಟ್ರಾನಿಕ್ ಸಿಟಿಯಲ್ಲಿ ಕಂಪನಿಯೊಂದರ ಉದ್ಯೋಗಿಯಾದ ನವೀನ್ ಬೆಳಿಗ್ಗೆ ಆರೂವರೆಗೆಲ್ಲ ಹೆಬ್ಬಾಳದ ಮನೆಯಿಂದ ಎಲೆಕ್ಟ್ರಾನಿಕ್ ಸಿಟಿಯ ತನ್ನ ಕಚೇರಿಯತ್ತ ಹೊರಟ. ಸುಮಾರು ಏಳೂವರೆ ಹೊತ್ತಿಗೆ ಸಿಲ್ಕ್ ಬೋರ್ಡ್ ಜಂಕ್ಷನ್‌ಗಿಂತ ಒಂದು ಕಿಲೊಮೀಟರ್ ಹಿಂದೆ ಟ್ರಾಫಿಕ್‌ನಲ್ಲಿ ಸಿಕ್ಕಿ ಹಾಕಿಕೊಂಡ. ಒಂಬತ್ತೂವರೆಯಾದರೂ ಟ್ರಾಫಿಕ್ ಸುಳಿಯಿಂದ ಹೊರಬರಲಾಗದೆ ಒದ್ದಾಡಿದ. ಹೀಗಾಗಿ ಇಂದೂ ಕಚೇರಿಗೆ ಸರಿಯಾದ ಸಮಯಕ್ಕೆ ತಲುಪುವುದು ಅನುಮಾನ. ಕಚೇರಿ ತಲುಪುವಾಗ ಬೆಳಿಗ್ಗೆ ಐದು ನಿಮಿಷ ತಡವಾದರೂ ಸರಿ, ಸಂಜೆ ಅಷ್ಟೇ ಸಮಯ ಹೆಚ್ಚು ಕೆಲಸ ಮಾಡಿ ನಷ್ಟ ತೂಗಿಸಬೇಕು.

ದಿನಕ್ಕೆ ಎಂಟು ಗಂಟೆ ಕೆಲಸದ ವ್ಯವಸ್ಥೆ ಹೊರಟುಹೋಗಿ ಯಾವುದೋ ಕಾಲವಾಗಿದೆ. ಈಗೇನಿದ್ದರೂ ದಿನಕ್ಕೆ ಹನ್ನೆರಡು ಗಂಟೆ ಕೆಲಸ. ವಾರಕ್ಕೆ ಎರಡು ಬಾರಿಯಾದರೂ ಓವರ್ ಟೈಮ್ ಮಾಡಬೇಕು. ನವೀನ್ ಕೆಲಸಕ್ಕೆ ಸೇರಿ ಕೆಲವೇ ದಿನಗಳಾಗಿವೆ. ಪ್ರತಿದಿನ ತಡವಾಗಿ ಹೋಗುವುದನ್ನು ಆತನ ಬಾಸ್ ಕೂಡ ಗಮನಿಸಿ ಆಗಿದೆ. ಉದ್ಯೋಗ ಸಿಗುವುದೇ ಕಷ್ಟ, ಸಿಕ್ಕ ಉದ್ಯೋಗವನ್ನು ಉಳಿಸಿಕೊಳ್ಳುವುದು ಇನ್ನೂ ಕಷ್ಟ. ಕಚೇರಿಯ ಬಳಿ ಮನೆ ಸಿಗುವುದು ಕನಸಿನ ಮಾತು. ದೂರದ ಹೆಬ್ಬಾಳದಲ್ಲಿ ಬಾಡಿಗೆ ಮನೆಯಿಂದ ಪ್ರತಿನಿತ್ಯ ಬೈಕ್‌ನಲ್ಲಿ ಓಡಾಟ. ಈ ತಾಪತ್ರಯ ನಿತ್ಯ ಇದ್ದದ್ದೇ.

ದೃಶ್ಯ 2

ಸಮಯ: ಕರಾರುವಾಕ್ಕಾಗಿ ಮೇಲಿನದೇ, ಸ್ಥಳ: ಮುಂಬೈ ನಗರದ ಲೋಕಲ್ ಟ್ರೈನು

25 ಬೋಗಿಗಳ ಲೋಕಲ್ ಟ್ರೈನು, ಪ್ರತಿ ಬೋಗಿಯೂ ಕಿಕ್ಕಿರಿದು ತುಂಬಿದೆ. ರೈಲು ಏರಿ ತನ್ನ ಕೆಲಸಕ್ಕೆ ಹೋಗಲು ಉದಯ್ ಮುಂಜಾನೆಯಿಂದ ಕಾಯುವುದಕ್ಕೆ ಇನ್ನೂ ಕೊನೆಯಾಗಿಲ್ಲ. ಏನೇ ಮಾಡಿದರೂ ಒಂದು ರೈಲನ್ನೂ ಹತ್ತಲು ಸಾಧ್ಯವಾಗಿಲ್ಲ. ಪ್ರತಿ ರೈಲು ಬಂದಾಗಲೂ ಮುಂದಿನದು ಖಾಲಿಯಿರಬಹುದೆಂಬ ಆಶಾಭಾವ. ಏನೇ ಹೋರಾಟ ಮಾಡಿದರೂ ಕೆಲಸಕ್ಕೆ ಸರಿಯಾದ ಸಮಯಕ್ಕೆ ತಲುಪಲಾಗದು ಎಂಬ ದುಗುಡ ಬೇರೆ.

ಇದ್ಯಾವ ಕಥೆ ಎಂದು ಹುಬ್ಬೇರಿಸುತ್ತಿದ್ದೀರಾ? ಜನಸಂಖ್ಯೆ ಹೆಚ್ಚಳವು ಸದ್ಯ ಕಾಣುತ್ತಿರುವ ಪ್ರಗತಿಯನ್ನೇ ಕಂಡರೆ 2050ರ ಹೊತ್ತಿಗೆ ಬೆಂಗಳೂರು, ಮುಂಬೈ ಮಾತ್ರವಲ್ಲ, ಭಾರತದ ಪ್ರತೀ ನಗರದಲ್ಲಿ ಸರ್ವೇಸಾಮಾನ್ಯವಾಗಿ ಕಾಣಬಹುದಾದ ನೋಟ ಇದು. ಇತ್ತೀಚಿನ ಸಮೀಕ್ಷೆಗಳ ಪ್ರಕಾರ, ಜನಸಂಖ್ಯಾ ಬಾಹುಳ್ಯದಲ್ಲಿ ಮುಂದಿನ ವರ್ಷ ಚೀನಾವನ್ನು ಹಿಂದಿಕ್ಕಲಿರುವ ಭಾರತ, 2050ರ ಹೊತ್ತಿಗೆ 164 ಕೋಟಿಯಷ್ಟು ಜನಸಂಖ್ಯೆಯನ್ನು ಹೊಂದಿರಲಿದೆ. ಪ್ರಸ್ತುತ ಭಾರತದ ಜನಸಂಖ್ಯೆ ಬೆಳೆಯುತ್ತಿರುವ ವೇಗ ನೋಡಿದರೆ ಈ ಸಂಶೋಧನೆಯ ಫಲಿತಾಂಶವನ್ನು ಕಡೆಗಣಿಸಲು ಸಾಧ್ಯವಿಲ್ಲ. ಜನಸಂಖ್ಯೆ ಹೆಚ್ಚಾಗುವುದು ದೊಡ್ಡ ಸಮಸ್ಯೆಯೇನಲ್ಲ ಎಂದು ಓದುಗರು ಭಾವಿಸಬಹುದಾದರೂ ಜನಸಂಖ್ಯಾ ಹೆಚ್ಚಳವನ್ನು ದೇಶ ಹೇಗೆ ಸಂಭಾಳಿಸುತ್ತದೆ ಎಂಬುದು ಚಿಂತೆಗೀಡು ಮಾಡುವ ವಿಚಾರ.

ಜನಸಂಖ್ಯಾ ಹೆಚ್ಚಳದ ಭವಿಷ್ಯ ಏನು?

ವಿಶ್ವ ಜನಸಂಖ್ಯೆಯ ಕುರಿತು ಅಧಿಕೃತ ವರದಿಗಳನ್ನು ಪ್ರಕಟಿಸುವ ಪಾಪ್ಯುಲೇಷನ್ ರೆಫರೆನ್ಸ್ ಬ್ಯೂರೊದ ಪ್ರಕಾರ, 2050ರ ಹೊತ್ತಿಗೆ ಜಗತ್ತಿನ ಜನಸಂಖ್ಯೆ ಒಟ್ಟಾರೆಯಾಗಿ ಶೇಕಡ 28ರಷ್ಟು ಹೆಚ್ಚಾಗುತ್ತದೆ. ಭಾರತ ಮಾತ್ರವಲ್ಲ ನೈಜೀರಿಯಾ, ಕಾಂಗೋ ಗಣರಾಜ್ಯ ಹಾಗೂ ಇಥಿಯೋಪಿಯದಂತಹ ರಾಷ್ಟ್ರಗಳಲ್ಲಿ ಜನಸಂಖ್ಯೆ ಗಣನೀಯವಾಗಿ ಹೆಚ್ಚಳವಾಗಲಿದೆ. ಆಸಕ್ತಿಕರ ವಿಚಾರವೇನೆಂದರೆ ಜನಸಂಖ್ಯಾ ಪ್ರಮಾಣ ಏರುತ್ತಿದ್ದರೂ ಭಾರತದಲ್ಲಿ ಮಕ್ಕಳನ್ನು ಪಡೆಯುವ ಫಲವಂತಿಕೆಯ ಪ್ರಮಾಣ (ಟಿಎಫ್‌ಆರ್) ಕುಸಿಯುತ್ತಲೇ ಇದೆ. 1950ರ ಹೊತ್ತಿನಲ್ಲಿ ಜನನ ಪ್ರಮಾಣವು ಪ್ರತೀ ಮಹಿಳೆಗೆ ಆರಾಗಿದ್ದರೆ, ಸದ್ಯ ಅದು ಪ್ರತೀ ಮಹಿಳೆಗೆ 2.2ರಷ್ಟಿದೆ. ಭವಿಷ್ಯದಲ್ಲಿ ಇದು ಇನ್ನೂ ಕಡಿಮೆಯಾಗುತ್ತದೆ. ಆದ್ದರಿಂದ 2100ರ ಹೊತ್ತಿಗೆ ಭಾರತದ ಜನಸಂಖ್ಯಾ ಪ್ರಮಾಣ 2050ರ ಪ್ರಮಾಣದ ಶೇಕಡಾ ಎಪ್ಪತ್ತರಷ್ಟಕ್ಕೆ ಕುಸಿಯಬಹುದೆಂಬುದು ತಜ್ಞರ ಅಭಿಮತ. ಏನೇ ಆದರೂ 2050ರವರೆಗೆ ಭಾರತದ ಜನಸಂಖ್ಯೆ ಬೆಳೆಯುವುದನ್ನು ಯಾರೂ ತಪ್ಪಿಸಲು ಸಾಧ್ಯವಿಲ್ಲ.

ನಿರ್ವಹಣೆ ಹೇಗೆ?

ಅಳತೆಗೆ ಸಿಗದೇ ವಿಪರೀತ ವೇಗವಾಗಿ ಬೆಳೆಯುತ್ತಿರುವ ಭಾರತದ ಮಹಾನಗರಗಳು ಜನಸಂಖ್ಯಾ ಹೆಚ್ಚಳವನ್ನು ಹೇಗೆ ನಿರ್ವಹಿಸುತ್ತವೆ ಎಂಬುದೇ ನಮ್ಮೆದುರಿಗಿರುವ ಬಹುದೊಡ್ಡ ಪ್ರಶ್ನೆ. ಪ್ರಸ್ತುತ ಭಾರತದ ಸಣ್ಣ ಸಣ್ಣ ನಗರಗಳಲ್ಲಿ ಜನಸಂಖ್ಯೆ ವಿಸ್ಫೋಟಕಾರಿಯಾಗಿ ಬೆಳೆಯುತ್ತಿದೆ. ಮಹಾನಗರಗಳ ಅವಸ್ಥೆಯನ್ನಂತೂ ಕೇಳುವುದೇ ಬೇಡ. ಮಹಾನಗರಗಳ ಸಂದಿಗೊಂದಿಗಳಲ್ಲಿ ಸ್ಲಂಗಳಂತಹ ಪ್ರದೇಶಗಳು ಬೆಳೆಯುತ್ತಿವೆ. ಅಡ್ಡ ಬೆಳೆಯುವ ಅವಕಾಶವಿಲ್ಲದೆ ಗಗನದೆತ್ತರಕ್ಕೆ ಕಟ್ಟಡಗಳು ಅಪಾರ್ಟ್‌ಮೆಂಟಿನ ಹೆಸರಿನಲ್ಲಿ ಬೆಳೆದು ನಿಂತಿವೆ. ಮೂಲಭೂತ ಸೌಕರ್ಯಗಳು ಮಹಾನಗರದ ಎಲ್ಲ ಮನೆಗಳಿಗೂ ಸಿಗುವುದಿಲ್ಲ. ಕನಿಷ್ಠ ಕುಡಿಯುವ ನೀರನ್ನು ಕೊಡಲು ಸಹ ನಮ್ಮ ಸರ್ಕಾರಗಳಿಗೆ ಸಾಧ್ಯವಾಗುತ್ತಿಲ್ಲ. ಅಂತರ್ಜಲ ಸಾವಿರ ಅಡಿಗಳಿಗಿಂತ ಕೆಳಗೆ ಹೋಗಿದೆ. ಮಳೆಯ ನೀರು ಹರಿದು ಹೋಗಲು ವ್ಯವಸ್ಥೆ ಇಲ್ಲ.

ಮೂಲಸೌಕರ್ಯ ಎಲ್ಲರಿಗೂ ಸಿಕ್ಕೀತೇ?

ಹದಿನಂಟನೆಯ ಶತಮಾನದಲ್ಲಿಯೇ ಯುರೋಪಿನ ವಿಜ್ಞಾನಿ ಥಾಮಸ್ ಮಾಲ್ತುಸ್ ಎಂಬಾತ ಜನಸಂಖ್ಯೆಯ ಸಿದ್ಧಾಂತವನ್ನು ಪ್ರತಿಪಾದಿಸಿದ್ದ. ಜಗತ್ತಿನ ಜನಸಂಖ್ಯೆಯು ಜ್ಯಾಮಿತೀಯ ವಿಧಾನದಲ್ಲಿ ಪ್ರಗತಿ ಕಂಡರೆ ಆಹಾರೋತ್ಪಾದನೆಯು ಅಂಕಗಣಿತೀಯ ವಿಧಾನದಲ್ಲಿ ಪ್ರಗತಿ ಕಾಣುತ್ತದೆ ಎಂದು ಆತ ಹೇಳಿದ್ದ. ಅಂದರೆ ಜನಸಂಖ್ಯೆ ಬೆಳೆಯುವ ವೇಗಕ್ಕೆ ತಕ್ಕಂತೆ ಆಹಾರೋತ್ಪಾದನೆ ಆಗುವುದಿಲ್ಲ. ಇದರಿಂದ ಆಹಾರದ ಅಭಾವ ಉಂಟಾಗುತ್ತದೆ ಎಂದು ಊಹಿಸಿದ್ದ. ಆದರೆ, ಆಹಾರೋತ್ಪಾದನೆ ಸಮಸ್ಯೆ ಸದ್ಯ ನಮ್ಮ ದೇಶದಲ್ಲಿಲ್ಲವಾದರೂ ಮಿತಿಮೀರಿ ಬೆಳೆದಿರುವ ನಗರಗಳಲ್ಲಿ ಈಗಾಗಲೇ ಇತರೆ ಹಲವಾರು ಸಮಸ್ಯೆಗಳು ಆಕಾಶದೆತ್ತರಕ್ಕೆ ಬೆಳೆದು ನಿಂತಿವೆ. ಜನಸಂಖ್ಯಾ ಬೆಳವಣಿಗೆಯ ವೇಗಕ್ಕೆ ತಕ್ಕಂತೆ ಮೂಲಸೌಕರ್ಯಗಳ ವ್ಯವಸ್ಥೆ ಮಾಡಲು ಸರ್ಕಾರಗಳಿಗೆ ಸಾಧ್ಯವಾಗುತ್ತಿಲ್ಲ.

ಬೆಂಗಳೂರಿಗೆ ಪ್ರತಿದಿನ 112.5 ಕೋಟಿ ಲೀಟರುಗಳಷ್ಟು ನೀರಿನ ಅವಶ್ಯಕತೆಯಿದೆ. 13ನೇ ಪುಟಕ್ಕೆ...



ಮೂಲ: ವಿಶ್ವ ಬ್ಯಾಂಕ್, ಪಾಪ್ಯುಲೇಷನ್ ರೆಫರೆನ್ಸ್ ಬ್ಯೂರೊ

ಮಕ್ಕಳಿರಲವ್ವ ಲಿಮಿಟ್ ಒಳಗೆ

ಎಂ.ಎಸ್.ನರಸಿಂಹಮೂರ್ತಿ

ಬಹಳ ವರ್ಷಗಳ ಹಿಂದಿನ ಮಾತು. ಶ್ರೀನಿವಾಸಪುರದ ಮಾವಿನ ತೋಪುಗಳಲ್ಲಿ ನಾನು ವಿಶ್ವನ ಜೊತೆ ಓಡಾಡುವಾಗ ಒಂದು ಆಶ್ಚರ್ಯ ಕಂಡಿದ್ದೆ. ಶ್ರೀನಿವಾಸಪುರ ಮಾವಿನಹಣ್ಣುಗಳಿಗೆ ಬಹಳ ಹೆಸರುವಾಸಿ. ಗೊಂಚಲು ಗೊಂಚಲು ಫಸಲು ಪ್ರತೀ ಮರದಿಂದಲೂ ಜೋತು ಬಿದ್ದಿರುತ್ತಿತ್ತು. ಆದರೆ, ಒಂದು ಮರದಲ್ಲಿ ಬರೀ ಮೂರು ಕಾಯಿಗಳು ಮಾತ್ರ ಇದ್ದವು. ಯಾಕಿದು ಎಂದು ಸಂಶೋಧನೆ ಶುರುವಾಯಿತು. ಕಡೆಗೂ ಫಲಿತಾಂಶ ಪ್ರಕಟವಾಯಿತು. ಎಲ್ಲಾ ಮರಗಳೂ ಸಾವಿರಾರು ಕಾಯಿ ಬಿಟ್ಟಿವೆ. ಒಂದು ಮರದಲ್ಲಿ ಮಾತ್ರ ಬರೀ ಮೂರು ಕಾಯಿ! ಕಾರಣ ಫ್ಯಾಮಿಲಿ ಪ್ಲಾನಿಂಗ್ ಸ್ಲೋಗನ್‌ನ ಬೋರ್ಡನ್ನು ಮರಕ್ಕೆ ಹೊಡೆದಿದ್ದಾರೆ. 'ಒಂದು ಎರಡು ಬೇಕು, ಮೂರು ಸಾಕು!'

'ಮರಕ್ಕೆ ಅರ್ಥ ಆಗಿದೆ, ಮನುಷ್ಯರಿಗೆ ಯಾಕೆ ಅರ್ಥ ಆಗ್ತಿಲ್ಲ' ಎಂದು ವಿಶ್ವನನ್ನು ಪ್ರಶ್ನೆ ಮಾಡಿದ್ದೆ.

'ನಮ್ಗೂ ಅರ್ಥ ಆಗುತ್ತೆ. ಆದ್ರೆ ಓಟು ಬೇಕಾದಾಗ ನಾವು ಜನಗಳ ಪರವಾಗೇ ಮಾತಾಡ್ಬೇಕು.'

'ಅಲ್ಲ ವಿಶ್ವ, ಎರಡು ಡೆಲಿವರಿಗಳ ನಡುವೆ ಅಂತರ ಇರಲಿ ಅಂತ ಆ ಕಾಲದಲ್ಲಿ ಹೇಳ್ತಾ ಇದ್ರು. ನೆನಪಿದೆಯಾ?'

'ಹೌದು, ನೆನಪಿದೆ' ಎಂದ ವಿಶ್ವ, 'ನನ್ನ ಫ್ರೆಂಡೊಬ್ಬನಿಗೆ ವರ್ಷದಲ್ಲೇ ಎರಡು ಡೆಲಿವರಿಗಳಾದವು' ಎಂಬ ಆತಂಕಕಾರಿ ಸುದ್ದಿ ಹೇಳಿದ.

'ಅದ್ಯಾಕೆ ಅಷ್ಟು ಸ್ಪೀಡು?'

ದೇಶ ಬೆಳೆಸೋಕೆ! ಮಕ್ಕಳೆಂದ್ರೆ ಅವನಿಗೆ ಪ್ರಾಣ. 'ಮಕ್ಕಳಿರಲವ್ವ ಮನೆ ತುಂಬಾ' ಅಂತ ನಿತ್ಯ ಹಾಡ್ತಾ ಇದ್ದ. ಬೇಡಾಂದ್ರೂ ಮಕ್ಕಳಾದ್ವು. ನಾನು ಆ ಮಹಾ ತಂದೇನ ಕೇಳ್ದೆ,

'ಅಲ್ಲಪ್ಪಾ, ಎರಡು ಡೆಲಿವರಿ ನಡುವೆ ಅಂತರ ಇರ್ಬೇಕು ಅಂತ ಸರ್ಕಾರ ಹೇಳುತ್ತೆ. ಯಾಕೆ ಹೀಗೆ ಮಾಡ್ದೆ?'

'ಅಂತರ ಇದೆ' ಅಂತ ಅವನು ವಾದ ಮಾಡ್ದ.

'ಎಲ್ಲಿದೆ ಅಂತರ?'

'ಯಾಕಿಲ್ಲ? ಒಂದು ಡೆಲಿವರಿ ಆಗಿದ್ದು ಕೋಲಾರದಲ್ಲಿ, ಇನ್ನೊಂದು ಡೆಲಿವರಿ ಆಗಿದ್ದು ಬೀದರ್‌ನಲ್ಲಿ. ಎರಡು ಡೆಲಿವರಿ ಕ್ಷೇತ್ರಗಳ ನಡುವೆ 700 ಕಿಲೊಮೀಟರ್ ಅಂತರ ಇದೆ' ಅಂದ.

'ಆದರೂ ಕಾರ್ಯಕ್ಷೇತ್ರ ಒಂದೇ ತಾನೇ?' ಎಂದಾಗ ಅವನು ಸೈಲೆಂಟಾಗಿದ್ದ.

ಕಾಲೇಜು ದಿನಗಳಲ್ಲಿ ನಾನು ಮತ್ತು ವಿಶ್ವ ಒಟ್ಟಿಗೆ ಓದ್ತಾ ಇದ್ವಿ. ನಾನು ಡಿಗ್ರಿ ಪಾಸಾಗಿ ಬ್ಯಾಂಕಲ್ಲಿ ಗುಮಾಸ್ತ ಆದೆ. ವಿಶ್ವ ಡಿಗ್ರಿ ಫೈಲಾಗಿ ಸಹಕಾರಿ ಬ್ಯಾಂಕುಗಳಿಗೆ ಚೇರ್ಮನ್ ಆದ. ಯಾವುದೋ ಒಂದು ಶುಭ ಗಳಿಗೆಯಲ್ಲಿ ಯಾವುದೋ ಒಂದು ತರಲೆ ಕ್ಷೇತ್ರದಿಂದ ತಮಾಷೆಗಾಗಿ ಚುನಾವಣೆಗೆ ನಿಂತ. ಎರಡು ಗೂಳಿಗಳ ನಡುವೆ ಒಂದು ಜಿಂಕೆ ಎಂದು ಜನ ಆಡಿಕೊಂಡರು. ಗೂಳಿಗಳು ಕಾಳಗದಲ್ಲಿ ಸೆಣಸಾಡಿ ಹಣೆ ಬಡಿದುಕೊಂಡು ಸೋತಾಗ ಜಿಂಕೆಗೆ ಸುಲಭ ಗೆಲುವಾಯಿತು. ವಿಶ್ವ ಎಂ.ಎಲ್.ಎ. ಆದ. ಮತ್ತೆ ಹಿಂತಿರುಗಿ ನೋಡಲಿಲ್ಲ. ರಾಜಕಾರಣಿಯಾದವ ಹಿಂತಿರುಗಿ ನೋಡಬಾರದು ಎಂಬ ಶಾಸ್ತ್ರವಿದೆ. ವಿಶ್ವನಿಗೆ ದೇಶಸೇವೆಯೇ ಈಶ ಸೇವೆ ಆಯಿತು. ಸರ್ಕಾರಿ ಕೆಲಸ (ದೇವರೇ ಬಂದು ಮಾಡಬೇಕಾದ) ದೇವರ ಕೆಲಸ ಅಂತ ವಿಧಾನಸೌಧದ ಕೋಟೆ ಬಾಗಿಲ ಬಳಿ ಓದಿದ್ದನ್ನು ಆಚರಣೆಗೆ ತಂದ.

ನಮ್ಮ ದೇಶದ ಬಗ್ಗೆ ಕೇಳಿದೆ. ಜನಸಂಖ್ಯೆಯಲ್ಲಿ ನಮ್ಮದು ಅತ್ಯಂತ ಶ್ರೀಮಂತ ರಾಷ್ಟ್ರ ಎಂದು ಹೆಮ್ಮೆ ಪಟ್ಟ.

ವಿಶ್ವನದು ಮಲೆನಾಡು. ಸಾಕಷ್ಟು ಅಡಿಕೆ ತೋಟಗಳ ತಲಾಂತರ ಆಸ್ತಿ ಅಲ್ಲಿತ್ತು. ಹತ್ತು ಹನ್ನೆರಡು ಕುಟುಂಬಗಳು ಜಂಟಿಯಾಗಿ ವಾಸ ಮಾಡಿ ಜಾಯಿಂಟ್ ಫ್ಯಾಮಿಲಿಗೆ ಉದಾಹರಣೆಯಾಗಿದ್ದವು. ಅಲ್ಲಿದ್ದ ಮಕ್ಕಳ ಸಂಖ್ಯೆ ಪ್ರಾರಂಭಕ್ಕೆ ಮೂವತ್ತೈದಿತ್ತು. ಅನಂತರ ಮಕ್ಕಳ ಸಂಖ್ಯೆ ಬೆಳೆಯುತ್ತಾ ಹೋಯಿತು. 70 ಮಕ್ಕಳನ್ನು ಸಾಕುವುದು ಅಜ್ಜನಿಗೆ ಕಷ್ಟವಾಯಿತು. ಅನಂತರ ಕುಟುಂಬದಲ್ಲಿ ಮಕ್ಕಳ ಸಂಖ್ಯೆ 110ಕ್ಕೆ ಏರಿತು. ಮಕ್ಕಳಿಗೆ ಮಲಗಲು ಕಷ್ಟವಾಗುತ್ತಿತ್ತು. 13ನೇ ಪುಟಕ್ಕೆ...

ಗಂಡಿನ ದೇಹದ

ಸೌಂದರ್ಯ ಮೀಮಾಂಸೆ

ಹರವು ಸ್ಫೂರ್ತಿ

ಹೆಣ್ಣಿನ ದೇಹವಷ್ಟೇ ಸೌಂದರ್ಯ, ಆಕೆಯನ್ನು ಅರೆನಗ್ನವಾಗಿ ನೋಡುವುದು ರಸಿಕತೆ. ಅವಳ ಅಂಗಾಗ ಸೌಷ್ಠವವನ್ನು ಹೊಗಳಿ ಬಿಡಿಬಿಡಿಯಾಗಿ ವರ್ಣಿಸಿ ಬರೆಯುವುದಷ್ಟೇ ಮಹಾ ಕವಿತೆ! ಅದೇ ಗಂಡಸಿನ ಅರೆಬೆತ್ತಲೆ ಚಿತ್ರಗಳು ಭಾವನೆಗಳನ್ನು ಕೆರಳಿಸುತ್ತವೆ, ಅವಮಾನಿಸುತ್ತವೆ ಎನ್ನುವುದು ಎಂತಹ ವಿತಂಡ ವಾದ. ಹಾಗಾದರೆ ಗಂಡಸಿನ ದೇಹದಲ್ಲಿ ಸೌಂದರ್ಯವಿಲ್ಲವೇ?'

ಇಂತಹದ್ದೊಂದು ಚರ್ಚೆ ಸಾಮಾಜಿಕ ಜಾಲತಾಣದಲ್ಲಿ ಈಗ ಜೋರಾಗಿ ಆಗುತ್ತಿದೆ. ಈ ಚರ್ಚೆಗೆ ಕಾರಣ 'ಪೇಪರ್' ಎಂಬ ಅಂತರರಾಷ್ಟ್ರೀಯ ನಿಯತಕಾಲಿಕಕ್ಕೆ ಬಾಲಿವುಡ್ ನಟ ರಣವೀರ್ ಸಿಂಗ್ ಮಾಡಿಸಿಕೊಂಡ ಅರೆನಗ್ನ ಫೋಟೊಶೂಟ್.

ತಮ್ಮ ಇನ್‌ಸ್ಟಾಗ್ರಾಂ ಖಾತೆಯಲ್ಲಿ ಈ ವಿಶೇಷ ಫೋಟೊಗಳನ್ನು ರಣವೀರ್ ಹಂಚಿಕೊಳ್ಳುತ್ತಿದ್ದಂತೆಯೇ ಸಾಮಾಜಿಕ ಮಾಧ್ಯಮದಲ್ಲಿ ಸಂಚಲನ ಸೃಷ್ಟಿಯಾಗಿದೆ. ಸ್ತ್ರೀನಗ್ನತೆಯನ್ನು ಆಸ್ವಾದಿಸಿ, ಕೊಂಡಾಡಿ ಸಂಭ್ರಮಿಸುವ ಸಮಾಜಕ್ಕೆ ಪುರುಷನನ್ನು ಅರೆನಗ್ನವಾಗಿ ನೋಡುವುದು ಸಹಿಸಲಾಗದ ದೃಶ್ಯ! ಇಷ್ಟೊಂದು ಅಸಹನೆ ಏಕೆ ಎಂಬ ಪ್ರಶ್ನೆ ಬಲವಾಗಿ ಕೇಳಿ ಬರುತ್ತಿದೆ.

ಮಹಿಳೆಯರ ಭಾವನೆಗಳಿಗೆ ಸಿಂಗ್ ಘಾಸಿ ಉಂಟುಮಾಡಿದ್ದಾರೆ ಎಂದು ದೆಹಲಿ ಮೂಲದ ಸ್ವಯಂಸೇವಾ ಸಂಸ್ಥೆಯೊಂದು ದೂರು ನೀಡಿದ್ದು, ಎಫ್‌ಐಆರ್ ಕೂಡ ದಾಖಲಿಸಲಾಗಿದೆ. ಅಲ್ಲದೆ, ಮಹಾರಾಷ್ಟ್ರ ರಾಜ್ಯ ಮಹಿಳಾ ಆಯೋಗಕ್ಕೂ ದೂರು ನೀಡಲಾಗಿದೆ. ಸ್ವಲ್ಪ ಅತಿರೇಕದ ವ್ಯಕ್ತಿತ್ವ ಎನ್ನುವ ಕಾರಣಕ್ಕೆ ಹೆಚ್ಚು ಸುದ್ದಿಯಾಗುತ್ತಿದ್ದ ರಣವೀರ್, 'ನಾನು ಸಾವಿರ ಜನರ ಮುಂದೆ ಬೆತ್ತಲೆಯಾಗಿ ನಿಲ್ಲಬಲ್ಲೆ. ಆ ಬಗ್ಗೆ ತಲೆಕೆಡಿಸಿಕೊಳ್ಳುವುದಿಲ್ಲ. ಅಷ್ಟು ಆತ್ಮವಿಶ್ವಾಸ ನನಗಿದೆ' ಎನ್ನುತ್ತಿದ್ದವರು ಈಗ ಅಂತೆಯೇ ಮಾಡಿದ್ದಾರೆ.

'ಹೆಣ್ಣುಮಕ್ಕಳ ಅರೆಬೆತ್ತಲೆ ಫೋಟೊಗಳನ್ನು ಬೇಕಾದಷ್ಟು ನಾವು ನೋಡಿದ್ದೇವೆ. ಹಲವು ನಿಯತಕಾಲಿಕೆಗಳು ಇಂಥ ಮುಖಪುಟ ಫೋಟೊ ಇಲ್ಲದೆ ಪ್ರಕಟವಾಗಿದ್ದೇ ಇಲ್ಲ. ಅಂಥದರಲ್ಲಿ ಗಂಡಸಿನ ಅರೆಬೆತ್ತಲೆ ಫೋಟೊಕ್ಕೆ ಯಾಕೆ ಇಷ್ಟು ಅತಿರೇಕದ ವರ್ತನೆ' ಎಂದು ದೆಹಲಿ ಮಹಿಳಾ ಆಯೋಗದ ಮುಖ್ಯಸ್ಥೆ ಸ್ವಾತಿ ಮಲಿವಾಲ್ ಪ್ರಶ್ನಿಸಿದ್ದಾರೆ. ಬಾಲಿವುಡ್ ನಟಿ ವಿದ್ಯಾ ಬಾಲನ್ ಅವರಂತೂ 'ನೋಡಲು ಸಾಧ್ಯವಿಲ್ಲ ಎಂದವರು ಪತ್ರಿಕೆ ಮುಚ್ಚಿಡಿ. ನಿಮಗೇನು ತೊಂದರೆ? ಈ ಚಿತ್ರದಿಂದ ನಮ್ಮ ಕಣ್ಣಿಗೆ ಹಬ್ಬವಾಗಲಿ' ಎಂದಿದ್ದಾರೆ. ಆಲಿಯಾ ಭಟ್ ಸಹ ಈ ಮಾತಿಗೆ ದನಿಗೂಡಿಸಿದ್ದಾರೆ.

ಸಾಮಾಜಿಕ ಜಾಲತಾಣದಲ್ಲಿ ಈ ಫೋಟೊಗಳು ಟ್ರೋಲ್ ಆಗುತ್ತಿದ್ದು, ಹಲವರು ಮೀಮ್‌ಗಳನ್ನು ಸೃಷ್ಟಿಸಿ ಟ್ರೆಂಡ್ ಮಾಡುತ್ತಿದ್ದಾರೆ. ಈ ಫೋಟೊಗಳನ್ನು ಕಟುವಾಗಿ ಟೀಕಿಸಿದ ಹಲವರು ಇಂದೋರ್‌ನಲ್ಲಿ ರಣವೀರ್ ಅವರಿಗಾಗಿ ಬಟ್ಟೆ 'ದೇಣಿಗೆ' ಅಭಿಯಾನ ಕೂಡ ನಡೆಸಿದ್ದಾರೆ. 'ನಿತ್ಯ ಹೆಣ್ಣುಮಕ್ಕಳ ಅರೆಬೆತ್ತಲೆ ಫೋಟೊ, ವಿಡಿಯೊ ನೋಡಿ ಜನ ಚಪ್ಪರಿಸುವಾಗ ಈ ಫೋಟೊವನ್ನು ವಿರೋಧಿಸುತ್ತಿರುವವರು ಏಕೆ ಮಾತನಾಡಲಿಲ್ಲ' ಎನ್ನುವ ಪ್ರಶ್ನೆ ಕೂಡ ಬೆನ್ನಹಿಂದೆಯೇ ಎದ್ದಿದೆ.

ರಣವೀರ್ ನಗ್ನ ಫೋಟೊಶೂಟ್ ಕುರಿತು ಮಾತನಾಡಿರುವ ನಟ ಮತ್ತು ಅವರ ಆಪ್ತಗೆಳೆಯ ಅರ್ಜುನ್ ಕಪೂರ್, 'ಈ ಚಿತ್ರಗಳಲ್ಲಿ ಅಸಭ್ಯತೆ ಏನಿದೆ' ಎಂದು ಪ್ರಶ್ನಿಸಿದ್ದಾರೆ. 'ಅವನ ಆತ್ಮವಿಶ್ವಾಸ ಮೆಚ್ಚುವಂಥದ್ದು. ಅಷ್ಟು ಸುಂದರ ದೇಹವನ್ನು ಪ್ರದರ್ಶಿಸಿ ಸಂಭ್ರಮಿಸಿದ್ದಾನೆ. ಅಸಭ್ಯ ಏನಿಲ್ಲ. ಅವನ ನಿರ್ಧಾರವನ್ನು ಗೌರವಿಸಬೇಕು' ಎಂದು ಹೇಳಿದ್ದಾರೆ.

ರಣವೀರ್ ಅವರು ಕಾರ್ಪೆಟ್ ಮೇಲೆ ಮಲಗಿ, ಹೂವಿನ ಹಾಸಿಗೆಯ ಮೇಲೆ ಕುಳಿತು ಚಿತ್ರ ತೆಗೆಸಿಕೊಂಡಿದ್ದರು. 2.3 ಕೋಟಿ ಜನ ಆ ಚಿತ್ರಗಳನ್ನು ಲೈಕ್ ಮಾಡಿದ್ದರು. ಭಾರತೀಯ ನಟನೊಬ್ಬ ಅರೆ ಬೆತ್ತಲೆ ಫೋಟೊಶೂಟ್ ಮಾಡಿಸಿರುವುದು ಇದೇ ಮೊದಲಲ್ಲ. ಈ ಹಿಂದೆ ಪಿ.ಕೆ. ಸಿನಿಮಾಕ್ಕಾಗಿ ಅಮೀರ್ ಖಾನ್ ಅರೆಬೆತ್ತಲಾಗಿ ಕಾಣಿಸಿಕೊಂಡಿದ್ದರು. ನಟ, ರೂಪದರ್ಶಿ ಮಿಲಿಂದ್ ಸೋಮನ್ ಕೂಡ ಅರೆಬೆತ್ತಲಾಗಿ ಕಾಣಿಸಿಕೊಂಡಿದ್ದರು. ಬರ್ಟ್ ರೆನಾಲ್ಡ್ ಎಂಬ ಅಮೆರಿಕದ ಕಲಾವಿದ ಐವತ್ತು ವರ್ಷಗಳ ಹಿಂದೆ ಕಾಸ್ಮೊಪಾಲಿಟಿನ್ ಮ್ಯಾಗಜಿನ್‌ಗೆ ಸಂಪೂರ್ಣ ನಗ್ನರಾಗಿ ಪೋಸ್ ನೀಡಿದ್ದರು. ಆಗ ಜಗತ್ತಿನಾದ್ಯಂತ 'ಪುರುಷ ದೇಹದ ಸೌಂದರ್ಯ ಮೀಮಾಂಸೆ' ಭಾರಿ ಸದ್ದು ಮಾಡಿತ್ತು. ರಣವೀರ್ ಸಾಹಸ ಭಾರತದಲ್ಲಿ ಈಗ ಮತ್ತೆ ಚರ್ಚೆಯನ್ನು ಮುನ್ನೆಲೆಗೆ ತಂದಿದೆ.

ಅಧಿಕಾರ ಕ್ರೌರ್ಯದ ಫಲ ಫೂಲನ್

ಪುನೀತ್ ತಥಾಗತ

ರಂಗಭೂಮಿ

'ಒಬ್ಬ ರಾಜ ಮತ್ತೊಬ್ಬ ರಾಜನ ಮೇಲೆ ದಂಡೆತ್ತಿ ಹೋದರೆ ಚಕ್ರವರ್ತಿ ಪಟ್ಟ ಕಟ್ತೀವಿ. ಒಬ್ಬ ಸೈನಿಕ ತನ್ನ ಶತ್ರು ಸೈನಿಕನನ್ನು ಕೊಂದರೆ ವೀರ ಪಟ್ಟ ಕಟ್ತೀವಿ. ನನಗಾದ ದೌರ್ಜನ್ಯ, ಅನ್ಯಾಯದ ವಿರುದ್ಧ ಸಿಡಿದೆದ್ದಿದ್ದಕ್ಕೆ ನನಗೆ ಡಕಾಯತಿ ಪಟ್ಟ ಕಟ್ತಾರೆ...'

ಹೀಗೆ ರಂಗದ ಮೇಲೆ ನಿಂತು ಪ್ರೇಕ್ಷಕರಿಗೆ ಸವಾಲೆಸೆದದ್ದು ಫೂಲನ್. ದೌರ್ಜನ್ಯದ ವಿರುದ್ಧ ಸಿಡಿದೆದ್ದ, ಒಂದು ಕಾಲಕ್ಕೆ ಆಳುವ ಸರ್ಕಾರದ ನಿದ್ದೆ ಕೆಡಿಸಿದ್ದ, ಡಕಾಯಿತರ ನಾಯಕಿ ಎಂದೇ ಪ್ರಖ್ಯಾತರಾಗಿದ್ದ, ಮಾಜಿ ಸಂಸದೆ ಫೂಲನ್ ದೇವಿಯವರ ಬದುಕನ್ನು ಆಧರಿಸಿ ರವೀಂದ್ರ ಕಲಾಕ್ಷೇತ್ರದಲ್ಲಿ 'ಫೂಲನ್ ದೇವಿ' ನಾಟಕ ಇತ್ತೀಚೆಗೆ ಪ್ರದರ್ಶನಗೊಂಡಿತು.

ಸ್ವಾತಂತ್ರ್ಯ ಭಾರತದ ಬಹುದೊಡ್ಡ ಕಥನವನ್ನು, ರಾಜಕೀಯ ಮತ್ತು ಸಾಂಸ್ಕೃತಿಕ ವ್ಯವಸ್ಥೆಯ ಕ್ರೂರತೆಯನ್ನು ಎಳೆ ಎಳೆಯಾಗಿ ಬಿಚ್ಚಿಡುತ್ತಾ, ಸಾಂಸ್ಕೃತಿಕ ಪರಂಪರೆಯನ್ನು ಎದುರಿಸುತ್ತಲೇ ಬೆಳೆದ ಫೂಲನ್ ಅವರ ಬದುಕು ರಂಗದ ಮೇಲೆ ಅನಾವರಣವಾಯಿತು. ಬದುಕಿನುದ್ದಕ್ಕೂ ನೋವು, ಸಂಕಟ, ಅಸಹಾಯಕತೆ, ಅದರಿಂದ ಉಂಟಾದ ಕ್ರೋಧ, ಕ್ರೌರ್ಯ, ಬಂದೂಕಿನ ಮೊರೆತ... ಅದರಾಚೆಗಿನ ಪ್ರೇಮ ಮತ್ತು ಸಹಬಾಳ್ವೆಯನ್ನು ಪ್ರೇಕ್ಷಕನ ಎದೆಗೆ ಇಳಿಸಿದವು.

ಬಾಲ್ಯವಿವಾಹಕ್ಕೆ ಒಳಗಾದ ಫೂಲನ್, ತನ್ನ ಗಂಡ, ಕುಟುಂಬ, ಆಡಳಿತ ವ್ಯವಸ್ಥೆ, ಮೇಲ್ಜಾತಿಗಳ ದಬ್ಬಾಳಿಕೆ, ಅತ್ಯಾಚಾರ ಇವೇ ಮೊದಲಾದವುಗಳಿಂದ ಉಂಟಾದ ಅಸಹಾಯಕತೆಯಿಂದ ಹಿಂಸೆಗೆ ತಿರುಗಿದ ರೀತಿ ನಿಬ್ಬೆರಗಾಗಿಸಿತು. ಉಳ್ಳವರ ಮನೆಯನ್ನು ದೋಚಿ ಹಸಿದ ಒಡಲುಗಳ ತಣಿಸುವ, ನೊಂದವರ ಬಾಳಿಗೆ ಬೆಳಕಿನ ಕಿಂಡಿಯಾಗುವ ಪ್ರೀತಿಯ ದ್ಯೋತಕವಾದ ಫೂಲನ್ ಕಥನವು ಕನ್ನಡ ರಂಗ ಪರಂಪರೆಗೆ ಹೊಸ ಮೆರಗನ್ನು ನೀಡಿತು. ಗಾಂಧಿ ಮತ್ತು ಭವಾನಿಯ ಸಿಂಬಲೈಸ್‌ಗಳು ಫೂಲನ್ ಅವರನ್ನು ಅರ್ಥಮಾಡಿಕೊಳ್ಳಲು ಇರುವ ಎರಡು ಶಕ್ತಿಗಳು ಎನ್ನುವುದನ್ನು ರಂಗದ ಮೇಲೆ ನಿರೂಪಿಸಿದ ಬಗೆಯೂ ವಿಶೇಷವಾಗಿತ್ತು.

ಸಾಂಸ್ಕೃತಿಕ ಯಜಮಾನಿಕೆಗೆ ಹೆಣ್ಣು ತುಪಾಕಿಯಾಗಿ, ಧ್ವನಿ ಮಾತ್ರದಿಂದಲೇ ದರ್ಪಗಳ ಅಡಗಿಸುವ ಶಕ್ತಿ ಭವಾನಿಯಾಗಿ, ಚರಿತ್ರೆಯ ನಡುಗಿಸುವ ಹೆಣ್ಣು ಧ್ವನಿಯಾದ ಫೂಲನ್ ಅವರ ಪಾತ್ರವನ್ನು ನಿಬಾಯಿಸಿದ್ದು ನಯನ ಜೆ. ಸೂಡ. ಈಗಾಗಲೇ ಚಂದ್ರಗಿರಿಯ ತೀರದಲ್ಲಿ 'ನಾದಿರ'ಳಾಗಿ, ಗುಲಾಬಿ ಗ್ಯಾಂಗ್‌ನಲ್ಲಿ 'ಕಮಲದೇವಿ'ಯಾಗಿ, ಅಕ್ಕಯ್ ನಾಟಕದಲ್ಲಿ 'ಅಕ್ಕಯ್ ಪದ್ಮಶಾಲಿ'ಯಾಗಿ ಅಭಿನಯಿಸಿ ಗೆದ್ದಿರುವ ಇವರು 'ಫೂಲನ್' ಆಗಿಯೂ ಅಷ್ಟೇ ಶಕ್ತಿಶಾಲಿಯಾಗಿ ಪಾತ್ರವನ್ನು ನಿಭಾಯಿಸಿದರು.

ಫೂಲನ್ ಅವರ ಕ್ರೌರ್ಯ ಮತ್ತು ಪ್ರೇಮವನ್ನು ಸಶಕ್ತವಾಗಿ ರಂಗದ ಮೇಲೆ ಅಭಿನಯಿಸುವ ಮೂಲಕ ಪ್ರೇಕ್ಷಕರಲ್ಲಿ ಫೂಲನ್ ಎಂದರೆ ಡಕಾಯಿತೆ ಮಾತ್ರವಲ್ಲ, ಅವಳೊಂದು ಸುಂದರ ಕನಸನ್ನು ಕಂಡ ಮಹಿಳೆ ಎನ್ನುವುದನ್ನೂ ತೋರಿಸಿದರು. ರಂಗದ ಮೇಲೆ ನಯನ ಅವರಷ್ಟೇ ಸಶಕ್ತವಾಗಿ ತಮ್ಮ ಪಾತ್ರವನ್ನು ಕಟ್ಟಿಕೊಟ್ಟಿದ್ದು ಫೂಲನ್ ಅವರ ತಂದೆಯ ಪಾತ್ರವನ್ನು ಮಾಡಿದ್ದ ಲಕ್ಷ್ಮೀರೆಡ್ಡಿಯವರು. ಸಹೋದರರಿಂದಲೇ ಆಗುವ ಅನ್ಯಾಯ, ಹೆಣ್ಣು ಮಕ್ಕಳ ತಂದೆಯ ಅಸಹಾಯಕತೆ, ಮಗಳ ಮೇಲಿನ ಅಗಾಧ ಪ್ರೀತಿ ಪ್ರೇಕ್ಷಕರ ಕಣ್ಣನ್ನು ತೇವಗೊಳಿಸಿದವು. ಉಳಿದಂತೆ ಡಕಾಯಿತರ ಗುಂಪಿನಲ್ಲಿ ಮಾನ್‌ಸಿಂಗ್ ಪಾತ್ರದಲ್ಲಿ ಪ್ರದೀಪ್, ಬಾಬಾ ಮುಸ್ತಾಕಿ ಅವರ ಪಾತ್ರದಲ್ಲಿ ರಾಘವೇಂದ್ರ ಹಾಗೂ ಫೂಲನ್ ಅವರು ಶರಣಾಗುವ ಹಾಗೆ ಮಾತುಕತೆ ನಡೆಸಿದ ರಾಜೇಂದ್ರ ಚತುರ್ವೇದಿಯವರ ಪಾತ್ರವನ್ನು ಮಾಡಿದ ಸಬಾಸ್ಟಿನ್ ಅವರು ಪ್ರೇಕ್ಷಕರ ಗಮನ ಸೆಳೆದರು.

ಒಂದು ಕಡೆ ರಂಗದ ಮೇಲೆ ಪಾತ್ರಗಳು ಜೀವತುಂಬುತ್ತಿದ್ದರೆ, ಅದಕ್ಕೆ ಸಂಗೀತದ ಮೂಲಕ ಜೀವಕಳೆ ನೀಡಿದವರು ರಾಜಗುರು ಹೊಸಕೋಟೆ. ನಾಟಕದ ರಚನೆ ಮತ್ತು ನಿರ್ದೇಶನದ ಹೊಣೆಯನ್ನೂ ಅವರೇ ನಿಭಾಯಿಸಿದ್ದು ವಿಶೇಷ. ಬೆಳಕು, ನೆರಳಿನ ವಿನ್ಯಾಸ, ಕೃತಕ ಹೊಗೆ ಇವೆ ಮೊದಲಾದವುಗಳ ಮೂಲಕ ಫೂಲನ್ ಅವರ ಪ್ರವೇಶವು ವರ್ಣರಂಜಿತವಾಗಿ ಮೂಡಿ ಬಂತು. ರಂಗದ ಮೇಲೆ ತಮಟೆಯ ವಾದ್ಯವನ್ನು ಬಳಸುವಾಗ ಹಾಡಿನ ಸಾಹಿತ್ಯವು ಗಮ್ಯವಾಗಿ ಅಸ್ಪಷ್ಟವಾಗುತ್ತದೆ ಎನ್ನುವುದೊಂದನ್ನು ಹೊರತುಪಡಿಸಿದರೆ ನಾಟಕವು ನಿರ್ದೇಶನದಲ್ಲಿಯೂ ಹೊಸ ಪ್ರಯೋಗಶೀಲತೆಗೆ ಕೈಹಾಕಿ ಗೆದ್ದಿದೆ.

ಸ್ವಾತಂತ್ರ್ಯ, ಸಮಾನತೆಯ ಕನಸನ್ನು ಕಂಡ ಪ್ರತಿಯೊಬ್ಬರಲ್ಲಿಯೂ ಹುಡುಕಬಹುದಾದ ಧ್ವನಿಯೊಂದನ್ನು ಫೂಲನ್ ಅವರಲ್ಲಿಯೂ ಕಾಣಬಹುದು. ಫೂಲನ್ ಅವರ ಬಗೆಗೆ ಏನೇ ಚರ್ಚೆ, ವಿಮರ್ಶೆಗಳಿದ್ದರೂ ಕೂಡ ವಾಸ್ತವದ ಹಲವು ಸಾಂಸ್ಕೃತಿಕ ಮತ್ತು ರಾಜಕೀಯ ಕುರೂಪಗಳನ್ನು ಸರಿಮಾಡಿಕೊಳ್ಳದೇ ಹೋಗದಿದ್ದಲ್ಲಿ, ಅಸಹಾಯಕತೆಯು ಕ್ರೌರ್ಯವಾಗಿ ಅದು ನಮ್ಮನ್ನೇ ಬಲಿ ತೆಗೆದುಕೊಳ್ಳುತ್ತದೆ ಎನ್ನುವ ಎಚ್ಚರಿಕೆಯನ್ನೂ ಈ ನಾಟಕ ನೀಡಿತು. ಸಮುದಾಯದ ಒಳಿತಿಗಾಗಿ ಸದಾ ತುಡಿಯುತ್ತಲೇ ಆ ನಿಟ್ಟಿನಲ್ಲಿ ಕೆಲಸ ಮಾಡುತ್ತಿರುವ ಸಾತ್ವಿಕ ರಂಗಪಯಣ ತಂಡವು 'ಸಮಾನತೆಯ ಕಡೆಗೆ ಕ್ರಾಂತಿಯ ಪಯಣ' ಆರಂಭಿಸಿರುವುದು ಈ ಪ್ರಯೋಗದಿಂದ ಗೊತ್ತಾಗುತ್ತದೆ.

'ಫೂಲನ್ ದೇವಿ' ನಾಟಕದ ದೃಶ್ಯ

'ಫೂಲನ್' ಅವತಾರದಲ್ಲಿ ನಯನ ಜೆ. ಸೂಡ

ಜನಕುಂಡ ಭರತಖಂಡ!

12ನೇ ಪುಟದಿಂದ...

ಆದರೆ, ಸುಮಾರು 90 ಕೋಟಿ ಲೀಟರ್ ನೀರನ್ನು ಮಾತ್ರ ಸರಬರಾಜು ಮಾಡುವ ಸಾಮರ್ಥ್ಯವನ್ನು ಜಲಮಂಡಳಿ ಹೊಂದಿದೆ. ಸಮರ್ಪಕ ನೀರು ಸರಬರಾಜಿಗೆ ಏನೆಲ್ಲ ಕಸರತ್ತು ನಡೆಸಿದರೂ ಸಮಸ್ಯೆ ಬಗೆಹರಿದಿಲ್ಲ. ಇದೊಂದು ಪುಟ್ಟ ಉದಾಹರಣೆಯಷ್ಟೆ.

ನಮ್ಮ ದೇಶದ ರೈಲುಗಳಲ್ಲಿ, ನಗರ ಸಾರಿಗೆಗಳಲ್ಲಿ ಸದಾ ಜನರು ಕಿಕ್ಕಿರಿದು ತುಂಬಿರುವ ನೋಟ ಸಾಮಾನ್ಯ. ಮುಂಬೈಯ ಲೋಕಲ್ ಟ್ರೈನುಗಳ ಜನಜಂಗುಳಿಯನ್ನು ಕಂಡರೆ ಬೆಚ್ಚಿ ಬೀಳಬೇಕಾಗುತ್ತದೆ. ಮೆಟ್ರೋದಲ್ಲಿಯೂ ಅದೇ ಗಲಾಟೆ. ಹೆಚ್ಚು ಜನ ಸಾರ್ವಜನಿಕ ಸಾರಿಗೆಯ ಮೂಲಕ ಪ್ರಯಾಣಿಸಿದರೂ ಸಮೂಹ ಸಾರಿಗೆ ಪ್ರಮಾಣವನ್ನು ಗಣನೀಯವಾಗಿ ಹೆಚ್ಚಿಸಬೇಕಾಗುತ್ತದೆ. ಆಗಲೂ ಟ್ರಾಫಿಕ್ ಸಮಸ್ಯೆ! ಪ್ರಸ್ತುತ ಬೆಂಗಳೂರೊಂದರಲ್ಲಿಯೇ ಒಂದು ಕೋಟಿಗೂ ಮಿಕ್ಕಿದ ನೋಂದಾಯಿತ ವಾಹನಗಳಿವೆ. ಕೋವಿಡ್ ನಂತರ ಖಾಸಗಿ ವಾಹನಗಳ ನೋಂದಣಿ ಶೇಕಡ 35ರಷ್ಟು ಹೆಚ್ಚಾಗಿದೆ. ಇವನ್ನೆಲ್ಲಾ ತಡೆದುಕೊಳ್ಳುವ ಶಕ್ತಿಯಿರುವ ರಸ್ತೆಗಳು ನಮ್ಮಲ್ಲಿ ಎಷ್ಟಿವೆ? ಟ್ರಾಫಿಕ್ ಸಮಸ್ಯೆಗೆ ಕಡಿವಾಣ ಹಾಕಲು ರಸ್ತೆಗಳನ್ನು ವಿಸ್ತರಿಸೋಣವೆಂದರೆ ಅದೂ ಆಗದ ಸ್ಥಿತಿ. ನಗರಗಳು ಬೆಳೆದಂತೆಲ್ಲ ಇಮ್ಮಡಿಯಾಗುವ ತ್ಯಾಜ್ಯ ವಿಲೇವಾರಿಯ ಸಮಸ್ಯೆಯಂತೂ ಸದ್ಯದ ಮಟ್ಟಿಗೆ ಬಿಡಿಸಲಾಗದ ಕಗ್ಗಂಟಾಗಿ ಉಳಿದಿದೆ.

ಸರ್ಕಾರಿ ಕಚೇರಿಗಳಲ್ಲಿ, ನ್ಯಾಯಾಲಯಗಳಲ್ಲಿ ವಿಲೇವಾರಿಯಾಗದೇ ಉಳಿದ ಕಡತಗಳ ಲೆಕ್ಕ ಇಟ್ಟವರು ಯಾರು? ನೇಮಕಾತಿಯಿಲ್ಲದೇ ಕಚೇರಿಗಳಲ್ಲಿ ಅವಶ್ಯಕ ಸಿಬ್ಬಂದಿಯಿಲ್ಲ. ಜನಸಂಖ್ಯೆ ಬೆಳೆದಂತೆಲ್ಲ ಕಡತಗಳ ಸಂಖ್ಯೆಯೂ ಬೆಳೆಯುತ್ತದೆ. ಅವುಗಳನ್ನು ಇಡಲು ಜಾಗ ಎಲ್ಲಿ? ವಿಲೇವಾರಿ ಮಾಡುವವರು ಯಾರು? ನಿರುದ್ಯೋಗ ಸಮಸ್ಯೆಯನ್ನು ನಿಖರವಾಗಿ ಅಳೆಯಲು ನಮ್ಮಲ್ಲಿ ಯಾವುದೇ ಮಾಧ್ಯಮಗಳು ಇಲ್ಲದೇ ಹೋದರೂ, ಸಮಸ್ಯೆಯ ಆಳ-ಅಗಲ ಸಣ್ಣದೇನೂ ಅಲ್ಲ.

ಮೂಲಸೌಕರ್ಯದ ವ್ಯವಸ್ಥೆ ಮಾಡಲು ನಮ್ಮ ಸರ್ಕಾರಗಳು ಶಕ್ತವಾಗಿದ್ದಾವೆಂದೇ ಊಹಿಸಿಕೊಂಡರೂ ಅದನ್ನೆಲ್ಲಾ ಸುವ್ಯಸ್ಥಿತವಾಗಿ ನಿರ್ವಹಿಸಲು ಅವು ಎಷ್ಟರಮಟ್ಟಿಗೆ ತಯಾರಾಗಿವೆ? ದೈನಂದಿನ ಅವ್ಯವಸ್ಥೆಯನ್ನೇ ನಿಭಾಯಿಸಲು ನಮ್ಮ ಸರ್ಕಾರಗಳು ಹೆಣಗುತ್ತಿರುವಾಗ, ದಿನದಿಂದ ದಿನಕ್ಕೆ ಹೆಚ್ಚಾಗುವ ಇಂತಹ ಸಮಸ್ಯೆಗಳನ್ನು ಅವು ಹೇಗೆ ನಿರ್ವಹಿಸುತ್ತವೆ ಎಂಬುದು ಚಿಂತೆಗೀಡುಮಾಡುವ ವಿಚಾರ.

ಜನಸಂಖ್ಯಾ ಹೆಚ್ಚಳ ಕೇವಲ ಶಾಪವೇ?

ಜನಸಂಖ್ಯಾ ಹೆಚ್ಚಳವೆಂಬ ಪದವನ್ನು ಕೇಳಿದ ಕೂಡಲೇ ಅದೊಂದು ಪಿಡುಗೆಂಬ ಭಾವನೆಯೇ ನಮ್ಮ ಮನದಲ್ಲಿ ಮೂಡುತ್ತದೆ. ಆದರೆ, ಆಳವಾಗಿ ಗಮನಿಸಿದರೆ ಜನಸಂಖ್ಯೆ ಹೆಚ್ಚಳವು ಅಂತಹ ಗಂಭೀರ ಸಮಸ್ಯೆಯೇನಲ್ಲ. ಮೇಲೆ ಉದಾಹರಿಸಲಾದ ಎಲ್ಲಾ ಸಮಸ್ಯೆಗಳಿಗೂ ನಿರ್ವಹಣೆಯಲ್ಲಾಗುತ್ತಿರುವ ಅವ್ಯವಸ್ಥೆಯೇ ಕಾರಣ ಹೊರತು, ಜನಸಂಖ್ಯಾ ಹೆಚ್ಚಳದ ನೇರ ದುಷ್ಪರಿಣಾಮ ಎಂದು ಖಂಡುತುಂಡಾಗಿ ಹೇಳಲಾಗದು. ಸ್ವಲ್ಪ ಸೂಕ್ಷ್ಮವಾಗಿ ಗಮನಿಸೋಣ. ಅಧ್ಯಯನವೊಂದರ ಪ್ರಕಾರ, ಭಾರತದ ಜನಸಂಖ್ಯೆಯ ಶೇಕಡಾ 27ರಷ್ಟು ಯುವಜನಾಂಗವೇ ಇದೆ. ಅಂದರೆ ಸರಿಸುಮಾರು ಮೂವತ್ತಮೂರು ಕೋಟಿ (ಅಮೆರಿಕದ ಒಟ್ಟು ಜನಸಂಖ್ಯೆಯೇ 32 ಕೋಟಿ) ಯುವಜನಾಂಗ ಎಂದು ಅಂದಾಜಿಸಬಹುದು. ಇಂತಹ ಸಮೃದ್ಧ ಯುವಶಕ್ತಿಯನ್ನು ಹೊಂದಿರುವ ರಾಷ್ಟ್ರ ಜಗತ್ತಿನಲ್ಲಿ ಏನನ್ನು ಬೇಕಾದರೂ ಸಾಧಿಸಬಹುದು. ಬಹಳ ಮುಖ್ಯವಾಗಿ ಅಪಾರವಾದ ಜನಸಂಖ್ಯೆ ಹೊಂದಿರುವುದರಿಂದ ನಮ್ಮ ದೇಶ ಜಗತ್ತಿನಲ್ಲಿಯೇ ಅತಿ ದೊಡ್ಡ ಮಾರುಕಟ್ಟೆ. ಹೆಚ್ಚು ಜನಸಂಖ್ಯೆಯ ಕಾರಣ ಹೆಚ್ಚೇ ಹೆಚ್ಚು ಮಾನವ ಗಂಟೆಗಳ ಸವಲತ್ತು ಅನಾಯಾಸವಾಗಿ ದೇಶಕ್ಕೆ ಲಭಿಸುತ್ತದೆ. ಅದನ್ನು ದೇಶ ಕಟ್ಟುವಲ್ಲಿ ಬಳಸಿಕೊಳ್ಳುವ ಚಾಕಚಾಕ್ಯತೆ ಸರ್ಕಾರಗಳಿಗೆ ಇರಬೇಕಷ್ಟೆ.

ಕೈಮೀರಿ ಬೆಳೆಯುತ್ತಿರುವ ಜನಸಂಖ್ಯೆಯನ್ನು ಕಟ್ಟಿಹಾಕುವುದು ಹೇಗೆ? ನಮ್ಮ ದೇಶದ ಜನಸಂಖ್ಯೆ 2050ರ ಹೊತ್ತಿಗೆ 164 ಕೋಟಿಯಷ್ಟಾಗುತ್ತದೆ ಎಂಬುದು ನಿಖರವಾದ ಲೆಕ್ಕಾಚಾರವಲ್ಲದೇ ಹೋದರೂ ಅದರ ಆಸುಪಾಸಿನಲ್ಲಿ ಬೆಳೆಯುತ್ತದೆ ಎಂಬುದನ್ನಂತೂ ತಳ್ಳಿ ಹಾಕಲು ಸಾಧ್ಯವಿಲ್ಲ. ಮೇಲೆ ಬೆಂಗಳೂರನ್ನು ಉದಾಹರಣೆಗಾಗಿ ತೆಗೆದುಕೊಂಡಿದ್ದೇನೆ, ನಿಜ. ಆದರೆ, ಇತರ ನಗರಗಳಲ್ಲಿ ಇಂತಹದ್ದೇ ಅಥವಾ ಇದಕ್ಕಿಂತಲೂ ಭೀಕರವಾದ ಸಮಸ್ಯೆಗಳು ಉಂಟಾಗುವುದರಲ್ಲಿ ಸಂದೇಹವಿಲ್ಲ. ಅಂತಹ ಸಮಸ್ಯೆಗಳಿಗೆ ಪರಿಹಾರ ಹುಡುಕಲು ನಾವೀನ್ಯದ 'ಲೇಬರ್ ರೂಮ್'ಗಳು ಈಗಲೇ ಕಾರ್ಯಪ್ರವೃತ್ತವಾಗಬೇಕಿದೆ.



ಮುಂದಿನ 10 ವರ್ಷಗಳಲ್ಲಿ ಪ್ರಮುಖ ನಗರಗಳಲ್ಲಿ ಇಷ್ಟಾಗಬಹುದು ಜನಸಂಖ್ಯೆ



ಮಾಹಿತಿ: worldpopulationreview.com

ಮಕ್ಕಳಿರಲವ್ವ ಲಿಮಿಟ್ ಒಳಗೆ

12ನೇ ಪುಟದಿಂದ...

ಕಡೆಗೆ ನೂರೈವತ್ತು ಸಂಖ್ಯೆ ದಾಟಿದಾಗ ಆಹಾರಕ್ಕಾಗಿ ಜಗಳ, ಜಾಗಕ್ಕಾಗಿ ಗಲಾಟೆ, ಹಿಂಸಾಚಾರ ಶುರುವಾಯಿತು. ಕೂಡು ಕುಟುಂಬ ನಾಲ್ಕು ಪಟ್ಟು ಬೆಳೆದು ಅಲ್ಲೋಲ ಕಲ್ಲೋಲ ಎಬ್ಬಿಸಿತು. ಯಾಕೆ ಹೀಗೆ ಆಗ್ತಿದೆ ಎಂದು ನಾನು ವಿಶ್ವನನ್ನು ಪ್ರಶ್ನೆ ಮಾಡಿದ್ದೆ.

'ಮನೆಯ ಸೈಜ್ ಅಷ್ಟೇ ಇದೆ. ಜಮೀನಿನ ವಿಸ್ತೀರ್ಣ ಅಷ್ಟೇ ಇದೆ. ಬರುವ ಆದಾಯಾನ ಎಷ್ಟು ಮಂದಿಗೆ ಹಂಚೋಕೆ ಸಾಧ್ಯ? 35 ಇದ್ದ ಮಕ್ಕಳು 150 ಮಂದಿ ಆದರೆ ತಟ್ಟೆಯಲ್ಲಿ ಊಟ ಬಡಿಸಲಾಗೊಲ್ಲ. ದೊನ್ನೆಯಲ್ಲಿ ಪ್ರಸಾದ ನೀಡಬಹುದು ಅಷ್ಟೆ' ಎಂದ.

ಇದೇ ಸಂದರ್ಭಕ್ಕೆ ನಾನು ಕಾಯುತ್ತಿದ್ದೆ.

'ನಿಜ ವಿಶ್ವ, ನಿಮ್ಮ ಮನೆ ಬೇರೆ ಅಲ್ಲ, ನಮ್ಮ ದೇಶ ಬೇರೆ ಅಲ್ಲ. ಭಾರತಕ್ಕೆ ಸ್ವಾತಂತ್ರ್ಯ ಬಂದಾಗ ಜನಸಂಖ್ಯೆ 35 ಕೋಟಿ ಇತ್ತು. ಇವತ್ತು 150 ಕೋಟಿ ಆಗಿದೆ. ಭಾರತದ ವಿಸ್ತೀರ್ಣ ಅಷ್ಟೇ ಇದೆ. ಕೃಷಿ ಜಮೀನು ಅಷ್ಟೇ ಇದೆ. ಮಕ್ಕಳನ್ನು ಸಾಕೋದು ಭಾರತಾಂಬೆಗೆ ಕಷ್ಟ ಆಗ್ತಿಲ್ವಾ?' ಎಂದೆ.

'ಆದ್ರೆ ಜನಶಕ್ತಿ ಬೆಳೀತಿದೆಯಲ್ಲ? ಎಲೆಕ್ಷನ್ ಬೂತುಗಳು ಜಾಸ್ತಿ ಆಗ್ತಿವೆಯಲ್ಲ? ತಾಲ್ಲೂಕುಗಳು, ರಾಜ್ಯಗಳು ಜಾಸ್ತಿ ಆಗ್ತಿವೆಯಲ್ಲ, ಇದು ದೇಶದ ಬೆಳವಣಿಗೆಯ ಸಂಕೇತ ಅಲ್ವಾ?' ಎಂದ.

'ನಿಮ್ಮ ಕೂಡು ಕುಟುಂಬದಲ್ಲಿ 150 ಮಕ್ಕಳಾದಾಗ ಮಲಗಲು ಜಾಗ ಸಿಗಲಿಲ್ಲ ಅಂತ ನೀನೇ ಹೇಳ್ದೆ. ಆ ಪರಿಸ್ಥಿತಿ ಭಾರತಕ್ಕೆ ಬಂದಿದೆ ಅಂತ ನಿನ್ಗೆ ಅನ್ಸಿಲ್ವಾ? ಎದೆ ಮುಟ್ಕೊಂಡು ಹೇಳು' ಎಂದೆ.

ವಿಶ್ವ ಪ್ರಾಮಾಣಿಕವಾಗಿ ಒಪ್ಪಿಕೊಂಡ.

'ಕಿಟಕಿ ಬಾಗಿಲು ಹಾಕು. ಸತ್ಯ ಹೇಳ್ತೀನಿ. ನೀನು ಹೇಳ್ತಾ ಇರೋದು ನಿಜ. ಇಷ್ಟು ಪ್ರಜೆಗಳನ್ನು ನಮ್ಮಿಂದ ಸಾಕೋಕಾಗ್ತಾ ಇಲ್ಲ'.

'ದೇಶದ ಪ್ರಾಬ್ಲಂ ನಿಂಗೆ ಅರ್ಥ ಆಗಿದೆ. ಹಾಗಿದ್ರೆ ನೀನು ರಾಜಕಾರಣಿ ಆಗಿ ಓಪನ್ ಆಗಿ ಯಾಕೆ ಸ್ಟೇಟ್‌ಮೆಂಟ್ ಕೊಡ್ತಾ ಇಲ್ಲ? ಜನಸಂಖ್ಯೆ ಕಡಿಮೆ ಮಾಡಿ ಅಂತ ಕರೆ ಯಾಕೆ ನೀಡ್ತಿಲ್ಲ?' ಎಂದು ದಬಾಯಿಸಿದೆ.

'ಎಮರ್ಜೆನ್ಸಿ ಟೈಮಲ್ಲಿ ಸಂಜಯ್‌ಗಾಂಧಿ ಮಕ್ಕಳ ಸಂಖ್ಯೆ ಕಡಿಮೆ ಮಾಡಿ ಅಂದ್ರು. ಒಳ್ಳೇ ಮಾತದು. ಸಂಜಯ್‌ಗಾಂಧಿ ಇದ್ದಿದ್ರೆ ನಮ್ಮ ಜನಸಂಖ್ಯೆ ಇವತ್ತು ನೂರು ಕೋಟಿ ದಾಟ್ತಾ ಇರ್ಲಿಲ್ಲ. ಆದ್ರೆ ಆವತ್ತು ಪರಿಣಾಮ ಏನಾಯ್ತು? ಅವರು ಮಾತಾಡಿ ಸೋತರು. ಅವರ ಮಾತಿನಿಂದ ಪಾರ್ಟಿಗೆ ತೊಂದ್ರೆ ಆಯ್ತು. ಆದ್ದರಿಂದ ರಾಜಕಾರಣಿಗಳಾದ ನಾವು ಒಂದು ನಿರ್ಧಾರಕ್ಕೆ ಬಂದಿದ್ದೀವಿ. ಮಕ್ಕಳು ಯಾರು ಎಷ್ಟೇ ಮಾಡ್ಕೊಂಡ್ಹೋಗ್ಲಿ, ಅದು ಅವರವರ ತಾಖತ್ತು. ನಮ್ಗೆ ಜಾಸ್ತಿ ಓಟು ಸಿಕ್ರೆ ಸಾಕು'.

'35 ಕೋಟಿ ಮಕ್ಕಳಿದ್ದಾಗ ಭಾರತಾಂಬೆ ಆರಾಮವಾಗಿ ಎಲ್ಲರನ್ನೂ ಸಾಕುತ್ತಿದ್ದಳು. ಅನಂತರ ಪ್ರತಿ ವರ್ಷ ನಾವು ಆಸ್ಟ್ರೇಲಿಯಾ ದೇಶವನ್ನ ನಮ್ಮಲ್ಲಿ ಹುಟ್ಟು ಹಾಕುತ್ತಿದ್ದೇವೆ' ಎಂದೆ.

'ನಿಜ, ಪ್ರತಿವರ್ಷ ಆಸ್ಟ್ರೇಲಿಯಾದ ಜನಸಂಖ್ಯೆಯಷ್ಟು ಮಂದಿ ಭಾರತದಲ್ಲಿ ಹುಟ್ತಿದ್ದಾರೆ. ಆಸ್ಟ್ರೇಲಿಯಾ ಜನಸಂಖ್ಯೆ ಇಂದಿಗೂ ಎರಡೂವರೆ ಕೋಟಿ ಮಾತ್ರ'

'ಆಸ್ಟ್ರೇಲಿಯಾ ಇವತ್ತು ಅತ್ಯಂತ ಶ್ರೀಮಂತ ರಾಷ್ಟ್ರ. ಅಲ್ಯೂಮಿನಿಯಂ ಮತ್ತು ಚಿನ್ನಕ್ಕೆ ಫೇಮಸ್ ಆಗಿದೆ. ಅದು ಎಲ್ಲರಿಗೂ ಗೊತ್ತು. ಆಸ್ಟ್ರೇಲಿಯಾ ವಿಸ್ತೀರ್ಣದಲ್ಲಿ ಭಾರತಕ್ಕಿಂತ ಎರಡೂವರೆ ಪಟ್ಟು ದೊಡ್ಡದಾಗಿದೆ. ಭಾರತದ ಪೂರ್ತಿ ಜನಸಂಖ್ಯೇನ ಆಸ್ಟ್ರೇಲಿಯಾಗೆ ವರ್ಗಾವಣೆ ಮಾಡಿದ್ರೆ ಏನಾಗುತ್ತೆ ಅಂತ ಕಲ್ಪಿಸಿಕೋ'

'ಕಾಂಗರೂ ನಾಡು ತಬ್ಬಿಬ್ಬಾಗಿ ನಡುಗಿಹೋಗುತ್ತೆ. ಹೊಟ್ಟೆಗೆ ಆಹಾರ ಇಲ್ದೆ ಜನ ಸಾಯ್ತಾರೆ' ಎಂದ.

'ಭಾರತದಲ್ಲೂ ಅದೇ ಪರಿಸ್ಥಿತಿ ಆಗ್ತಿದೆಯಲ್ಲ? ಅಪಾಯದ ಗಂಟೆ ಬಾರಿಸ್ತಿದೆ. ಇಂಥ ವಿಷಮ ಪರಿಸ್ಥಿತೀಲಿ ರಾಜಕಾರಣಿಗಳು ದೇಶದ ಹಿತ ಕಾಪಾಡೋ ಮನಸ್ಸು ಮಾಡ್ಬೇಕು. ಚೀನಾ ದೇಶ ಕುಟುಂಬಕ್ಕೆ ಒಂದೇ ಮಗು ಅನ್ನೋ ನಿಯಮಾನ ಪಾಲಿಸ್ತು. ಅಲ್ಲಿನ ಪಾಪುಲೇಷನ್ ಗ್ರೋತು ಜೀರೋಗೆ ಇಳಿದಿತ್ತು. ನಾವ್ಯಾಕೆ ಕೆಲವು ವರ್ಷ ಅದನ್ನು ಮಾಡಬಾರ್ದು?' ಅಂದೆ.

'ನಿನಗ್ಗೊತ್ತಾಗೊಲ್ಲ. ಒಂದ್ಸಲ ನೀನು ಎಂ.ಎಲ್.ಎ. ಆಗು. ಅಧಿಕಾರದಲ್ಲಿ ನಾವಿರೋವರೆಗೂ ಆರಾಮವಾಗಿದ್ರೆ ಸಾಕು. ಮುಂದೆ ಬರೋ ಸರ್ಕಾರ ಜನಸಂಖ್ಯೆ ನಿಯಂತ್ರಣ ಮಾಡಲಿ. ನಮಗೇಕೆ ಆ ತಲೆನೋವು?' ಎಂದು ಮಾತು ಮುಗಿಸಿದ.

ಅನ್ನ ಬೆಂದಿದೆ ಎನ್ನಲು ಒಂದೆರಡು ಅಗುಳು ಹಿಸುಕಿ ನೋಡಿದರೆ ಸಾಕು. ವಿಶ್ವನನ್ನು ಹಿಸುಕಿದೆ. ರಾಜಕಾರಣಿಗಳ ಕೈಗೆ ಸಿಕ್ಕಿ ಬಿದ್ದಿರುವ ಭಾರತಾಂಬೆ ಹೇಗೆ ನಲುಗುತ್ತಿದ್ದಾಳೆಂಬುದು ಅರ್ಥವಾಯಿತು.

ಮುನ್ನೋಟ 31-07-2022 ರಿಂದ 06-08-2022

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ

ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1

ಕೃಷಿ ಸಂಬಂಧಿತ ಉದ್ಯೋಗಗಳಿಂದ ಆದಾಯ ಬರುತ್ತದೆ. ಕೆಲವೊಂದು ಕೆಲಸ ಕಾರ್ಯಗಳು ಕೈಗೂಡಿದರೂ ಕೆಲವು ಕೆಲಸಗಳಲ್ಲಿ ಹಿನ್ನಡೆ ಇರುತ್ತದೆ. ಅಕಾಲ ಭೋಜನದಿಂದಾಗಿ ಆರೋಗ್ಯ ತಪ್ಪಬಹುದು. ದೂರ ಪ್ರಯಾಣದಿಂದ ದೇಹಾಲಸ್ಯ ಆಗುವ ಸಾಧ್ಯತೆ ಇದೆ. ಆಸ್ತಿಗೆ ಸಂಬಂಧಪಟ್ಟ ವಿಷಯಗಳನ್ನು ಕಲೆ ಹಾಕಲು ಸಾಕಷ್ಟು ಸುತ್ತಾಟ ಮಾಡುವಿರಿ. ನಿಮ್ಮ ಸಂಗಾತಿಯ ಕುಹಕ ಮಾತು ನಿಮ್ಮನ್ನು ಕೆರಳಿಸುತ್ತದೆ.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2

ಹಣಕಾಸಿನ ಅನುಕೂಲ ಒದಗಿಬರುತ್ತದೆ. ಕಾನೂನಿಗೆ ಸಂಬಂಧಪಟ್ಟ ವ್ಯವಹಾರಗಳಲ್ಲಿ ಮುನ್ನಡೆ ಇರುತ್ತದೆ. ಮನೆಯವರ ಮನೋಗುಣಕ್ಕೆ ಅನುಗುಣವಾಗಿ ಹೊಂದಿಕೊಳ್ಳುವಿರಿ. ಸಾಲಮಾಡಿ ಸಣ್ಣಪುಟ್ಟ ಕೈಸಾಲಗಳನ್ನು ತೀರಿಸಿಕೊಳ್ಳುವಿರಿ. ಉದ್ಯೋಗದಾತರ ಕೃಪೆಯಿಂದ ತಾಂತ್ರಿಕತೆಯಲ್ಲಿ ಕೌಶಲ ಪಡೆದುಕೊಳ್ಳುವಿರಿ. ಸಹೋದ್ಯೋಗಿಗಳ ಗೆಳೆತನವನ್ನು ಗಟ್ಟಿ ಮಾಡಿಕೊಳ್ಳುವಿರಿ.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3

ಮನೆಯವರೊಂದಿಗೆ ಚರ್ಚೆಯ ಮೂಲಕ ಕುಟುಂಬದಲ್ಲಿದ್ದ ಭಿನ್ನಾಭಿಪ್ರಾಯಗಳನ್ನು ದೂರ ಮಾಡುವಿರಿ. ಇದರಲ್ಲಿ ನಿಮ್ಮ ನಿರೀಕ್ಷೆಗೆ ತಕ್ಕಂತೆ ಫಲಿತಾಂಶ ದೊರೆತು ನೆಮ್ಮದಿಯಾಗುವುದು. ದ್ರವ ರೂಪದ ರಾಸಾಯನಿಕ ಪದಾರ್ಥಗಳನ್ನು ಮಾರಾಟ ಮಾಡುವವರ ವ್ಯವಹಾರ ವಿಸ್ತರಿಸುತ್ತದೆ. ಹಿರಿಯ ಗಣ್ಯವ್ಯಕ್ತಿಗಳಿಗೆ ಸಮಾಜದಲ್ಲಿ ಸ್ಥಾನಮಾನ ದೊರೆತು ತನ್ಮೂಲಕ ರಾಜಕೀಯ ಪ್ರವೇಶಕ್ಕೆ ಅನುಕೂಲ ಆಗುತ್ತದೆ.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ

ಹೊಸ ಜನರ ಪರಿಚಯವಾಗಿ ವ್ಯವಹಾರದಲ್ಲಿ ಚೇತರಿಕೆಯನ್ನು ಕಾಣಬಹುದು. ಆರ್ಥಿಕ ಸ್ಥಿತಿಯು ಉತ್ತಮ ಸ್ಥಿತಿಯತ್ತ ಹೊರಳುತ್ತದೆ. ಭಾಷಣಕಾರರಿಗೆ ಉತ್ತಮ ವೇದಿಕೆ ದೊರೆಯುತ್ತದೆ. ಇಲ್ಲಿ ಅವರು ತಮ್ಮ ಮನೋಗತವನ್ನು ಪ್ರಚುರಪಡಿಸಬಹುದು. ಮಿಲಿಟರಿ ಸಂಶೋಧನಾ ವಿಭಾಗದಲ್ಲಿ ಕೆಲಸ ಮಾಡುತ್ತಿರುವವರಿಗೆ ಹೊಸ ರೀತಿಯ ಅನುಕೂಲಕರ ಫಲಿತಾಂಶಗಳು ದೊರೆತು ಹೆಮ್ಮೆಯಾಗುತ್ತದೆ.

ಸಿಂಹ — ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1

ಚಿನ್ನ, ಬೆಳ್ಳಿ ವ್ಯಾಪಾರಸ್ಥರಿಗೆ ಹೆಚ್ಚಿನ ವ್ಯಾಪಾರ ನಡೆಯುವ ಸಂದರ್ಭವಿದೆ. ಹಿರಿಯರ ಹದಗೆಟ್ಟ ಆರೋಗ್ಯದಲ್ಲಿ ಸಾಕಷ್ಟು ಚೇತರಿಕೆಯನ್ನು ಕಾಣಬಹುದು. ವಿದ್ಯಾರ್ಥಿಗಳಿಗೆ ಅಧ್ಯಯನಕ್ಕೆ ಉತ್ತಮ ಕಾಲವಾದರೂ ಹೆಚ್ಚಿನ ಶ್ರಮ ಅಗತ್ಯ. ಖರ್ಚಿನ ಬಗ್ಗೆ ಹೆಚ್ಚು ಎಚ್ಚರ ವಹಿಸಿರಿ. ಮಿತಿಮೀರಿದಲ್ಲಿ ಸಾಲ ಮಾಡಬೇಕಾದ ಸಂದರ್ಭ ಬರಬಹುದು. ಹಣದ ಒಳಹರಿವು ಮಂದಗತಿಯಲ್ಲಿ ಇರುತ್ತದೆ.

ಕನ್ಯಾ — ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2

ಸಂಗಾತಿ ಆದಾಯದಲ್ಲಿ ಸ್ವಲ್ಪ ಏರಿಕೆ ಕಂಡು ಬರುತ್ತದೆ ಹಾಗೂ ನಿಮ್ಮೆಲ್ಲಾ ಕೆಲಸಗಳಿಗೂ ಸಂಗಾತಿಯ ಸಹಕಾರ ದೊರೆಯುತ್ತದೆ. ವೃತ್ತಿಯಲ್ಲಿ ಮಹಿಳಾ ಹಿರಿಯ ಅಧಿಕಾರಿಗಳಿಂದ ಸಾಕಷ್ಟು ಸಹಾಯ ದೊರೆಯುತ್ತದೆ. ಕೆಲವೊಂದು ಗೃಹ ಕೈಗಾರಿಕೆಯ ತರಬೇತಿ ಶಿಬಿರಗಳಲ್ಲಿ ಭಾಗವಹಿಸುವ ಅವಕಾಶವಿದೆ. ಜಾಹೀರಾತು ಸಂಸ್ಥೆಯನ್ನು ನಡೆಸುತ್ತಿರುವವರಿಗೆ ಹೆಚ್ಚು ವ್ಯವಹಾರಗಳಾಗಿ ಆದಾಯ ಬರುತ್ತದೆ.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖಾ 1,2,3

ಸಂಗಾತಿಯ ಕಡೆಯಿಂದ ನಿಮ್ಮ ಕೆಲಸಕಾರ್ಯಗಳಿಗೆ ಧನಸಹಾಯ ಒದಗುತ್ತದೆ. ಸರ್ಕಾರಿ ವೃತ್ತಿಯಲ್ಲಿರುವವರಿಗೆ ಬಡ್ತಿ ಸಿಗುವ ಸಂದರ್ಭವಿದೆ. ಸರ್ಕಾರಿ ಇಲಾಖಾ ಪತ್ರ ವ್ಯವಹಾರಗಳಲ್ಲಿ ಮುನ್ನಡೆಯನ್ನು ಸಾಧಿಸಬಹುದು. ಗೃಹ ಬಳಕೆ ಸಾಮಗ್ರಿಗಳನ್ನು ಮಾರಾಟ ಮಾಡುವವರ ವ್ಯವಹಾರ ವಿಸ್ತರಿಸುತ್ತದೆ. ಗಣ್ಯರ ಸಂಪರ್ಕಗಳನ್ನು ಪಡೆದು ಸ್ವಂತ ಕೆಲಸಗಳನ್ನು ಮಾಡಿಕೊಳ್ಳುವಿರಿ.

ವೃಶ್ಚಿಕ — ವಿಶಾಖಾ 4 ಅನೂರಾಧ, ಜ್ಯೇಷ್ಠ

ಬರಹಗಾರರು, ಕಲಾವಿದರಿಗೆ ಉತ್ತಮ ಉತ್ತೇಜನ ದೊರೆಯುತ್ತದೆ. ಕೃಷಿಕರು ಬೆಳೆದ ಬೆಳೆಗೆ ಉತ್ತಮ ಬೆಲೆ ದೊರೆಯುತ್ತದೆ. ಹಣದ ಒಳಹರಿವು ಅಗತ್ಯಕ್ಕೆ ತಕ್ಕಷ್ಟು ಇರುತ್ತದೆ. ಮಕ್ಕಳ ಬದುಕಿನಲ್ಲಿ ಹೊಸ ತಿರುವು ಕಂಡು ಮುನ್ನಡೆಯನ್ನು ಕಾಣಬಹುದು. ಕೆಲಸಕಾರ್ಯಗಳಲ್ಲಿ ಇದ್ದ ಒತ್ತಡ ಕಡಿಮೆಯಾಗುವ ಸಂದರ್ಭವಿದೆ.

ಧನುಸ್ಸು — ಮೂಲಾ, ಪೂರ್ವಾಷಾಢ, ಉತ್ತರಾಷಾಢ 1

ಔದ್ಯೋಗಿಕ ಸಮಸ್ಯೆಗಳು ಮೇಲಧಿಕಾರಿಯ ನೆರವಿನಿಂದ ಪರಿಹಾರವಾಗುವುದು. ನಿಮ್ಮ ವ್ಯಾಪಾರ ವ್ಯವಹಾರಗಳಿಗೆ ವಾಣಿಜ್ಯ ಅಧಿಕಾರಿಗಳು ಮತ್ತು ಸರ್ಕಾರದ ಸಹಕಾರ ದೊರೆಯುತ್ತದೆ. ಸ್ಥಿರಾಸ್ತಿ ಕೊಳ್ಳುವ ಯೋಗವಿದೆ. ಹಣದ ಒಳಹರಿವು ಮಂದಗತಿಯಲ್ಲಿ ಇರುತ್ತದೆ. ಶತ್ರುಗಳನ್ನು ಮಣಿಸಲು ಅವರದೇ ತಂತ್ರಗಳನ್ನು ಬಳಸುವಿರಿ. ಧಾರ್ಮಿಕ ವಿಷಯಗಳಲ್ಲಿ ಹೆಚ್ಚಿನ ಆಸಕ್ತಿ ಮೂಡುತ್ತದೆ.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2

ಅಬಕಾರಿ ಇಲಾಖೆಯ ಕೆಲಸಗಾರರಿಗೆ ಬಿಡುವಿಲ್ಲದ ಕೆಲಸವಿರುತ್ತದೆ. ಕೆಲವು ರಾಜಕಾರಣಿಗಳಿಗೆ ಗೊಂದಲಮಯ ಸನ್ನಿವೇಶಗಳು ಉಂಟಾಗುತ್ತವೆ. ಹಣದ ಒಳಹರಿವು ಸಾಮಾನ್ಯ ಗತಿಯಲ್ಲಿ ಇರುತ್ತದೆ. ಲೇವಾದೇವಿ ಮಾಡುವವರಿಗೆ ಸ್ವಲ್ಪ ವಸೂಲಾತಿ ಆಗುತ್ತದೆ. ವಿದ್ಯಾರ್ಥಿಗಳ ಪ್ರಯತ್ನಕ್ಕೆ ತಕ್ಕ ಫಲ ಇರುತ್ತದೆ. ಪರಿಣಿತ ತಂತ್ರಜ್ಞರಿಗೆ ಎಲ್ಲಿಲ್ಲದ ಬೇಡಿಕೆ ಬರುತ್ತದೆ.

ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3

ಉಪನ್ಯಾಸಕರಿಗೆ, ಭಾಷಣಕಾರರಿಗೆ ಉತ್ತಮ ವೇದಿಕೆ ದೊರೆಯುತ್ತದೆ ಹಾಗೂ ಉಪನ್ಯಾಸಗಳು ಜನ ಮನ್ನಣೆಗೆ ಪಾತ್ರವಾಗುತ್ತದೆ. ಉನ್ನತ ವ್ಯಾಸಂಗಕ್ಕಾಗಿ ವಿದೇಶಕ್ಕೆ ಹೋಗಬೇಕೆನ್ನುವವರಿಗೆ ಈಗ ಅವಕಾಶ ದೊರೆಯುತ್ತದೆ. ಹಣದ ಒಳಹರಿವು ಉತ್ತಮವಾಗಿದ್ದರೂ ಅದರ ನಿರ್ವಹಣೆ ಅತಿ ಮುಖ್ಯ.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ

ಬಹಳ ದಿನಗಳಿಂದ ಬಾಕಿ ಇರುವ ಕೆಲಸಗಳನ್ನು ಮುಗಿಸುವ ಬಗ್ಗೆ ಆಲೋಚನೆ ಮಾಡಿರಿ. ಉನ್ನತ ವಿದ್ಯಾಭ್ಯಾಸಕ್ಕೆ ಬೇಕಾಗುವ ಎಲ್ಲಾ ರೀತಿಯ ಅನುಕೂಲಗಳು ಒದಗುತ್ತದೆ. ದ್ವಿದಳ ಧಾನ್ಯದ ಬೆಳೆಗಾರರಿಗೆ ಹೆಚ್ಚು ಲಾಭವಿರುತ್ತದೆ. ಹಣದ ಒಳಹರಿವು ಕಡಿಮೆಯಿರುತ್ತದೆ. ನಿಮಗಾಗಿ ಅಲಂಕಾರಿಕ ವಸ್ತುಗಳನ್ನು ಕೊಳ್ಳುವಿರಿ. ಉಸಿರಾಟದ ತೊಂದರೆ ಇರುವವರು ಎಚ್ಚರಿಕೆ ವಹಿಸಬೇಕಾದ ಅನಿವಾರ್ಯವಿದೆ.

ಪದಬಂಧ 2749



ಮೇಲಿನಿಂದ ಕೆಳಕ್ಕೆ

1. ಕಾರ್ಯಕ್ರಮದ ಆರಂಭದಲ್ಲಿ ಭಾಷಣದ ಮೂಲಕ ಆಹ್ವಾನ 3
2. ಸುಲ್ತಾನರ ಅರಮನೆಯಲ್ಲಿ ಮಹಾಮಂತ್ರಿ 3
3. ನೆತ್ತರು ಹೀರುವವ 3
5. ಸದಾ ಗಂಗೆಯ ಜತೆ ಕೂಡುವ ನದಿ ಮೊಟಕು 3
7. ಮೂರ್ಖ ಗುಂಪಿನ ಸದಸ್ಯರು 3
10. ಭಾರವೇ ಇಲ್ಲದ್ದು 3
11. ಸಂಪತ್ತನ್ನು ಭದ್ರಪಡಿಸುವ ಹಳೆಯ ಕಾಲದ ಪೆಟ್ಟಿಗೆ 3
12. ಒಂದು ರೀತಿಯಲ್ಲಿ ವಿವಿಧ ಬಗೆ 3
14. ಮಣಿಯಂತಹ ಮಡದಿ 3
16. ಕಡೆಗೋಲಿನಿಂದ ಆಗುವ ಕ್ರಿಯೆ ತಲೆಯಲ್ಲೂ ಆಗುತ್ತದೆ 3
19. ಎದೆಯ ಮೇಲೆ ಸಂಚರಿಸುವ ಸರ್ಪ 3
20. ಮನಸ್ಸಿಲ್ಲದೇ ಮಾಡುವ ವಂದನೆಯೇ ಇದು? 3
21. ಹಿಂದಿಯವ ಒಪ್ಪಿಕೊಂಡು ಮಾಡಿದ ರುಜು 2
23. ತಲೆಕೆಳಗಾದ ಪುರಿಯಲ್ಲಿ ಅಡಗಿರುವ ಶತ್ರು 2

ಎಡದಿಂದ ಬಲಕ್ಕೆ

1. ಎಪ್ಪತ್ತೈದು ವರ್ಷಗಳ ಬಿಡುಗಡೆಯ ಸಂಭ್ರಮಾಚರಣೆ 5
3. ಕಲೆಯನ್ನು ಆಸ್ವಾದಿಸುವ ರಸಿಕರಿಗೆ ಉಂಟಾಗುವ ತೊಡಕು 4
4. ಪ್ರಾಣಕ್ಕೆ ಆಪತ್ತಿನ ಅಂಜಿಕೆ 4
6. ಅಲೆ ಅಲೆಗಳ ನಡುವಿನ ವ್ಯತ್ಯಾಸ 5
8. ನೀರಿನ ಒಡಲು ಈ ಸಾಗರ 3
9. ಮನಸ್ಸಿನ ಲಹರಿಯಿಂದ ಹರಿಬಿಟ್ಟ ಪದ್ಯ 3
10. ಭೂಮಿಯ ಪಚ್ಚೆಯನ್ನು ಉಳಿಸಲು ನಡೆವ ಹೋರಾಟ 5
12. ಸಮ್ಮತಿ ಸೂಚಿಸಲು ಶಿರವನ್ನು ಓಲಾಡಿಸು 4
13. ಆಂಗ್ಲನ ಹಾಸ್ಯದಲ್ಲಿ ಮಗ ಹಾಸು ಹೊಕ್ಕಿದ್ದಾನೆ 4
15. ಗಾಯಕರು ಮತ್ತು ತಾರೆಯರ ಮನರಂಜನಾ ಕಾರ್ಯಕ್ರಮ 5
17. ಅಮೂಲ್ಯ ರತ್ನ 3
18. ಕಡಲೆಪಪ್ಪು ಬಯಸುವ ಚಿಕ್ಕ ಮಗು 3
19. ಜನಿವಾರ ಹಾಕುವ ಸಂಸ್ಕಾರಕ್ಕೆ ಕಣ್ಣು ದೃಷ್ಟಿ 5
21. ಮಾಲೆಯಿಂದ ನೂಲನ್ನು ತೂಗಿಬಿಟ್ಟ ಮುಖಂಡ 4
22. ಮದವೇರಿದ ಮದನಪ್ರಿಯೆ ಶಿವನ ರೂಪ ತಾಳುತ್ತಾಳೆ 4
24. ಆನೆ ಮುಖದವ; ಗೌರಿ ತನಯ 5

ಪದಬಂಧ ಉತ್ತರ -2748

ಮೇಲಿಂದ ಕೆಳಕ್ಕೆ

2.ರಂಗಮಂಟಪ 3.ರಸಾಯನ 4.ನಾವೆ 5.ವಿಧುರನೀತಿ 7.ಸೇನಾಧಿಪತಿ 8.ಬಂಧುಬಳಗ 12.ರಜತಗಿರಿ 15.ಲಘುವಿರಾಮ 17.ಕಾಡುಮಲ್ಲಿಗೆ 19.ಮುತ್ತುಹವಳ 21.ಕಥಾನಕ 24.ಸಾದ

ಎಡದಿಂದ ಬಲಕ್ಕೆ

1. ಪುರಂದರ 4.ನಾಡದೇವಿ 6.ಸಾರ್ಥಕಸೇವೆ 8.ಬಂಧುರ 9.ಹಟ 10.ನವವಿಧಿ 11.ಪರ 13.ಬಸಂತಿ 14.ಜಟಿಲ 16.ತಿಗಳ 17.ಕಾಮಿತ 18.ಗಮು 20.ವಿನಾಯಕ 22.ತ್ತುಗ 23.ಮದಾರಿ 24.ಸಾಮಗಾಯನ 25.ಗೆಜ್ಜೆನಾದ 26.ಕಣ್ಣಳತೆ

ಕುರನ್ಗರಾಯನ ಕ್ರಾಂತಿಕಾರಿ ಮಾದರಿ

ವಿಮರ್ಶೆ

ರಘುನಾಥ ಚ.ಹ.

ತುಮಕೂರು ಜಿಲ್ಲೆಯ ರವಿಕುಮಾರ್ ನೀಹ, ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿಯ ಮೊಗಸಾಲೆಯಲ್ಲಿನ ದಲಿತ ಹೆಜ್ಜೆಗುರುತುಗಳ ಹುಡುಕಾಟದಲ್ಲಿ ತೊಡಗಿಕೊಂಡಿರುವ ಉತ್ಸಾಹಿ ಸಂಶೋಧಕ-ಲೇಖಕರು; ವಿಮರ್ಶಕ ಮತ್ತು ಕಥೆಗಾರರಾಗಿಯೂ ಗುರ್ತಿಸಿಕೊಂಡವರು. 'ದಲಿತ ಸಾಹಿತ್ಯ ಮೀಮಾಂಸೆ', 'ಜಲಜಂಬೂಕನ್ನೆ' ಖಂಡಕಾವ್ಯ ಹಾಗೂ ಕೆ.ಬಿ. ಸಿದ್ಧಯ್ಯನವರ ಕಾವ್ಯದ ಪ್ರಮುಖ ಸೆಲೆಗಳನ್ನು ಚರ್ಚಿಸುವ 'ಕಣ್ಣು ಧರಿಸಿ ಕಾಣಿರೊ' ರವಿಕುಮಾರರ ಪ್ರಮುಖ ಕೃತಿಗಳು. ಈ ಸಾಲಿಗೆ ಹೊಸ ಸೇರ್ಪಡೆ – 'ಅರಸು ಕುರನ್ಗರಾಯ'.

ಕುರನ್ಗರಾಯ ಮಾದಿಗ ಜಾತಿಯವನು. ಅರಸನಾಗಿ ಜನಮನದಲ್ಲಿ ನೆಲೆನಿಂತಿದ್ದರೂ ಜಾತಿಯ ಕಾರಣದಿಂದಾಗಿ ಇತಿಹಾಸದಿಂದ ಹೊರಗೆ ನಿಂತವನು. ಆಚರಣೆ, ನಂಬಿಕೆ, ಐತಿಹ್ಯಗಳಲ್ಲಿ ಹುದುಗಿರುವ ರಾಯನನ್ನು ಹೆಕ್ಕಿ ದಾಖಲಿಸುವ ಪ್ರಯತ್ನ ಈ ಕೃತಿ.

ಕೊರಟಗೆರೆಯಿಂದ 13 ಕಿ.ಮೀ. ದೂರದಲ್ಲಿರುವ ಸುವರ್ಣಗಿರಿ ಬೆಟ್ಟದ ತಪ್ಪಲಲ್ಲಿರುವ ಊರು ಕುರಂಕೋಟೆ. ಸುವರ್ಣಗಿರಿಯ (ಈಗಿನ ಸಿದ್ಧರಬೆಟ್ಟ) ಮೇಲೆ ಕಲ್ಲಿನಿಂದ ಒಂದು ಕೋಟೆ ಹಾಗೂ ಬೆಟ್ಟದ ತಪ್ಪಲಿನಲ್ಲಿ ಸುವರ್ಣಗಿರಿಗೆ ಹೊಂದಿಕೊಂಡಂತೆ ಮಣ್ಣಿನಿಂದ ಒಂದು ಕೋಟೆಯನ್ನು ಕುರನ್ಗರಾಯ ನಿರ್ಮಿಸಿದ್ದು, ಕುರನ್ಗರಾಜನ ಕೋಟೆಗಳ ಕುರುಹುಗಳು ಈಗಲೂ ಇವೆ. ಕುರನ್ಗರಾಜನ ಆತಿಥ್ಯವನ್ನು ಸ್ವೀಕರಿಸಲು ಹೈದರಾಲಿ ಆಗಾಗ ಕುರಂಕೋಟೆಗೆ ಬರುತ್ತಿದ್ದ ಎನ್ನಲಾಗಿದೆ.

ಸುವರ್ಣಗಿರಿಯನ್ನು ಆಡಳಿತ ಕೇಂದ್ರವಾಗಿಸಿಕೊಂಡು, ಸುತ್ತಮುತ್ತಲಿನ 25-30 ಹಳ್ಳಿಗಳ ಆಳ್ವಿಕೆ ಕುರನ್ಗರಾಯನದಾಗಿತ್ತು. 1730-1780ರ ಆಸುಪಾಸು ಕುರನ್ಗರಾಜನ ಕಾಲ ಎಂದು ಲೇಖಕರು ಅಂದಾಜು ಮಾಡಿದ್ದಾರೆ.

'ಅರಸು ಕುರನ್ಗರಾಯ' ಕೃತಿಗೆ ಎರಡು ರೀತಿಯ ಮಹತ್ವವಿದೆ. ಒಂದು, ಚರಿತ್ರೆಯ ವಿಸ್ಮೃತಿಗೆ ಒಳಗಾಗಿದ್ದ ಜನನಾಯಕನಿಗೆ ವರ್ತಮಾನದಲ್ಲಿ ನ್ಯಾಯ ದೊರಕಿಸಿಕೊಡುವ ಪ್ರಯತ್ನ. ಎರಡನೆಯದು, ನಿಮ್ನ ವರ್ಗದ ವ್ಯಕ್ತಿಯೊಬ್ಬ ಆಡಳಿತ ನಡೆಸುವಂತಾದಾಗ ಸಮಾಜಕ್ಕೆ ದೊರೆಯಬಹುದಾದ ಹೊಸ ಚಲನೆಯ ಸೂಚನೆಗಳು. ಯುದ್ಧಗಳ ಮೂಲಕ ಸಾಧ್ಯವಾಗುವ ಸಾಮ್ರಾಜ್ಯ ವಿಸ್ತರಣೆಯನ್ನು ರಾಜರುಗಳ ಸಾಧನೆಯ ಮಾನದಂಡವನ್ನಾಗಿ ನೋಡುವ ಸಂದರ್ಭದಲ್ಲಿ, ಸುಮಾರು ಎರಡು ದಶಕಗಳ ತನ್ನ ಆಳ್ವಿಕೆಯಲ್ಲಿ ಕುರನ್ಗರಾಯ ಒಂದೂ ಯುದ್ಧ ಮಾಡದಿರುವುದನ್ನು ಗಮನಿಸಬೇಕು. ಜನಹಿತವನ್ನೇ ಆದ್ಯತೆಯನ್ನಾಗಿಸಿಕೊಂಡ ಯಾವುದೇ ನಾಯಕನಿಗೆ ಯುದ್ಧ ಮುಖ್ಯವೆನ್ನಿಸುವುದಿಲ್ಲ.



ಅರಸು ಕುರನ್ಗರಾಯ
ಲೇ: ಡಾ. ರವಿಕುಮಾರ್ ನೀಹ
ಪ್ರ: ಜಲಜಂಬೂ ಲಿಂಕ್ಸ್, ತುಮಕೂರು
ಸಂ: 8095467911
ಪು:215 ₹250

ಕುರನ್ಗರಾಯನ ಆಳ್ವಿಕೆ ಮಾದಿಗ, ಬೇಡ, ಗೊಲ್ಲ ಸಮುದಾಯಗಳ ಸಹಯೋಗದೊಂದಿಗೆ ರೂಪುಗೊಂಡಿತ್ತು. ಇತರ ವರ್ಗಗಳ ದಬ್ಬಾಳಿಕೆಯಿಂದ ನಲುಗಿದ್ದ ಜನರಿಗೆ ಮಾದಿಗ ಸಮುದಾಯದ ರಾಜನ ಆಳ್ವಿಕೆ ನೆಮ್ಮದಿ ತಂದಿರಬೇಕು. ಕುರನ್ಗರಾಯನ ಮೂಲಕ ಸಾಧ್ಯವಾದ ರಾಜಕೀಯ ಸಮೀಕರಣದ ಉದಾಹರಣೆಗಳು ಇಲ್ಲವೇ ಇಲ್ಲ ಎನ್ನುವಷ್ಟು ವಿರಳವಾಗಿರುವುದು, ಅಂದಿನ ಪುಟ್ಟ ರಾಜಕೀಯ ಪ್ರಯೋಗ ಕ್ರಾಂತಿಕಾರಿಯಾಗಿತ್ತು ಎನ್ನುವುದನ್ನು ಸೂಚಿಸುವಂತಿದೆ. ಆ ಪ್ರಯೋಗ ಈ ಹೊತ್ತಿಗೆ ಹೆಚ್ಚು ಅಪೇಕ್ಷಣೀಯವಾದುದು ಎನ್ನುವುದನ್ನೂ ಕುರನ್ಗರಾಯ ಕೃತಿ ಸೂಚಿಸುವಂತಿದೆ.

ಕುರನ್ಗರಾಯನ ಆಳ್ವಿಕೆಯ ಪ್ರಾಂತ್ಯದಲ್ಲಿ ಚರ್ಮಗಾರಿಕೆ ಮುಖ್ಯ ಕಸುಬಾಗಿತ್ತು; ಜನರಿಗೆ ಆದಾಯದ ಪ್ರಮುಖ ಮೂಲವಾಗಿತ್ತು. ಆ ಪ್ರದೇಶದಲ್ಲಿ ತೊಗಲು ಕಾಸು ಚಲಾವಣೆಯಲ್ಲಿತ್ತು. ಕುರನ್ಗರಾಯನ ಪ್ರಾಂತ್ಯಕ್ಕೆ ಬರುವವರು ತಮ್ಮಲ್ಲಿನ ಹಣವನ್ನು ತೊಗಲು ಕಾಸಿಗೆ ಬದಲಾಯಿಸಿಕೊಳ್ಳಬೇಕಿತ್ತು. ಅಂದಿನ ಚರ್ಮೋದ್ಯಮದ ಆರ್ಥಿಕತೆಯನ್ನು ಪಿಸುಗುಡುವಂತಿರುವ 'ಗಲ್ಲೆಬಾನಿ', ಕೋಟೆಗಳ ಅವಶೇಷಗಳ ನಡುವೆ ಈಗಲೂ ಇದೆ.

ಕುರನ್ಗರಾಯನ ಚರಿತ್ರೆಯನ್ನು ಕಟ್ಟಿಕೊಡುವಲ್ಲಿ ರವಿಕುಮಾರ್ ವಹಿಸಿರುವ ಶ್ರಮ ಕೃತಿಯಲ್ಲಿ ಸ್ಪಷ್ಟವಾಗಿ ಕಾಣಿಸುತ್ತದೆ. ಅರಸನ ಕಾಲದ ಯಾವುದೇ ಬರಹಗಳು ದೊರಕದಿರುವ ಕಾರಣ, ಲಭ್ಯವಿರುವ ಸಾಂಸ್ಕೃತಿಕ ಸ್ಮೃತಿಗಳ ಮೂಲಕವೇ ಅಳಿದುಹೋದ ಅರಸನೊಬ್ಬನ ಕಾಲಘಟ್ಟದ ಚಹರೆಗಳನ್ನು ಕಟ್ಟಿಕೊಡಲು ಪ್ರಯತ್ನಿಸಿದ್ದಾರೆ, ಈ ಪ್ರಯತ್ನದಲ್ಲಿ ಸಾಕಷ್ಟು ಯಶಸ್ವಿಯೂ ಆಗಿದ್ದಾರೆ. 'ಸಾಂಸ್ಕೃತಿಕ ಕಣ್ಣಿಲ್ಲದ ಇತಿಹಾಸ ಇತಿಹಾಸವೇ ಅಲ್ಲ. ಅದು ಜೀವವಿಲ್ಲದ ಶವ. ಸಾಂಸ್ಕೃತಿಕತೆ ಇತಿಹಾಸದ ಜತೆ ಸೇರಿದರೆ ಮಾತ್ರ ಚೈತನ್ಯವುಳ್ಳ ಶಿವ' ಎನ್ನುವ ಲೇಖಕರ ನಂಬಿಕೆಯ ವ್ಯಕ್ತರೂಪದಲ್ಲಿ ಈ ಕೃತಿಯನ್ನು ನೋಡಬಹುದು.

ಮಾದಿಗ ಸಮುದಾಯಕ್ಕೆ ಸೇರಿದ ಅರಸನನ್ನು ಇತಿಹಾಸ ನಿರ್ಲಕ್ಷಿಸಿರುವುದಕ್ಕೆ ರವಿಕುಮಾರ್ ಕಾರಣಗಳನ್ನು ಊಹಿಸಿದ್ದಾರೆ. ಅವುಗಳಲ್ಲೊಂದು, ಕುರನ್ಗರಾಯ ಮತ್ತು ಅವನ ಆಳ್ವಿಕೆಯ ಪ್ರಾಂತ್ಯದ ಜನ ಅನಕ್ಷರಸ್ಥರಾಗಿದ್ದುದು ಹಾಗೂ ಯಾವುದೇ ಯುದ್ಧ ಮಾಡದೆ ಇದ್ದುದು. ಯುದ್ಧವನ್ನೇ ಮಾಡದ ರಾಜ ಇತಿಹಾಸಕಾರರ ಗಮನಸೆಳೆಯುವುದು ಹೇಗೆ?

ದುರ್ಬಲ ಜಾತಿಗಳ ಸ್ಮೃತಿಗಳ ಮೇಲೆ ಪ್ರಬಲ ಜಾತಿಗಳು ಕಾಲಾಂತರದಲ್ಲಿ ಪ್ರಭಾವ ಬೀರುವ ಪ್ರಕ್ರಿಯೆ ಕುರನ್ಗರಾಜನಿಗೆ ಸಂಬಂಧಿಸಿದಂತೆಯೂ ನಡೆದಿದೆ ಎಂದು ಪ್ರತಿಪಾದಿಸುವ ಲೇಖಕರು, ಅದಕ್ಕೆ ಸಾಕಷ್ಟು ನಿದರ್ಶನಗಳನ್ನೂ ಪಟ್ಟಿಮಾಡುತ್ತಾರೆ. ಕುರನ್ಗರಾಯನ ಪ್ರಾಂತ್ಯದ ಪುರುಷ ರಕ್ಷಣಾದೇವರುಗಳಾದ ದೊಡ್ಡಕಾಯಪ್ಪ ಹಾಗೂ ದೊಡ್ಡಮ್ಮ ಅವರುಗಳ ಮೇಲೆ ನಡೆದಿರುವ ಶಿಷ್ಟ ಪ್ರಭಾವವನ್ನು ಗುರ್ತಿಸುವ ಲೇಖಕರು, ಈ ದೈವಗಳಿಗೆ ನಡೆಯುತ್ತಿದ್ದ ಬಲಿ ನೈವೇದ್ಯವನ್ನು ತಪ್ಪಿಸಿ, ಮಾಂಸಾಹಾರ ನಿಷಿದ್ಧಗೊಳಿಸಿರುವುದನ್ನು ಉಲ್ಲೇಖಿಸಿದ್ದಾರೆ. ಹೊಲತಾಳು ಊರಿನಲ್ಲಿದ್ದ ಕುರನ್ಗರಾಯನ ಪ್ರೇಯಸಿಯ ಸ್ನಾನಗೃಹವನ್ನು 'ವಾಸ್ತು'ವಿನ ಹೆಸರಿನಲ್ಲಿ ಇತ್ತೀಚೆಗಷ್ಟೇ ನೆಲಸಮ ಮಾಡಿರುವುದೂ ಚರಿತ್ರೆಯನ್ನು ವಿರೂಪಗೊಳಿಸುವ ಪ್ರಯತ್ನವೇ ಆಗಿದೆ ಎಂದು ವಿಶ್ಲೇಷಿಸಿದ್ದಾರೆ.

ಕುರನ್ಗರಾಯ ಕಟ್ಟಿರುವ ಕೋಟೆ ಮತ್ತು ದೇವಸ್ಥಾನ ದಕ್ಷಿಣ ದಿಕ್ಕಿನಲ್ಲಿರುವುದು ಜಾತಿಸೂಚಕವಾಗಿದ್ದು, ಅದು ಕೂಡ ಇತಿಹಾಸಕಾರರಿಗೆ ಸಹ್ಯವಾಗಿಲ್ಲದಿರಬಹುದು ಎನ್ನುವುದು ಕುರನ್ಗರಾಜನನ್ನು ಇತಿಹಾಸಕಾರರು ನಿರ್ಲಕ್ಷಿಸಿರುವುದಕ್ಕೆ ಲೇಖಕರು ನೀಡಿರುವ ಮತ್ತೊಂದು ಕಾರಣ.

'ಅರಸು ಕುರನ್ಗರಾಯ' ಕೃತಿಯ ನಾಯಕನ ಆಳ್ವಿಕೆ ಸೀಮಿತ ಚೌಕಟ್ಟಿಗೆ ಒಳಪಟ್ಟಿದ್ದಾದರೂ, ಆತನ ಆಳ್ವಿಕೆ ಜನಮುಖಿಯಾದುದು ಹಾಗೂ ಪ್ರಜಾಪ್ರಭುತ್ವದ ಆಶಯಗಳಿಗೆ ಹತ್ತಿರವಾದುದು; ಕನ್ನಡ ಜನಪದದಲ್ಲಿ ಅಂತರ್ಜಲದಂತಿರುವ ವಿವೇಕ ಹಾಗೂ ಜೀವನಸೌಂದರ್ಯವನ್ನು ಸೂಚಿಸುವಂತಹದ್ದು.

ಕುರನ್ಗರಾಜನ ಮಾದರಿ ವರ್ತಮಾನದ ಕರ್ನಾಟಕಕ್ಕೂ ಮಾದರಿ ಆಗುವಂತಹದ್ದು. ಕತ್ತಿ ಮತ್ತು ಜಾತಿಯ ಮೂಲಕ ಚರಿತ್ರೆಯ ಮೊಗಸಾಲೆಯಲ್ಲಿ ವಿರಾಜಮಾನರಾಗಿರುವ ರಾಜರುಗಳ ಪ್ರಭೆಯಲ್ಲಿ ಹಿನ್ನೆಲೆಗೆ ಸರಿದಿರಬಹುದಾದ 'ನಿಜ ನಾಯಕ'ರ ಹುಡುಕಾಟಕ್ಕೆ ಈ ಕೃತಿ ಪ್ರೇರಣೆ ನೀಡುವಂತಿದೆ. ❖

ಸಾಂಸ್ಕೃತಿಕ ಚರಿತ್ರೆ ಕಟ್ಟಿಕೊಡುವ ವ್ಯಕ್ತಿಚಿತ್ರಗಳು

ಒಳನೋಟ

ದೇವು ಪತ್ತಾರ

ಕವಿ ಮತ್ತು ಸೃಜನಶೀಲ ಅನುವಾದಕ ಎಂದು ಗುರುತಿಸಲಾಗುವ ಸಿದ್ಧಲಿಂಗ ಪಟ್ಟಣಶೆಟ್ಟಿ ಅವರು 'ಚಹಾದ ಜೋಡಿ ಚೂಡಾದ್ಹಾಂಗ' ಅಂಕಣದ ಮೂಲಕ ಚಿರಪರಿಚಿತರು. ಹದಿನೆಂಟು ಕವನ ಸಂಕಲನ ಹಾಗೂ ಹದಿನೆಂಟು ಅನುವಾದಿತ ನಾಟಕಗಳನ್ನು ಪ್ರಕಟಿಸಿರುವ ಅವರ 11ನೇ ಗದ್ಯ ಬರೆಹಗಳ ಸಂಕಲನವಿದು. ಉತ್ತರ ಕರ್ನಾಟಕದ ಆಡುಮಾತನ್ನು ಬಳಸಿ ಬರೆಯುವ ಅವರ ಗದ್ಯವು ಸಹಜ ಮಾತಿನ ಲಯವನ್ನು ವಿಸ್ತರಿಸಿ ಕವಿತೆಯಾಗಿ ಬಿಡಬಲ್ಲದು. ಸರಾಗವಾಗಿ ಓದಿಸಿಕೊಂಡು ಹೋಗುವ ಲವಲವಿಕೆಯ ಗದ್ಯ ಅವರದು.

ದಟ್ಟ ನೆನಪಿನ ಓಣಿಯಲ್ಲಿ ಓಡಾಡುತ್ತ ಅಲ್ಲಿನ ವ್ಯಕ್ತಿ ವಿವರ, ಘಟನೆ-ಸಂಗತಿಗಳನ್ನು ಕರಾರುವಾಕ್ಕಾಗಿ ಪದಕ್ಕಿಳಿಸುವ ಕೌಶಲ ಪಟ್ಟಣಶೆಟ್ಟರಿಗೆ ಸಿದ್ಧಿಸಿದೆ. ಹಾಗೆ ದಾಖಲಿಸುವಾಗ ಅದರ ತಾಜಾತನ ಕಳೆದುಹೋಗದಂತೆ ಅವರು ಬರೆಯಬಲ್ಲರು. ಧಾರವಾಡ ಕೇಂದ್ರಿತ ಉತ್ತರ ಕರ್ನಾಟಕದ ಲೇಖಕ-ಕವಿಗಳ ಜೊತೆಗಿನ ಒಡನಾಟದ ಗಳಿಗೆಯನ್ನು ದಾಖಲಿಸುವ 'ಮಾತು ಮುಗಿದಿಲ್ಲ' ಸಂಕಲನವು ಒಟ್ಟು ಹದಿನಾರು ಬರೆಹಗಳನ್ನು ಒಳಗೊಂಡಿದೆ. ಅದರಲ್ಲಿ ಎರಡು ಲೇಖನಗಳು ಬೇಂದ್ರೆಯವರನ್ನು ಕುರಿತವುಗಳಾಗಿದ್ದರೆ ಮತ್ತೆರಡು ಗಿರಡ್ಡಿ ಗೋವಿಂದರಾಜ ಅವರನ್ನು ಕುರಿತವು.

'ಸಂಕ್ರಮಣ' ಸಾಹಿತ್ಯ ಪತ್ರಿಕೆ ಆರಂಭಿಸಿ ಸಾಹಿತ್ಯಕ-ಸಾಂಸ್ಕೃತಿಕ ಲೋಕದಲ್ಲಿ ಅದಕ್ಕೊಂದು ಛಾಪು ಮೂಡಿಸಲು ಕಾರಣರಾದವರಲ್ಲಿ ಪಟ್ಟಣಶೆಟ್ಟರು ಪ್ರಮುಖರು. ಮೂವರು 'ಸಂಕ್ರಮಣ ಗೆಳೆಯರ' ಪೈಕಿ ಒಬ್ಬರಾದ ಪಟ್ಟಣಶೆಟ್ಟರು ತಮ್ಮ ಆಪ್ತ ಗೆಳೆಯರಾದ ಕವಿ-ಹೋರಾಟಗಾರ ಚಂದ್ರಶೇಖರ ಪಾಟೀಲ ಮತ್ತು ವಿಮರ್ಶಕ-ಕತೆಗಾರ ಗಿರಡ್ಡಿ ಗೋವಿಂದರಾಜ ಅವರ ವ್ಯಕ್ತಿಚಿತ್ರ ಕಟ್ಟಿಕೊಟ್ಟಿದ್ದಾರೆ. ಗೆಳೆತನದ ಭಿಡೆ ಬಿಟ್ಟು ಬರೆದ ಈ 'ಪ್ರಬಂಧ'ಗಳಲ್ಲಿ ಆಪ್ತತೆಯ ಜೊತೆಗೆ 'ಅಂತರ' ಕಾದಿಟ್ಟುಕೊಂಡ 'ಗ್ರಹಿಕೆ' ಕೂಡ ದಾಖಲಾಗಿದೆ. ಈ ಮಾತು ಗಿರಡ್ಡಿ ಮತ್ತು ಚಂಪಾ ಕುರಿತ ಬರೆಹಗಳಿಗೆ ಮಾತ್ರ ಸೀಮಿತವಾಗಿಲ್ಲ. ಒಟ್ಟು ಸಂಕಲನದ ಎಲ್ಲ ಬರೆಹಗಳಿಗೂ ಅದು ಅನ್ವಯಿಸುತ್ತದೆ. ಅದು ಪಟ್ಟಣಶೆಟ್ಟರ ಬರೆಹದ ಶೈಲಿವಿಶೇಷ.

ಮಾತು ಮುಗಿದಿಲ್ಲ
(ಲೇಖಕರ ಒಡನಾಟ)
ಲೇ: ಸಿದ್ಧಲಿಂಗ ಪಟ್ಟಣಶೆಟ್ಟಿ
ಪ್ರ: ಅನನ್ಯ ಪ್ರಕಾಶನ, ಧಾರವಾಡ
ಸಂ: 9448630637
ಪು: 240 ₹240

ಕೆಲವು ಬರೆಹಗಳು 'ಅಂಕಣ'ಗಳಾಗಿದ್ದರೆ ಕೆಲವು ಸಾಹಿತ್ಯ ಪತ್ರಿಕೆಗಾಗಿ ಬರೆದವುಗಳು. ಹಾಗೆಯೇ ಒಂದೆರಡು ಬರೆಹಗಳು ಸಭೆ-ಸಮಾರಂಭ-ಗೋಷ್ಠಿಗಳಲ್ಲಿ ಆಡಿದ ಮಾತುಗಳನ್ನು ಅಕ್ಷರಕ್ಕಿಳಿಸಿದವುಗಳು. ಹೀಗಾಗಿ ಬರೆಹಗಳ ಸ್ವರೂಪ ಏಕರೂಪಿಯಾಗಿಲ್ಲ. ಈ ಭಿನ್ನತೆಯು ವೈವಿಧ್ಯಕ್ಕೆ ಕಾರಣವಾಗಿದೆ. ಇಲ್ಲಿ ಬರೆಹಗಳಾಗಿರುವ ವ್ಯಕ್ತಿಗಳ ಪೈಕಿ ಒಂದಿಬ್ಬರನ್ನು ಬಿಟ್ಟರೆ ಬಹುತೇಕ ಎಲ್ಲರೂ ಪಟ್ಟಣಶೆಟ್ಟರಿಗೆ ವ್ಯಕ್ತಿಗತವಾಗಿ ಪರಿಚಿತರಾಗಿರುವವರು-ಆಪ್ತರು. ಒಡನಾಟದ ನೆನಪುಗಳನ್ನು ದಾಖಲಿಸುವಾಗ ಲೇಖಕರು ಒದಗಿಸುವ ಅತ್ಯಂತ ಸಣ್ಣ ಮತ್ತು ಸೂಕ್ಷ್ಮ ವಿವರಗಳು ಲೇಖಕ ಹಾಗೂ ವಸ್ತು ಎರಡರ ವಿಭಿನ್ನ-ವಿಶಿಷ್ಟ ವ್ಯಕ್ತಿತ್ವ ಅನಾವರಣಕ್ಕೆ ಕಾರಣವಾಗುತ್ತವೆ.

ಧಾರವಾಡದ ಗೆಳೆಯರ ಗುಂಪಿನ ಬೇಂದ್ರೆ, ಬೆಟಗೇರಿ ಕೃಷ್ಣಶರ್ಮ, ವಿ.ಕೃ.ಗೋಕಾಕ, ಜಿ.ಬಿ. ಜೋಶಿ ಕುರಿತ ಬರೆಹಗಳು ಕನ್ನಡ ಸಾಹಿತ್ಯ ಚರಿತ್ರೆಗೆ ಹೊಸ ವಿವರಗಳನ್ನು ಸೇರಿಸುತ್ತವೆ. ಇಲ್ಲಿ ಚರಿತ್ರೆ ಕಟ್ಟುವ ಉದ್ದೇಶವಿಲ್ಲದಿದ್ದರೂ ಚಾರಿತ್ರಿಕ ಮಹತ್ವ ಪಡೆದ ಈ ಬರೆಹಗಳು ಕುತೂಹಲ-ಆಸಕ್ತಿಗಳ ಜೊತೆಯಲ್ಲಿಯೇ ಸಂಶೋಧನ ಗುಣವನ್ನೂ ಹೊಂದಿವೆ.

'ಗೆಳೆಯರ ಗುಂಪಿ'ನ ಸಮಕಾಲೀನರಾಗಿದ್ದರೂ ಗುಂಪಿನ ಭಾಗವಾಗಿರದ ಸಾಲಿ ರಾಮಚಂದ್ರರಾಯ, ಪಾ.ವೆಂ. ಆಚಾರ್ಯ ಹಾಗೂ ಗುರುನಾಥ ಜೋಶಿ ಅವರನ್ನು ಕುರಿತ ಬರೆಹಗಳು ಆಪ್ತತೆ-ಆರ್ದ್ರತೆಗಳಿಂದ ಕೂಡಿವೆ. ಧಾರವಾಡದ ಸಾಂಸ್ಕೃತಿಕ ಚರಿತ್ರೆಯಲ್ಲಿ ಮಹತ್ವದ ಹೆಜ್ಜೆಗುರುತು ಮೂಡಿಸಿದ ನವೋದಯಪೂರ್ವ ಲೇಖಕರಾದ ಸಕ್ಕರಿ ಬಾಳಾಚಾರ್ಯ ಹಾಗೂ ಶಾಂತಕವಿಗಳನ್ನು ಕುರಿತ ಎರಡು ಬರೆಹಗಳು ಲೇಖಕರ ಸಂಶೋಧನೆ ಹಾಗೂ ಓದಿನ ಹರಹುಗಳನ್ನು ಬಿಚ್ಚಿಡುತ್ತವೆ.

ಆಪ್ತಮಿತ್ರರಾದ ಗಿರಡ್ಡಿ, ಚಂಪಾ, ಶಾಂತಿನಾಥ ದೇಸಾಯಿ ಅವರನ್ನು ಕುರಿತ ಲೇಖನಗಳು ನೆನಪುಗಳ ಮೆರವಣಿಗೆಯಲ್ಲಿ ಸವಾರಿ ಹೊರಟಂತಿವೆ. ಆಪ್ತತೆಯ ಕಾರಣಕ್ಕಾಗಿ ಕಟುವಾಗದೇ ಇರುವುದು ಪಟ್ಟಣಶೆಟ್ಟರಿಗೆ ಸಾಧ್ಯವೇ ಇಲ್ಲ. ಹೀಗಾಗಿಯೇ ಅವು ಕಟುಮಧುರ. ಈ ಬರೆಹಗಳು 'ವಸ್ತು'ವಿನ ಸಾಂಸ್ಕೃತಿಕ-ಸಾಹಿತ್ಯಕ ಮಹತ್ವ ವಿವರಿಸುತ್ತಲೇ ವಿಮರ್ಶಾತ್ಮಕ ಒಳನೋಟಗಳನ್ನೂ ನೀಡುತ್ತವೆ.

ಪ್ರಥಮ ಸಂಕ್ರಮಣ ಸಾಹಿತ್ಯ ಸಮ್ಮೇಳನ ಹಾಗೂ ಪಟ್ಟಣಶೆಟ್ಟರ ಆತ್ಮಕತೆಯ ಮೊದಲ ಭಾಗ 'ಗಿರಿಜವ್ವನ ಮಗ' ಬಿಡುಗಡೆ ಸಂದರ್ಭದಲ್ಲಿ ಆಡಿದ ಮಾತುಗಳನ್ನೂ ಪದಗಳಲ್ಲಿ ದಾಖಲಿಸಿದ್ದಾರೆ. 'ಬೇಂದ್ರೆ ಕಂಡ ಧಾರವಾಡ' ಲೇಖನವು ಬೇಂದ್ರೆಯವರ ಧಾರವಾಡವನ್ನು ಪರಿಚಯಿಸುವುದಕ್ಕೆ ಸೀಮಿತವಾಗಿಲ್ಲ. ಚಾರಿತ್ರಿಕ ವಿವರನೀಡುತ್ತ ಸಾಂಸ್ಕೃತಿಕ ಮಹತ್ವದ ಬರೆಹವಾಗಿ ಪರಿಣಮಿಸುತ್ತದೆ. ಕೊನೆಯಾಗದ, ಕೊನೆಯಿರದ ಅಂಟಿದ ನಂಟಿನ ನೆನಪುಗಳು ಈ ಪುಸ್ತಕದ ವಿಶೇಷ.

ನಾವು ಓದಿದ, ಕೇಳಿದ, ನೋಡಿದ ವ್ಯಕ್ತಿಗಳ ಕುರಿತ ಸಮೀಪದ ನೋಟವನ್ನು ಕಟ್ಟಿಕೊಡುವ ಈ ಬರೆಹಗಳ 'ಒಂದು ನೋಟ' ಅದು ಅಪ್ತನೋಟ. ಪ್ರೀತಿ ಇಟ್ಟುಕೊಂಡೇ ಬರೆದ ಬರೆಹಗಳಿವು. ಪದಗಳ ಜೊತೆಗೆ ಆಟವಾಡುತ್ತ ಕವಿತೆ ಕಟ್ಟುತ್ತ ಬಂದಿರುವ ಪಟ್ಟಣಶೆಟ್ಟರ ಕಾವ್ಯಾತ್ಮಕ ಆಟ ಗದ್ಯದಲ್ಲೂ ಮುಂದುವರೆದಿದೆ. ❖

ಮೊದಲ ಓದು

ಕಾದಂಬರಿಯ 'ಮೊಗಸಾಲೆ'ಯಲ್ಲಿ ಕಂಡ ಎರಡು ಹೊಸ 'ಬಿಂಬ'ಗಳು

ಡಾ.ನಾ. ಮೊಗಸಾಲೆ ಅವರ ಎರಡು ಕಾದಂಬರಿಗಳು ಬಿಡುಗಡೆಯಾಗಿವೆ. ತಮ್ಮ ವಸ್ತು, ಸನ್ನಿವೇಶ, ಪ್ರಸ್ತುತಿಯ ಕಾರಣಕ್ಕೆ ಎರಡೂ ಕಾದಂಬರಿಗಳು ಓದುಗರ ಗಮನ ಸೆಳೆದಿವೆ.

ನೀರಿನೊಳಗಿನ ಮಂಜು (ಕಾದಂಬರಿ): ಒಬ್ಬ ಉಪನ್ಯಾಸಕ, ಕುಟುಂಬ, ಸ್ನೇಹ, ಒಂದಿಷ್ಟು ಔದಾರ್ಯ, ಬೆಸೆಯುವ ಸಂಬಂಧ, ಕಥೆಯೊಳಗೆ ಬರುವ ಉಪಕಥೆ... ಹೀಗೆ ಕುತೂಹಲದಿಂದ ಓದಿಸಿಕೊಳ್ಳುತ್ತಾ ಹೋಗಿ ಕೊನೆಗೆ ರಾಯರು, ಸರೋಜಾ ಮತ್ತು ಜಯಂತಿ ಕಾಡುವ ಪಾತ್ರಗಳಾಗಿ ತಲೆಯಲ್ಲಿ ಉಳಿದುಬಿಡುತ್ತಾರೆ. ಗಂಡು, ಹೆಣ್ಣಿನ ನಡುವೆ ವಯಸ್ಸು ಮೀರಿದರೂ ದೀರ್ಘಾವಧಿಯ ಸಂಬಂಧವೊಂದು ಬೇರೆ ಭಾವಕ್ಕೆ ಬದಲಾಗುವುದು (ಗಂಡು ಚಿತ್ತಸ್ವಾಸ್ಥ್ಯ ಕಳೆದುಕೊಳ್ಳುವ ಸ್ಥಿತಿ, ಹೆಣ್ಣು ಸ್ಥಿತಪ್ರಜ್ಞಳಾಗುವ ಪರಿ), ವ್ಯಕ್ತಿಗಳ ಸಂಬಂಧಗಳ ನಡುವೆಯೇ ಬಿರುಕಾಗುವುದು ಮತ್ತು ಅಂತಹ ಸನ್ನಿವೇಶಗಳಿಗೆ ಊಹಾತೀತ ತಿರುವು ಮತ್ತು ಅಂತ್ಯಗಳು ಸೋಜಿಗ ಮೂಡಿಸುತ್ತವೆ.

ಚಿಂತಕರಿಗೆ ಎದುರಾಗುವ ಸಮಾಜದ ಸವಾಲುಗಳು, ಬೆದರಿಕೆಗಳು ಅಲ್ಲದೆ, ಸಾಂಸ್ಥಿಕ ವ್ಯವಸ್ಥೆ, ಲೈಂಗಿಕತೆ, ಕಾನೂನು ಇಂಥ ವಿಷಯಗಳನ್ನು ಸಾಕಷ್ಟು ಚರ್ಚಿಸುತ್ತಾ ಹೋಗುವ ಕಾದಂಬರಿ, ಅಲ್ಲಲ್ಲಿ ಬೋಧಕನ ಸ್ಥಾನವನ್ನೂ ಅಲಂಕರಿಸಿಬಿಡುತ್ತದೆ. ಸಂಬಂಧಗಳ ಕುರಿತ ಚರ್ಚೆಗಳು ಹೊಸ ಹೊಳಹುಗಳಿಗೆ ಕಾರಣವಾಗುತ್ತವೆ.



ನೀರಿನೊಳಗಿನ ಮಂಜು
ಲೇ: ಡಾ.ನಾ.ಮೊಗಸಾಲೆ
ಪ್ರ: ಅಂಕಿತ ಪುಸ್ತಕ, ಬೆಂಗಳೂರು
ಸಂ: 080 26617100
ಪು:216 ₹250

ಇದ್ದೂ ಇಲ್ಲದ್ದು (ಕಾದಂಬರಿ): ಸಂಪ್ರದಾಯಸ್ಥ ಬ್ರಾಹ್ಮಣ ಕುಟುಂಬಗಳು ಪರಿಸ್ಥಿತಿಯ ವೈರುಧ್ಯದಲ್ಲಿ ಸಿಲುಕಿ 'ಇದೆ', 'ಇಲ್ಲ' ಎಂಬ ಜಿಜ್ಞಾಸೆಯಲ್ಲೇ ಕಳೆದುಹೋಗುವ ಕಥೆಯಿದು. ಒಂದು ಕುಟುಂಬಕ್ಕೆ ಮಗ, ಸಂಬಂಧ ಅನ್ನುವುದಕ್ಕಿಂತಲೂ ದೇವರು ಮತ್ತು ಅವನ ಪೂಜೆಯೇ ಮೇಲು. ಇನ್ನೊಂದು ಕುಟುಂಬಕ್ಕೆ ದೇವರು ಅನ್ನುವವನೊಬ್ಬನನ್ನು ಪೂಜಿಸಿಯೂ ಸಂಕಷ್ಟಗಳೇ ಮುತ್ತಿಕೊಳ್ಳುವುದಾದರೆ ದೇವರೇ ಬೇಡ ಅನ್ನುವ ಹತಾಶೆ, ಆಕ್ರೋಶ.

ಕಾದಂಬರಿಯಲ್ಲಿ ಬರುವ ದೇವರಮನೆ ಊರೇ ಒಂದು ಪಾತ್ರ. ಮೇಲೆ ಹೇಳಿದ ತಾಕಲಾಟಗಳ ಮೂಲಕ ನಂಬಿಕೆಗಳ ಪುನರ್‌ವಿಮರ್ಶೆ ಮಾಡಲಾಗಿದೆ. ಜೊತೆಗೆ ಶಿಥಿಲವಾಗುತ್ತಿರುವ ನಂಬಿಕೆಗಳು, ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೃಷಿ ಕಸುಬು ಆತಂಕಕಾರಿಯಾಗಿರುವುದು, ಮಠಗಳು – ಭೂಮಿ– ಗೇಣಿ– ಒಕ್ಕಲುತನಗಳ ವ್ಯಾವಹಾರಿಕತೆ ಎಲ್ಲವನ್ನೂ ಚರ್ಚಿಸುತ್ತಲೇ ಹೋಗಿದೆ ಈ ಕಾದಂಬರಿ. ಒಂದೆರಡು ದಶಕಗಳ ಹಿಂದಿನ ಬದುಕನ್ನು ನಿರ್ದಿಷ್ಟ ಸಮುದಾಯವೊಂದರ ಕನ್ನಡಿಯಲ್ಲಿಟ್ಟು ತೋರಿಸಿದೆ ಈ ಕೃತಿ. ಫ್ಲ್ಯಾಷ್ ಬ್ಯಾಕ್ ರೂಪದ ನಿರೂಪಣೆಯಿದೆ. ❖



ಇದ್ದೂ ಇಲ್ಲದ್ದು
ಲೇ: ಡಾ.ನಾ.ಮೊಗಸಾಲೆ
ಪ್ರ: ಸಾಹಿತ್ಯ ಪ್ರಕಾಶನ, ಹುಬ್ಬಳ್ಳಿ
ಸಂ: 9448110034
ಪು: 264 ₹290

ಹೆತ್ತವ್ವನ ನೆನಪಿಸುವ ಬಯೋಗ್ರಫಿ

ವೃತ್ತಿಯಲ್ಲಿ ಬೆಂಗಳೂರಿನ 'ನಮ್ಮ ಮೆಟ್ರೊ'ದಲ್ಲಿ ಸ್ಟೇಷನ್ ಸೂಪರಿಂಟೆಂಡೆಂಟ್ ಆಗಿರುವ ಲೇಖಕ ಜಯರಾಮಾಚಾರಿ, ತಮ್ಮ ಅಮ್ಮನ ನೆನಪಿನ ಬುತ್ತಿಯನ್ನು ತೆರೆದಿಟ್ಟಿರುವ ಕೃತಿ 'ನನ್ನವ್ವನ ಬಯೋಗ್ರಫಿ'.

ಹೆತ್ತವ್ವನ ಉಸಿರುನಿಂತ ಗಳಿಗೆಯಿಂದ ಕೃತಿಯನ್ನು ಆರಂಭಿಸಿರುವ ಲೇಖಕರು ಅವ್ವನ ನೆನಪನ್ನು ಕೆದಕುತ್ತಾ ಹೋಗುತ್ತಾರೆ. ಈ ನೆನಪೆಲ್ಲವನ್ನೂ ಒಂದೇ ಗುಕ್ಕಿನಲ್ಲಿ ಬರೆದದ್ದಾಗಿ ಲೇಖಕರು ಉಲ್ಲೇಖಿಸಿದ್ದಾರೆ. ಬರವಣಿಗೆ ಇದಕ್ಕೆ ಸಾಕ್ಷ್ಯ ಒದಗಿಸುತ್ತದೆ. ಮಕ್ಕಳಿಗೆ ನೀಡುವ ಪ್ರೀತಿ, ಆರೈಕೆ, ಮಮತೆಯಲ್ಲಿ ತಾಯಂದಿರೆಲ್ಲ ಒಂದೇ. ಹೀಗಾಗಿ ಲೇಖಕರು ತಮ್ಮ ಹೆತ್ತವ್ವನ ಕರ್ತವ್ಯ, ಜವಾಬ್ದಾರಿ, ಆಕೆ ಎದುರಿಸಿದ ಸವಾಲು, ಸಂಕಷ್ಟಗಳನ್ನು ವಿವರಿಸುವಾಗ ಓದುಗರಿಗೂ ತಮ್ಮ ತಾಯಿಯೊಮ್ಮೆ ನೆನಪಾದಾರು. ಈ ರೀತಿ ನೆನಪಾದರೆ ಪುಸ್ತಕಕ್ಕೆ ಸಾರ್ಥಕತೆ ಸಿಕ್ಕೀತು ಎಂದೂ ಲೇಖಕರು ಹೇಳಿದ್ದಾರೆ.

ತಾಯಿಯ ನೆನಪುಗಳನ್ನು ಮೆಲುಕು ಹಾಕುತ್ತಾ ಸರ್ಕಾರಿ ಆಸ್ಪತ್ರೆಯ ಅವ್ಯವಸ್ಥೆ, ನಿರ್ಲಕ್ಷ್ಯವನ್ನೂ ಈ ಕೃತಿ ತೆಳ್ಳಗಾಗಿ ತೆರೆದಿಟ್ಟಿದೆ. ಸಂಬಂಧಗಳ ಗಟ್ಟಿತನವನ್ನೂ ಜೊತೆಗೆ ಪೊಳ್ಳುತನವನ್ನೂ ಲೇಖಕರು ಬಿಚ್ಚಿಟ್ಟಿದ್ದಾರೆ. ಈ ವಿಚಾರದಲ್ಲಿ ಯಾವುದೇ ಅಳುಕಿಲ್ಲದೆ ಒಂದು ಅಧ್ಯಾಯವನ್ನೇ ಮೀಸಲಿಟ್ಟಿದ್ದಾರೆ. ❖

ನನ್ನವ್ವನ ಬಯೋಗ್ರಫಿ
ಲೇ: ಜಯರಾಮಾಚಾರಿ
ಪ್ರ: ಬಹುರೂಪಿ
ಸಂ: 7019182729
ಪು: 68 ₹100

ಅಜಯ್ ಕುಮಾರ್ ಎಂ ಗುಂಬಳ್ಳಿ ಅವರ ಹೆಣ್ಣು ನೋಡು
ಮೊಬೈಲ್‌ನಲ್ಲಿ ಕಥೆ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
https://www.prajavani.net/short-story

ಪು.ಸೂ.ಲಕ್ಷ್ಮೀನಾರಾಯಣ ರಾವ್ ಅವರ ಬುದ್ಧಗುರುವೆ
ಮೊಬೈಲ್‌ನಲ್ಲಿ ಕವನ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
https://www.prajavani.net/poetry

ಬಹುತ್ವದ ಅನನ್ಯತೆ ಸಾರುವ ಕಥೆಗಳು

ಅವಲೋಕನ

ಮಹತಿ

ಕಥೆ, ನಾಟಕ, ಅನುವಾದ, ಮಕ್ಕಳ ಸಾಹಿತ್ಯ ಸೇರಿದಂತೆ ಇಪ್ಪತ್ತೈದಕ್ಕೂ ಹೆಚ್ಚು ಕೃತಿಗಳನ್ನು ರಚಿಸಿರುವ ಎಫ್.ಎಂ. ನಂದಗಾವ ಅವರ ಇತ್ತೀಚಿನ ಕೃತಿ 'ಯಡ್ಡಿ ಮಾಮಾ ಬರಲಿಲ್ಲ...' ಕಥಾಸಂಕಲನ. ಈ ಸಂಕಲನದ ಹತ್ತು ಕಥೆಗಳು ಸರಳಶೈಲಿ ಹಾಗೂ ನವಿರುತನದಿಂದ ಗಮನಸೆಳೆಯುತ್ತವೆ.

ನಂದಗಾವ ಸುದ್ದಿಮನೆಯಲ್ಲಿ ಕಾರ್ಯ ನಿರ್ವಹಿಸಿ ನಿವೃತ್ತರಾದವರು. ಪಳಗಿದ ಪತ್ರಕರ್ತನ ಭಾಷೆಯನ್ನು ಅವರ ಕಥೆಗಳಲ್ಲಿ ಕಾಣಬಹುದು.

ಸಂಕಲನದ ಶೀರ್ಷಿಕೆಯೂ ಆದ 'ಯಡ್ಡಿ ಮಾಮಾ ಬರಲಿಲ್ಲ...' ಕಥೆಯನ್ನು ಕಥೆಗಾರರ ಶಕ್ತಿ ಹಾಗೂ ಅವರೇ ಸೃಷ್ಟಿಸಿಕೊಂಡಿರುವ ಚೌಕಟ್ಟಿನ ಮಿತಿಗೆ ಉದಾಹರಣೆಯಾಗಿ ಗಮನಿಸಬಹುದು. ಬೆಂಗಳೂರಿನಲ್ಲಿ ನೆಲೆಸಿರುವ ನಿರೂಪಕ ಗೋವಾಕ್ಕೆ ಹೋಗಿಬರುವಷ್ಟರಲ್ಲಿ ರಾಜ್ಯದಲ್ಲಿ ಕ್ಷಿಪ್ರ ರಾಜಕೀಯ ಬದಲಾವಣೆಯಾಗಿ, ಮುಖ್ಯಮಂತ್ರಿಯ ಬದಲಾವಣೆಯಾಗಿದೆ. ಆ ಬದಲಾವಣೆ, ಗೋವಾದಿಂದ ಊರಿಗೆ ಮರಳುವ ನಿರೂಪಕನ ವೈಯಕ್ತಿಕ ಜೀವನದ ಮೇಲೆಯೂ ಪ್ರಭಾವ ಬೀರಿದೆ. ನಿರೂಪಕನ ಮನೆಗೆ ಹೊಸ ಮುಖ್ಯಮಂತ್ರಿ ಸಂಗಪ್ಪ ಯಡ್ರಾಮಿ ಭೇಟಿ ಕೊಡುತ್ತಾರೆ ಎನ್ನುವ ಸುದ್ದಿ ಎಲ್ಲೆಡೆ ಹರಡಿದೆ. ಈ ಸುದ್ದಿಯನ್ನು ಹೇಗೆ ಅರ್ಥೈಸಿಕೊಳ್ಳುವುದೆಂದು ತಿಳಿಯದೆ ನಿರೂಪಕ ಗಲಿಬಿಲಿಗೊಳ್ಳುತ್ತಾನೆ. ಮಗಳ ಬಾಯಿಂದ ಹೊರಟ, ಅಕ್ಕನನ್ನು ನೋಡಲು ಬರುವ ಯಡ್ಡಿ ಮಾಮನ ಹೆಸರನ್ನು ನೆರೆಹೊರೆಯವರು ಮುಖ್ಯಮಂತ್ರಿಯೆಂದು ತಿಳಿದಿದ್ದರಿಂದ ಉಂಟಾದ ಗೊಂದಲವಿದು ಎನ್ನುವುದು ತಿಳಿಯುವುದರೊಂದಿಗೆ ಕಥೆ ಕೊನೆಗೊಳ್ಳುತ್ತದೆ. ಸಮಕಾಲೀನ ರಾಜಕೀಯ ವಿದ್ಯಮಾನಗಳ ವಿಡಂಬನೆಯನ್ನು ಸೂಚ್ಯವಾಗಿ ಒಳಗೊಂಡಿರುವ ಈ ಕಥೆಯನ್ನು ಲಲಿತ ಪ್ರಬಂಧದ ರೂಪದಲ್ಲೂ ಓದಬಹುದು.

'ಯಡ್ಡಿ ಮಾಮಾ ಬರಲಿಲ್ಲ...' ಕಥೆ, ಜನಸಾಮಾನ್ಯರ ಬದುಕು ಹಾಗೂ ಸಮಕಾಲೀನ ರಾಜಕಾರಣದ ನಡುವಿನ ಸಂಬಂಧ–ಸಂಘರ್ಷಗಳ ಶೋಧ ಆಗಬಹುದಿತ್ತು. ಆದರೆ, ಓದುಗನ ಮುಖದಲ್ಲಿ ನಗೆಯರಳಿಸುವುದಷ್ಟೇ ಕಥೆಗಾರರ ಉದ್ದೇಶವಾಗಿದ್ದು, ಕಥೆ ತಂತಾನೇ ಮಹತ್ವಾಕಾಂಕ್ಷೆಯನ್ನು ಬಿಟ್ಟುಕೊಟ್ಟಿದೆ. ಕಥೆಯನ್ನು ಓದುಗನಿಗೆ ನೇರವಾಗಿ ದಾಟಿಸುವ ನಿಟ್ಟಿನಲ್ಲಿ ಕಥೆಗಾರರು ಯಶಸ್ವಿಯಾಗಿದ್ದಾರೆ. ಆದರೆ, ಕಥೆಯೊಂದರ ಹಲವು ಆಯಾಮಗಳನ್ನು ಶೋಧಿಸುವುದು ಅವರ ಆದ್ಯತೆಯಾಗಿಲ್ಲ. 'ಸಿ ಸಿ ಟೀವಿ ತಂದ ಫಜೀತಿ' ಕಥೆ ಕೂಡ ಸಮಕಾಲೀನ ವಸ್ತುವನ್ನೊಳಗೊಂಡಿದ್ದರೂ, ಲಘುವಾದ ಪ್ರಸಂಗವೊಂದರ ನಿರೂಪಣೆಗೆ ತನ್ನನ್ನು ಸೀಮಿತವಾಗಿಸಿಕೊಂಡಿದೆ.



ಯಡ್ಡಿ ಮಾಮಾ ಬರಲಿಲ್ಲ..
ಲೇ: ಎಫ್.ಎಂ. ನಂದಗಾವ
ಪ್ರ: ಪೆನ್ಸಿಲ್ ಬುಕ್‌ಹೌಸ್, ಮೈಸೂರು.
ಸಂ: 8762414676
ಪು: 196 ₹190

'ಪಾದ್ರಿಯ ಪ್ರಸಂಗ ಮತ್ತು ಅಜ್ಜಿ ಆಗ್ನೇಸಮ್ಮ' ಸಂಕಲನದ ಉತ್ತಮ ಕಥೆಗಳಲ್ಲೊಂದು. ಉಗುರಿಗೆ ಬಣ್ಣ ಬಳಿದುಕೊಂಡ ಅಜ್ಜಿಯನ್ನು ಹಗುರವಾಗಿ ಕಾಣುವ ಪಾದ್ರಿ, ತಮ್ಮ ತಾಯಿಯೊಂದಿಗಿನ ಒಡನಾಟದಲ್ಲಿ ತಮ್ಮ ತಪ್ಪುಗ್ರಹಿಕೆಯನ್ನು ತಿಳಿಯಾಗಿಸಿಕೊಳ್ಳುತ್ತಾರೆ. ಸಾರ್ವಜನಿಕ ಸಭೆಯಲ್ಲಿ ತಾವೆಸಗಿದ ತಪ್ಪಿಗೆ ಅಜ್ಜಿಯ ಕ್ಷಮೆಯನ್ನೂ ಕೋರುತ್ತಾರೆ. ಧರ್ಮದ ಜಿಗುಟುತನ, ಆ ಜಿಗುಟುತನವನ್ನು ತಿಳಿಯಾಗಿಸುವ ಜೀವನಪ್ರೀತಿ, ಮಾಗಿದ ಬದುಕಿನ ಸೌಂದರ್ಯಗಳನ್ನು ಕಾಣಿಸುವ ಈ ಕಥೆ ಓದುಗರ ಮನಸ್ಸಿಗೆ ತಾಕುವಂತಿದೆ.

ನಂದಗಾವ ಅವರ ಕಥೆಗಳ ಮಹತ್ವ ಇರುವುದು, ಆ ಕಥೆಗಳು ಕಾಣಿಸುವ ಕ್ರಿಶ್ಚಿಯನ್ ಸಮುದಾಯದ ದೈನಿಕವನ್ನು ಚಿತ್ರಿಸುವ ವಿವರಗಳಲ್ಲಿ. ಈ ವಿವರಗಳು ಕಥೆಯ ದೇಹವಾಗಿ ಬಹುಸಹಜವಾಗಿ ಮೂಡಿರುವುದರಲ್ಲಿ ಕಥೆಗಾರರ ಪ್ರತಿಭೆ ವಿಶೇಷವಾಗಿ ಕೆಲಸ ಮಾಡಿದೆ. ಕ್ರಿಶ್ಚಿಯನ್ ಧರ್ಮೀಯರ ನಿತ್ಯದ ಬದುಕಿನ ವಿವರಗಳು, ಚರ್ಚ್‌ನಲ್ಲಿನ ಆಚರಣೆ–ನಡವಳಿಕೆಗಳನ್ನು ಈ ಕಥೆಗಳು ಸೊಗಸಾಗಿ ಪರಿಚಯಿಸುತ್ತವೆ. ಸಮುದಾಯದೊಳಗೆ ಬಳಕೆಯಾಗುವ ಪದಗಳಿಗೆ ಕನ್ನಡದ ಪರ್ಯಾಯಗಳನ್ನು ಕಟ್ಟಿಕೊಟ್ಟಿರುವ ಪ್ರಯತ್ನವೂ ಸೊಗಸಾಗಿದೆ. ಧಾರ್ಮಿಕ ವಿವರಗಳು, ಐತಿಹ್ಯಗಳು ಹಾಗೂ ಚಾರಿತ್ರಿಕ ಸಂಗತಿಗಳು ಬಹು ಸಹಜವಾಗಿ ಮಿಳಿತಗೊಂಡು ಕಥೆಯ ರೂಪ ತಳೆದಿರುವುದಕ್ಕೆ ಉದಾಹರಣೆಯಾಗಿ, 'ಸಂತ ಫಿಲೋಮಿನಾ ಮತ್ತು ಪರದೇಶಪ್ಪನ ಗದ್ದುಗೆ' ಕಥೆಯನ್ನು ಗಮನಿಸಬಹುದು.

'ಹಲವು ಕನ್ನಡಂಗಳು' ಎನ್ನುವುದು ಕನ್ನಡ ನುಡಿಯ ವೈವಿಧ್ಯಕ್ಕೆ ಸಂಬಂಧಿಸಿದ ಮಾತಷ್ಟೇ ಅಲ್ಲ; ಅದು ಕನ್ನಡನಾಡಿನೊಳಗಿನ ಸಮುದಾಯಗಳ ಬಹುತ್ವವನ್ನು ಸೂಚಿಸುವಂತಹದ್ದೂ ಹೌದು. ಆ ಬಹುತ್ವದ ಅನನ್ಯತೆಯ ರೂಪದಲ್ಲೂ ನಂದಗಾವ ಅವರ ಕಥೆಗಳಿಗೆ ಮಹತ್ವವಿದೆ. ❖

ರೇಸ್ ಟ್ರ್ಯಾಕ್‌ನಲ್ಲಿ ಪುಟ್ಟಪೋರ

ಬೆಂಗಳೂರಿನ ಶ್ರೇಯಸ್ ಹರೀಶ್ 11ನೇ ವಯಸ್ಸಿಗೇ ಬೈಕ್ ರೇಸಿಂಗ್‌ನಲ್ಲಿ ಗಮನ ಸೆಳೆಯುತ್ತಿದ್ದಾನೆ. ಇತ್ತೀಚೆಗಷ್ಟೇ ಟ್ರ್ಯಾಕ್ ರೇಸಿಂಗ್ ಮಾಡಲು ಅಧಿಕೃತ ಪರವಾನಗಿ ಕೂಡ ಗಿಟ್ಟಿಸಿಕೊಂಡಿದ್ದಾನೆ

ಮೋಟೊ ಗ್ರ್ಯಾನ್‌ಪ್ರೀ ರೇಸ್ ಕನಸಿನತ್ತ ಶ್ರೇಯಸ್ ಧುಮುಕುವಾಗ....

ಗಿರೀಶ ದೊಡ್ಡಮನಿ

ಆಟಿಕೆಯ ವಾಹನಗಳೊಂದಿಗೆ ಆಡುತ್ತ ಆನಂದಿಸುವ ವಯಸ್ಸಿನಲ್ಲಿಯೇ ಮೋಟರ್ ರೇಸ್ ಟ್ರ್ಯಾಕ್‌ನಲ್ಲಿ ಛಾಪು ಮೂಡಿಸುವ ಕನಸು ಕಂಡ ಹುಡುಗ ಬೆಂಗಳೂರಿನ ಪೋರ ಶ್ರೇಯಸ್ ಹರೀಶ್.

11ನೇ ವಯಸ್ಸಿನಲ್ಲಿಯೇ ಭಾರತ ಮೋಟರ್‌ಸ್ಪೋರ್ಟ್ಸ್ ಕ್ಲಬ್‌ಗಳ ಫೆಡರೇಷನ್ (ಎಫ್‌ಎಂಎಸ್‌ಸಿಐ) ಮಾನ್ಯತೆ ಪಡೆದ ರೇಸ್‌ಗಳಲ್ಲಿ ಭಾಗವಹಿಸುವ ಪರವಾನಗಿ ಗಳಿಸಿದ ಸಾಧನೆ ಸಣ್ಣದಲ್ಲ. ಇತ್ತೀಚೆಗೆ ಕೊಯಮತ್ತೂರಿನಲ್ಲಿ ನಡೆದ ಎಂಆರ್‌ಎಫ್ ಎಂಎಂಎಸ್‌ಸಿ ಎಫ್‌ಎಸ್‌ಸಿಐ ರಾಷ್ಟ್ರೀಯ ಮೋಟರ್ ಸೈಕಲ್ ರೇಸಿಂಗ್ ಚಾಂಪಿಯನ್‌ಷಿಪ್‌ನಲ್ಲಿಯೂ ಶ್ರೇಯಸ್ ಸ್ಪರ್ಧಿಸಿದ್ದ.

ಐದು ವರ್ಷದ ಬಾಲಕನಾಗಿದ್ದಾಗಿನಿಂದಲೇ ಬೈಕ್ ಸವಾರಿಯ ಹವ್ಯಾಸ ಈ ಶ್ರೇಯಸ್‌ನನ್ನು ಆವರಿಸಿತ್ತು. ತಂದೆ ಹರೀಶ್ ಪರಂಧಾಮನ್ ಅವರ ಯಮಹಾ ಬೈಕ್‌ನಲ್ಲಿ ಸವಾರಿ ಮಾಡುವಾಗಲೇ ಈ ಕ್ರೀಡೆಯ ಮೇಲೆ ಪ್ರೀತಿ ಅಂಕುರಿಸಿತ್ತು. ಮಗನ ಆಸೆಯನ್ನು ಆತಂಕದಿಂದಲೇ ಸ್ವೀಕರಿಸಿದ ಹರೀಶ್, ನಂತರ ತಾವೇ ಗುರುವಾದರು. ಮಗನಿಗೆ ಪ್ರತಿವಾರ ಕಬ್ಬನ್ ಪಾರ್ಕ್‌ಗೆ ಕರೆದುಕೊಂಡು ಹೋಗಿ ಬೈಕ್ ರೈಡಿಂಗ್ ಹೇಳಿಕೊಟ್ಟರು.

'ಸಣ್ಣ ಬೈಕ್ ಮತ್ತು ಸೈಕಲ್‌ಗಳಲ್ಲಿ ಬ್ಯಾಲೆನ್ಸಿಂಗ್ ಕಲಿತು, ಎಂಟನೇ ವಯಸ್ಸಿಗಾಗಲೇ ಬೈಕ್ ಓಡಿಸುವ ಮಟ್ಟಕ್ಕೆ ಬೆಳೆದ. ಆತನ ಎತ್ತರ ಮತ್ತು ತೂಕಕ್ಕೆ ತಕ್ಕಂತೆ ಕವಾಸಕಿ ಕೆಎಲ್‌ಎಕ್ಸ್110 ಬೈಕ್ ರೂಪಾಂತರ ಮಾಡಿಸಿ ತರಬೇತಿ ಆರಂಭಿಸಲಾಯಿತು.

ಒಂಬತ್ತು ವರ್ಷದವನಿದ್ದಾಗ ಹಾಸನದಲ್ಲಿ ಮೊದಲ ಬಾರಿಗೆ ರೇಸ್‌ನಲ್ಲಿ ಭಾಗವಹಿಸಿದ. ಪ್ರಶಸ್ತಿ ಗೆದ್ದ' ಎಂದು ಹರೀಶ್ ಮಗನ ಬಗ್ಗೆ ವಿವರಿಸುತ್ತಾರೆ.

ಹರೀಶ್ ತಮ್ಮ ಮಗನ ಕ್ರೀಡಾಭವಿಷ್ಯವನ್ನು ರೂಪಿಸುವ ಸಲುವಾಗಿ ಫಾರ್ಮಾಸ್ಯುಟಿಕಲ್ ಕಂಪನಿಯ ಉದ್ಯೋಗಕ್ಕೆ ರಾಜೀನಾಮೆ ನೀಡಿದರು.

'ಸದ್ಯ ಶ್ರೇಯಸ್‌ಗೆ ಲಭಿಸಿರುವ ಲೈಸೆನ್ಸ್‌ನಲ್ಲಿ ರೇಸಿಂಗ್ ಟ್ರ್ಯಾಕ್ ಮೇಲೆ ಮಾತ್ರ ಬೈಕ್ ಓಡಿಸಬೇಕು. ರಸ್ತೆಗಳಲ್ಲಿ, ಸಾರ್ವಜನಿಕ ಸ್ಥಳಗಳಲ್ಲಿ ಚಾಲನೆ ಮಾಡುವಂತಿಲ್ಲ. ರೇಸ್ ಮತ್ತು ಅಭ್ಯಾಸದ ಸಂದರ್ಭದಲ್ಲಿ ಅವನೊಂದಿಗೆ ಒಬ್ಬರು ಇರಲೇಬೇಕು. ಅದಕ್ಕಾಗಿ ನಾನು ನೌಕರಿ ಬಿಟ್ಟೆ. ಪೂರ್ಣಾವಧಿಯಾಗಿ ಶ್ರೇಯಸ್ ಜೊತೆ ಇರುತ್ತೇನೆ' ಎಂದು ಹರೀಶ್ ಹೇಳುತ್ತಾರೆ.

ಕ್ರಿಕೆಟ್, ಟೆನಿಸ್, ಬ್ಯಾಡ್ಮಿಂಟನ್, ಚೆಸ್ ಆಟವನ್ನು ಮಕ್ಕಳು ಆಡಲು ಇಷ್ಟಪಡುತ್ತಾರೆ. ಆದರೆ ಅವೆಲ್ಲವನ್ನೂ ಆಡುವ ಅವಕಾಶವಿದ್ದರೂ ರೇಸ್‌ನತ್ತ ಆಕರ್ಷಿತವಾಗಿದ್ದು ಏಕೆ ಎಂಬ ಪ್ರಶ್ನೆಗೆ ಶ್ರೇಯಸ್, 'ಸ್ಪೇನ್‌ನ ಮಾರ್ಕ್ ಮಾರ್ಕೆಜ್ ನನಗೆ ಬಹಳ ಇಷ್ಟ. ಅವರ ರೇಸ್‌ಗಳನ್ನು ತುಂಬಾ ನೋಡುತ್ತೇನೆ. ಅವರು 15ನೇ ವಯಸ್ಸಿನಲ್ಲಿಯೇ ಟ್ರ್ಯಾಕ್‌ಗೆ ಇಳಿದವರು. ನಾನು ಅವರಂತೆಯೇ ಬೆಳೆಯಬೇಕು. ಮೋಟೊ ಗ್ರ್ಯಾನ್‌ಪ್ರೀ ರೇಸ್‌ನಲ್ಲಿ ಭಾರತದ ರಾಷ್ಟ್ರಧ್ವಜ ಹಾರಬೇಕು ಮತ್ತು ರಾಷ್ಟ್ರಗೀತೆ ಮೊಳಗಬೇಕೆಂಬುದೇ ನನ್ನ ಗುರಿ' ಎನ್ನುತ್ತಾನೆ.

ಕೆನ್‌ಸ್ರಿ ಶಾಲೆ ವಿದ್ಯಾರ್ಥಿಯಾಗಿರುವ ಶ್ರೇಯಸ್ ಓದಿನಲ್ಲಿ ಮುನ್ನಡೆ ಕಾಪಾಡಿಕೊಂಡಿದ್ದು, ಮುಂಬರಲಿರುವ ರೇಸ್ ಸಿದ್ಧತೆಯೂ ಭರದಿಂದ ನಡೆಸುತ್ತಿದ್ದಾನೆ. ❖

ಧುಮ್ಮಿಕ್ಕಿತು ಕ್ಷೀರಸಾಗರ!


ಅಗೋ ಅಲ್ಲೊಂದು ಹೊಸ ಲೋಕ ತೆರೆದುಕೊಳ್ಳುತ್ತಿದೆ...

ವರುಣನೇ ಗಗನದಿಂದ ಭುವಿಗೆ ಕ್ಷೀರಾಭಿಷೇಕ ಮಾಡಿದರೆ ಹೀಗಿದ್ದೀತು...

ಚಿತ್ರ-ಬರಹ: ಪ್ರಮೋದ ಸಾಗರ

ಹನಿಹನಿಯಾಗಿ ಹೆಜ್ಜೆ ಇಟ್ಟ ಮುಂಗಾರು ಭೋರ್ಗರೆಯುತ್ತಿದೆ. ತಣ್ಣಗೆ ಹರಿಯುತ್ತಿದ್ದ ತೊರೆಗಳು ಒಟ್ಟಿಕ್ಕಿಳಿದು ಕಡಲೊಳಗೊಂದಾಗಲು ಮೈದುಂಬಿ ಹರಿಯುತ್ತಿವೆ. ಹರಿಯುವ ರಭಸದಲ್ಲಿ ತಮಗರಿವಿಲ್ಲದಂತೆಯೇ ಹಲವು ರುದ್ರರಮಣೀಯ ಜಲಧಾರೆಗಳಿಗೆ ಜನ್ಮ, ಜೀವವೀಯುತ್ತಿವೆ.

ಹೀಗೊಮ್ಮೆ ಕಲ್ಪಿಸಿಕೊಳ್ಳಿ... ಪಶ್ಚಿಮ ಘಟ್ಟದ ದಟ್ಟ ಅರಣ್ಯ. ದಟ್ಟ ಹಸಿರು ಕಾಡು ಕಣಿವೆಯ ಮೇಲೆ ಲಂಗರುಹಾಕಿದೆ ಮೋಡ. ಜಿಟಿಜಿಟಿ ಮಳೆ. ಮೈಮನ ಕೊರೆಯುವಂತೆ ಸುಳಿಯುವ ತಂಗಾಳಿ. ಎದುರಿಗೊಂದು ಆಕಾಶದಿಂದಲೇ ಧುಮುಕುವಂತೆ ತೋರುವ ಜಲಪಾತ. ಕಣ್ಮುಂದೆ ಇಂಥ ಚಿತ್ರಣವೊಂದು ಗಂಗಾವತರಣವನ್ನೇ ನೆನಪಿಗೆ ತರುವುದು. ಈ ದೃಶ್ಯ ಒಮ್ಮೆ ಮಾತು ಕಟ್ಟಿಸೀತು. ಕಣ್ಣು ತುಂಬಿಸೀತು. ಹೌದು, ಮೋಡಗಳು ಕ್ಷೀರಧಾರೆಯನ್ನೇ ಧರೆಗಿಳಿಸಿದರೆ ಹೇಗಿದ್ದೀತು? ಅದನ್ನು ಖುದ್ದಾಗಿ ಅನುಭವಿಸಲು ನೀವು ದೂದ್ ಸಾಗರ ಜಲಪಾತದವರೆಗೆ ಬರಬೇಕು.

ಮಹದಾಯಿ ನದಿಯ ದೂದ್ ಸಾಗರ ಜಲಪಾತ ಈಗ ಮೈದುಂಬಿ ಕಾಡು ಕಣಿವೆಯ ನಡುವೆ ಹಾಲು ಸುರಿದಂತೆ ಧುಮ್ಮಿಕ್ಕುತ್ತಿದೆ. ಹೆಸರಿಗೆ ತಕ್ಕಂತೆ ಈ ಜಲಪಾತ ಕ್ಷೀರ ಸಾಗರವೇ ಆಗಿದೆ.

ದೂದ್ ಸಾಗರ(ಹಾಲಿನ ಸಮುದ್ರ) ಮಹದಾಯಿ ನದಿಯಿಂದ ಬೀಳುವ ನಾಲ್ಕು ಹಂತದ ಜಲಪಾತ. ಇದು ಕರ್ನಾಟಕ ಮತ್ತು ಗೋವಾ ರಾಜ್ಯದ ಗಡಿಯಲ್ಲಿದೆ. 1,017 ಅಡಿ ಎತ್ತರದಿಂದ ಧುಮುಕುವ ಇದು, ಭಾರತದ ಅತ್ಯಂತ ಎತ್ತರದ ಜಲಪಾತಗಳಲ್ಲಿ ಒಂದೆನಿಸಿದೆ.

ಪ್ರವಾಸ

ಹೋಗುವುದು ಹೇಗೆ?

ಈ ಜಲಪಾತ ವೀಕ್ಷಣೆಗೆ ಸಂಪೂರ್ಣ ಒಂದು ದಿನವನ್ನು ಮೀಸಲಿಡಬೇಕು. ರೈಲೊಂದೇ ಜಲಪಾತ ತಲುಪಲು ಇರುವ ಏಕೈಕ ಸಂಚಾರ ಸೌಲಭ್ಯ. ಬೆಟ್ಟದ ನಡುವಿನ ಈ ಮಾರ್ಗದಲ್ಲಿ ನೀವು ರೈಲು ಅಥವಾ ಕಾಲ್ನಡಿಗೆ (ಟ್ರೆಕ್ಕಿಂಗ್) ಮೂಲಕವಾಗಿ ಜಲಪಾತ ತಲುಪಬಹುದು. ಪ್ರಯಾಣ ಆರಂಭಿಸುವ ಮೊದಲು ಬೆಳಗಾವಿಗೆ ಹತ್ತಿರದ ಕ್ಯಾಸಲ್ ರಾಕ್ ಎಂಬ ರೈಲು ನಿಲ್ದಾಣ ತಲುಪಬೇಕು. ಇಲ್ಲಿಂದ ಬೆಳಗ್ಗೆ 11.30ಕ್ಕೆ ಹೊರಡುವ ರೈಲು ದೂದ್ ಸಾಗರದ ಎದುರು ಒಂದು ಕ್ಷಣ ನಿಲ್ಲುತ್ತದೆ. ಇದು ಬಿಟ್ಟರೆ ಸಂಜೆ ಅತ್ತಲಿಂದ ಮರಳಿ ಕ್ಯಾಸಲ್ ರಾಕ್‌ಗೆ ಬರಲು 5 ಗಂಟೆಗೆ ಒಂದು ರೈಲಿದೆ. ಅದು ಕೂಡ ಒಂದು ಕ್ಷಣ ದೂದ್ ಸಾಗರದೆದುರು ನಿಲ್ಲುತ್ತದೆ. ಇದರ ಹೊರತಾಗಿ ಕೆಲವು ಗೂಡ್ಸ್ ರೈಲುಗಳು ಆಗಾಗ ಸಂಚರಿಸುತ್ತವೆ. ಬೇರೆ ಬೇರೆ ದಿನಗಳಲ್ಲಿ ಬೇರೆ ಬೇರೆ ಸಮಯಕ್ಕೆ ಜನ ಸಂಚಾರದ ರೈಲುಗಳಿವೆ.

ಕ್ಯಾಸಲ್ ರಾಕ್‌ನಿಂದ ಟ್ರೆಕ್ಕಿಂಗ್ ಆರಂಭಿಸುವುದಾದರೆ ಬೆಳಗ್ಗೆಯೇ ಹೊರಟು ಸಂಜೆಗೆ ಮರಳಿ ಬರುವುದು ಉತ್ತಮ. ಹೋಗಿಬರುವ ಪ್ರಯಾಣದ ಒಟ್ಟು ದೂರ ಅಂದಾಜು 24 ಕಿ.ಮೀ.

ನೆನಪಿಡಿ, ಕ್ಯಾಸಲ್ ರಾಕ್‌ನಿಂದ ದೂದ್ ಸಾಗರ ಎಂಬುದು ಕೇವಲ ಕೋರಿಕೆಯ ರೈಲು ನಿಲುಗಡೆ ತಾಣವಾಗಿದ್ದು, ಅಧಿಕೃತ ನಿಲ್ದಾಣವಲ್ಲ. ಜೋರು ಮಳೆ, ದಟ್ಟಮಂಜು ಕವಿದ ವಾತಾವರಣವಿದ್ದಲ್ಲಿ ಸುರಕ್ಷತಾ ದೃಷ್ಟಿಯಿಂದ ರೈಲು ಸಿಬ್ಬಂದಿ ನಿಮ್ಮನ್ನು ಯಾವುದೇ ಕಾರಣಕ್ಕೂ ಜಲಪಾತ ವೀಕ್ಷಣೆಗೆ ಬಿಡುವುದಿಲ್ಲ. ಎಷ್ಟೋ ಬಾರಿ ಜಲಪಾತ ನೋಡಲು ಹೋಗಿ ನಿರಾಸೆಯಾಗಿ ಮರಳಿ ಬಂದವರಿದ್ದಾರೆ. ಹೀಗಾಗಿ ಈ ಜಲಪಾತದ ವೀಕ್ಷಣೆಗೆ ಅದೃಷ್ಟವೂ ಅಗತ್ಯವೆನ್ನಬಹುದು. ಆದರೆ ಸಂಚರಿಸುವ ರೈಲಿನಲ್ಲಿ ಕುಳಿತು ಈ ಜಲಪಾತ ವೀಕ್ಷಿಸಲು ಯಾವುದೇ ತೊಂದರೆ ಇರುವುದಿಲ್ಲ, ಮುಂದೆ ಕುಲೆಂ ಎಂಬ ರೈಲು ನಿಲ್ದಾಣದಲ್ಲಿ ಇಳಿದು ಕ್ಯಾಸಲ್ ರಾಕ್‌ಗೆ ರೈಲಿನಲ್ಲಿ ಮರಳಬಹುದು.

> ಭೂಮಿ, ಬೆಟ್ಟ, ಬಾನು 3ಡಿ ಚಿತ್ರರೂಪದಲ್ಲಿ ನೋಡಿದರೆ ಹೇಗಿರುತ್ತದೆ? ಅದನ್ನೇ ಇಲ್ಲಿ ನಿಸರ್ಗ ನೈಜವಾಗಿ ಬಿಡಿಸಿದೆ. ಮಳೆಯಲ್ಲಿ ದಟ್ಟ ಮಂಜಿನ ಸಿಂಚನ, ಹಾಲ್ನೊರೆ ಅಭಿಷೇಕ, ಬೆಟ್ಟದೊಳಗಿನ ತೂಬಿನೊಳಗೆ ಸಾಗುವ ರೈಲಿನ ಯಾನದ ಅನುಭವವನ್ನು ಒಮ್ಮೆಯಾದರೂ ಪಡೆಯಬೇಕು

ಜೋರು ಹರಿವಿರುವಾಗ, ಮುಸುಕಿದ ಮಂಜಿನ ನಡುವೆ ಜಲಪಾತ ಒಮ್ಮೊಮ್ಮೆ ಹಿಮಾಲಯದಂತೆ ತೋರುವುದು. ಒಂದು ಬದಿ ಬೆಟ್ಟ, ಒಂದು ಬದಿ ಕಣಿವೆ, ನಡುವೆ ರೈಲು ಹಾದಿ, ಮಳೆ ಬೀಳುವಾಗ ಹೆಜ್ಜೆಗೊಂದೊಂದು ಪುಟ್ಟ ಝರಿ ನಿಮ್ಮನ್ನು ಸ್ವಾಗತಿಸುತ್ತವೆ. ಈ ಪ್ರವಾಸ ಮರಳಿ ಹೋಗುವ ತನಕ ಆಯಾಸವನ್ನು ಮಾಡುವುದಿಲ್ಲ ಎನ್ನುವುದು ಸ್ವಂತ ಅನುಭವ.

ಅತ್ತ ಗೋವಾ ರಾಜ್ಯದಿಂದಲೂ ಜಲಪಾತ ವೀಕ್ಷಣೆಗೆ ಬರಬಹುದಾಗಿದ್ದು, ಜಲಪಾತದ ನಾಲ್ಕನೇ ಹಂತದಲ್ಲಿ ಈಜಾಟಕ್ಕೆ ಗೋವಾ ಸರ್ಕಾರದ ಪ್ರವಾಸೋದ್ಯಮ ಇಲಾಖೆ ಅವಕಾಶ ಕಲ್ಪಿಸಿದೆ. ಆದರೆ ಮಳೆ ತೀವ್ರವಾಗಿದ್ದಲ್ಲಿ ಇಲ್ಲಿಗೆ ಅವಕಾಶವಿಲ್ಲ. ಮಳೆಗಾಲದ ಕೊನೆ-ಚಳಿಗಾಲದ ಆರಂಭದಲ್ಲಿ ಇಲ್ಲಿಗೆ ಪ್ರವಾಸ ಹೋಗುವುದು ಹೆಚ್ಚು ಸೂಕ್ತ. ನಾವು ತುಂಬು ಮಳೆಗಾಲದಲ್ಲಿ ಹೋಗಿ, ಈ ಕ್ಷೀರಸಾಗರದ ರುದ್ರರಮಣೀಯ ದರ್ಶನ ಪಡೆದೆವು. ಸರಿಯಾದ ಸಿದ್ಧತೆಯೊಂದಿಗೆ, ಕ್ಷೇಮವಾಗಿ ಹೋಗಿ ನೋಡಿಕೊಂಡು ಬನ್ನಿ. ❖

ಪಶ್ಚಿಮಘಟ್ಟದ ಹೃದಯ ಭಾಗದೊಳಗೆ ಚುಕುಬುಕು ಪಟ್ಟಿಯ ಮೇಲೆ ಚಾರಣವೆಂದರೆ ಸ್ವರ್ಗದಲ್ಲಿ ಪಯಣಿಸಿದಂತೆ

ಮಜ ಮಜ ಮಜಕೂರ

• ಎಂ.ಎಸ್.ಪೂಜಾರ

ಗಣಿತದಲ್ಲಿ ಗರ್ದಿ ಗಮ್ಮತ್ತು

ಸ್ವಾರಸ್ಯಕರ ಸೂಚ್ಯಂಕದಾಟ

ನೀವು 0ಯಿಂದ 50ರವರೆಗಿನ ಸಂಖ್ಯೆಗಳನ್ನು ಮೂರು ಮೂರು ಗುಂಪುಗಳಲ್ಲಿ ಕ್ರಮವಾಗಿ ಬರೆಯುತ್ತಾ ಕೆಳಗೆ ತೋರಿಸಿದಂತೆ ಆ ಮೂರು ಸಂಖ್ಯೆಗಳ ಮೊತ್ತದ ಸೂಚ್ಯಂಕ ಕಂಡು ಹಿಡಿಯಿರಿ. ಕೊನೆಗೆ ಯಾವಾಗಲೂ 3 ಬರುತ್ತದೆ.

0	-1	-2	= 03	0+3=3
3	-4	-5	=12	1+2=3
6	-7	-8	=21	2+1=3
9	-10	-11	= 30	3+0=3
12	-13	-14	= 39	3+9=12 =1+2=3
15	-16	-17	= 48	4+8=12 = 1+2=3
18	-19	-20	=57	5+7=12 =1+2=3
21	-22	-23	= 66	6+6 =12 = 1+2= 3
24	-25	-26	= 75	7+5 = 12 = 1+2 = 3
27	-28	-29	= 84	8+4+12 = 1+2= 3
30	-31	-32	=93	9+3 = 12 = 1+2=3
33	-34	-35	=102	1+0+2= 3
36	-37	-38	=111	1+1+1 = 3
39	-40	-41	=120	1+2+0 = 3
42	-43	-44	=129	1+2+9 = 12 = 1+2= 3
45	-46	-47	=138	1+3+8 = 12 = 1+2=3
48	-49	-50	=147	1+4+7 = 12 =1+2=3

ಚಿಕ್ಕ ಲೆಕ್ಕ: ಯಾವ ಎರಡು ವರ್ಗ ಸಂಖ್ಯೆಗಳ ಮೊತ್ತ 100 ಆಗುತ್ತದೆ?

ಅದಲು ಬದಲು ಕಂಚಿ ಕದಲು

1 ರಾಜವಿಮಾನ
2 ಕಳೆದ ಬಾರಿ
3 ಯಜಮಾನ
4 ಮುಂದಿನ ಭಾಗ

ಜಾಣಪದ ಆಟ

ಇಲ್ಲಿ ಕೊಟ್ಟಿರುವ ಮೂಲಾಕ್ಷರಗಳಿಗೆ ಸಂಬಂಧಿಸಿದಂತೆ ಪಕ್ಕದಲ್ಲಿರುವ ಸುಳಿವು ಆಧರಿಸಿ ಎರಡು ಅಕ್ಷರಗಳ ಪದ ರಚಿಸಿ

	ಶ	ಲ	ಸುಳಿವು
1			ಕಲ್ಲು
2			ನೋವು
3			ವಿದ್ಯಾಮಂದಿರ
4			ಒಂದು ಹಿಂದಿ ಸಿನಿಮಾ
5			ರೀತಿ

ಟ್ವೆಂಟಿ – 20 ಮ್ಯಾಚ್

ರೂಢಿಯಲ್ಲಿರುವ ಪ್ರಚಲಿತ ಸಂಖ್ಯೆಗಳಿಗೂ ರೋಮನ್ ಸಂಖ್ಯೆಗಳಿಗೂ ಹೊಂದಿಸಿ

1	80	A	XL
2	99	B	XXVIII
3	500	C	III
4	81	D	LXXXI
5	1000	E	M
6	37	F	D
7	28	G	VIII
8	59	H	XXXVII
9	11	I	M
10	10,000	J	$\overline{XV}$
11	5,000	K	XCIX
12	1,00,000	L	$\overline{CI}$
13	15,000	M	LIX
14	93	N	XVII
15	8	O	XI
16	40	P	LXXX
17	17	Q	$\overline{V}$
18	101	R	$\overline{X}$
19	3	S	$\overline{C}$
20	1000	T	XCIII

ಗುಬ್ಬಿಯ ಸಂದೇಶ

• ಕಲೆ-ಪರಿಕಲ್ಪನೆ: ಸುರೇಶ ಆರ್. ಅರ್ಕಸಾಲಿ

ಒಂದು ಹೊಳೆ ದಂಡೆಯಲ್ಲಿದ್ದ ಮರದ ಮೇಲೆ ಒಂದು ಗುಬ್ಬಿ ವಾಸವಾಗಿತ್ತು. ಆ ಪರಿಸರಕ್ಕೆ ಒತ್ತಿಕೊಂಡಂತೆಯೇ ಊರಿನ ಒಬ್ಬ ಶ್ರೀಮಂತನ ತೋಟ ಇತ್ತು

ಗುಬ್ಬಿ ವಾಸವಿದ್ದ ಹೊಳೆದಂಡೆಯ ಪಕ್ಕದಲ್ಲೇ ಶ್ರೀಮಂತನ ತೋಟದಲ್ಲಿ ಸಾಕಷ್ಟು ಗಿಡಮರಗಳು ಇದ್ದವು. ಸುಂದರ ಹಸಿರು ಪರಿಸರ ಅಲ್ಲಿ ಸೃಷ್ಟಿಯಾಗಿತ್ತು

ಶ್ರೀಮಂತನಿಗೆ ಸೇರಿದ ತೋಟದ ನಡುವೆ ಒಂದು ದೊಡ್ಡ ಮನೆಯೂ ಇತ್ತು. ಒಂದು ದಿನ ದುಷ್ಕರ್ಮಿಗಳು ತೋಟದ ಮನೆಗೆ ಬೆಂಕಿ ಹಚ್ಚಿದರು


ಬೆಂಕಿ ಬಿದ್ದದ್ದನ್ನು ನೋಡಿ, ಊರವರೆಲ್ಲಾ ಸೇರಿ ಕೊಡ, ಬಕೀಟುಗಳಲ್ಲಿ ನೀರು ತುಂಬಿ ಆರಿಸಲು ಯತ್ನಿಸಿದರು. ಕೊನೆಗೆ ಅಗ್ನಿಶಾಮಕದವರೂ ಬಂದು ಬೆಂಕಿ ನಂದಿಸಲು ಯತ್ನಿಸಿದರು

ಅಗ್ನಿಶಾಮಕ ದಳದವರು ಹೊಳೆಯಿಂದ ನೀರೆತ್ತಿ ಬೆಂಕಿ ನಂದಿಸಲು ಯತ್ನಿಸಿದರು. ಇದೇ ವೇಳೆ ಗುಬ್ಬಿಯೂ ತನ್ನ ಪುಟ್ಟ ಚುಂಚದಿಂದ ಕೆಲವೇ ಹನಿಗಳನ್ನು ಬೆಂಕಿಯ ಮೇಲೆ ಸುರಿಯಲಾರಂಭಿಸಿತು



ನಿನ್ನಿಂದ ಅಸಾಧ್ಯವಾದದ್ದನ್ನೇಕೆ ಮಾಡುತ್ತಿರುವೆ ಎಂದು ಗುಬ್ಬಿಯನ್ನು ಮರ ಕೇಳಿತು. ಆಗ ಗುಬ್ಬಿಯು, ಮುಂದೆ ಯಾರಾದರೂ ಬೆಂಕಿ ಹಚ್ಚಿದವರು ಮತ್ತು ನಂದಿಸಿದವರು ಎಂಬ ಪಟ್ಟಿ ಮಾಡಿದರೆ ನನ್ನ ಹೆಸರು ಬೆಂಕಿ ನಂದಿಸಿದವರ ಸಾಲಿನಲ್ಲಿರಬೇಕು ಎಂದಿತು.

ಸುಳಿವು ಆಧರಿಸಿ ಪಕ್ಷಿ ಪತ್ತೆ ಮಾಡಿ

A ಇಲ್ಲಿ ಮುಂದೆ ಕೊಟ್ಟಿರುವ ಸ್ವರಾಕ್ಷರ ಸುಳಿವು ಆಧರಿಸಿ ಅವುಗಳಿಗೆ ವ್ಯಂಜನಾಕ್ಷರ ಸೇರಿಸಿ ಎರಡು ಅಕ್ಷರಗಳ ಪಕ್ಷಿ ಪತ್ತೆ ಮಾಡಿ.

1 – – (ಇ,ಇ)
2 – – (ಆ, ಎ)
3 – – (ಊ, ಎ)
4 – – (ಓ, ಇ)
5 – – (ಅ, ಅ)

B ಇಲ್ಲಿ ಒತ್ತಕ್ಷರ ಹೊಂದಿರುವ ಎರಡಕ್ಷರಗಳ ಐದು ಪಕ್ಷಿ ಗುರುತಿಸಿ

1 – –
2 – –
3 – –
4 – –
5 – –



ಕಳೆದ ಸಂಚಿಕೆಯ ಸರಿ ಉತ್ತರಗಳು

ಮಜ ಮಜ ಮಜಕೂರದ ಮೇ 23ರ ಸಂಚಿಕೆ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ



ಟ್ವೆಂಟಿ –20 ಮ್ಯಾಚ್:
A ವಿಭಾಗ
1-F 2-H 3-D 4-G 5-C 6-A 7-J 8-E 9-I 10-B
B ವಿಭಾಗ
1-H 2- E 3- D 4-F 5-C 6-G 7-I 8-F 9-A 10-J
ಜಾಣಪದ ಆಟ: 1 ಮುನಿ 2- ಮೌನ 3- ಮನೆ 4- ಮಾನ 5- ಮೊನೆ
ಅಂಕಿ ಆಟ
888+88+8+8+8 = 1,000
ಅದಲು ಬದಲು
1 ಸರಿ ಹೊಂದಿಸಿ 2 ಸರಿಪಡಿಸಿ 3 ಪಟದದಾರ 4 ಮೂಡಲಗಿ
ಪದ ಆಟ A
1 ನಯಸೇನ 2 ರಘುವೀರ 3 ಕನ್ನಡಕ
B ಸಮಂಜಸ ರವಿವಾರ ಸಮರಸ
C ಸಹವಾಸ ರಣಧೀರ ತಿರುಪತಿ

ಸರಿ ಉತ್ತರ ನೀಡಿದ ಆಯ್ದ ಮೂರು ಪುಟಾಣಿಗಳು

ವಿಕಾಸ್ ಆರ್.ವೈ., ದಾವಣಗೆರೆ

ಶ್ರುತಿ ಕಳ್ಳಿಗುದ್ದಿ, ರಬಕವಿ (ಬಾಗಲಕೋಟೆ)

ನಂದಿತಾ ಎಸ್.ಎಂ., ಬೆಂಗಳೂರು

ಸರಿ ಉತ್ತರ ಮುಂದಿನ ವಾರ

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಮೂವರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಟ್ವೆಂಟಿ-20 ಮ್ಯಾಚ್ ಮತ್ತು ಪುಟಾಣಿ ಪದಬಂಧದ ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು.ಉತ್ತರ ಕಳುಹಿಸಲು ಇಮೇಲ್ ವಿಳಾಸ:

majakoora@prajavani.co.in

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ನಿಧನ ವಾರ್ತೆ

ಶ್ರೀಮತಿ ಬೈಯಮ್ಮ
(ಲೇಟ್ ಲಕ್ಷ್ಮಯ್ಯ ರವರ ಧರ್ಮಪತ್ನಿ)

ಇವರು ತಮ್ಮ ಕತ್ರಿಗುಪ್ಪೆಯ ನಿವಾಸದಲ್ಲಿ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಇವರ ಅಂತ್ಯಕ್ರಿಯೆಯನ್ನು ದಿ: 31/07/2022 ರಂದು ಮಧ್ಯಾಹ್ನ 1 ಗಂಟೆಗೆ ಚಾಮರಾಜಪೇಟೆಯ ರುದ್ರಭೂಮಿಯಲ್ಲಿ ನೆರವೇರಲಿದೆ.

ಇಂತಿ ದುಃಖತಪ್ತ ಮಕ್ಕಳಾದ: ಪಿಳ್ಳಪ್ಪ, ತಿಮ್ಮಪ್ಪ, ಬಾಬು ಹಾಗೂ ಕುಟುಂಬವರ್ಗದವರು.

14ನೇ ವರ್ಷದ ಸವಿನೆನಪು

ಶ್ರೀ.ಟಿ.ಬಾಲಕೃಷ್ಣ ರೆಡ್ಡಿ
ನಿಧನ: 31-07-2008

ನಿಮ್ಮ ನೆನಪೇ ನಮಗೆ ಸದಾ ದಾರಿ ದೀಪವಾಗಿದೆ.

ನಿಮ್ಮನ್ನೆ ಸ್ಮರಿಸುವ :
ಧರ್ಮಪತ್ನಿ: ಎಲ್.ಮಹಾಲಕ್ಷ್ಮಿ

ಶಿವಗಣಾರಾಧನೆ

ಶ್ರೀ ಎಸ್. ಪರಮಶಿವಯ್ಯ
ನಿವೃತ ಮುಖ್ಯ ಇಂಜೀನಿಯರ್ (ಕೆ.ಹೆಚ್.ಬಿ)
ಗೌರವ ಅಧ್ಯಕ್ಷರು,
ಮರಿಮಲ್ಲಪ್ಪನವರ ವಿದ್ಯಾಸಂಸ್ಥೆ, ಮೈಸೂರು

ದಿನಾಂಕ : 22-07-2022ರ ಶುಕ್ರವಾರ ಶಿವೈಕ್ಯರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಈ ತತ್ಸಂಬಂಧವಾಗಿ ಶಿವಗಣಾರಾಧನೆಯನ್ನು ದಿನಾಂಕ: 01-08-2022 ಸೋಮವಾರದಂದು ಮೃತರ ಸ್ವಗೃಹ: # 793, 5ನೇ ಮುಖ್ಯರಸ್ತೆ, 7ನೇ ಅಡ್ಡರಸ್ತೆ, ಎಂ.ಸಿ. ಲೇಔಟ್, ವಿಜಯನಗರ ಬೆಂಗಳೂರು-40. ಇಲ್ಲಿ ಬೆಳಗ್ಗೆ 10:00 ಘಂಟೆಗೆ ನೆರವೇರಿಸಲಾಗುವುದು.

ತಾವೆಲ್ಲರೂ ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ

ಇಂತಿ ದುಃಖತಪ್ತರು: ಶ್ರೀಮತಿ ಮಂಗಳಗೌರಮ್ಮ ಮತ್ತು ಮಕ್ಕಳು ಹಾಗೂ ಕುಟುಂಬ ವರ್ಗದವರು.

ಮಹೀಂದ್ರ ಸ್ಕಾರ್ಪಿಯೊ–ಎನ್: 1 ಲಕ್ಷಕ್ಕೂ ಅಧಿಕ ಬುಕಿಂಗ್

ಮುಂಬೈ (ಪಿಟಿಐ): ಮಹೀಂದ್ರ ಆ್ಯಂಡ್ ಮಹೀಂದ್ರ ಕಂಪನಿಯ ಹೊಸ ಸ್ಕಾರ್ಪಿಯೊ–ಎನ್ ಎಸ್‌ಯುವಿಗೆ ಬುಕಿಂಗ್ ಆರಂಭವಾದ ಅರ್ಧ ಗಂಟೆಯ ಒಳಗಾಗಿ 1 ಲಕ್ಷಕ್ಕೂ ಅಧಿಕ ಬುಕಿಂಗ್ ಆಗಿದೆ ಎಂದು ಕಂಪನಿಯು ಶನಿವಾರ ಪ್ರಕಟಣೆಯಲ್ಲಿ ತಿಳಿಸಿದೆ. ಸೆಪ್ಟೆಂಬರ್ 26ರಿಂದ ಗ್ರಾಹಕರಿಗೆ ವಿತರಣೆ ಆರಂಭ ಆಗಲಿದೆ ಎಂದು ಹೇಳಿದೆ.

ಬ್ಯಾಂಕ್ ಆಫ್ ಬರೋಡಾ ಲಾಭ ಹೆಚ್ಚಳ

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ಬ್ಯಾಂಕ್ ಆಫ್ ಬರೋಡಾ ನಿವ್ವಳ ಲಾಭವು ಪ್ರಸಕ್ತ ಹಣಕಾಸು ವರ್ಷದ ಜೂನ್ ತ್ರೈಮಾಸಿಕದಲ್ಲಿ ಶೇ 79ರಷ್ಟು ಹೆಚ್ಚಾಗಿದ್ದು ₹ 2,168 ಕೋಟಿಗೆ ಏರಿಕೆ ಆಗಿದೆ.

ENTIRE KARNATAKA DISTRIBUTION SHALINI ARTSS (JACK MANJU)
BOMBAY-KARNATAKA & DURGA DAVANAGERE AREA : SAMRAT COMBINES PH: 9448070206
HYDERABAD-KARNATAKA: SHALINI ARTSS THROUGH SURYA FILMS PH: 9900579834 OVERSEAS: ONETWENTY8 MEDIA PH: 9945717799
SOUTH CANARA: SRIDHARKRUPA COMBINES PH: 9341461616

ಚಿನ್ನ, ಬೆಳ್ಳಿ

(ಬೆಂಗಳೂರು)

ಸ್ಟ್ಯಾಂಡರ್ಡ್ ಚಿನ್ನ (10 ಗ್ರಾಂ)	₹53,400
ಆಭರಣ ಚಿನ್ನ (1 ಗ್ರಾಂ)	₹4,912
ಬೆಳ್ಳಿ (ಕೆ.ಜಿಗೆ)	₹59,800

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹345-612
ದ್ವಿತಳಿ (ಬಿ.ವಿ)	₹396-805

ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹166
ಆರ್‌ಎಸ್‌ಎಸ್-5	₹157
ಗುಡ್ ಲಾಟ್	₹151

ಧರ್ಮದರ್ಶಿ ಮಂಡಳಿ ಸಭೆಯ ಪರಿಷ್ಕೃತ ಕಾರ್ಯಸೂಚಿ

ಇಪಿಎಫ್‌ಒ: ಇಟಿಎಫ್ ಹೂಡಿಕೆ ಮಿತಿ ಹೆಚ್ಚಳ ಇಲ್ಲ

ನವದೆಹಲಿ (ಪಿಟಿಐ): 'ಷೇರುಪೇಟೆಗಳಲ್ಲಿ ವಹಿವಾಟು ನಡೆಸುವ ವಿನಿಯಮ ವಹಿವಾಟು ನಿಧಿಗಳಲ್ಲಿ (ಇಟಿಎಫ್) ಭವಿಷ್ಯ ನಿಧಿಯ ಹೂಡಿಕೆ ಪ್ರಮಾಣವನ್ನು ಶೇ 20ಕ್ಕೆ ಹೆಚ್ಚಿಸುವ ಪ್ರಸ್ತಾವವನ್ನು ಕೈಬಿಡಲಾಗಿದೆ' ಎಂದು ಇಪಿಎಫ್‌ಒ ಟ್ರಸ್ಟಿ ಹರ್ಭಜನ್ ಸಿಂಗ್ ಸಿದ್ದು ತಿಳಿಸಿದ್ದಾರೆ.

ಸದ್ಯ, ಶೇ 15ರಷ್ಟನ್ನು ಇಟಿಎಫ್‌ಗಳಲ್ಲಿ ತೊಡಗಿಸಲಾಗುತ್ತಿದೆ. ಎರಡು ದಿನಗಳ ಧರ್ಮದರ್ಶಿಗಳ ಮಂಡಳಿ ಸಭೆಯು ಶನಿವಾರ ಮುಕ್ತಾಯವಾದ ಬಳಿಕ ಸುದ್ದಿಸಂಸ್ಥೆಯೊಂದಿಗೆ ಅವರು ಮಾತನಾಡಿದರು.

ಧರ್ಮದರ್ಶಿಗಳ ಮಂಡಳಿ ಸಭೆಯ ಪರಿಷ್ಕೃತ ಮಾರ್ಗ ಸೂಚಿಯ ಪ್ರಕಾರ, ಷೇರು ಅಥವಾ ಷೇರು ಸಂಬಂಧಿತ ಯೋಜನೆಗಳಲ್ಲಿ ಭವಿಷ್ಯ ನಿಧಿ ಹೂಡಿಕೆಯನ್ನು ಹೆಚ್ಚಿಸುವ ಪ್ರಸ್ತಾವನ್ನು ಕೈಬಿಡಲಾಗಿದೆ.

'ಹೂಡಿಕೆ ಮಿತಿ ಹೆಚ್ಚಿಸುವುದಕ್ಕೆ ಇಪಿಎಫ್‌ಒನ ಕಾರ್ಯಕಾರಿ ಸಮಿತಿಯ ಸಭೆಯಲ್ಲಿ ನೌಕರರ ಪ್ರತಿನಿಧಿಗಳು ವಿರೋಧ ವ್ಯಕ್ತಪಡಿಸಿದ್ದಾರೆ' ಎಂದು ಅವರು ಹೇಳಿದ್ದಾರೆ.

'ಷೇರುಮಾರುಕಟ್ಟೆಯು ಚಂಚಲ ಆಗಿರುವುದರಿಂದ ಹೂಡಿಕೆಯ ವ್ಯವಸ್ಥೆಯಲ್ಲಿ ಬದಲಾವಣೆ ತರುವುದಕ್ಕೂ ಮೊದಲು ಆ ಬಗ್ಗೆ ಇನ್ನೂ ಹೆಚ್ಚಿನ ಸಮಾಲೋಚನೆ ನಡೆಸುವ ಅಗತ್ಯ ಇದೆ' ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.

ಪಿಂಚಣಿ ವಿತರಣೆಗೆ ಕೇಂದ್ರೀಕೃತ ವ್ಯವಸ್ಥೆ

ಇಪಿಎಫ್‌ಒ ವ್ಯಾಪ್ತಿಗೆ ಬರುವ 73 ಲಕ್ಷಕ್ಕೂ ಅಧಿಕ ಪಿಂಚಣಿದಾರರಿಗೆ ಏಕಕಾಲಕ್ಕೆ ಪಿಂಚಣಿ ಮೊತ್ತ ವಿತರಣೆ ಮಾಡುವ ಕೇಂದ್ರೀಕೃತ ವ್ಯವಸ್ಥೆಗೆ ಇಪಿಎಫ್‌ಒ ಧರ್ಮದರ್ಶಿಗಳ ಮಂಡಳಿ ಒಪ್ಪಿಗೆ ನೀಡಿದೆ. ವ್ಯವಸ್ಥೆಯನ್ನು ಜಾರಿಗೊಳಿಸುವ ಕುರಿತು ಶೀಘ್ರದಲ್ಲೇ ಮಾಹಿತಿ ನೀಡಲಾಗುವುದು ಎಂದು ಕೇಂದ್ರ ಕಾರ್ಮಿಕ ಸಚಿವಾಲಯದ ಪ್ರಕಟಣೆಯು ಶನಿವಾರ ತಿಳಿಸಿದೆ.

ಪಿಂಚಣಿದಾರರಿಗೆ ಮುಖ ಚಹರೆ ಗುರುತಿಸುವ ತಂತ್ರಜ್ಞಾನದ (ಫೇಸ್ ರೆಕಗ್ನಿಷನ್) ಮೂಲಕ ಡಿಜಿಟಲ್ ಪ್ರಮಾಣಪತ್ರಕ್ಕೆ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ. ಬಯೊಮೆಟ್ರಿಕ್ (ಬೆರಳಚ್ಚು ಮತ್ತು ಐರಿಸ್) ವ್ಯವಸ್ಥೆಯಿಂದ ಆಗುತ್ತಿರುವ ಸಮಸ್ಯೆ ತಪ್ಪಿಸಲು ಈ ನಿರ್ಧಾರಕ್ಕೆ ಬರಲಾಗಿದೆ

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹425
12 ಮೊಟ್ಟೆಗೆ	₹60
ಮೈಸೂರು	
100 ಮೊಟ್ಟೆಗೆ	₹425

ಮುಂಬೈ ಧಾರಣೆ

ಶೇಂಗಾ
30-7-2022

ಜಾವಾ 70/80(ಹೊಸ)	11250-11300
ಜಾವಾ 80/90(ಹೊಸ)	10650-10700
ದಪ್ಪ ಮಧ್ಯಪ್ರದೇಶ(ಹೊಸ)	9950-10000
ದಪ್ಪ ಗುಜರಾತ್(ಹೊಸ)	10650-10700

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1635 (1630)
ಒಂದು ವಾರದ ಡೆಲಿವರಿ	1630 (1625)
ಸೋಯಾ ಕಚ್ಚಾ	1250 (1230)
ಪಾಮ್ ವಾರದ ಡೆಲಿವರಿ	1273 (1245)
ಸೂರ್ಯಕಾಂತಿ ಎಣ್ಣೆ ಕಚ್ಚಾ	1500 (1480)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
51,390 (51,225)
ಬೆಳ್ಳಿ ಕೆ.ಜಿ 58,050 (57,550)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಐ.ಟಿ. ರಿಟರ್ನ್ಸ್ ಸಲ್ಲಿಸಲು ಇಂದು ಕಡೆಯ ದಿನ

ನವದೆಹಲಿ (ಪಿಟಿಐ): 2021–22ನೇ ಹಣಕಾಸು ವರ್ಷದ ಆದಾಯ ತೆರಿಗೆ ಲೆಕ್ಕಪತ್ರ (ಐಟಿಆರ್) ಸಲ್ಲಿಸಲು ಭಾನುವಾರ (ಜುಲೈ 31) ಅಂತಿಮ ದಿನವಾಗಿದೆ.

ಗಡುವು ಮುಗಿಯುವುದಕ್ಕೂ ಮೊದಲೇ ಐಟಿಆರ್ ಸಲ್ಲಿಸುವಂತೆ ಆದಾಯ ತೆರಿಗೆ ಇಲಾಖೆಯು ಟ್ವಿಟರ್ ಮೂಲಕ ಸಾರ್ವಜನಿಕರಿಗೆ ಸೂಚನೆ ನೀಡಿದೆ. ಶನಿವಾರ ರಾತ್ರಿ 8.36ರ ವರೆಗಿನ ಮಾಹಿತಿಯ ಪ್ರಕಾರ, 5 ಕೋಟಿಗೂ ಅಧಿಕ ಐಟಿಆರ್ ಸಲ್ಲಿಕೆ ಆಗಿದೆ ಎಂದು ಮಾಹಿತಿ ನೀಡಿದೆ.

ಗಡುವು ವಿಸ್ತರಿಸುವಂತೆ ಸಾಮಾಜಿಕ ಜಾಲತಾಣಗಳ ಮೂಲಕ ಬೇಡಿಕೆ ಇಡಲಾಗುತ್ತಿದೆ. ಸಿಬಿಡಿಟಿಗೂ ಮನವಿ ಪತ್ರಗಳು ಬಂದಿವೆ. ಈ ಕುರಿತು ಪ್ರತಿಕ್ರಿಯೆ ನೀಡಿದ ಅಧಿಕಾರಿಗಳು, 'ರಿಟರ್ನ್ಸ್ ಸಲ್ಲಿಕೆಯು ಈವರೆಗೂ ಸುಗಮವಾಗಿ ನಡೆಯುತ್ತಿದೆ. ಬೇರೆ ಯಾವುದೇ ಆಲೋಚನೆಯೂ ಸದ್ಯಕ್ಕೆ ಇಲ್ಲ' ಎಂದು ಹೇಳಿದ್ದಾರೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-45000
ಕಾರ್ಕಳ	
ಹೊಸತು	40000-45000
ಹಳತು	46000-56000
ಪುತ್ತೂರು	
ಕೋಕ	11000-26000
ಹೊಸತು	32000-45000
ಸಿದ್ದಾಪುರ	
ಬಿಳಿಗೋಟು	24000-32112
ಚಾಲಿ	36009-40040
ಕೋಕ	27199-33000
ರಾಶಿ	47699-49959
ಶಿರಸಿ	
ಬೆಟ್ಟೆ	38223-44500
ಬಿಳಿಗೋಟು	25699-33599
ಚಾಲಿ	37199-40499
ರಾಶಿ	47101-49799
ಮಂಗಳೂರು	
ಹಳತು	52500-5500
ಹೊಸತು	37500-45000
ಕೋಕ	20000-26000
ಬೆಂಗಳೂರು ಈರುಳ್ಳಿ	
ದೊಡ್ಡ	1500-1800
ಮಧ್ಯಮ	1000-1500
ಸಣ್ಣ	500-1000
ತಿಪಟೂರು ಕೊಬ್ಬರಿ	
ಕನಿಷ್ಠ	13000
ಗರಿಷ್ಠ	14875
ಮಾದರಿ	14500
ಒಟ್ಟು ಆವಕ (ಚೀಲ)	4,489

ಮೂಡಿಗೆರೆ ಕಾಫಿ (50ಕೆ.ಜಿಗೆ)

	ಮುದ್ರೆಮನೆ
ಎಪಿ	16100
ಎಸಿ	8820
ಆರ್‌ಪಿ	9500
ಆರ್‌ಸಿ	4700

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Cook

"ಇಂದಿರಾನಗರದಲ್ಲಿರುವ ಮನೆಗೆ ಮಹಿಳಾ ಅಡಿಗೆಕೆಲಸದವರು ಮತ್ತು ಮಹಿಳಾ ಮನೆಕೆಲಸದವರು ಬೇಕಾಗಿದ್ದಾರೆ. ಉತ್ತಮ ಸಂಬಳ ಹಾಗೂ ಇಬ್ಬರಿಗೂ ಪ್ರತ್ಯೇಕ ವಸತಿಸೌಲಭ್ಯ ನೀಡಲಾಗುತ್ತದೆ. ಸಂಪರ್ಕಿಸಿ: 9845058243"

Drivers

ಪ್ರಮುಖ ಟ್ಯಾಕ್ಸಿ ಕಂಪನಿಗೆ ಡ್ರೈವರ್ ಬೇಕಾಗಿದ್ದಾರೆ (ತಕ್ಷಣವೇ ಸೇರುವಿಕೆ) ಬೆಂಗಳೂರಿನಾದ್ಯಂತ ಮುಕ್ತ ಸ್ಥಾನ ಆಟೋಮ್ಯಾಟಿಕ್ ಕಾರ್: ಒತ್ತಡ ಮುಕ್ತ ಚಾಲನೆ ಸಂಬಳ: 18000- 20000 ಪ್ರತಿ ತಿಂಗಳು + ಕುಟುಂಬಕ್ಕೆ ಖಾಸಗಿ ವಿಮೆ + ಮಕ್ಕಳ ಶೈಕ್ಷಣಿಕ ಬೆಂಬಲ ನೀಡಲಾಗುವುದು ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ : 08047106868

Part-Time Jobs

ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ, ಮನೆಯಲ್ಲೆ ಕುಳಿತು,ಬುಕ್ ಬರೆಯುವ ಮೂಲಕ ತಿಂಗಳಿಗೆ 14,000-16,000/-ರ ವರೆಗೆ ಸಂಪಾದಿಸಿ.(ಕೊರಿಯರ್ ಇದೆ).8884686861, 8884686860.

Wanted

ಬೇಕಾಗಿದ್ದಾರೆ: ವೃದ್ಧರನ್ನು, ರೋಗಿಗಳನ್ನು ಮತ್ತು ಮಗುವನ್ನು ನೋಡಿಕೊಳ್ಳಲು ಬೇಕಾಗಿದ್ದಾರೆ. ಉಚಿತ ಊಟ, ವಸತಿ ಮತ್ತು ತರಬೇತಿ ನೀಡಲಾಗುವುದು. ಸಂಬಳ: 15,000/- ರಿಂದ 20,000/-. ಆಸಕ್ತರು ಸಂಪರ್ಕಿಸಿ: 9620557000, 9620985000, 080-41115200. ಮೆರಿಟ್ಟಾ ಕೇರ್, ದೊಡ್ಡ ಬಾಣಸವಾಡಿ, ಬೆಂಗಳೂರು-43.

ರಿಯಲ್ ಎಸ್ಟೇಟ್ ಸೆಲ್ಲಿಂಗ್

Sites

Bannerghatta Road

BANNERGHATTA ROAD GOTTIGERE Sites Sale 'A' khatha. W/F 1) 38'x38' 2) 37'x38' 3) 33x130. 9341890909.

Nelamangala

NELAMANGALA TALUK, Thyamagondlu Hobli, Jakkasandra Village Sy.No. 8/2, measuring 04. 14½ acre and 5½ km from Thyamagondlu to Nelamangala border. Suitable for Commercial Purpose. Brokers Excuse. Genuine Buyers only. Contact: N.Srinivas-9844046475

House

Banashankari

BANASHANKARI 2ND STAGE, Building (GF, FF) for Sale 30'x45' S/F opposite to Umamaheshwara Park 9341890909.

ವ್ಯಾಪಾರ

Business to Business

Business

ಜಿರ್ಕಾನ್ ರಸೋಯಿ ಸಹಭಾಗಿತ್ವದ ಮೂಲಕಕೇವಲ ರೂ1500/-ರಿಂದ 5000/- ಬಂಡವಾಳ ಹೂಡಿಕೆಯೊಂದಿಗೆ ನಿಮ್ಮಸ್ವಂತದಕೇಟರಿಂಗ್ ಬಿಜಿನೆಸ್ ಆರಂಭಿಸಿರಿ! ಸಂಪರ್ಕಿಸಿ: ZIRCON RASOI+91 9148087831/ +91 8660074756.

ವೈವಾಹಿಕ

Brides Wanted

Kannada

WELL ESTABLISHED bangalore based Lingayath family is looking for an alliance for their Govt. Employee 29 years son, father and mother retired Govt. Employee, interested families may contact (080-69074916)

Second Marriage

ಎರಡನೇ ವಿವಾಹದ ವರನಿಗೆ ವಧು ಬೇಕಾಗಿದೆ. ಸಂಪರ್ಕಿಸಿ: 9019976891

Matrimonial Bureaus

Gathbandhan Matrimony (A Personalized Matrimonial Service)
71 – 72, 1st Floor, Koramangala Industrial layout, Jyoti Nivas College Road, Bangalore 560095
FIX YOUR APPOINTMENT (We will keep Ourselves free exclusively for you)
90380-00029

Grooms Wanted

Kannada

WELL ESTABLISHED Bangalore based family is looking an alliance for their 37 years daughter Father-Retired central govt employee(080-69075223)

LINGAYATH FAMILY is looking for an alliance for their only 1995 born daughter looking for a well established bangalore based family,caste no bar (080-69075223)

ಸಮಾಜಸೇವೆ

Old Age Home

ಸೇವಾ ಮನೋಭಾವವುಳ್ಳ ಯುವಕ, ಯುವತಿಯರು ಹಾಗೂ ದಂಪತಿಗಳು ಬೆಂಗಳೂರಿನಲ್ಲಿ ಕೆಲಸಕ್ಕೆ ಬೇಕಾಗಿದ್ದಾರೆ, ಉಚಿತ ಊಟ ವಸತಿಯೊಂದಿಗೆ ಉತ್ತಮ ಸಂಬಳ, ತರಬೇತಿ ನೀಡಲಾಗುವುದು ಸಂಪರ್ಕಿಸಿ: 9900371597, 9739320897, 9916551457, 9916544057, 9620761222

ಪ್ರವಾಸ

Travel

14.11.2022 13 ದಿನಗಳ ವಿಯಟ್ನಾಂ ಕಾಂಬೋಡಿಯಾ. 20.09.2022 6 ದಿನಗಳ ಬಾಲಿ ದ್ವೀಪ ಪ್ರವಾಸ. 10.09.2022 5 ದಿನಗಳ ಥೈಲ್ಯಾಂಡ್ ಪ್ರವಾಸ. 05.09.2022 14 ದಿನಗಳ ದೆಹಲಿ,ಆಗ್ರಾ,ಬರ್ಸಾನ ನೈಮಿಶರಣ್ಯ ಚಿತ್ರಕೂಟ, ವಿಂಧ್ಯಚಲ, ಕಾಶಿ,ಬೈದ್ಯನಾಥ್ ಜ್ಯೋತಿರ್ಲಿಂಗ ರಾಜಗಿರ್,ನಳಂದ. 14.9.2022 12.10.2022, 09.11.2022 9 ದಿನಗಳ ಅಖಂಡ ಗುಜರಾತ್. 21.9.2022 19.10.2022, 12 ದಿನಗಳ ಅಖಂಡ ರಾಜಸ್ಥಾನ್. 14.10.2022 11.11.2022 12 ದಿನಗಳ ಅಖಂಡ ಮಧ್ಯಪ್ರದೇಶ. 29.09.2022 20.10.2022 11ದಿನಗಳ ಕೊಲ್ಕತಾ ಡಾರ್ಜಲಿಂಗ್ 04.11.2022 12 ದಿನಗಳ ಅಸ್ಸಾಂ,ಗೌಹತಿ. 12.8.2022, 4 ದಿನಗಳ ಮದುರೈ, ರಾಮೇಶ್ವರ 09.08.2022 6 ದಿನಗಳ ಶ್ರೀಶೈಲಂ,ಅಹೋಬಿಲಂ 12.8.2022 6 ದಿನಗಳ ದಕ್ಷಿಣಕನ್ನಡ ಪ್ರವಾಸ. ಸಂಪರ್ಕಿಸಿ; ಶ್ರೀಮಲ್ಲಿಕಾರ್ಜುನ ಟ್ರಾವೆಲ್ಸ್ 9342848791 9880847001

ಶ್ರೇಯಸ್ ಟೂರ್ಸ್: 13.08.2022 5ದಿನಗಳು ಸಂಪೂರ್ಣಅಹೋಬಲಂ ನವನಾರಸಿಂಹ ಯಾಗಂಟಿ ಬೇಲಂಗುಹೆ ಮಹಾನಂದಿ ಶ್ರೀಶೈಲಂ ಮಂತ್ರಾಲಯ 18.8.22 6ದಿನಗಳು ಕೇರಳದ ಕೊಚ್ಚಿನ್ ಗುರುವಾಯೂರು ಅಲೆಪ್ಪಿ ಮುನ್ನಾರ್ ತೇಕಡಿ ತಿರುವನಂತಪುರಂ ಅತ್ರಪಳ್ಳಿ ಪಾಲ್ಸ್.14.09.2022 6ದಿನಗಳು ಕಾಶಿ ಗಯಾ ಪ್ರಯಾಗ್‌ರಾಜ್ ನೈಮಿಷ್ಯಾರಣ್ಯ ಅಯೋಧ್ಯೆ ವಿಂಧ್ಯಾವಾಸಿನಿ ಸೀತಾಮಡು.06.08.2022 13.08.2022 6ದಿನಗಳು ನವಗ್ರಹರಾಮೇಶ್ವರಂ ಚಿದಂಬರಂ ಮದುರೈ ಕನ್ಯಾಕುಮಾರಿ ಇತರೆ.14.09.22 10ದಿನಗಳು ಅಖಂಡ ನೇಪಾಳ ರಾಷ್ಟ್ರ(ಮುಕ್ತಿನಾಥಸಹಿತ) 6ವಿಮಾನಗಳಲ್ಲಿ.02.09.2022 12ದಿನಗಳು ಚಾರ್‌ದಾಮ್ ಯಾತ್ರೆ ಗಂಗೋತ್ರಿಯಮುನೋತ್ರಿ ಕೇದಾರ್‌ನಾಥ ಬದರಿನಾಥ. 8073824856/ 9206979202/ 6366322639

ನೇಪಾಳ-ಕಠ್ಮಂಡು 10 ದಿನದ ವಿದೇಶ ಪ್ರವಾಸ. ಕುವೆಂಪು ಕಲಾನಿಕೇತನ ಸಂಸ್ಥೆಯ ವತಿಯಿಂದ ಅಂತರಾಷ್ಟ್ರೀಯ ವಿಶ್ವಮಾನವ ಕುವೆಂಪು ಕಲಾ ಉತ್ಸವ-2022. ದಿನಾಂಕ:12-09-2022 ರಿಂದ ನೇಪಾಳಕಠ್ಮಂಡು ಪೋಕ್ರಾ ಗೋರಕಪುರ ಲುಂಬಿನಿ ಮುಕ್ತಿನಾಥ ಚಿತವಾನ್ ಮನೋಕಾಮನ ಜನಕಪುರಿ. ಸಂಪರ್ಕಿಸಿ: 09880988298/ 09448025130.

05.10.2022, 14 ದಿನಗಳ. ಚಾರ್‌ಧಾಮ್. 02.11.2022 8 ದಿನಗಳ ಕಾಶಿ,ಗಯಾ ಕೋಲ್ಕತ,ಭುವನೇಶ್ವರ್ ಪೂರಿಜಗನ್ನಾಥ್ ಯಾತ್ರೆ ಸಂಪರ್ಕಿಸಿ: ವಿಜಯ ಟ್ರಾವೆಲ್ಸ್ ಮಲ್ಲೇಶ್ವರಂ ಬೆಂಗಳೂರು 9448294477

8/10 ದಿನಗಳ ಕಾಶಿ,ಗಯಾ,ಅಯೋಧ್ಯ, ನೈಮಿಶಾರಣ್ಯ ಗೋರಕ್‌ಪುರ್. 13/23 ದಿನಗಳ ಬದರಿನಾಥ್, ಕೇದಾರನಾಥ್ ಗಂಗೋತ್ರಿ ಯುಮುನೋತ್ರಿ ವೈಷ್ಣೋದೇವಿ ಅಮೃತ್‌ಸರ್ ದೆಹಲಿ ಹಾಗು 14 ದಿನಗಳ ಪಂಚದಾರಕಾ ಮಾತ್ರುಗಯಾ,ಉಜ್ಜಯಿನಿ ಅಗಸ್ಟ್ ಸೆಪ್ಟಂಬರ್ ಅಕ್ಟೋಬರ್ ತಿಂಗಳಲ್ಲಿ ಶ್ರೀಸುಧಾ ಟ್ರಾವೆಲ್ಸ್ 080-22429289 9019301300 9448119290

ವಿಮಾನದಲ್ಲಿ 04.09.2022 13 ದಿನಗಳು ಕಾಶಿ, ನೇಪಾಳ, ಮುಕ್ತಿನಾಥ, ಗಜೇಂದ್ರಮೋಕ್ಷ, ಕಠ್ಮಂಡು ಪ್ರವಾಸ. ಆರ್. ಗಾಂಧಿ ಟೂರ್ಸ್: 9945445809, 9902433500

09.09.2022 ರಿಂದ 12 ದಿನಗಳು ದೆಹಲಿ, ಹರಿದ್ವಾರ್, ಗಂಗೋತ್ರಿ ಯಮುನೋತ್ರಿ, ಕೇದಾರನಾಥ್, ಬದ್ರಿನಾಥ್. ಸಂಪರ್ಕಿಸಿ: ಶ್ರೀಗಂಗಾ ಟೂರಿಸ್ಟ್, 9480253807

Travel Accessories

3-9-2022 ಗುಜರಾತ್ ವಿಮಾನಪ್ರವಾಸ: 11-10-2022 ಕಾಶಿ, ದೆಹಲಿ ರೈಲು ಪ್ರವಾಸ. 15-9-22ಶ್ರೀಶೈಲ,ಹೈದರಾಬಾದ್, ಮಂತ್ರಾಲಯ. 28-9-22 ಗೋವಾ,ದೂದ್ ಸಾಗರ್ ಫಾಲ್ಸ್,ದಾಂಡೇಲಿ.PH: 8496044942.ಮಲ್ಲಿಕಾರ್ಜುನ ಟೂರ್ಸ್, ತುಮಕೂರು

ಭವಿಷ್ಯ

Astrology

★॥ಶ್ರೀಕೇದಾರನಾಥ॥★ ಆರಾಧನೆಯಿಂದ ಪ್ರೀತಿಪ್ರೇಮ, ಸ್ತ್ರೀಪುರುಷ ವಶೀಕರಣ, ದಾಂಪತ್ಯ, ಜನವಶೀಕರಣ, ಧನವಶೀಕರಣ, ಕೋರ್ಟ್‌ಕಛೇರಿ ಸಾಲಬಾಧೆ ಯಾವುದೇ ಸಮಸ್ಯೆಯಿದ್ದರೂ. 100% ಶಾಶ್ವತ ಪರಿಹಾರ. 9148773459

ಜನ್ಮಾಂತರ ಸಮ್ಮೋಹಿನಿ ಚಿಕಿತ್ಸೆ. ಎಲ್ಲಾ ರೀತಿಯ ದೈಹಿಕ, ಮಾನಸಿಕ ಕಾಯಿಲೆಗಳು, ನಿಮ್ಮೆಲ್ಲಾ ರೀತಿಯ ಪರಹಾರವಾಗದ ಸಮಸ್ಯೆಗಳು, ಜನ್ಮಜನ್ಮಾಂತರಗಳ ದೋಷಗಳ ನಿವಾರಣೆಗಾಗಿ ಕೂಡಲೇ ಸಂಪರ್ಕಿಸಿ. 7676750280

ಒಂದೇ ಕರೆಯಲ್ಲಿ100% ಗ್ಯಾರಂಟಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್ ಪಂಡಿತ್. ಕೃಷ್ಣಪ್ರಸಾದ್:ಉಚಿತಭವಿಷ್ಯ ಖಚಿತಪರಿಹಾರ, ದಕ್ಷಿಣಕನ್ನಡ ಮಾಂತ್ರಿಕರು, ಶ್ರೀಕ್ಷೇತ್ರಹೊರನಾಡು: 7022443071

EDUCATION SUCCESS

CHRIST ACADEMY JUNIOR COLLEGE
ACHIEVERS OF CHAVARA ACADEMY 2021
2022-23 ADMISSIONS OPEN
INTENSIVE NEET RESIDENTIAL PROGRAMME–Long Term / Repeaters

SAHANA HR – Adichunchanagiri Institute of Medical Sciences Bangalore-MBBS
MEGHANA A NAIK – Subbaiah Medical College Shimoga- MBBS
KUSUMANJALI – Subbaiah Medical College Shimoga- MBBS
RUCHITHA – Sapthagiri Institute of Medical Sciences Bangalore-MBBS
VARSHINI N – Rajarajeshwari Medical College Bangalore- MBBS
95% Success rate

OFFICE +91 8035215080 +91 88844 44461 www.cajc.in
Christ Nagar, Hullahalli, Begur-Koppa Road, Sakalawara Post, Bengaluru - 560 083
9440676358 CONTACT

IAS/KAS 2023 & PSI/PC
FREE Coaching batch Starts On August 16
Dr Kalam IAS Academy Bangalore
9535215127 / 28
Dr Kalam is a Private Institute

DH ಪ್ರಜಾವಾಣಿ
Classifieds EDUCATION SPECIAL
SPECIAL RATES FOR • Admission Notice, Education Success • Congratulation Ads
For More Details Contact:
Jerry Louis : 9731810277 | Ravichandra : 9901641752
Vishal GM : 9845114560 | Tanveer : 9886213331
Email : dhclassifieds@deccanherald.co.in

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಚಿನ್ನದ ಪದಕದೊಂದಿಗೆ ಮೀರಾಬಾಯಿ ಚಾನು (ಎಡಚಿತ್ರ) ಗುರುರಾಜ್ ಪೂಜಾರಿ ಸಂಭ್ರಮ —ಪಿಟಿಐ ಚಿತ್ರ

ವೇಟ್‌ಲಿಫ್ಟಿಂಗ್‌ನಲ್ಲಿ ಭಾರತಕ್ಕೆ ಮೂರು ಪದಕ; ಸಂಕೇತ್ ಸರ್ಗರ್‌ಗೆ ಬೆಳ್ಳಿ

ಮೀರಾ ಕೊರಳಿಗೆ ಚಿನ್ನದ ಪದಕ

ಬರ್ಮಿಂಗ್‌ಹ್ಯಾಮ್ (ಪಿಟಿಐ): ಮೀರಾಬಾಯಿ ಚಾನು ಅವರು ಈ ಬಾರಿಯ ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ ಭಾರತಕ್ಕೆ ಮೊದಲ ಚಿನ್ನದ ಪದಕ ತಂದಿತ್ತರು.

ಶನಿವಾರ ನಡೆದ ಮಹಿಳೆಯರ ವೇಟ್‌ಲಿಫ್ಟಿಂಗ್‌ನಲ್ಲಿ 49 ಕೆ.ಜಿ. ವಿಭಾಗದಲ್ಲಿ ಅವರು ಒಟ್ಟು 201 ಕೆ.ಜಿ (88 ಕೆ.ಜಿ + 113 ಕೆ.ಜಿ) ಭಾರ ಎತ್ತುವ ಮೂಲಕ ಅಗ್ರಸ್ಥಾನ ಪಡೆದರು. 49 ಕೆ.ಜಿ ವಿಭಾಗದಲ್ಲಿ ತನಗೆ ಯಾರೂ ಸರಿಸಾಟಿಯಲ್ಲ ಎಂಬುದನ್ನು ಸಾಬೀತುಪಡಿಸಿದ ಅವರು ಕೂಟ ದಾಖಲೆಯನ್ನೂ ತಮ್ಮದಾಗಿಸಿಕೊಂಡರು.

ಒಲಿಂಪಿಕ್ಸ್‌ನಲ್ಲಿ ಬೆಳ್ಳಿ ಗೆದ್ದಿದ್ದ ಅವರು ಇಲ್ಲಿ ಚಿನ್ನ ಗೆಲ್ಲುವರು ಎಂದು ನಿರೀಕ್ಷಿಸಲಾಗಿತ್ತು. ಮಾರಿಷಸ್‌ನ ಮೇರಿ ಹನಿತ್ರ (172 ಕೆ.ಜಿ) ಬೆಳ್ಳಿ ಹಾಗೂ ಕೆನಡಾದ ಹನ್ನಾ ಕಮಿನ್‌ಸ್ಕಿ (171 ಕೆ.ಜಿ.) ಕಂಚು ಜಯಿಸಿದರು. ವೇಟ್‌ಲಿಫ್ಟಿಂಗ್‌ನಲ್ಲಿ ಶನಿವಾರ ಭಾರತ ಒಟ್ಟು ಮೂರು ಪದಕ ಜಯಿಸಿತು.

ಸಂಕೇತ್‌ಗೆ ಬೆಳ್ಳಿ: ಮೀರಾ ಅವರ ಸಾಧನೆಗೂ ಮುನ್ನ ಸಂಕೇತ್ ಮಹಾದೇವ್ ಸರ್ಗರ್ ಈ ಬಾರಿಯ ಕೂಟದಲ್ಲಿ ಭಾರತಕ್ಕೆ ಮೊದಲ ಪದಕದ ಸಿಹಿ ನೀಡಿದ್ದರು. ನೋವಿನ ನಡುವೆಯೂ ಮಿಂಚಿದ ಅವರು ಪುರುಷರ 55 ಕೆ.ಜಿ ವಿಭಾಗದ ವೇಟ್‌ಲಿಫ್ಟಿಂಗ್ ಸ್ಪರ್ಧೆಯಲ್ಲಿ ಬೆಳ್ಳಿ ಪದಕಕ್ಕೆ ಮುತ್ತಿಕ್ಕಿದರು.

ಬೆಳ್ಳಿ ಪದಕದೊಂದಿಗೆ ಸಂಕೇತ್ ಸರ್ಗರ್— —ಪಿಟಿಐ ಚಿತ್ರ

ಒಟ್ಟು 248 ಕೆ.ಜಿ ಭಾರ (113 ಸ್ನ್ಯಾಚ್ + 135 ಕ್ಲೀನ್ ಮತ್ತು ಜರ್ಕ್) ಎತ್ತಿದ ಸಂಕೇತ್, ಚಿನ್ನದ ಪದಕದಿಂದ ಕೂದಲೆಳೆ ಅಂತರದಲ್ಲಿ ವಂಚಿತರಾದರು. 139 ಕೆಜಿ ಕ್ಲೀನ್ ಮತ್ತು ಜರ್ಕ್ ವಿಭಾಗದ ಭಾರ ಎತ್ತುವ ವೇಳೆ ಮೊಣಕೈ ನೋವಿನಿಂದ ಬಳಲಿದರು. ಹೀಗಾಗಿ ಅಗ್ರಸ್ಥಾನ ಕೇವಲ ಒಂದು ಕೆಜಿ ಅಂತರದಿಂದ ಕೈತಪ್ಪಿತು.

ಮಲೇಷ್ಯಾದ ಮೊಹಮ್ಮದ್ ಅನಿಕ್ (ಒಟ್ಟು 249; 107 + 142) ಕ್ಲೀನ್ ಮತ್ತು ಜರ್ಕ್ ವಿಭಾಗದ ಕೂಟ ದಾಖಲೆಯೊಂದಿಗೆ ಚಿನ್ನ ತಮ್ಮದಾಗಿಸಿಕೊಂಡರು. ಶ್ರೀಲಂಕಾದ ದಿಲಂಕಾ ಇಸುರು ಕುಮಾರ (225; 105 ಕೆಜಿ + 120 ಕೆಜಿ) ಕಂಚಿನ ಪದಕ ಜಯಿಸಿದರು.

ಸಂಕೇತ್ ಅವರು ಸ್ನ್ಯಾಚ್ ವಿಭಾಗದಲ್ಲಿ ಎದುರಾಳಿಗಳಿಗಿಂತ ಆರು ಕೆಜಿ ಹೆಚ್ಚಿನ ಸಾಧನೆ ಮಾಡಿದರು.

‘ಭಾರ ಎತ್ತುವ ಪ್ರಯತ್ನದಲ್ಲಿ ನಾನು ಯಾವುದೇ ತಪ್ಪು ಮಾಡಲಿಲ್ಲ. ಬಲ ಮೊಣಕೈ ಮೇಲೆ ಏಕಾಏಕಿ ಹೆಚ್ಚಿನ ಭಾರ ಬಿದ್ದಂತಾಯಿತು. ಹೀಗಾಗಿ ಹತೋಟಿ ತಪ್ಪಿತು‘ ಎಂದು ನೋವು ಮತ್ತು ಖುಷಿ ಎರಡೂ ಭಾವಗಳ ಸಮ್ಮಿಲನದಲ್ಲಿದ್ದ ಸಂಕೇತ್ ನುಡಿದರು.

ಸಂಕೇತ್ ಅವರ ಸಾಧನೆಗೆ ರಾಷ್ಟ್ರಪತಿ ದ್ರೌಪದಿ ಮುರ್ಮು, ಪ್ರಧಾನಿ ನರೇಂದ್ರ ಮೋದಿ ಸೇರಿದಂತೆ ಅಭಿನಂದನೆ ಮಹಾಪೂರ ಹರಿದುಬಂದಿದೆ.

ಆಸ್ಟ್ರೇಲಿಯಾದ ಗೋಲ್ಡ್‌ಕೋಸ್ಟ್‌ನಲ್ಲಿ ನಡೆದಿದ್ದ ಕಳೆದ ಆವೃತ್ತಿಯಲ್ಲಿ ಭಾರತದ ವೇಟ್‌ಲಿಫ್ಟರ್‌ಗಳು ಐದು ಚಿನ್ನ ಸೇರಿ ಒಂಬತ್ತು ಪದಕಗಳನ್ನು ಗೆದ್ದುಕೊಂಡಿದ್ದರು. ಈ ಬಾರಿಯೂ ಪಾರಮ್ಯ ಮೆರೆಯುವ ಉತ್ಸಾಹದಲ್ಲಿದ್ದಾರೆ.

21 ವರ್ಷದ ಸಂಕೇತ್ ಮಹಾರಾಷ್ಟ್ರದ ಸಾಂಗ್ಲಿಯವರಾಗಿದ್ದಾರೆ. ಅವರ ಅಕ್ಕ ಕಾಜೋಲ್ ಕೂಡ ಅಥ್ಲೀಟ್ ಆಗಿದ್ದಾರೆ.

ಪಾನ್‌ಶಾಪ್ ಕೆಲಸ: ಸಂಕೇತ್ ಬಾಲ್ಯದ ದಿನಗಳಲ್ಲಿ ತಮ್ಮ ತಂದೆಯ ಪಾನ್‌ಶಾಪ್‌ನಲ್ಲಿ ಗ್ರಾಹಕರಿಗೆ ಚಹಾ ವಿತರಿಸುತ್ತಿದ್ದರು. ಅದರೊಂದಿಗೇ ವಿದ್ಯಾಭ್ಯಾಸ ಮತ್ತು ತರಬೇತಿಯನ್ನೂ ನಡೆಸುತ್ತಿದ್ದರು.

ಕಂಚು ಗೆದ್ದ ಗುರುರಾಜ್ ಪೂಜಾರಿ

ಪುರುಷರ 61 ಕೆಜಿ ವಿಭಾಗದ ವೇಟ್‌ಲಿಫ್ಟಿಂಗ್‌ನಲ್ಲಿ ಸ್ಪರ್ಧಿಸಿದ್ದ ಕರ್ನಾಟಕದ ಗುರುರಾಜ್ ಪೂಜಾರಿ ಕಂಚಿನ ಪದಕಕ್ಕೆ ಕೊರಳೊಡ್ಡಿದರು. ಇದರೊಂದಿಗೆ ಭಾರತಕ್ಕೆ ಎರಡನೇ ಪದಕ ಗೆದ್ದುಕೊಟ್ಟರು.

2018ರ ಗೋಲ್ಡ್‌ಕೋಸ್ಟ್ ಕೂಟದಲ್ಲಿ ಬೆಳ್ಳಿ ಪದಕ ಜಯಿಸಿದ್ದ, ಕುಂದಾಪುರದ ಗುರುರಾಜ್ ಇಲ್ಲಿ ಒಟ್ಟು 269 ಕೆಜಿ (118 ಸ್ನ್ಯಾಚ್ + 151 ಕ್ಲೀನ್ ಮತ್ತು ಜರ್ಕ್) ಭಾರ ಸಾಧನೆ ಮಾಡುವ ಮೂಲಕ ಮೂರನೇ ಸ್ಥಾನ ಗಳಿಸಿದರು.

ಮಲೇಷ್ಯಾದ ಅಜ್ನಿಲ್ ಬಿನ್ ಬಿದಿನ್ ಮುಹಮ್ಮದ್ 285 ಕೆಜಿ (127 + 158) ಕೂಟ ದಾಖಲೆಯೊಂದಿಗೆ ಚಿನ್ನ ಗೆದ್ದರು. ಪಪುವಾ ನ್ಯೂಗಿನಿಯ ಮೋರಿಯ ಬಾರು (273 ಕೆಜಿ: 121 + 152) ಬೆಳ್ಳಿ ಪದಕ ತಮ್ಮದಾಗಿಸಿಕೊಂಡರು.

ಪ್ರೀ ಕ್ವಾರ್ಟರ್‌ಗೆ ಹುಸಾಮುದ್ದೀನ್

ಬರ್ಮಿಂಗ್‌ಹ್ಯಾಮ್ (ಪಿಟಿಐ): ಭಾರತದ ಬಾಕ್ಸರ್ ಮಹಮ್ಮದ್ ಹುಸಾಮುದ್ದೀನ್ ಅವರು ಪುರುಷರ ಫೆದರ್‌ವೇಟ್ (57 ಕೆ.ಜಿ) ವಿಭಾಗದಲ್ಲಿ ಪ್ರೀ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು.

ಶನಿವಾರ ನಡೆದ ಹಣಾಹಣಿಯಲ್ಲಿ ಅವರು 5–0 ರಲ್ಲಿ ದಕ್ಷಿಣ ಆಫ್ರಿಕಾದ ಅಮ್ಜೊಲೆಲೆ ದಿಯೆಯಿ ಅವರನ್ನು ಮಣಿಸಿದರು.

ಮೂರು ಸುತ್ತುಗಳಲ್ಲೂ ಪ್ರಭುತ್ವ ಪಡೆದ ಹುಸಾಮುದ್ದೀನ್, ಎದುರಾಳಿಗೆ ಮೇಲುಗೈ ಸಾಧಿಸಲು ಅವಕಾಶವನ್ನೇ ನೀಡಲಿಲ್ಲ. ಚುರುಕಿನ ಪಾದಚಲನೆ ಮತ್ತು ಬಲವಾದ ಪಂಚ್‌ಗಳ ಮೂಲಕ ಗೆಲುವು ಸಾಧಿಸಿದರು. ಹುಸಾಮುದ್ದೀನ್ ಅವರು ಪ್ರೀ ಕ್ವಾರ್ಟರ್ ಫೈನಲ್‌ನಲ್ಲಿ ಬಾಂಗ್ಲಾದೇಶದ ಮಹಮ್ಮದ್ ಸಲೀಂ ಹೊಸೇನ್ ಎದುರು ಪೈಪೋಟಿ ನಡೆಸುವರು. ಭಾರತದ ಬಾಕ್ಸರ್, 2018ರ ಕೂಟದಲ್ಲಿ ಕಂಚು ಗೆದ್ದಿದ್ದರು.

ಭಾರತದ ಶಿವ ಥಾಪಾ ಅವರು ಪುರುಷರ 63.5 ಕೆ.ಜಿ. ವಿಭಾಗದಲ್ಲಿ ಈಗಾಗಲೇ ಪ್ರೀ ಕ್ವಾರ್ಟರ್‌ಫೈನಲ್ ಪ್ರವೇಶಿಸಿದ್ದಾರೆ.

ಕೋಚ್ ಒರಟು ವರ್ತನೆ: ಐಒಎ ಎಚ್ಚರಿಕೆ

ಬರ್ಮಿಂಗ್‌ಹ್ಯಾಮ್ (ಪಿಟಿಐ): ಕಾಮನ್‌ವೆಲ್ತ್ ಕೂಟದಲ್ಲಿ ಶನಿವಾರ ಭಾರತಕ್ಕೆ ಎರಡು ಪದಕಗಳು ಲಭಿಸಿದ ಸಂತಸದ ನಡುವೆಯೇ ಮುಜುಗರದ ಪ್ರಸಂಗವೂ ನಡೆಯಿತು.

ವೇಟ್‌ಲಿಫ್ಟಿಂಗ್ ತಂಡದ ಮ್ಯಾನೇಜರ್ ಪ್ರದೀಪ್ ಶರ್ಮಾ ಅವರು ಒರಟಾಗಿ ನಡೆದುಕೊಂಡಿದ್ದಾರೆಂದು ಆಯೋಜಕರ ಪರ ಸಿಜಿಎ ಸಂಪರ್ಕ ವ್ಯವಸ್ಥಾಪಕ ಗಿನಾ ಡಾಸನ್ ಅವರು ಭಾರತ ಒಲಿಂಪಿಕ್ ಸಂಸ್ಥೆ (ಐಒಎ)ಗೆ ಲಿಖಿತ ದೂರು ನೀಡಿದ್ದಾರೆ.

‘ಭಾರತ ತಂಡದ ಅಧಿಕಾರಿ ಪ್ರದೀಪ್ ಶರ್ಮಾ ಅವರು ಟಿ2 ಡ್ರೈವರ್‌ಗಳೊಂದಿಗೆ ಒರಟಾಗಿ ನಡೆದುಕೊಂಡಿದ್ದಾರೆ. ತಂಡದ ಯಾವುದೇ ಅಧಿಕಾರಿಗಳಿಗೂ ಟಿ2 ವಾಹನ ಸೌಲಭ್ಯ ನೀಡಲಾಗಿಲ್ಲ. ಅವರು ಪ್ರಯಾಣಕ್ಕಾಗಿ ಕಾಮನ್‌ವೆಲ್ತ್ ಗೇಮ್ಸ್ ಅರೆನಾದ ವಾಹನಗಳನ್ನು ಬಳಸಬೇಕು. ಕ್ರೀಡಾಗ್ರಾಮದಲ್ಲಿರುವ ಬಸ್‌ಗಳಲ್ಲಿ ತಮ್ಮ ಮಾನ್ಯತೆಪತ್ರ ತೋರಿಸಿ ಪ್ರಯಾಣಿಸಬಹುದು’ ಎಂದು ಗಿನಾ ಡಾಸನ್ ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

ಈ ಕುರಿತು ಪ್ರದೀಪ್ ಶರ್ಮಾಗೆ ಇ ಮೇಲ್ ರವಾನಿಸಿರುವ ಐಒಎ ಅಧ್ಯಕ್ಷ ಅನಿಲ್ ಖನ್ನಾ, ‘ಕ್ರೀಡಾಗ್ರಾಮದಲ್ಲಿ ನಾವೆಲ್ಲರೂ ಭಾರತದ ರಾಯಭಾರಿಗಳು. ದೇಶದ ಗೌರವಕ್ಕೆ ಧಕ್ಕೆಯಾಗದಿರಲಿ. ಇನ್ನು ಮುಂದೆ ನಿಯಮಗಳಿಗೆ ಬದ್ಧವಾಗಿರಿ' ಎಂದಿದ್ದಾರೆ.

ಈಜು: ಫೈನಲ್‌ಗೆ ಶ್ರೀಹರಿ

ಬರ್ಮಿಂಗ್‌ಹ್ಯಾಮ್ (ಪಿಟಿಐ): ಭಾರತದ ಶ್ರೀಹರಿ ನಟರಾಜನ್ ಅವರು ಪುರುಷರ ವಿಭಾಗದ 100 ಮೀ. ಬ್ಯಾಕ್‌ಸ್ಟ್ರೋಕ್ ಈಜು ಸ್ಪರ್ಧೆಯಲ್ಲಿ ಫೈನಲ್ ಪ್ರವೇಶಿಸಿದ್ದಾರೆ.

ಶುಕ್ರವಾರ ನಡೆದ ಸೆಮಿಫೈನಲ್‌ನಲ್ಲಿ 54.55 ಸೆ. ಗಳೊಂದಿಗೆ ಗುರಿ ತಲುಪಿದರು. ಎರಡನೇ ಗುಂಪಿನಲ್ಲಿದ್ದ ಅವರು ಎಂಟು ಸ್ಪರ್ಧಿಗಳಲ್ಲಿ ನಾಲ್ಕನೇ ಸ್ಥಾನ ಹಾಗೂ ಒಟ್ಟಾರೆಯಾಗಿ ಏಳನೇ ಸ್ಥಾನ ಪಡೆದರು. ಫೈನಲ್‌ನಲ್ಲಿ ಎಂಟು ಸ್ಪರ್ಧಿಗಳು ಪೈಪೋಟಿ ನಡೆಸುವರು.

ದಕ್ಷಿಣ ಆಫ್ರಿಕಾದ ಪೀಟರ್ ಕೊಯೆಟ್ಜ್ 53.67 ಸೆ.ಗಳೊಂದಿಗೆ ಸೆಮಿಫೈನಲ್‌ನಲ್ಲಿ ಅತಿವೇಗದ ಸಮಯ ದಾಖಲಿಸಿದರು. ಹೀಟ್ಸ್‌ನಲ್ಲೂ ಅವರು ಅಗ್ರಸ್ಥಾನದಲ್ಲಿದ್ದರು.

ಬೆಂಗಳೂರಿನ 21 ವರ್ಷದ ಶ್ರೀಹರಿ ಇಲ್ಲಿ ಪದಕ ಜಯಿಸಿದರೆ, ಈಜು ಸ್ಪರ್ಧೆಯಲ್ಲಿ ಪದಕ ಗೆದ್ದ ಭಾರತದ ಮೊದಲ ಕ್ರೀಡಾಪಟು ಎನಿಸಿಕೊಳ್ಳಲಿದ್ದಾರೆ.

ಪ್ರಶಾಂತ್ ಕರ್ಮಾಕರ್ ಅವರು 2010ರ ದೆಹಲಿ ಕಾಮನ್‌ವೆಲ್ತ್ ಕ್ರೀಡಾಕೂಟದ ಪ್ಯಾರಾ ಈಜು ವಿಭಾಗದಲ್ಲಿ ಕಂಚು ಗೆದ್ದು ಐತಿಹಾಸಿಕ ಸಾಧನೆ ಮಾಡಿದ್ದರು.

ಶ್ರೀಹರಿ ಅವರು ಕಳೆದ ವರ್ಷ ಟೋಕಿಯೊ ಒಲಿಂಪಿಕ್ ಕೂಟದ ಹೀಟ್ಸ್‌ನಲ್ಲಿ ಸ್ಪರ್ಧಿಸಿದ್ದರಲ್ಲದೆ, ಒಲಿಂಪಿಕ್‌ನಲ್ಲಿ ಪಾಲ್ಗೊಂಡ ಭಾರತದ ಮೊದಲ ಸ್ಪರ್ಧಿ ಎಂಬ ಗೌರವಕ್ಕೆ ಪಾತ್ರರಾಗಿದ್ದರು. 100 ಮೀ. ಬ್ಯಾಕ್ ಸ್ಟ್ರೋಕ್‌ನಲ್ಲಿ ಅವರು 27ನೇ ಸ್ಥಾನ ಪಡೆದಿದ್ದರು.

ಭಾರತದ ಸಜನ್ ಪ್ರಕಾಶ್ ಮತ್ತು ಕುಶಾಗ್ರ ರಾವತ್ ಅವರು ತಮ್ಮ ಸ್ಪರ್ಧೆಗಳಲ್ಲಿ ಸೆಮಿಫೈನಲ್ ಪ್ರವೇಶಿಸಲು ವಿಫಲರಾಗಿದ್ದರು.

ಶ್ರೀಹರಿ ನಟರಾಜ್

ಗೊಂದಲ ಮೂಡಿಸಿದ ಹಿಮಾದಾಸ್ ವಿಡಿಯೊ

ನವದೆಹಲಿ (ಪಿಟಿಐ): ಬರ್ಮಿಂಗ್‌ಹ್ಯಾಮ್‌ನಲ್ಲಿ ನಡೆಯುತ್ತಿರುವ ಕಾಮನ್‌ವೆಲ್ತ್ ಕ್ರೀಡಾಕೂಟದ ಅಥ್ಲೆಟಿಕ್ಸ್‌ನಲ್ಲಿ ಭಾರತದ ಹಿಮಾ ದಾಸ್ ಚಿನ್ನದ ಪದಕ ಜಯಿಸಿದ್ದಾರೆಂಬ ವಿಡಿಯೊ ಶನಿವಾರ ಸಾಮಾಜಿಕ ಜಾಲತಾಣಗಳಲ್ಲಿ ಬಹಳಷ್ಟು ಗೊಂದಲ ಮೂಡಿಸಿತು.

2018ರಲ್ಲಿ ಹಿಮಾದಾಸ್ ಅವರು 20 ವರ್ಷದೊಳಗಿನವರ ವಿಶ್ವ ಅಥ್ಲೆಟಿಕ್ಸ್‌ನ ಚಿನ್ನ ಗೆದ್ದ ಸಂದರ್ಭದ ವಿಡಿಯೊ ಇದಾಗಿದೆ. ಟ್ವಿಟರ್‌ನಲ್ಲಿ ಈ ವಿಡಿಯೊಗೆ ಮೂರು ಸಾವಿರ ಮೆಚ್ಚುಗೆ ಲಭಿಸಿವೆ. ಅಲ್ಲದೇ ಆರು ಸಾವಿರ ರಿಟ್ವೀಟ್ ಆಗಿದೆ. ಪೆಗಾಸಸ ಎಂಬ ಟ್ವಿಟರ್ ಹ್ಯಾಂಡಲ್‌ನಿಂದ ಇದು ಪೋಸ್ಟ್ ಆಗಿದೆ. ‘ಹಿಮಾ ದಾಸ್ ಬರ್ಮಿಂಗ್‌ಹ್ಯಾಮ್ ಕಾಮನ್‌ವೆಲ್ತ್ ಗೇಮ್ಸ್‌ನ 400 ಮೀ ಓಟದಲ್ಲಿ ಚಿನ್ನ ಗೆದ್ದಿದ್ದಾರೆ’ ಎಂದು ಶೀರ್ಷಿಕೆಯನ್ನೂ ನೀಡಲಾಗಿದೆ.

ನವಜ್ಯೋತ್ ಕೌರ್‌ಗೆ ಕೋವಿಡ್

ಬರ್ಮಿಂಗ್‌ಹ್ಯಾಮ್ (ಪಿಟಿಐ): ಭಾರತ ಮಹಿಳಾ ಹಾಕಿ ತಂಡದ ಮಿಡ್‌ಫೀಲ್ಡರ್ ನವಜ್ಯೋತ್ ಕೌರ್ ಅವರಿಗೆ ಕೋವಿಡ್ ಇರುವುದು ಖಚಿತವಾಗಿದೆ. ಆದ್ದರಿಂದ ಅವರು ತವರಿಗೆ ಮರಳಲಿದ್ದಾರೆ.

ಹರಿಯಾಣದ ಕುರುಕ್ಷೇತ್ರದ ನವಜ್ಯೋತ್ ಕಳೆದ ಎರಡು ದಿನಗಳಿಂದ ಪ್ರತ್ಯೇಕವಾಸದಲ್ಲಿದ್ದಾರೆ. 27 ವರ್ಷದ ನವಜ್ಯೋತ್ ಬದಲಿಗೆ ಸೋನಿಕಾ ಸ್ಥಾನ ಪಡೆದಿದ್ದಾರೆ. 18 ಆಟಗಾರ್ತಿಯರ ಬಳಗವನ್ನು ಸೇರಿಕೊಂಡಿದ್ದಾರೆ. ಭಾರತ ತಂಡವು ಮೊದಲ ಪಂದ್ಯದಲ್ಲಿ ಘಾನಾ ಎದುರು ಜಯಿಸಿತ್ತು.

ಬೆಂಗಳೂರಿಗೆ ಮಯಂಕ್; ಗುಲ್ಬರ್ಗಕ್ಕೆ ಮನೀಷ್

ಆ.7ರಿಂದ ಮಹಾರಾಜ ಟ್ರೋಫಿ ಟೂರ್ನಿ: ಡ್ರಾಫ್ಟ್ ಮೂಲಕ ಆಟಗಾರರ ಆಯ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಯಂಕ್ ಅಗರವಾಲ್ ಮತ್ತು ಮನೀಷ್ ಪಾಂಡೆ ಅವರು ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ ಆಯೋಜಿಸಲಿರುವ ಮಹಾರಾಜ ಟ್ರೋಫಿ ಟಿ20 ಕ್ರಿಕೆಟ್ ಟೂರ್ನಿಯಲ್ಲಿ ಕ್ರಮವಾಗಿ ಕಲ್ಯಾಣಿ ಬೆಂಗಳೂರು ಬ್ಲಾಸ್ಟರ್ಸ್ ಮತ್ತು ಗುಲ್ಬರ್ಗಾ ಮಿಸ್ಟಿಕ್ಸ್ ತಂಡದ ಪರ ಕಣಕ್ಕಿಳಿಯಲಿದ್ದಾರೆ.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಶನಿವಾರ ನಡೆದ ಕಾರ್ಯಕ್ರಮದಲ್ಲಿ ಡ್ರಾಫ್ಟ್ ಮೂಲಕ ಆಟಗಾರರನ್ನು ಆಯ್ಕೆ ಮಾಡಲಾಯಿತು. ಆಗಸ್ಟ್ 7ರಿಂದ ಮೈಸೂರಿನಲ್ಲಿ ಟೂರ್ನಿ ಆರಂಭವಾಗಲಿದೆ.

ಬ್ಯಾಟರ್ ಕರುಣ್ ನಾಯರ್ ಮೈಸೂರು ವಾರಿಯರ್ಸ್, ಆಲ್‌ರೌಂಡರ್ ಕೆ.ಗೌತಮ್ ಶಿವಮೊಗ್ಗ ಸ್ಟ್ರೈಕರ್ಸ್, ಅಭಿನವ್ ಮನೋಹರ್ ಮಂಗಳೂರು ಯುನೈಟೆಡ್ ಮತ್ತು ವೇಗದ ಬೌಲರ್ ಅಭಿಮನ್ಯು ಮಿಥುನ್ ಹುಬ್ಬಳ್ಳಿ ಟೈಗರ್ಸ್ ಪಾಲಾದರು.

ವಿವಿಧ ತಂಡಗಳ ಕೋಚ್‌ಗಳಾದ ಟಿ. ನಾಸಿರುದ್ದೀನ್ (ಬೆಂಗಳೂರು ಬ್ಲಾಸ್ಟರ್ಸ್), ಮನ್ಸೂರ್ ಅಲಿಖಾನ್ (ಗುಲ್ಬರ್ಗಾ ಮಿಸ್ಟಿಕ್ಸ್), ಪಿ.ವಿ.ಶಶಿಕಾಂತ್ (ಮೈಸೂರು ವಾರಿಯರ್ಸ್), ಸ್ಟುವರ್ಟ್ ಬಿನ್ನಿ (ಮಂಗಳೂರು ಯುನೈಟೆಡ್), ನಿಖಿಲ್ ಹಳದಿಪುರ (ಶಿವಮೊಗ್ಗ ಸ್ಟ್ರೈಕರ್ಸ್) ಮತ್ತು ದೀಪಕ್ ಚೌಗುಲೆ (ಹುಬ್ಬಳ್ಳಿ ಟೈಗರ್ಸ್) ಅವರು ಜತೆಯಾಗಿ ಕಾಣಿಸಿಕೊಂಡರು

ಆರೂ ತಂಡಗಳ ಮಾಲೀಕರು ಮೊದಲಿಗೆ ಕೋಚ್‌ಗಳನ್ನು ಆಯ್ಕೆ ಮಾಡಿಕೊಂಡರು. ಬಳಿಕ ಆಟಗಾರರ ಆಯ್ಕೆ ನಡೆಯಿತು. ಆಟಗಾರರನ್ನು ಎ,ಬಿ. ಸಿ,ಡಿ ಗುಂಪುಗಳಾಗಿ ವರ್ಗೀಕರಿಸಲಾಗಿತ್ತು. ಎ ಗುಂಪಿನಲ್ಲಿ ಭಾರತ ಮತ್ತು ಐಪಿಎಲ್ ತಂಡದಲ್ಲಿ ಆಡಿದವರು, ಬಿ ಗುಂಪಿನಲ್ಲಿ ರಾಜ್ಯ ತಂಡ ಪ್ರತಿನಿಧಿಸಿದವರು, ಸಿ ಗುಂಪಿನಲ್ಲಿ 19, 24, 25 ವರ್ಷದೊಳಗಿನ ರಾಜ್ಯ ತಂಡವನ್ನು ಪ್ರತಿನಿಧಿಸಿದವರು ಹಾಗೂ ಇನ್ನುಳಿದ ಆಟಗಾರರು ಡಿ ಗುಂಪಿನಲ್ಲಿ ಇದ್ದರು.

ಡ್ರಾಫ್ಟ್‌ನಲ್ಲಿ ಒಟ್ಟು 740 ಆಟಗಾರರಿದ್ದರು. ‘ಎ’ ಗುಂಪಿನಲ್ಲಿ 14, ‘ಬಿ’ಯಲ್ಲಿ 32, ‘ಸಿ’ಯಲ್ಲಿ 111 ಮತ್ತು ಡಿ ಗುಂಪಿನಲ್ಲಿ 583 ಆಟಗಾರರು ಲಭ್ಯ ಇದ್ದರು.

ಟೂರ್ನಿಯ ಉದ್ಘಾಟನೆಯು ಮೈಸೂರಿನಲ್ಲಿ ನಡೆಯಲಿದ್ದು ಒಟ್ಟು 18 ಪಂದ್ಯಗಳು ಅಲ್ಲಿ ನಡೆಯಲಿವೆ. ಆಗಸ್ಟ್ 26ರಂದು ಫೈನಲ್ ಸೇರಿದಂತೆ 16 ಪಂದ್ಯಗಳು ಬೆಂಗಳೂರಿನಲ್ಲಿ ನಡೆಯಲಿವೆ.

ಈ ಸಂದರ್ಭದಲ್ಲಿ ಕೆಎಸ್‌ಸಿಎ ಅಧ್ಯಕ್ಷ ರೋಜರ್ ಬಿನ್ನಿ, ಉಪಾಧ್ಯಕ್ಷ ಜೆ.ಅಭಿರಾಮ್, ಕಾರ್ಯದರ್ಶಿ ಸಂತೋಷ್ ಮೆನನ್, ಜಂಟಿ ಕಾರ್ಯದರ್ಶಿ ಶಾವೀರ್ ತಾರಾಪುರೆ, ಖಜಾಂಚಿ ವಿನಯ್ ಮೃತ್ಯುಂಜಯ್ ಇದ್ದರು.

ಬ್ಯಾಡ್ಮಿಂಟನ್: ಕ್ವಾರ್ಟರ್ ಫೈನಲ್‌ಗೆ ಭಾರತ ತಂಡ

ಬರ್ಮಿಂಗ್‌ಹ್ಯಾಮ್ (ಪಿಟಿಐ): ಉತ್ತಮ ಆಟ ಮುಂದುವರಿಸಿದ ಭಾರತ ಬ್ಯಾಡ್ಮಿಂಟನ್ ತಂಡದವರು ಕಾಮನ್‌ವೆಲ್ತ್ ಕೂಟದ ಮಿಶ್ರ ತಂಡ ವಿಭಾಗದ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು.

ಶನಿವಾರ ನಡೆದ ‘ಎ’ ಗುಂಪಿನ ಪಂದ್ಯದಲ್ಲಿ ಭಾರತ 5–0 ರಲ್ಲಿ ಶ್ರೀಲಂಕಾ ವಿರುದ್ಧ ಜಯಿಸಿತು. ಮೊದಲ ಪಂದ್ಯದಲ್ಲಿ ಪಾಕಿಸ್ತಾನವನ್ನು ಇದೇ ಅಂತರದಿಂದ ಮಣಿಸಿದ್ದ ಭಾರತ, ಲೀಗ್ ಹಂತದ ಇನ್ನೊಂದು ಪಂದ್ಯ ಬಾಕಿಯಿರುವಂತೆಯೇ ನಾಕೌಟ್ ಹಂತಕ್ಕೆ ಲಗ್ಗೆಯಿಟ್ಟಿತು.

ಮೊದಲ ಪಂದ್ಯದಲ್ಲಿ ಅಶ್ವಿನಿ ಪೊನ್ನಪ್ಪ– ಸಾತ್ವಿಕ್ ಸಾಯಿರಾಜ್ ರನಕಿರೆಡ್ಡಿ ಜೋಡಿ 21–14, 21–9 ರಲ್ಲಿ ಸಚಿನ್ ಡಯಾಸ್– ತಿಲಿನಿ ಹೆಂದಹೆವಾ ವಿರುದ್ಧ ಗೆದ್ದು ಭಾರತಕ್ಕೆ 1–0 ಮುನ್ನಡೆ ತಂದುಕೊಟ್ಟಿತು.

ಬರ್ಮಿಂಗ್‌ಹ್ಯಾಮ್ 2022
ಕಾಮನ್‌ವೆಲ್ತ್ ಕ್ರೀಡಾಕೂಟ

ಬಳಿಕ ಲಕ್ಷ್ಯಸೇನ್ ಪುರುಷರ ಸಿಂಗಲ್ಸ್‌ನಲ್ಲಿ 21–18, 21–5 ರಲ್ಲಿ ನಿಲುಕ ಕರುಣರತ್ನೆ ವಿರುದ್ಧ ಗೆದ್ದರು.

ಮಹಿಳೆಯರ ಸಿಂಗಲ್ಸ್ ವಿಭಾಗದಲ್ಲಿ ಆಕರ್ಷಿ ಕಶ್ಯಪ್ 21–3, 21–9 ರಲ್ಲಿ ವಿದಾರ ಸುಹಾಸಿನಿ ವಿರುದ್ಧ ಗೆದ್ದು ಭಾರತಕ್ಕೆ 3–0 ಮುನ್ನಡೆ ತಂದಿತ್ತರು.

ಪುರುಷರ ಡಬಲ್ಸ್‌ನಲ್ಲಿ ಬಿ.ಸುಮೀತ್ ರೆಡ್ಡಿ– ಚಿರಾಗ್ ಶೆಟ್ಟಿ ಜೋಡಿ 21-10 21-13 ರಲ್ಲಿ ದುಮಿಂದು ಅಬೆವಿಕ್ರಮ– ಸಚಿನ್ ಡಯಾಸ್ ವಿರುದ್ಧವೂ, ಮಹಿಳೆಯರ ಡಬಲ್ಸ್‌ನಲ್ಲಿ ಗಾಯತ್ರಿ ಗೋಪಿಚಂದ್– ತ್ರಿಶಾ ಜೋಲಿ 21–18, 21–6 ರಲ್ಲಿ ತಿಲಿನಿ ಹೆಂದಹೆವಾ– ವಿದಾರ ಸುಹಾಸಿನಿ ಮೇಲೂ ಜಯ ಪಡೆದು ಗೆಲುವಿನ ಅಂತರವನ್ನು 5–0ಗೆ ಹೆಚ್ಚಿಸಿದರು.

ಟಿಟಿ: ಮುಂದುವರಿದ ಗೆಲುವಿನ ಓಟ

ಬರ್ಮಿಂಗ್‌ಹ್ಯಾಮ್ (ಪಿಟಿಐ): ಮಣಿಕಾ ಬಾತ್ರಾ ನೇತೃತ್ವದ ಭಾರತ ಮಹಿಳಾ ತಂಡವು ಕಾಮನ್‌ವೆಲ್ತ್ ಕ್ರೀಡಾಕೂಟದ ಟೇಬಲ್ ಟೆನಿಸ್ ಸ್ಪರ್ಧೆಯಲ್ಲಿ ಗೆಲುವಿನ ಓಟ ಮುಂದುವರಿಸಿದೆ. ಶನಿವಾರ ನಡೆದ ಎರಡನೇ ಗುಂಪಿನ ಪಂದ್ಯದಲ್ಲಿ 3–0ಯಿಂದ ಗಯಾನ ತಂಡಕ್ಕೆ ಸೋಲುಣಿಸಿತು.

ಡಬಲ್ಸ್‌ನಲ್ಲಿ ಕಣಕ್ಕಿಳಿದ ಶ್ರೀಜಾ ಅಕುಲಾ ಮತ್ತು ರೀತ್ ಟೆನ್ನಿಸನ್ 11-5, 11-7, 11-7ರಿಂದ ನತಾಲಿ ಕಮಿಂಗ್ಸ್ ಮತ್ತು ಚೆಲ್ಸಿ ಎಡ್ಗಿಲ್ ಅವರನ್ನು ಪರಾಭವಗೊಳಿಸಿದರು. ಸಿಂಗಲ್ಸ್ ಮೊದಲ ಹಣಾಹಣಿಯಲ್ಲಿ ಮಣಿಕಾ 11-1, 11-3, 11-3ರಿಂದ ತೂರಿಯಾ ಥಾಮಸ್ ಅವರನ್ನು ಸೋಲಿಸಿ ಮುನ್ನಡೆ ಹೆಚ್ಚಿಸಿದರು.

ಮತ್ತೊಂದು ಸಿಂಗಲ್ಸ್ ಜಿದ್ದಾಜಿದ್ದಿನ ಸೆಣಸಾಟದಲ್ಲಿ ರೀತ್ 11-7, 14-12, 13-11ರಿಂದ ಚೆಲ್ಸಿ ಅವರನ್ನು ಸೋಲಿಸಿ ಭಾರತದ ಗೆಲುವು ಖಚಿತಪಡಿಸಿದರು.

ಪುರುಷರ ತಂಡವು 3-0ರಿಂದ ನಾರ್ದರ್ನ್ ಐರ್ಲೆಂಡ್ ತಂಡವನ್ನು ಸೋಲಿಸಿತು. ಡಬಲ್ಸ್ ಪಂದ್ಯದಲ್ಲಿ ಅಚಂತ ಶರತ್ ಕಮಲ್– ಹರ್ಮೀತ್ ದೇಸಾಯಿ ಜೋಡಿಯು 11-3, 9-11, 11-6, 11-1ರಿಂದ ಜೇಮ್ಸ್ ಸ್ಕೆಲ್ಟನ್ ಮತ್ತು ಒವೆನ್ ಕ್ಯಾಚಕಾರ್ಟ್ ಜೋಡಿಯನ್ನು ಪರಾಭವಗೊಳಿಸಿತು.

ಸಿಂಗಲ್ಸ್ ಪಂದ್ಯದಲ್ಲಿ ಸನಿಲ್ ಶೆಟ್ಟಿ, ಹರ್ಮೀತ್ ದೇಸಾಯಿ ಗೆದ್ದರು.

ಭಾರತ ‘ಬಿ’ ತಂಡಕ್ಕೆ ಜಯ

ಚೆಸ್: ಎರಡನೇ ದಿನ ಕಣಕ್ಕಿಳಿದ ಪ್ರಜ್ಞಾನಂದ, ಕಾರ್ಲ್‌ಸನ್

ಮಹಾಬಲಿಪುರಂ (ಪಿಟಿಐ): ಭಾರತದ ಪ್ರತಿಭಾನ್ವಿತ ಆಟಗಾರರ ‘ಬಿ’ ತಂಡವು ಇಲ್ಲಿ ನಡೆಯುತ್ತಿರುವ 44ನೇ ಫಿಡೆ ಚೆಸ್ ಒಲಿಂಪಿಯಾಡ್‌ನಲ್ಲಿ ಗೆಲುವಿನ ಸಂಭ್ರಮ ಆಚರಿಸಿತು.

ಶನಿವಾರ ನಡೆದ ಎರಡನೇ ಸುತ್ತಿನ ಸ್ಪರ್ಧೆಯಲ್ಲಿ ಭಾರತ ಬಿ ತಂಡವು 4–0ಯಿಂದ ಎಸ್ಟೋನಿಯಾ ವಿರುದ್ಧ ಗೆದ್ದಿತು.

ಟಾಪ್ ಬೋರ್ಡ್‌ನಲ್ಲಿ ಡಿ. ಗುಕೇಶ್ ಕೆಲೆ ಕೀಕ್ ವಿರುದ್ಧ ಜಯಿಸಿದರು. ಆರ್. ಪ್ರಜ್ಞಾನಂದ ಎರಡನೇ ಬೋರ್ಡ್‌ನಲ್ಲಿ ಕಿರಿಲ ಚುಕಾವಿನ್ ವಿರುದ್ಧ ಜಯಿಸಿದರು. ಶುಕ್ರವಾರ ಅವರು ವಿಶ್ರಾಂತಿ ಪಡೆದಿದ್ದರು.

ಎರಡನೇ ಶ್ರೇಯಾಂಕ ಹೊಂದಿರುವ ಭಾರತ ಎ ತಂಡವೂ ಎರಡನೇ ಸುತ್ತಿನಲ್ಲಿ 3.5 –0.5ಯಿಂದ ಮಾಲ್ಡೊವಾ ವಿರುದ್ಧ ಗೆದ್ದಿತು. ಪಿ. ಹರಿಕೃಷ್ಣ, ಎಸ್.ಎಲ್. ನಾರಾಯಣನ್ ಮತ್ತು ಕೆ. ಶಶಿಕಿರಣ್ ತಮ್ಮ ಸುತ್ತುಗಳಲ್ಲಿ ಜಯಿಸಿದರು.

ಮೊದಲ ಸುತ್ತಿನಲ್ಲಿ ಕಣಕ್ಕಿಳಿಯದ ವಿಶ್ವ ಚಾಂಪಿಯನ್ ಮ್ಯಾಗ್ನಸ್ ಕಾರ್ಲ್‌ಸನ್ ಎರಡನೇ ಸುತ್ತಿನಲ್ಲಿ ಆಡಿದರು. ಮೂರನೇ ಶ್ರೇಯಾಂಕದ ಕಾರ್ಲ್‌ಸನ್ ನೇತೃತ್ವದ ನಾರ್ವೆ ತಂಡವು 4–0 ಯಿಂದ ಉರುಗ್ವೆಯ ವಿರುದ್ಧ ಜಯಿಸಿತು. ಕಾರ್ಲ್‌ಸನ್ ತಮ್ಮ ಸುತ್ತಿನಲ್ಲಿ ಜಾರ್ಜ್ ಮಿಯರ್ ವಿರುದ್ಧ ಜಯಭೇರಿ ಬಾರಿಸಿದರು.

ಭಾರತದ ಆರ್. ಪ್ರಜ್ಞಾನಂದ –ಪಿಟಿಐ ಚಿತ್ರ

ಅಮೆರಿಕ ತಂಡವು ಮುಕ್ತ ವಿಭಾಗದಲ್ಲಿ 2.5–1.5ರಿಂದ ಪರುಗ್ವೆ ವಿರುದ್ಧ ಗೆದ್ದಿತು.

ಮಹಿಳೆಯರ ವಿಭಾಗದಲ್ಲಿ ಅಗ್ರಶ್ರೇಯಾಂಕದ ಭಾರತ ‘ಎ’ ತಂಡವು ಅರ್ಜೆಂಟಿನಾ ವಿರುದ್ಧ ಮುನ್ನಡೆ ಸಾಧಿಸಿತು.

ಟಾಪ್ ಬೋರ್ಡ್‌ನಲ್ಲಿ ಕೊನೆರು ಹಂಪಿ ಮತ್ತು ಮಾರಿಸಾ ಜುರೇಲ್ ಪಂದ್ಯವು ಡ್ರಾ ಆಯಿತು. 44 ನಡೆಗಳಲ್ಲಿ ಹಣಾಹಣಿ ಮುಗಿಯಿತು.

ಆದರೆ, ಇನ್ನುಳಿದ ಸುತ್ತುಗಳಲ್ಲಿ ಭಾರತದ ತಾನಿಯಾ ಸಚದೇವ ಮತ್ತು ಭಕ್ತಿ ಕುಲಕರ್ಣಿ ಅವರು ಜಯಸಾಧಿಸಿದರು. ಅವರು ಕ್ರಮವಾಗಿ ಮರಿಯಾ ಕೆಂಪೊಸ್ ಮತ್ತು ಮರಿಯಾ ಬೆಲೆನ್ ಸರ್ಕಿಸ್ ವಿರುದ್ಧ ಜಯಿಸಿದರು. ಇದರೊಂದಿಗೆ ತಂಡವು ಸತತ ಎರಡನೇ ಸುತ್ತಿನ ಗೆಲುವು ಸಾಧಿಸಿತು.

ಭಾರತ ಬಿ ತಂಡವು 1.5–0.5 ರಿಂದ ಲಾಟ್ವಿಯಾ ವಿರುದ್ಧ ಮುನ್ನಡೆ ಪಡೆಯಿತು. ಭಾರತ ಸಿ ತಂಡವು 3–1ರಿಂದ ಸಿಂಗಪುರ ವಿರುದ್ಧ ಗೆಲುವು ಸಾಧಿಸಿತು.